
# ಕೇಳಿ ಕೇಳಿ



ನೆಲೆ ಪ್ರಕಾಶನ ಸಿಂದಗಿ

# ಕವಿ ಕಣವಿ

## ವ್ಯಕ್ತಿ-ಅಭಿವ್ಯಕ್ತಿ

•

ಡಾ. ಜಿ. ಎಂ. ಹೆಗಡೆ

•

ನೆಲೆ ಪ್ರಕಾಶನ, ಸಿಂದಗಿ

**Kavi Kanavi :** by Dr. G. M. Hegde, Professor and Head Department of Kannada, Kittel Arts College, Dharwad-580001 Published by Nele Prakashana, Sindgi, Dist : Bijapur.

Revised Enlarged Edition : 1999

Price : Rs. 50/-

Copies : 1000

Pages : xii + 132



ಪ್ರಕಾಶಕರು : ನೆಲೆ ಪ್ರಕಾಶನ, ಸಿಂದಗಿ

ಮುಖಪುಟ ವಿನ್ಯಾಸ : ಜಿ. ಜಿ. ಮಹಾಲೆ

ಭಾವಚಿತ್ರ : ಎಂ. ಎನ್. ಮುಕುಂದ, ಬೆಂಗಳೂರು

ಪುಟಗಳು : xii + ೧೩೨

ಪರಿಷ್ಕೃತ ವಿಸ್ತೃತ ಆವೃತ್ತಿ : ೧೯೯೯

**ಬೆಲೆ : 50 ರೂಪಾಯಿ**

ಪ್ರತಿಗಳು : ೧೦೦೦

ಅಕ್ಷರ ಜೋಡಣೆ :
ಮನೋಹರ ಮುದ್ರಣಾಲಯ
ಮಾರ್ಕೆಟ್, ಧಾರವಾಡ - ೫೮೦ ೦೦೧

ಮುದ್ರಕರು :
ವಿಶಾಲ ಪ್ರಿಂಟ್ಸ್, ಗದಗ ✆ 36674

# ಪ್ರಕಾಶಕರ ಮಾತು

ನಗರೇತರ ಪ್ರದೇಶದಲ್ಲಿದ್ದುಕೊಂಡು ಕನ್ನಡ ಸಾಹಿತ್ಯದ ಎಲ್ಲ ಪ್ರಕಾರಗಳಿಗೆ ಸಂಬಂಧಿಸಿದಂತೆ ಗಮನಾರ್ಹ ಕೃತಿಗಳನ್ನು ಪ್ರಕಟಿಸುತ್ತ ಕನ್ನಡದ ಕೆಲಸವನ್ನು ಮಾಡುತ್ತ ಬಂದ 'ನೆಲೆ ಪ್ರಕಾಶನ, ಸಿಂದಗಿ' ಇಂದು ಸಹೃದಯರ ಬೆಂಬಲದಿಂದ ಭದ್ರವಾದ ನೆಲೆಯನ್ನು ಪಡೆದುಕೊಂಡಿದೆ.

೧೯೯೬ ರಲ್ಲಿ ಹಾಸನದಲ್ಲಿ ಜರುಗಿದ ಅಖಿಲ ಭಾರತ ೬೫ ನೆಯ ಕನ್ನಡ ಸಾಹಿತ್ಯ ಸಮ್ಮೇಲನಕ್ಕೆ ನಾಡಿನ ಖ್ಯಾತ ಕವಿ ಶ್ರೀ ಚೆನ್ನವೀರ ಕಣವಿ ಅವರು ಅಧ್ಯಕ್ಷರೆಂದು ನಿಯೋಜಿತರಾದ ಸಂದರ್ಭದಲ್ಲಿ ನೆಲೆ ಪ್ರಕಾಶನವು ಗೌವಾದರಗಳಿಂದ ಸಂಶೋಧಕ, ವಿಮರ್ಶಕ ಡಾ. ಜಿ. ಎಂ. ಹೆಗಡೆ ಅವರ 'ಕವಿ ಕಣವಿ ವ್ಯಕ್ತಿ-ಅಭಿವ್ಯಕ್ತಿ' ಕೃತಿಯನ್ನು ಪ್ರಕಟಿಸಿತು. ನಮ್ಮ ಈ ಕೆಲಸವನ್ನು ನಾಡಿನ ಸಹೃದಯರು ಬಹುವಾಗಿ ಮೆಚ್ಚಿಕೊಂಡು ಪ್ರೋತ್ಸಾಹಿಸಿದರು.

೧೯೯೯ ರಲ್ಲಿ ಕರ್ನಾಟಕ ಸರಕಾರದ ಪ್ರತಿಷ್ಠಿತ ಪ್ರಶಸ್ತಿಯಾದ 'ಪಂಪ ಪ್ರಶಸ್ತಿ'ಯನ್ನು ಕಣವಿಯವರು ಪಡೆದ ಈ ಸಂದರ್ಭದಲ್ಲಿ 'ಕವಿ ಕಣವಿ' ಕೃತಿಯ ಪರಿಷ್ಕೃತ ವಿಸ್ತೃತ ಆವೃತ್ತಿಯನ್ನು ಅಷ್ಟೇ ಗೌರವ ಆದರದಿಂದ ನೆಲೆ ಪ್ರಕಾಶನವು ಪ್ರಕಟಿಸುತ್ತಲಿದೆ.

ಈ ಕೃತಿಯ ಪರಿಷ್ಕರಣ ಹಾಗೂ ವಿಸ್ತರಣದ ಕೆಲಸವನ್ನು ಅತ್ಯಂತ ಪ್ರೀತಿಯಿಂದ ನಿರ್ವಹಿಸಿದ 'ಕವಿ ಕಣವಿ' ಕೃತಿಯ ಲೇಖಕರೂ ನೆಲೆ ಪ್ರಕಾಶನದ ಅಭಿಮಾನಿಗಳೂ ಆದ ಡಾ. ಜಿ. ಎಂ. ಹೆಗಡೆಯವರನ್ನು ನಾವು ಹೃದಯಾರೆ ಅಭಿನಂದಿಸುತ್ತೇವೆ. ನಮ್ಮ ಇಂಥ ಕೆಲಸಗಳಿಗೆ ಮಾರ್ಗದರ್ಶನ ನೀಡುತ್ತಿರುವ ಕನ್ನಡ ವಿಶ್ವವಿದ್ಯಾಲಯ ಹಂಪಿಯ ಕುಲಪತಿಗಳಾದ ಡಾ. ಎಂ. ಎಂ. ಕಲಬುರ್ಗಿ ಅವರನ್ನು ಅತ್ಯಂತ ಗೌರವದಿಂದ ಸ್ಮರಿಸುತ್ತೇವೆ.

ಸಿಂದಗಿ
೧೮-೧೨-೧೯೯೯

ಶ್ರೀಮತಿ ಲತಾ ಪಡಶೆಟ್ಟಿ
ಶ್ರೀಮತಿ ಸರೋಜಾ ಕಟ್ಟಿ

# ಮುನ್ನುಡಿ

ಕನ್ನಡ ಸಾಹಿತ್ಯೇತಿಹಾಸದಲ್ಲಿ ಈ ಶತಮಾನವು ಅತ್ಯಂತ ವೈಭವದ ಯುಗವಾಗಿದೆ. ಕಾವ್ಯ, ಕಥೆ, ಕಾದಂಬರಿ, ನಾಟಕ, ಲಲಿತಪ್ರಬಂಧ, ವಿಮರ್ಶೆ ಇತ್ಯಾದಿ ಕ್ಷೇತ್ರಗಳಲ್ಲಿ ಕನ್ನಡ ಸಾಹಿತಿಗಳು ಮಾಡಿದ ಸಾಧನೆ ಅನನ್ಯವಾಗಿದೆ. ಈ ಶತಮಾನದಲ್ಲಿರುವಷ್ಟು ಗಣ್ಯ ಲೇಖಕರು ಹಿಂದಿನ ಯಾವ ಶತಮಾನದಲ್ಲಿಯೂ ಇರಲಿಲ್ಲ. ಸಾಹಿತ್ಯದ ಹಲವಾರು ಪ್ರಕಾರಗಳಲ್ಲಿ ಸಾಧನೆ ಮಾಡಿದ ದೈತ್ಯಪ್ರತಿಭೆಯ ಲೇಖಕರೂ ಈ ಶತಮಾನದಲ್ಲಿರುವುದು ಒಂದು ವಿಶೇಷ. ನವೋದಯದ ಪ್ರಾರಂಭದಲ್ಲಿ ಉಚ್ಚವರ್ಗದ ಮತ್ತು ಮಧ್ಯಮ ವರ್ಗದ ಸೊತ್ತಾಗಿದ್ದ ಸಾಹಿತ್ಯ ಆವಾಗಲೇ ಶೂದ್ರರ ಕೈಸೇರತೊಡಗಿತು. ನವೋದಯದ ಸಮೃದ್ಧಿಯ ಕಾಲದಲ್ಲಿಯೇ ಮಹಿಳೆಯರು, ಶ್ರೀಸಾಮಾನ್ಯರು ಸಾಹಿತ್ಯವನ್ನು ಪ್ರವೇಶಿಸಿದರು. ಅದರಿಂದಾಗಿ ಸಾಹಿತ್ಯಕ್ಕೆ ಹೊಸನೀರು ಬರತೊಡಗಿತು.

ಡಾ. ಜಿ. ಎಸ್. ಶಿವರುದ್ರಪ್ಪ ಮತ್ತು ಶ್ರೀ ಚೆನ್ನವೀರ ಕಣವಿಯವರು ಅಂದಿನ ಬಡ ಪ್ರಾಥಮಿಕ ಶಾಲಾ ಶಿಕ್ಷಕರ ಮಕ್ಕಳಾಗಿ, ಫ್ರೀ ಬೋರ್ಡಿಂಗ್ ಮೊರೆಹೊಕ್ಕು, ತುಂಬ ಪರಿಶ್ರಮದಿಂದ ವಿದ್ಯಾಭ್ಯಾಸ ಮಾಡಿ ಉಚ್ಚಶಿಕ್ಷಣ ಪಡೆದಿದ್ದೇ ಒಂದು ಸಾಹಸ. ಜೊತೆಗೆ ಕಾವ್ಯಕೃಷಿಗೆ ತೊಡಗಿದ್ದು ಅವರ ಪ್ರತಿಭಾ ವಿಶೇಷ. ಕುವೆಂಪು–ಬೇಂದ್ರೆಯವರ ತರುವಾಯ ಕನ್ನಡ ಕಾವ್ಯದ ನಿಜವಾದ ವಾರಸುದಾರರಾಗಿ ಅರ್ಧಶತಮಾನದ ಕಾಲ ಅವರು ಕಾವ್ಯಕ್ಷೇತ್ರದಲ್ಲಿ ಮಾಡಿದ ಸಾಧನೆ ಆಗಲೇ ನಮ್ಮ ಸಾಹಿತ್ಯ ಚರಿತ್ರೆಯ ಒಂದು ಭಾಗವಾಗಿಬಿಟ್ಟಿದೆ. ಬೇಂದ್ರೆ ಮತ್ತು ಕುವೆಂಪು ಅವರು ಸಾಹಿತ್ಯ ಸಮ್ಮೇಲನದ ಅಧ್ಯಕ್ಷರಾಗಲು ಅರವತ್ತು ಸಂವತ್ಸರಗಳನ್ನು ಕಳೆಯಬೇಕಾದ ಪ್ರಮೇಯ ಬರಲಿಲ್ಲ. ಆದರೆ ಶಿವರುದ್ರಪ್ಪ ಮತ್ತು ಕಣವಿಯವರು ಸಾಹಿತ್ಯ ಸಮ್ಮೇಲನದ ಅಧ್ಯಕ್ಷರಾಗಬೇಕಾದರೆ ಅರವತ್ತು ದಾಟಬೇಕಾಯಿತಷ್ಟೇ ಅಲ್ಲ. ಎಪ್ಪತ್ತರ ಅಂಚಿಗೂ ಬರಬೇಕಾಯಿತು. ಕಾಲದ ಕಟ್ಟಳೆಗೆ ಬೆರಗಾಗುವ ಸನ್ನಿವೇಶಕ್ಕಿಂತ ಭಿನ್ನವಾದ ಕಾಲಮಾನ ಇಂದಿನದು. ಹಾಗಿದ್ದರೂ ಇವರಿಗೆ

'ಬರುವುದೇನುಂಟೊಮ್ಮೆ ಬರುವ ಕಾಲಕೆ ಬಹುದು' ಎಂಬಂತೆ ಆ ಗೌರವ ಲಭ್ಯವಾದದ್ದೇ ಒಂದು ಸಂತೋಷದ ಸಂಗತಿ.

ಹಾಸನದಲ್ಲಿ ಜರುಗಿದ ಅಖಿಲ ಭಾರತ ೬೫ನೆಯ ಕನ್ನಡ ಸಾಹಿತ್ಯ ಸಮ್ಮೇಲನದ ಅಧ್ಯಕ್ಷತೆಯ ಗೌರವ ಪಡೆದ ಚೆನ್ನವೀರ ಕಣವಿಯವರು ಕನ್ನಡ ನಾಡಿನ ಉದ್ದಗಲಕ್ಕೂ ಪರಿಚಿತರಾಗಿರುವ ಕವಿಗಳು. 'ವಿಶ್ವಭಾರತಿಗೆ ಕನ್ನಡದಾರತಿ', 'ಹೆಸರಾಯಿತು ಕರ್ನಾಟಕ, ಉಸಿರಾಗಲಿ ಕನ್ನಡ', 'ಹೂವು ಹೊರಳುವುದು ಸೂರ್ಯನ ಕಡೆಗೆ' ಮುಂತಾದ ಕವಿತೆಗಳು ಗೊತ್ತಿಲ್ಲದ ಕನ್ನಡಿಗರೇ ಇಲ್ಲವೆಂದು ಹೇಳುವಷ್ಟು, ಅವುಗಳ ಪ್ರಸಿದ್ಧಿಯಿದೆ. 'ಕಾವ್ಯಾಕ್ಷಿ'ಯಿಂದ 'ಶಿಶಿರದಲ್ಲಿ ಬಂದ ಸ್ನೇಹಿತ'ದವರೆಗಿನ ಅವರ ಹದಿಮೂರು ಕವನ ಸಂಗ್ರಹಗಳಲ್ಲಿಯ ಹಲವಾರು ಕವಿತೆಗಳನ್ನು ಬಲ್ಲ ಸಹೃದಯರೂ ನಮ್ಮಲ್ಲಿದ್ದಾರೆ. ಕಣವಿಯವರ ನಿಸರ್ಗಪ್ರೀತಿ, ಸಾಂಸ್ಕೃತಿಕ ಕಾಳಜಿ, ಬದುಕಿನ ಎಲ್ಲ ಸ್ತರಗಳನ್ನು ಕಾವ್ಯವಾಗಿಸುವ ಸಂವೇದನಾಶೀಲತೆ, ಅಂದಂದಿನ ಪರಿಸ್ಥಿತಿಗೆ ಸ್ಪಂದಿಸುವ ಸಾಮಾಜಿಕ ಎಚ್ಚರ, ನಾಡಿನ ಹಾಗೂ ರಾಷ್ಟ್ರದ ಆಗು-ಹೋಗುಗಳಿಗೆ ಪ್ರತಿಕ್ರಿಯೆ ವ್ಯಕ್ತಪಡಿಸುವ ನಾಡಭಕ್ತಿ – ಇತ್ಯಾದಿಗಳು ಕಾವ್ಯಾಭ್ಯಾಸಿಗಳ ಗಮನವನ್ನು ಸೆಳೆಯುತ್ತಲೇ ಇವೆ. ಕಲಾಪೂರ್ಣವಾಗಿರುವ ಅವರ ಕಾವ್ಯ ಮೊದಲ ಓದಿಗೆ ಮನ ಸೆಳೆಯುವಂತಹದು, ಮನಸೂರೆಗೊಳ್ಳುವಂತಹದು.

ಕಣವಿಯವರ ವ್ಯಕ್ತಿತ್ವ ಕೂಡ ಸ್ನೇಹಪೂರ್ಣತೆಯಿಂದ ಆಕರ್ಷಕವಾದದ್ದು. ಅವರ ಸರಳ ಸಜ್ಜನಿಕೆ ಎಲ್ಲ ಬಗೆಯ ಮನೋಧರ್ಮದವರನ್ನೂ ತನ್ನವರನ್ನಾಗಿ ಮಾಡಿಕೊಳ್ಳುತ್ತದೆ. ದ್ವೇಷ ಅಸೂಯೆಗಳು ಅವರ ಸಮೀಪಕ್ಕೂ ಸುಳಿಯುವುದಿಲ್ಲ. ಹಿತಮಿತವಾದ ಮಾತು, ಲೇಸನೇ ಬಯಸುವ ಉದಾರ ಧೋರಣೆ, ಗುಣಗ್ರಾಹಿತ್ವ, ಪ್ರೀತಿ–ಅಂತಃಕರಣಗಳ ಮಾನವೀಯ ದೃಷ್ಟಿ ಅವರು ತೀರ ಎಳೆಯವಯಸ್ಸಿನಿಂದಲೇ ಮೈಗೂಡಿಸಿಕೊಂಡು ಬಂದ ಜೀವನ ಮೌಲ್ಯಗಳಾಗಿವೆ. ಅವರ ವ್ಯಕ್ತಿತ್ವಕ್ಕೂ ಕವಿತ್ವಕ್ಕೂ ಅಂತರವಿಲ್ಲದಿರುವುದು ನಡೆ–ನುಡಿಗಳ ಸಾಂಗತ್ಯವನ್ನೂ ಸೂಚಿಸುತ್ತದೆ. ಅವರ ವಿಡಂಬನಾತ್ಮಕ ಕವಿತೆಗಳಲ್ಲಿಯೂ ಅವರ ಸುಸಂಸ್ಕೃತ ನಿಲುವು ಕಂಡುಬರುತ್ತದೆ.

ಹೀಗಿರುವ ಚೆನ್ನವೀರ ಕಣವಿಯವರು ಎಪ್ಪತ್ತು ವರ್ಷಗಳ ಸಾರ್ಥಕ ಬದುಕಿನ ಬಗ್ಗೆ, ಐವತ್ತು ವರ್ಷಗಳ ಸಾಹಿತ್ಯಿಕ, ವಿಶೇಷವಾಗಿ ಕಾವ್ಯದ

ಸಾಧನೆಯ ಬಗ್ಗೆ ಕನ್ನಡಿಗರು ತಿಳಿಯಬೇಕಾದ ಅಗತ್ಯವಿದೆ. ಈ ಅಗತ್ಯವನ್ನು ಪೂರೈಸುವಂತೆ ಡಾ. ಜಿ. ಎಂ. ಹೆಗಡೆಯವರು 'ಕವಿ ಕಣವಿ' ಗ್ರಂಥವನ್ನು ಪ್ರಕಟಿಸುತ್ತಿರುವುದು ತುಂಬಾ ಸಂತೋಷದ ಸಂಗತಿಯಾಗಿದೆ. ಕಣವಿಯವರ ಬದುಕು, ಕಾವ್ಯ ಸಾಧನೆ ಹಂತಗಳು -- ಮೊದಲಿನ ಎರಡು ಅಧ್ಯಾಯಗಳಲ್ಲಿ ಚಿತ್ರಿತವಾಗಿದ್ದು, ಅವುಗಳ ಮೂಲಕ ಕಣವಿಯವರ ವ್ಯಕ್ತಿತ್ವ ಮತ್ತು ಕವಿತ್ವದ ಬಗ್ಗೆ ಸ್ಪಷ್ಟ ಕಲ್ಪನೆ ನಮ್ಮಲ್ಲಿ ಮೂಡಿಬರುತ್ತದೆ. ಕಣವಿಯವರ ಕಾವ್ಯಸೃಷ್ಟಿಯಲ್ಲಿ ಹಲವು ವೈಶಿಷ್ಟ್ಯಗಳಿವೆ. ಅವರ ನಿಸರ್ಗಪ್ರೀತಿ, ಕುಟುಂಬ ವಾತ್ಸಲ್ಯ, ಸಾಮಾಜಿಕ ಪ್ರಜ್ಞೆ, 'ಭಾವಜೀವಿ'ಯಂಥ ಖಂಡ ಕಾವ್ಯ, ಕೆಲವೇ ಕವಿತೆಗಳಿದ್ದರೂ ಗಮನ ಸೆಳೆದ 'ಹಕ್ಕೀಪುಚ್ಚ'ದಂಥ ಮಕ್ಕಳ ಕವಿತೆಗಳು, ನವ್ಯ ಮತ್ತು ನವ್ಯೋತ್ತರ ವಿಶಿಷ್ಟ ಅಭಿವ್ಯಕ್ತಿಗಳು ಆಲೋಚನೀಯ ವಿಷಯಗಳಾಗಿವೆ. ಕಾವ್ಯಬಂಧದಲ್ಲಿ 'ಸುನೀತ' ಪ್ರಕಾರದಲ್ಲಿ ಅವರು ಮಾಡಿದ ಪ್ರಯೋಗಗಳು ಅಸಾಧಾರಣವಾದವುಗಳಾಗಿವೆ. ಪ್ರಸ್ತುತ ಗ್ರಂಥದಲ್ಲಿ ಅವುಗಳನ್ನು ಕುರಿತು ಒಂದು ಅಧ್ಯಾಯವಿರುವುದು ಸೂಕ್ತವಾದದ್ದೇ ಆಗಿದೆ. ಕವಿಗಳಾಗಿರುವ ಕಣವಿಯವರು ಗದ್ಯ ಲೇಖಕರೂ ಆಗಿ, ಹಲವು ವಿದ್ವತ್ಪೂರ್ಣ ಪ್ರಬಂಧಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಅಭ್ಯಸನೀಯವಾದ, ಪ್ರಮಾಣ ಭೂತವಾದ ಹಲವು ಸಂಗತಿಗಳಿರುವುದನ್ನು ನಾವು ಕಾಣಬಹುದು. ಇಲ್ಲಿ ಡಾ. ಹೆಗಡೆಯವರು ಒಂದು ಪಕ್ಷಿನೋಟವನ್ನು ಬೀರಿದ್ದಾರೆ. ಪುಸ್ತಕಕ್ಕೆ ಜೋಡಿಸಿರುವ ಅನುಬಂಧಗಳು ಕಣವಿಯವರನ್ನು ಕುರಿತು ಅಧ್ಯಯನ ಮಾಡಬಯಸುವವರಿಗೆ ಉಪಯುಕ್ತ ಸಾಮಗ್ರಿಯನ್ನು ನೀಡುತ್ತವೆ. ಹೀಗಾಗಿ ಇದೊಂದು ಸಂಗ್ರಹಾರ್ಹ ಯೋಗ್ಯವಾದ ಕೃತಿಯಾಗಿದೆ.

ಆಳ, ಎತ್ತರಗಳನ್ನು ಗುರುತಿಸುವುದಾಗಲಿ, ಮೌಲ್ಯಮಾಪನ ಮಾಡುವುದಾಗಲಿ ಈ ಗ್ರಂಥದ ಉದ್ದೇಶವಾಗಿರದಿದ್ದರೂ ಸಹೃದಯತೆಯ ಸಮೀಕ್ಷೆಯಂತೂ ಇದ್ದೇ ಇದೆ. ಕಣವಿಯವರ ಜೀವನದ ಮಹತ್ವದ ದಾಖಲೆಗಳು, ಎಲ್ಲ ಕೃತಿಗಳ ಉಲ್ಲೇಖಗಳು, ಅವುಗಳ ಸಾರಸಂಗ್ರಹ ಇತ್ಯಾದಿಗಳು ನಿಶ್ಚಿತವಾಗಿ ಹೆಚ್ಚಿನ ಅಧ್ಯಯನಕ್ಕೆ ದಾರಿಮಾಡಿಕೊಡುತ್ತವೆ. ಶ್ರದ್ಧೆಯಿಂದ ಈ ಕೃತಿರಚನೆ ಮಾಡಿದ ಡಾ. ಜಿ. ಎಂ. ಹೆಗಡೆಯವರು ಕನ್ನಡಿಗರ ಅಭಿನಂದನೆಗೆ ಪಾತ್ರರು.

ಧಾರವಾಡ

**– ಡಾ. ಗುರುಲಿಂಗ ಕಾಪಸೆ**

# ಲೇಖಕರ ಮಾತು

ಆಧುನಿಕ ಕನ್ನಡಕಾವ್ಯ ಪರಂಪರೆಯಲ್ಲಿ ಚೆನ್ನವೀರ ಕಣವಿ ಅವರು ಶ್ರೇಷ್ಠ ಕವಿಗಳಾಗಿ ಖ್ಯಾತರಾಗಿದ್ದಾರೆ. ಕಳೆದ ಅರ್ಧ ಶತಮಾನದಿಂದ ಕನ್ನಡದಲ್ಲಿ ಕಾವ್ಯನಿರ್ಮಿತಿಯ ಕೈಂಕರ್ಯವನ್ನು ನಡೆಸುತ್ತ ಬಂದ ಕಣವಿ ಅವರ ಸೃಜನಶೀಲತೆ ವಿಶಿಷ್ಟವಾದದ್ದು. ನವೋದಯ ಸಾಹಿತ್ಯದ ಮೌಲ್ಯ ಪ್ರಜ್ಞೆಯನ್ನು, ನವ್ಯ ಸಾಹಿತ್ಯದ ವಾಸ್ತವಪ್ರಜ್ಞೆಯನ್ನು ಗರ್ಭೀಕರಿಸಿಕೊಂಡ ಕಣವಿಯವರ ಕಾವ್ಯಪ್ರಜ್ಞೆ ಆಳವಾದ ಮಾನವಾನುಭವದಲ್ಲಿ ನೆಲೆಪಡೆದುಕೊಂಡಿದೆ. ಅಗಾಧವಾದ ಜೀವನ ಪ್ರೀತಿ, ನಿಸರ್ಗದೊಂದಿಗೆ ಇರುವ ಗಾಢವಾದ ಸಂಬಂಧಗಳಿಂದ ಕೂಡಿರುವ ಕಣವಿ ಅವರ ಕಾವ್ಯದ ಜೀವಂತಗತಿ ನಿರಂತರವಾಗಿ ಹರಿದು ಬಂದಿದೆ.

ಚೆನ್ನವೀರ ಕಣವಿ ಅವರ ಕಾವ್ಯಸಂವೇದನೆ ಆಳವಾದದ್ದು. ಅದು ಭದ್ರವಾದ ಆದರ್ಶವಾದದಲ್ಲಿ ಬೆಳವಣಿಗೆ ಹೊಂದಿದೆ. ಬದುಕಿನ ವಿಷಮತೆ, ದುಃಖ ದುಮ್ಮಾನ, ಕರಾಳತೆಯ ಬಗೆಗೆ ಕವಿಗೆ ನೋವು ಇರುವದಾದರೂ ಅದರ ಬಗೆಗಿನ ಪ್ರತಿಕ್ರಿಯೆ ಪ್ರತಿಭಟನೆಯ ಸ್ವರೂಪದ್ದಲ್ಲ. ಮಾನವೀಯ ಸಂಬಂಧಗಳನ್ನು ಸ್ಥಿರಪಡಿಸುವ ಸ್ನೇಹ, ಪ್ರೀತಿಯಲ್ಲಿ ಅಂತಸ್ಥವಾದ ಕಣವಿ ಅವರ ಕಾವ್ಯಾನುಭೂತಿ ವಿಶಿಷ್ಟವಾದ ರೀತಿಯಲ್ಲಿ ಪ್ರಕಟವಾಗಿದೆ. ಕನ್ನಡದ ಸಾಂಸ್ಕೃತಿಕ ಪರಂಪರೆಯ ಬಗೆಗಿನ ಶ್ರದ್ಧೆ, ಹಾಗೂ ಚಾರಿತ್ರಿಕ ಪ್ರಜ್ಞೆಯ ಅರಿವಿನಿಂದ ಕಣವಿ ಕಾವ್ಯ ಸಮೃದ್ಧವಾಗಿ ಬೆಳೆದಿದೆ.

ಚೆನ್ನವೀರ ಕಣವಿ ಅವರು ಹಾಸನದಲ್ಲಿ ಜರಗಿದ ಅರವತ್ತೈದನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾಗಿ ಆಯ್ಕೆಯಾದಾಗ 'ಕಣವಿ ಸಮಗ್ರಕಾವ್ಯ' ಹಾಗೂ 'ಕವಿ ಕಣವಿ' ಗ್ರಂಥದ ಪ್ರಕಟನೆಯ ಯೋಜನೆಯನ್ನು ಕರ್ನಾಟಕದ ಖ್ಯಾತ ಸಂಶೋಧಕರಾದ ಡಾ. ಎಂ. ಎಂ. ಕಲಬುರ್ಗಿ ಅವರು ರೂಪಿಸಿದರು. ಚೆನ್ನವೀರ ಕಣವಿ ಜೀವನ ಸಾಹಿತ್ಯ ಸಮೀಕ್ಷೆಯ 'ಕವಿ ಕಣವಿ' ಗ್ರಂಥವನ್ನು ನಾನು ಬರೆಯುವಂತೆ ಡಾ. ಕಲಬುರ್ಗಿ ಅವರು ಪ್ರೇರಿಸಿದರು. ಅವರು ಯೋಜಿಸಿದಂತೆ 'ಕವಿ ಕಣವಿ' ಗ್ರಂಥ ರಚಿಸಲು

ಸಾಧ್ಯವಾಗಿದ್ದು ನನ್ನ ಗುರುಗಳಾದ ಡಾ. ಕಲಬುರ್ಗಿಯವರಿಗೆ ನನ್ನ ಗೌರವದ ನಮನಗಳು ಸಲ್ಲುತ್ತವೆ.

ಚೆನ್ನವೀರ ಕಣವಿ ಅವರೊಡನೆ ಬಹುಕಾಲದ ಒಡನಾಟ ನನಗೆ ಪ್ರಾಪ್ತವಾಗಿದೆ. ಅವರು ಈ ಗ್ರಂಥ ರಚನೆಯ ಕಾರ್ಯದಲ್ಲಿ, ಸಾಹಿತ್ಯ ಸಂದರ್ಶನ ನಡೆಸುವಲ್ಲಿ ನೀಡಿದ ಸಹಾಯ ಸಹಕಾರಗಳನ್ನು ನಾನು ಕೃತಜ್ಞತಾಪೂರ್ವಕವಾಗಿ ನೆನೆಯುತ್ತೇನೆ. ಚೆನ್ನವೀರ ಕಣವಿ ಅವರ ಮನೆ ಮನಗಳ ನಡುವೆ ಇರುವಂತಾದದ್ದು ನಮ್ಮ ಭಾಗ್ಯವೆನ್ನಬೇಕು. ಅವರ ಪ್ರೀತಿ, ವಾತ್ಸಲ್ಯಕ್ಕೆ ನನ್ನ ನಮನಗಳು.

ಈ ಗ್ರಂಥದ ಹಸ್ತ ಪ್ರತಿಯನ್ನು ಪರಿಶೀಲಿಸಿ, ಉಪಯುಕ್ತ ಸಲಹೆಗಳನ್ನು ನೀಡಿ, ಅರ್ಥಪೂರ್ಣ ಮುನ್ನುಡಿಯನ್ನು, ಬೆನ್ನುಡಿಯನ್ನು ಬರೆದುಕೊಟ್ಟ ಖ್ಯಾತ ವಿಮರ್ಶಕರಾದ ಡಾ. ಗುರುಲಿಂಗ ಕಾಪಸೆ ಅವರಿಗೆ ನನ್ನ ವಂದನೆಗಳು.

'ಕವಿ ಕಣವಿ' ಸಾಹಿತ್ಯ ಸಹೃದಯರ ಪ್ರೀತ್ಯಾಭಿಮಾನಕ್ಕೆ ಪಾತ್ರವಾದದ್ದು ನನಗೆ ಹರ್ಷವನ್ನುಂಟು ಮಾಡಿದೆ. ಚೆನ್ನವೀರ ಕಣವಿ ಅವರಿಗೆ ಪ್ರತಿಷ್ಠಿತ ಪಂಪ ಪ್ರಶಸ್ತಿಯ ಗೌರವ ಲಭಿಸಿದ ಈ ಸಂತೋಷದ ಸಮಯದಲ್ಲಿ 'ಕವಿ ಕಣವಿ' ವಿಸ್ತೃತ ಆವೃತ್ತಿ ಪ್ರಕಟವಾಗುತ್ತಿದೆ. ಈ ಮೊದಲು ಪ್ರಕಟಿಸಿದ ಸಿಂದಗಿಯ ನೆಲೆ ಪ್ರಕಾಶನದ ಲತಾ ಪಡಶೆಟ್ಟಿ, ಸರೋಜಾ ಕಟ್ಟಿಯವರು. ಡಾ. ಎಂ. ಎಂ. ಪಡಶೆಟ್ಟಿ, ಪ್ರೊ. ಚೆನ್ನಪ್ಪ ಕಟ್ಟಿ ಅವರು ಸ್ನೇಹ ಪ್ರೀತಿಯಿಂದ ಈ ಆವೃತ್ತಿಯನ್ನೂ ಪ್ರಕಟಿಸುತ್ತಿದ್ದಾರೆ. ನೆಲೆ ಪ್ರಕಾಶನದ ಮಿತ್ರರಿಗೂ. ಅಕ್ಷರ ಜೋಡಣೆ, ಮುಖಚಿತ್ರ ಮುದ್ರಿಸಿಕೊಟ್ಟ ರವಿ-ಚಂದ್ರ ಸಹೋದರರಿಗೂ. ಪತ್ಯ ಮುದ್ರಿಸಿದ ಗದುಗಿನ ವಿಶಾಲ ಪ್ರಿಂಟ್ಸದವರಿಗೂ ನನ್ನ ಕೃತಜ್ಞತೆಗಳು.

ಚೆನ್ನವೀರ ಕಣವಿ ಜೀವನ ಸಾಹಿತ್ಯ ಸಮೀಕ್ಷೆಯ ಈ ಕೃತಿಯನ್ನು ಸಹೃದಯರು, ಕಣವಿ ಕಾವ್ಯಪ್ರೇಮಿಗಳು ಆದರದಿಂದ ಬರಮಾಡಿಕೊಳ್ಳುತ್ತಾರೆಂದು ಆಶಿಸುತ್ತೇನೆ.

೧೮-೧೨-೧೯೯೯
ಧಾರವಾಡ - ೫೮೦ ೦೦೧

ಡಾ. ಜಿ. ಎಂ. ಹೆಗಡೆ
ಮುಖ್ಯಸ್ಥರು, ಕನ್ನಡ ವಿಭಾಗ
ಕಿಟೆಲ್ ಆರ್ಟ್ಸ್ ಕಾಲೇಜು

# ಪರಿವಿಡಿ



## ಅನುಬಂಧಗಳು

# ಚೆನ್ನವೀರ ಕಣವಿ : ಜೀವನ ಸಾಧನೆ

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಆಧುನಿಕ ಸಾಹಿತ್ಯದ ಸಾಧನೆ ಅಪೂರ್ವವಾದದ್ದು. ಹಿಂದೆಂದೂ ಕಾಣದಂತಹ ದೊಡ್ಡ ಕವಿ ಪರಂಪರೆ, ಸಾಹಿತ್ಯದ ನಾನಾ ಪ್ರಕಾರಗಳ ಉತ್ಕರ್ಷ ಇವುಗಳಿಂದ ಹೊಸಗನ್ನಡ ಸಾಹಿತ್ಯ ಅದ್ವಿತೀಯವೆನಿಸಿದೆ. ಈ ಕವಿಕಾವ್ಯ ಪರಂಪರೆಯಲ್ಲಿ ಬೇಂದ್ರೆ, ಕುವೆಂಪು. ಮಾಸ್ತಿ. ಪು.ತಿ.ನ., ಗೋಕಾಕ, ಅಡಿಗ, ನರಸಿಂಹಸ್ವಾಮಿ, ಶಿವರುದ್ರಪ್ಪ. ಕಣವಿ ಮೊದಲಾದವರು ಪ್ರಮುಖರಾಗಿದ್ದಾರೆ. ಕಾವ್ಯಕಟ್ಟುವ ಕ್ರಿಯೆಯಲ್ಲಿ ನಿರತವಾಗಿರುವ ಈ ಕಾವ್ಯಪರಂಪರೆಯಲ್ಲಿ ಚೆನ್ನವೀರ ಕಣವಿಯುವರಿಗೆ ಮಹತ್ವದ ಸ್ಥಾನವಿದೆ. ಅರ್ಧಶತಮಾನದಷ್ಟು ಕಾಲಾವಧಿಯಲ್ಲಿ ಅವರು ಕನ್ನಡ ಕಾವ್ಯದಲ್ಲಿ ತಮ್ಮ ಪ್ರತಿಭೆಯ ಅನನ್ಯತೆಯುವನ್ನು ಹೊಳೆಯಾಗಿ ಹರಿಸುತ್ತ ಬಂದಿದ್ದಾರೆ. ಕಣವಿಯುವರ ಜೀವನವೇ ಕಾವ್ಯ, ಕಾವ್ಯವೇ ಜೀವನ ಎನ್ನುವ ರೀತಿಯಲ್ಲಿ ಅವರ ಕವಿ ವ್ಯಕ್ತಿತ್ವ ಬೆಳೆದಿದೆ.

ಪ್ರತಿಭಾವಂತ ಕವಿಯನ್ನು ರೂಪಿಸುವುದು ಅವನು ಹುಟ್ಟಿ ಬೆಳೆದ ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಪರಿಸರ ಎಂಬ ಮಾತು ಸತ್ಯವಾದದ್ದು. ಆದ್ದರಿಂದಲೇ ಕವಿಯ ಕಾವ್ಯವನ್ನು ಅಧ್ಯಯನ ಮಾಡುವವರು ಆತನ ಜೀವನ ವಿಕಾಸದ ವಿವಿಧ ಮುಖಗಳನ್ನು, ಆತನನ್ನು ರೂಪಿಸಿದ ಸಾಮಾಜಿಕ ಸಾಂಸ್ಕೃತಿಕ ಪರಿಸರವನ್ನು ಅನುಸಂಧಾನ ಮಾಡಬೇಕಾಗುತ್ತದೆ. ಕಣವಿಯುವರ ಬದುಕು ಬರಹಗಳಲ್ಲಿ ಸಾಂಸ್ಕೃತಿಕ ಚೇತನದ ವಿಕಾಸೋನ್ನತಿಯನ್ನು ನಾವು ಕಾಣುತ್ತೇವೆ.

ಚೆನ್ನವೀರ ಕಣವಿಯುವರು ಹುಟ್ಟಿದ್ದು ಧಾರವಾಡ ಜಿಲ್ಲೆಯ ಗದಗ ತಾಲೂಕಿನ ಹೊಂಬಳ ಗ್ರಾಮದಲ್ಲಿ (೨೮ ಜೂನ್ ೧೯೨೮). ಅದು ಅವರ ತಾಯಿ ಪಾರ್ವತಮ್ಮನವರ ತವರೂರು. ತಂದೆ ಸಕ್ಕರೆಪ್ಪನವರು ಅದೇ ತಾಲೂಕಿನ ಶಿರುಂದದಲ್ಲಿ ಪ್ರಾಥಮಿಕ ಶಾಲೆಯ ಶಿಕ್ಷಕರಾಗಿದ್ದರು. ಅವರು

ತಮ್ಮ ಸುಸಂಸ್ಕೃತ ನಡವಳಿಕೆಯಿಂದ, ಶಿಸ್ತಿನ ಜೀವನದಿಂದ ಊರಿನ ಜನರ ಪ್ರೀತಿ, ಗೌರವಕ್ಕೆ ಪಾತ್ರರಾಗಿದ್ದರು.

ಚೆನ್ನವೀರ ಕಣವಿಯವರ ಬಾಲ್ಯಜೀವನ ಕಳೆದದ್ದು ಶಿರುಂದ ಗ್ರಾಮದಲ್ಲಿ. ಹಳ್ಳಿಯ ಬದುಕಿನ ಜಾನಪದ ಜೀವನ, ಹಬ್ಬ, ಹುಣ್ಣಿವೆ, ಜಾತ್ರೆ, ಉತ್ಸವ, ಜನರ ಪ್ರೀತಿಯ ಬದುಕು ಸಹಜವಾಗಿಯೇ ಕಣವಿಯವರ ಮೇಲೆ ಪ್ರಭಾವ ಬೀರಿತು. ಮನೆಯಲ್ಲಿ ಸಕ್ಕರೆಪ್ಪ ಮಾಸ್ತರರು ತಮ್ಮಷ್ಟಕ್ಕೆ ಹಾಡಿಕೊಳ್ಳುತ್ತಿದ್ದ ತತ್ವಪದ, ಅನುಭವಾಮೃತದ ಪದ್ಯಗಳು, ಸರ್ಪಭೂಷಣ ಶಿವಯೋಗಿ, ನಿಜಗುಣಶಿವಯೋಗಿಯವರ ಅನುಭಾವ ಪದಗಳು, ವಚನಗಳು, ಅವುಗಳ ನಾದ–ಲಯಗಳು ಕಣವಿಯವರ ಮೇಲೆ ಆಗಲೇ ತುಂಬ ಪ್ರಭಾವ ಬೀರಿದವು. ಶಾಲೆಯ ವಿವಿಧ ಸ್ಪರ್ಧೆಗಳಲ್ಲಿ ಕಣವಿಯವರು ಮೊದಲಿಗರಾಗಿ ಬರುತ್ತಿದ್ದುದಲ್ಲದೆ 'ಮಾಸ್ತರರ ಮಗ ಶಾಣ್ಯಾ' ಎಂಬ ಹೆಗ್ಗಳಿಕೆಗೂ ಪಾತ್ರರಾಗಿದ್ದರು. ತಂದೆಯ ಸಾಹಿತ್ಯಾಸಕ್ತಿ, ಓದಿನ ಹವ್ಯಾಸ ಚೆನ್ನವೀರ ಕಣವಿಯವರಲ್ಲೂ ಅಂಕುರಿಸಿದವು.

ಹಳ್ಳಿಯ ನಿಸರ್ಗ, ಹೊಲ, ತೋಟ, ಗುಡ್ಡ, ಕಣಿವೆಗಳನ್ನು ನೋಡುತ್ತ ಭಾವಜೀವನದಲ್ಲಿ ಕಣವಿ ಬೆಳೆಯತೊಡಗಿದರು. ಕನ್ನಡ ಪದ್ಯಗಳನ್ನು ಹಾಡುವುದು, ಶುದ್ಧಬರಹ ಬರೆಯುವುದು, ಕವಿತಾಪಾಠ ಮಾಡುವುದು ಇವುಗಳಲ್ಲಿ ತೊಡಗಿಕೊಂಡಿದ್ದ ಕಣವಿಯವರಲ್ಲಿ ಕನ್ನಡದ ಪ್ರೀತಿ ತಾನಾಗಿಯೆ ಹೆಚ್ಚತೊಡಗಿತು. ಪ್ರಾಮಾಣಿಕತೆ, ಅಚ್ಚುಕಟ್ಟುತನ, ಶಿಸ್ತು, ಸಂಯಮಗಳೇ ಮೊದಲಾದ ಸದ್ಗುಣಗಳು ಮೊಳಕೆಯಿಟ್ಟ ಸನ್ನಿವೇಶವದು. ಶಿರುಂದದಲ್ಲಿ ನಾಲ್ಕನೆಯ ತರಗತಿಯಲ್ಲಿ ತೇರ್ಗಡೆಯಾಗುವಷ್ಟರಲ್ಲಿ ಕಣವಿಯವರ ತಂದೆ ನಿವೃತ್ತರಾಗಿ ಅವರ ಸ್ಥಾನದಲ್ಲಿ ಹಿರಿಯಣ್ಣ ನೇಮಕವಾಗಿದ್ದರು; ಅವರಿಗೂ ಅಲ್ಲಿಂದ ವರ್ಗ ಆದದ್ದರಿಂದ ಶಿರುಂದದ ಮನೆ ಮಾರಿ, ತಾಯಿಯ ತವರುಮನೆಯಾದ ಹೊಂಬಳಕ್ಕೆ ಬಂದು ಸಕ್ಕರೆಪ್ಪ ಮಾಸ್ತರರು ನೆಲಸಿದರು. ಕಣವಿಯವರು ಮುಂದಿನ ವಿದ್ಯಾಭ್ಯಾಸಕ್ಕೆ ಅವರ ಭಾವ (ಶ್ರೀ ಚ. ಅ. ಗೋಗೇರಿ) ಮುಖ್ಯೋಪಾಧ್ಯಾಯರಾಗಿದ್ದ ಧಾರವಾಡದ ಹತ್ತಿರದ 'ಗರಗ' ಗ್ರಾಮಕ್ಕೆ ಬಂದು ಅಲ್ಲಿಯೇ ಮೂರು ವರ್ಷ ಓದಿ ಮುಲ್ಕಿ ಪರೀಕ್ಷೆ ಪಾಸಾದರು.

ಮುಲ್ಕಿ ಪರೀಕ್ಷೆಯಲ್ಲಿ ಧಾರವಾಡ ಕೇಂದ್ರಕ್ಕೆ ಪ್ರಥಮಸ್ಥಾನ ಪಡೆದು ಪಾಸಾದ ಕಣವಿಯವರು ಬುದ್ಧಿವಂತ ವಿದ್ಯಾರ್ಥಿಯೆಂದು ಹೆಸರು ಮಾಡಿದರು. ಶಿರುಂದದಲ್ಲಿ ತಮ್ಮ ಬಾಲ್ಯದ ಎಂಟು-ಹತ್ತು ವರ್ಷಗಳನ್ನು ಕಳೆದ ಕಣವಿಯವರಿಗೆ ಗರಗದಲ್ಲಿ ಅಂತಹ ಭಾವನಾತ್ಮಕ ಸಂಬಂಧ ಉಂಟಾಗದಿದ್ದರೂ ಇಡೀ ದೇಶವನ್ನೆಲ್ಲಾ ವ್ಯಾಪಿಸಿದ್ದ ಸ್ವಾತಂತ್ರ್ಯ ಚಳುವಳಿಯ ಕಾವಿನ ಪರಿಚಯವಾಯಿತು. ಅವರು ಪ್ರತಿ ರವಿವಾರ ಪ್ರಭಾತ ಫೇರಿಯಲ್ಲಿ ಭಾಗವಹಿಸಿ ದೇಶಭಕ್ತಿಯ ಹಾಡುಗಳನ್ನು ಹೇಳುತ್ತಿದ್ದರು. 'ಎಂಥಾ ಶಾಣ್ಯಾ ಮಹಾತ್ಮಾಗಾಂಧಿ, ಹಿಂದುಸ್ತಾನಕವನೇ ತಂದಿ', ಝೇಂಡಾ ಊಂಚಾ ರಹೇ ಹಮಾರಾ', 'ಕರುನಾಡು ನಮ್ಮ ನಾಡು, ಚಿನ್ನದಾ ಕರುನಾಡು ನಮ್ಮ ನಾಡು' ಇವೇ ಮೊದಲಾದ ದೇಶಭಕ್ತಿ ಗೀತೆಗಳನ್ನು ಹಾಡುವುದರಲ್ಲಿ ಕಣವಿ ಮುಂದಾಗಿರುತ್ತಿದ್ದರು. ಧಾರವಾಡದಿಂದ ಆಗಾಗ ಬರುತ್ತಿದ್ದ ರಾಜಕೀಯ ಮುಖಂಡರ ಭಾಷಣಗಳನ್ನು ಅವರು ಕೇಳುತ್ತಿದ್ದರು. ಗರಗದ ಮಡಿವಾಳೇಶ್ವರರು ಅನುಭಾವಿಗಳಾಗಿ ಪ್ರಸಿದ್ಧರಾದವರು. ಅವರ ಗದ್ದುಗೆಯ ಮಠಕ್ಕೆ ಆಗಾಗ ಹೋಗುತ್ತಿದ್ದರು. ಹತ್ತಿರದ ಹಳ್ಳದ ದಂಡೆಯ ಮೇಲೆ ಕುಳಿತು ಸೂರ್ಯಾಸ್ತವನ್ನು ನೋಡುತ್ತಿದ್ದರು. ಹೀಗೆ ಅವರ ಭಾವ ಜೀವನದ ಬದುಕಿನ ವಿವರಗಳು ನಮಗೆ ದೊರೆಯುತ್ತವೆ.

ಗರಗದ ಶಾಲೆಯಲ್ಲಿ 'ಗಾಂಧಿ ಟೋಪಿ' ನಾಟಕದಲ್ಲಿ ಪಾತ್ರವಹಿಸಿದ್ದು, ಎಲ್ಲಕ್ಕಿಂತ ಮುಖ್ಯವಾಗಿ ಶಾಲೆಯ ಪುಸ್ತಕ ಕಪಾಟಿನಲ್ಲಿದ್ದ ಗಳಗನಾಥರ 'ಮಾಧವ ಕರುಣಾ ವಿಲಾಸ' ಕಾದಂಬರಿ ಕಣವಿಯವರ ಕೈಗ ಸಿಕ್ಕು ಅದನ್ನು ಓದಿದಾಗ ಅಪಾರ ಆನಂದವನ್ನು ಅನುಭವಿಸಿದುದು ಮರೆಯದಂತಹದು. ಸಾಹಿತ್ಯದ ಗೀಳು ಹತ್ತಿ ಪುಸ್ತಕಗಳನ್ನು ಓದಿ ಸುಖ ಪಡೆಯುವ ಹವ್ಯಾಸ ಆಗಲೇ ಬೆಳೆಯಿತು. ಹೀಗೆ ಗರಗದಲ್ಲಿದ್ದಾಗ ಸ್ವಾತಂತ್ರ್ಯದ ಕಲ್ಪನೆ. ಸಾಹಿತ್ಯದ ಅಭಿರುಚಿ ದೇಶಭಕ್ತಿಗೀತೆಗಳ ಹಾಡಿನ ಮೂಲಕ ಬೆಳೆದವು. ಕವಿತಾ ರಚನೆಗೂ ಪ್ರೇರಣೆಯನ್ನು ಕೆಲಮಟ್ಟಿಗೆ ನೀಡಿದವು. ಮುಲ್ಕಿ ಪರೀಕ್ಷೆ ಪಾಸಾದಾಗ ಆಗಿನ ಕಾಲದಲ್ಲಿ ಪ್ರಾಥಮಿಕ ಶಾಲೆಯ ಶಿಕ್ಷಕ ಹುದ್ದೆ ದೊರೆಯುತ್ತಿತ್ತು. ತಮ್ಮ ಮಗ ಶಾಲೆಯ ಶಿಕ್ಷಕನಾದರೆ ಸಾಕು ಎಂದು ಸಕ್ರೆಪ್ಪ ಮಾಸ್ತರರು ಭಾವಿಸಿದ್ದ ಸಂದರ್ಭದಲ್ಲಿ ಚೆನ್ನವೀರ ಕಣವಿಯವರು ಮುಲ್ಕೀ ಪರೀಕ್ಷೆ ಪಾಸಾದ ಕೂಡಲೇ ಶಾಲೆಯ

ಶಿಕ್ಷಕ ಹುದ್ದೆಗೆ ಅರ್ಜಿ ಹಾಕಿದ್ದರಾದರೂ ಪ್ರಥಮಸ್ಥಾನ ಪಡೆದುದರಿಂದ ಹೆಚ್ಚಿನ ವಿದ್ಯಾಭ್ಯಾಸ ಮಾಡಲು ಆಶಿಸಿದರು. ಜ್ಞಾನಾರ್ಜನೆಯ ಹಂಬಲ ಹಾಗೂ ಬಾಳಿನಲ್ಲಿ ಮಹತ್ತರವಾದುದನ್ನು ಸಾಧಿಸಬೇಕೆಂಬ ಮಹತ್ವಾಕಾಂಕ್ಷೆ ಬೆಳೆಯುತ್ತಿದ್ದ ಕಾಲದಲ್ಲಿ ಕಣವಿಯವರು ಧಾರವಾಡಕ್ಕೆ ಬಂದು ೧೯೪೦ ರಲ್ಲಿ ರಾಜಾಲಖಮಗೌಡ ಸರದೇಸಾಯಿ ಹೈಸ್ಕೂಲು ಸೇರಿದರು. ಸ್ಕಾಲರ್‌ಶಿಪ್ ಪರೀಕ್ಷೆಯಲ್ಲಿ ಪಾಸಾದ್ದರಿಂದ ಸರಕಾರಿ ಶಿಷ್ಯವೇತನವೂ ಅವರಿಗೆ ಬರತೊಡಗಿತು.

ಧಾರವಾಡವು ನಮ್ಮ ನಾಡಿನ ಶೈಕ್ಷಣಿಕ ಕೇಂದ್ರವಾಗಿ, ಸಾಹಿತಿಗಳ ನೆಲೆವೀಡಾಗಿ ಪ್ರಸಿದ್ಧವಾಗಿದೆ. ಕಣವಿಯವರೇ ಹೇಳಿದ ಹಾಗೆ ಇಲ್ಲಿಯ ಸಾಂಸ್ಕೃತಿಕ ಪರಿಸರದಲ್ಲಿ 'ಕವಿಗಾಳಿ ಸವಿಗಾಳಿ ತೀಡುತಿಹುದು'. ಸಾಹಿತ್ಯಾಭ್ಯಾಸ ಮಾಡುವವರಿಗೆ, ಸಾಹಿತ್ಯ ರಚನೆ ಮಾಡುವವರಿಗೆ ಇಲ್ಲಿಯ ಪರಿಸರ ಸಹಜವಾಗಿಯೇ ಆ ಕಾರ್ಯದಲ್ಲಿ ತೊಡಗಿಸುತ್ತದೆ. ಚೆನ್ನವೀರ ಕಣವಿಯವರು ಹೈಸ್ಕೂಲ್ ವಿದ್ಯಾರ್ಥಿಯಾಗಿದ್ದಾಗಲೇ ಕವಿತಾ ರಚನೆಗೆ ತೊಡಗಿದರು. ಸಾಹಿತ್ಯದ ಅಧ್ಯಯನವು ಅವರ ಬದುಕಿನ ಒಂದು ಅಂಗವೂ ಆಯಿತು. 'ಕಿರಿಯರ ಬಳಗ' ಕಟ್ಟಿಕೊಂಡ ಅವರು ಸಾಂಸ್ಕೃತಿಕ ಚಟುವಟಿಕೆಗಳ ಕಡೆಗೂ ಗಮನ ಹರಿಸಿದರು.

ಧಾರವಾಡದಲ್ಲಿರುವ ಮುರುಘಾಮಠವು ಬಹುಕಾಲದಿಂದ ಪ್ರಸಾದ ನಿಲಯವನ್ನು ನಡೆಸಿಕೊಂಡು ಬರುತ್ತಿದೆಯಲ್ಲದೆ ಅನೇಕ ವಿದ್ಯಾರ್ಥಿಗಳಿಗೆ ವಸತಿ ಸೌಕರ್ಯ, ಪ್ರಸಾದ ವ್ಯವಸ್ಥೆ ಮಾಡಿ ಅವರ ವಿದ್ಯಾಭ್ಯಾಸಕ್ಕೆ ನೆರವು ನೀಡುತ್ತ ಬಂದಿದೆ. ಚೆನ್ನವೀರ ಕಣವಿಯವರೂ ಮುರುಘಾಮಠದಲ್ಲಿದ್ದುಕೊಂಡು ಓದಿದವರು. ಅದನ್ನು ಅವರು ಕೃತಜ್ಞತೆಯಿಂದ ನೆನೆಯುತ್ತಾರೆ. ಇಂದು ನಾಡಿನ ಅದೆಷ್ಟೋ ಪ್ರತಿಭಾವಂತರು ಮುರುಘಾಮಠದಲ್ಲೇ ಇದ್ದುಕೊಂಡು ವಿದ್ಯಾಭ್ಯಾಸ ಮಾಡಿದವರೆಂಬುದು ಇಲ್ಲಿ ಉಲ್ಲೇಖನೀಯ ಅಂಶ. ಮಠದ ಶ್ರೀಗಳಾದ ಪೂಜ್ಯ ಮೃತ್ಯುಂಜಯ ಸ್ವಾಮಿಗಳವರ ಕೃಪಾಶೀರ್ವಾದಗಳಿಂದ ಬೆಳೆದವರು ಚೆನ್ನವೀರ ಕಣವಿಯವರು. ಮಠದಲ್ಲಿ ಪ್ರತಿನಿತ್ಯ ನಸುಕಿನಲ್ಲಿ ಪ್ರಾರ್ಥನೆ, ಸಂಜೆ ಶಿವಾನುಭವ ಪ್ರವಚನಗಳಲ್ಲಿ ಭಾಗಿಯಾಗುತ್ತಿದ್ದ ಕಣವಿಯವರಲ್ಲಿ ವಚನ ಸಾಹಿತ್ಯದ ಬಗೆಗೆ ಒಲವು ಹೆಚ್ಚಿತು. ಶ್ರಾವಣ ಮಾಸದಲ್ಲಿ ವಿದ್ವಾಂಸರ

ಭಾಷಣಗಳು, ಸಂಗೀತ ಸಭೆಗಳು ನಡೆಯುತ್ತಿದ್ದವು. ಗಾನಗಂಧರ್ವರಾದ ಪಂಡಿತ ಮಲ್ಲಿಕಾರ್ಜುನ ಮನ್ಸೂರರ ಸಂಗೀತ, ವಚನಗಳ ಹಾಡುಗಾರಿಕೆಯನ್ನು ಕೇಳಿದ ಕಣವಿಯವರು ಸಾಹಿತ್ಯ ಸಂಗೀತದ ರಸಲಹರಿಯನ್ನು ಅನುಭವಿಸಿದರು. ಪೂಜ್ಯ ಮೃತ್ಯುಂಜಯ ಮಹಾಸ್ವಾಮಿಗಳು ಅನುಭಾವ ಪದಗಳನ್ನು ಭಾವಪೂರ್ಣವಾಗಿ ಹಾಡುತ್ತಿದ್ದರು. ವೀರಶೈವ ವಿದ್ವಾಂಸರಾದ ಶಿ. ಶಿ. ಬಸವನಾಳರು ವಚನಕಾರರ ಬಗೆಗೂ, ಉತ್ತಂಗಿ ಚೆನ್ನಪ್ಪನವರು ಸರ್ವಜ್ಞನ ಬಗೆಗೂ ಮಾಡಿದ ಉಪನ್ಯಾಸ ಕಣವಿಯವರ ಮೇಲೆ ಪ್ರಭಾವ ಬೀರಿದವು. ಆಲೂರು ವೆಂಕಟರಾಯರು, ಮಾಳವಾಡರು, ಭೂಸನೂರಮಠರು, ಹರ್ಡೇಕರ ಮಂಜಪ್ಪನವರು ಮೊದಲಾದವರು ಭಾಗವಹಿಸಿದ್ದ ಪ್ರಸಾದ ನಿಲಯದ ಬೆಳ್ಳಿಹಬ್ಬದಲ್ಲಿ ನಡೆದ ಕಾರ್ಯಕ್ರಮಗಳಿಂದ ಅನುಭಾವದ ಚಿಂತನೆಗಳು ಕಣವಿಯವರ ಮನಸ್ಸನ್ನು ತುಂಬಿಕೊಂಡವು. ಹೀಗೆ ವಚನಕಾರರು, ಸರ್ವಜ್ಞ, ಹರಿಹರ ಕವಿಯ ಬಗೆಗೆ ಕಣವಿಯವರಿಗೆ ವಿಶೇಷ ಆಸಕ್ತಿ ಬೆಳೆಯಿತು. ಮುರುಘಾಮಠಕ್ಕೆ ಆಗಾಗ ಬರುತ್ತಿದ್ದ ಸಾಹಿತಿಗಳು, ಕಲಾವಿದರು, ಸಂಗೀತಗಾರರು ಇವರೆಲ್ಲರನ್ನು ಕಾಣುವ, ಅವರ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವ ಕಣವಿಯವರಲ್ಲಿ ಸಾಂಸ್ಕೃತಿಕ ವ್ಯಕ್ತಿತ್ವವೊಂದು ರೂಪುಗೊಂಡಿತು.

ಆರ್. ಎಲ್. ಎಸ್. ಹೈಸ್ಕೂಲಿನಲ್ಲಿಯೂ ಚೆನ್ನವೀರ ಕಣವಿ ಅವರ ಪ್ರತಿಭೆಗೆ ಚಾಲನೆ ದೊರೆಯುವ ವಾತಾವರಣವಿತ್ತು. ಅಲ್ಲಿ ಮುಖ್ಯಾಧ್ಯಾಪಕರಾಗಿದ್ದ ವೀ. ರು. ಕೊಪ್ಪಳ ಅವರು ಕಣವಿಯವರ ಬರವಣಿಗೆಗೆ ಉತ್ತೇಜನ ನೀಡಿದರು. ಹೈಸ್ಕೂಲಿನ ಮಿಸಲೇನಿಯಲ್ಲಿ ಕಣವಿಯವರ ಕವಿತೆಗಳನ್ನು ಕಂಡ ಕೊಪ್ಪಳ ಅವರು ಮೆಚ್ಚುಗೆಯ ಮಾತನ್ನಾಡಿ ಹುರುದುಂಬಿಸಿದರು. ಅಷ್ಟಲ್ಲದೆ ಆ ಕವಿತೆಗಳನ್ನು ಉಳಿದ ತರಗತಿಯ ವಿದ್ಯಾರ್ಥಿಗಳ ಮುಂದೆ ಓದಿ ತೋರಿಸಿದರು. ಕಣವಿ ಅವರು ಹೈಸ್ಕೂಲಿನ ಗ್ರಂಥಾಲಯದಲ್ಲಿದ್ದ ಬೇಂದ್ರೆಯವರ 'ಗರಿ', ಕುವೆಂಪು ಅವರ 'ನವಿಲು', ಮಧುರ ಚೆನ್ನರ 'ನನ್ನ ನಲ್ಲ', ಕಡೆಂಗೋಡ್ಲು ಶಂಕರಭಟ್ಟರ 'ನಲ್ಮೆ' ಮೊದಲಾದ ಕವನ ಸಂಗ್ರಹಗಳನ್ನು, ಕುವೆಂಪು ಅವರ 'ಕಾನೂರು ಸುಬ್ಬಮ್ಮ ಹೆಗ್ಗಡತಿ', 'ಸ್ವಾಮಿ ವಿವೇಕಾನಂದ' ಮೊದಲಾದ ಗ್ರಂಥಗಳನ್ನು ಓದಿ, ತಮ್ಮ ಸಾಹಿತ್ಯಜ್ಞಾನವನ್ನು ವಿಸ್ತರಿಸಿಕೊಂಡರು.

ಕನ್ನಡ ನಾಡುನುಡಿಗಳ ಅಭ್ಯುದಯಕ್ಕಾಗಿ ಹುಟ್ಟಿಕೊಂಡ ಕರ್ನಾಟಕ ವಿದ್ಯಾವರ್ಧಕ ಸಂಘ (೧೮೯೦) ಕನ್ನಡ ಸಾಹಿತ್ಯ ಪರಿಷತ್ತಿನಂತಹ ಸಂಸ್ಥೆಗೆ ಮಾತೃಸ್ಥಾನದಲ್ಲಿದೆ. ಕರ್ನಾಟಕ ವಿದ್ಯಾವರ್ಧಕ ಸಂಘ ಧಾರವಾಡದ ಸಾಹಿತ್ಯಿಕ, ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರ ಸ್ಥಾನವೂ ಆಗಿದೆ. ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ನಿರಂತರವಾಗಿ ನಡೆಯುತ್ತಿದ್ದ ಸಾಹಿತ್ಯ ಸಭೆಗಳು ಸಾಹಿತ್ಯ ಪ್ರೇಮಿಗಳನ್ನು ಆಕರ್ಷಿಸುತ್ತಿದ್ದವು. ಕನ್ನಡದ ಬೆಳವಣಿಗೆಗೆ ಅದು ಮಾಡಿದ ಕಾರ್ಯಗಳು ನಾಡಿನ ಚರಿತ್ರೆಯಲ್ಲಿ ಸ್ಮರಣೀಯವಾಗಿವೆ. ಬಿ. ಎಂ. ಶ್ರೀಕಂಠಯ್ಯನವರು ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಮಾಡಿದ 'ಕನ್ನಡ ಮಾತು ತಲೆಯೆತ್ತುವ ಬಗೆ' ಎಂಬ ಉಪನ್ಯಾಸ ಚರಿತ್ರಾರ್ಹವಾದ್ದು. ರಾ. ಹ. ದೇಶಪಾಂಡೆ, ವೆಂಕಟ ರಂಗೋ ಕಟ್ಟಿ, ಶಿ. ಶಿ. ಬಸವನಾಳ ಮೊದಲಾದ ಮಹನೀಯರ ಅವಿರತ ಪರಿಶ್ರಮದಿಂದ ಅದು ಬೆಳೆದಿದೆ. ಕಣವಿಯವರು ಕರ್ನಾಟಕ ವಿದ್ಯಾವರ್ಧಕ ಸಂಘದ ಸಭೆಗಳಲ್ಲಿ ಪ್ರೇಕ್ಷಕರಾಗಿ ಭಾಗವಹಿಸುತ್ತ ಸಾಹಿತ್ಯದ ವಿದ್ಯಾರ್ಥಿಯಾಗಿ ಬೆಳೆಯ ತೊಡಗಿದರು.

ಚೆನ್ನವೀರ ಕಣವಿಯವರು ಹೈಸ್ಕೂಲು ಆರನೆಯ ತರಗತಿಯ ವಿದ್ಯಾರ್ಥಿಯಾಗಿದ್ದಾಗಲೇ ಬಸವನಾಳರ ಅಧ್ಯಕ್ಷತೆಯಲ್ಲಿ ಜರುಗಿದ ರಬಕವಿಯ ಸಾಹಿತ್ಯ ಸಮ್ಮೇಳನ(೧೯೪೪)ಕ್ಕೆ ಹೋದರು. ಅದು ಅವರು ನೋಡಿದ ಪ್ರಥಮ ಸಾಹಿತ್ಯ ಸಮ್ಮೇಳನ. ಅಲ್ಲಿ ಬಿ. ಎಂ. ಶ್ರೀ, ಮಾಸ್ತಿ, ರಾಜರತ್ನಂ, ಅ.ನ.ಕೃ., ಸಿಂಪಿ ಲಿಂಗಣ್ಣ, ತ. ರಾ. ಸು., ನಿರಂಜನ, ಮಾ. ನಾ. ಚೌಡಪ್ಪ ಮೊದಲಾದ ಹಿರಿಯರನ್ನು ನೋಡಿದರು. ಪ್ರಗತಿಶೀಲ ಸಾಹಿತ್ಯದ ಚಳುವಳಿ ಜೋರಾಗಿದ್ದ ಕಾಲವದು. ಗೋಕಾಕರ ಅಧ್ಯಕ್ಷತೆಯಲ್ಲಿ ನಡೆದ ಪ್ರಗತಿಶೀಲ ಸಾಹಿತ್ಯದ ವಿಚಾರಗೋಷ್ಠಿ ಸಮ್ಮೇಳನದ ವಿಶೇಷ ಆಕರ್ಷಣೆಯಾಗಿತ್ತು.

ಬಸವನಾಳರು ಕಣವಿಯವರಂಥ ಪ್ರತಿಭಾವಂತ ಕವಿಗಳನ್ನು ಉತ್ತೇಜಿಸುತ್ತಿದ್ದುದು ಮುಖ್ಯವಾದ ಸಂಗತಿಯಾಗಿದೆ. ಕರ್ನಾಟಕ ವಿದ್ಯಾವರ್ಧಕ ಸಂಘದ ಸಭೆ-ಸಮಾರಂಭಗಳಲ್ಲಿ ಬೇಂದ್ರೆ, ಕುವೆಂಪು, ಆನಂದಕಂದ ಮೊದಲಾದ ಕವಿಗಳ ಭಾವಗೀತಗಳ ಹಾಡುಗಾರಿಕೆಯನ್ನು ಕಣವಿಯವರು ತಪ್ಪದೇ ಕೇಳುತ್ತಿದ್ದರು. ಕಾವ್ಯದ ಬಗೆಗೆ ಸಂಭ್ರಮದ ವಾತಾವರಣ ಹರಡಿದ್ದ ಕಾಲವದು. ವಿದ್ಯಾವರ್ಧಕ ಸಂಘ ಏರ್ಪಡಿಸುತ್ತಿದ್ದ

ವಕ್ತೃತ್ವ ಸ್ಪರ್ಧೆಯಲ್ಲಿಯೂ ಕಣವಿಯವರು ಭಾಗವಹಿಸಿ ಬಹುಮಾನ ಗಳಿಸಿದ್ದರು. ವಿದ್ಯಾವರ್ಧಕ ಸಂಘದಲ್ಲಿ ಕಣವಿಯವರು ವಿದ್ಯಾರ್ಥಿ ಸಾಹಿತ್ಯಗೋಷ್ಠಿಯನ್ನು ಏರ್ಪಡಿಸುವಲ್ಲೂ ಮುಂದಾಗಿದ್ದರು.

ಚೆನ್ನವೀರ ಕಣವಿಯವರು ಮೆಟ್ರಿಕ್ ಪರೀಕ್ಷೆಯಲ್ಲಿ ಪ್ರಥಮ ವರ್ಗದಲ್ಲಿ ತೇರ್ಗಡೆಯಾದುದರಿಂದ, ಅವರಿಗೆ ಸರಕಾರಿ ಶಿಷ್ಯವೇತನ ಮುಂದುವರಿಕೆಯಾಗಿ ಕಾಲೇಜು ವ್ಯಾಸಂಗ ಮಾಡಲು ಸಾಧ್ಯವಾಯಿತು. ಧಾರವಾಡದ ಕರ್ನಾಟಕ ಕಾಲೇಜು ಸೇರಿದ ಕಣವಿಯವರು ಬಿ. ಎ. ಪರೀಕ್ಷೆಗೆ ಕನ್ನಡವನ್ನು ಪ್ರಧಾನ ವಿಷಯವಾಗಿ ಆಯ್ಕೆ ಮಾಡಿಕೊಂಡರು. ಇಂಗ್ಲೀಷ್ ಅವರ ಉಪಪ್ರಧಾನ ವಿಷಯವಾಗಿತ್ತು. ಆಗ ಕರ್ನಾಟಕ ಕಾಲೇಜು ಉತ್ತರ ಕರ್ನಾಟಕದಲ್ಲಿಯೇ ಪ್ರಸಿದ್ಧವಾದ ವಿದ್ಯಾಸಂಸ್ಥೆ. ಖ್ಯಾತನಾಮರಾದ ಪ್ರಾಧ್ಯಾಪಕರು ಅಲ್ಲಿದ್ದುದರಿಂದ ಶೈಕ್ಷಣಿಕ ಬೋಧನೆಯ ಜೊತೆಗೆ ಕಾಲೇಜಿನ ಕರ್ನಾಟಕ ಸಂಘದಲ್ಲಿ ಸಾಹಿತ್ಯಿಕ, ಸಾಂಸ್ಕೃತಿಕ ಚಟುವಟಿಕೆಗಳೂ ಹೆಚ್ಚಾಗಿ ನಡೆಯುತ್ತಿದ್ದವು. ಪ್ರೊ. ಸ. ಸ. ಮಾಳವಾಡರು ಕನ್ನಡ ಪ್ರಾಧ್ಯಾಪಕರಾಗಿ ಕಣವಿಯವರಿಗೆ ಸಾಹಿತ್ಯ ವಿಮರ್ಶನ ತತ್ತ್ವಗಳನ್ನು ಪರಿಚಯಿಸಿದರೆ, ಪ್ರೊ. ಆರ್ಮೆಂಡೊ ಮೆನೆಜಿಸ್ ಅವರು ಇಂಗ್ಲೀಷ್ ಕಾವ್ಯವನ್ನು ಬೋಧಿಸಿದರು. ಕವಿಯಾಗಿದ್ದ ಪ್ರೊ. ಮೆನೆಜಿಸ್ ಅವರು ಮುಂದೆ ಕಣವಿಯವರ ಕವಿತೆಗಳನ್ನು ಇಂಗ್ಲೀಷಿಗೆ ಅನುವಾದಿಸಿದ್ದನ್ನು ಇಲ್ಲಿ ಸ್ಮರಿಸಬಹುದು. ಕರ್ನಾಟಕ ಕಾಲೇಜಿನಲ್ಲಿ ಕರ್ನಾಟಕ ಸಂಘದ ಚಟುವಟಿಕೆಗಳಲ್ಲಿ ಕಣವಿಯವರು ಮುಖ್ಯಪಾತ್ರವಹಿಸುತ್ತಿದ್ದರು. ಕಾಲೇಜಿನ ಮೊದಲ ವರ್ಷದಲ್ಲೇ ಕಾವ್ಯಸ್ಪರ್ಧೆಯಲ್ಲಿ ಭಾಗವಹಿಸಿ ಮೊದಲ ಬಹುಮಾನವನ್ನು ಪಡೆದರು. ಎರಡನೆಯ ವರ್ಷ ಕರ್ನಾಟಕ ಸಂಘದಲ್ಲಿ ರಂಗನಾಥ ದಿವಾಕರರ 'ಕರ್ನಾಟಕ ಏಕೀಕರಣ' ಕುರಿತು ಉಪನ್ಯಾಸವನ್ನು ಏರ್ಪಡಿಸಿದಾಗ ಅಂದಿನ ಸಭೆಯ ಅಧ್ಯಕ್ಷತೆಯನ್ನು ಡಿ. ವಿ. ಗುಂಡಪ್ಪನವರು ವಹಿಸಿದ್ದರು. ಕಾವ್ಯಸ್ಪರ್ಧೆಯಲ್ಲಿ ಬಹುಮಾನ ಪಡೆದ ಚೆನ್ನವೀರ ಕಣವಿಯವರಿಗೆ ಡಿ. ವಿ. ಜಿ. ಯವರ ಹಸ್ತದಿಂದ ಬಹುಮಾನ ಕೊಡಿಸಲಾಯಿತು. ಡಿ. ವಿ. ಜಿ. ಅವರು ಕಣವಿಯವರ ಬೆನ್ನುತಟ್ಟಿ 'ಎಲ್ಲಿ ನಿಮ್ಮ ಕವಿತೆಗಳು ? ಅವುಗಳನ್ನು ನೋಡಬೇಕಲ್ಲ' ಎಂದಾಗ ಪ್ರೊ. ಮಳಗಿಯವರು ಅವರಿಗೆ ಕಣವಿಯವರ ಕವಿತೆಗಳನ್ನು ತೋರಿಸಿದರಂತೆ.

ಧಾರವಾಡದ ನಿಸರ್ಗ ಸೌಂದರ್ಯ, ಸಾಂಸ್ಕೃತಿಕ ಪರಿಸರ, ಅವರ ಭಾವವಿಕಾಸಕ್ಕೆ ಚೇತೋಹಾರಿಯಾಗಿತ್ತು. ಕವಿತೆ ಬರೆಯುವ ಲವಲವಿಕೆ ತುಂಬಿತ್ತು. ತಾವು ಬರೆದ ಕವಿತೆಗಳನ್ನು ಅಂದಿನ ಪ್ರಸಿದ್ಧ ಪತ್ರಿಕೆಗಳಾದ 'ಜೀವನ' 'ಜಯಂತಿ' 'ಜಯಕರ್ನಾಟಕ'ಗಳಿಗೆ ಕಣವಿಯವರು ಕಳುಹಿಸಿದರು. ಕಣವಿಯವರ ಕವಿತೆಗಳು ಪತ್ರಿಕೆಗಳಲ್ಲಿ ಪ್ರಕಟವಾಗುತ್ತಲೇ ಅವರಿಗೆ ಪ್ರಸಿದ್ಧಿಯನ್ನು ತಂದುಕೊಟ್ಟವು. ಇಂದು ಖ್ಯಾತ ಲೇಖಕರಾದ, ಅಂದು ವಿದ್ಯಾರ್ಥಿಗಳಾಗಿದ್ದ ಕೀರ್ತಿನಾಥ ಕುರ್ತಕೋಟಿ, ಶಂಕರ ಮೋಕಾಶಿ ಪುಣೇಕರ, ವಸಂತ ಕವಲಿ, ಚಿದಂಬರ ದೀಕ್ಷಿತ, ಜಿ. ಎಚ್. ಕಣೇಕಲ್, ಶಿವೇಶ್ವರ ದೊಡ್ಡಮನಿ ಮೊದಲಾದ ಗೆಳೆಯರ ಬಳಗ ಚೆನ್ನವೀರ ಕಣವಿಯವರ ಕವಿತೆ ಕುರಿತು ಸ್ನೇಹಪೂರ್ಣ ವಿಮರ್ಶೆ ಚರ್ಚೆ ನಡೆಸುತ್ತಿತ್ತು.

ಧಾರವಾಡದ ಮಾಳಮಡ್ಡಿಯ ವಿಶಾಲವಾದ ಕೋಣೆಯಲ್ಲಿ ವಾಸಿಸುತ್ತಿದ್ದ ಕಣವಿಯವರು ತಮ್ಮ ಕೋಣೆಯಲ್ಲೇ 'ಕಾವ್ಯಾನುಭವ ಮಂಟಪ' ಆರಂಭಿಸಿ ಅಲ್ಲಿ ಕವಿತಾವಾಚನ, ಅದರ ರಸವಿಮರ್ಶೆ, ಸಾಹಿತ್ಯ ವಿಚಾರ ಚರ್ಚೆ, ನಡೆಸುತ್ತಿದ್ದರು. ಸಾಹಿತ್ಯಾಭ್ಯಾಸಿಗಳಾದ ಅವರ ಗೆಳೆಯರೆಲ್ಲಾ ಈ 'ಕಾವ್ಯಾನುಭವ ಮಂಟಪ'ದ ಸದಸ್ಯರಾಗಿದ್ದರು. ಧಾರವಾಡದ ವಿದ್ಯಾರ್ಥಿಗಳು ಇದನ್ನು ನಡೆಸಿದರೆ ಕರ್ನಾಟಕ ವಿದ್ಯಾವರ್ಧಕ ಸಂಘದ ಅಟ್ಟದಲ್ಲಿ ಹಿರಿಯ ಸಾಹಿತಿಗಳು 'ಸಾಹಿತ್ಯ ಮಂಟಪ'ದಲ್ಲಿ ಸಾಹಿತ್ಯಿಕ ಚರ್ಚೆ ನಡೆಸುತ್ತಿದ್ದರು. ಆಗ ಸೊಲ್ಲಾಪುರದಲ್ಲಿರುತ್ತಿದ್ದ ವರಕವಿ ಬೇಂದ್ರೆಯವರೂ ಕೊಲ್ಲಾಪುರದಲ್ಲಿದ್ದ ಗೋಕಾಕರೂ ಧಾರವಾಡಕ್ಕೆ ಬಂದಿದ್ದರು. ಗೋಕಾಕರು ಮಾಳಮಡ್ಡಿಯ ಎನ್. ಕೆ. ದೀಕ್ಷಿತರ ಮನೆಯಲ್ಲಿ ಇಳಿದುಕೊಂಡಿದ್ದರು. ಕಣವಿಯವರ ಕೋರಿಕೆಯನ್ನು ಪ್ರೀತಿಯಿಂದ ಒಪ್ಪಿಕೊಂಡು ಬೇಂದ್ರೆಯವರು ಹಾಗೂ ಗೋಕಾಕರು 'ಕಾವ್ಯಾನುಭವ ಮಂಟಪ'ಕ್ಕೆ ಬಂದರು. (೧೯೫೦). ಅವರ ಭೇಟ್ಟಿಗೆ ಸಭೆಯ ಸ್ವರೂಪ ಬಂದು, ಎರಡು ಮೂರು ತಾಸಿನ ವರೆಗೆ ಹೊಸ ಕಾವ್ಯದ ಕುರಿತು ಭಾಷಣ, ಚರ್ಚೆ ನಡೆದವು. ತಾವು 'ಗೆಳೆಯರ ಗುಂಪ'ನ್ನು ಆರಂಭಿಸಿದ್ದನ್ನು ಬೇಂದ್ರೆಯವರು ಸ್ಮರಿಸಿದರು. ಬೇಂದ್ರೆ ಹಾಗೂ ಗೋಕಾಕರಿಂದ ಉದ್ಘಾಟಿಸಲ್ಪಟ್ಟ 'ಕಾವ್ಯಾನುಭವ ಮಂಟಪ' ಮೂರು ವರ್ಷಗಳವರೆಗೆ ನಿರಂತರವಾಗಿ ನಡೆಯಿತು.

ಚೆನ್ನವೀರ ಕಣವಿಯವರು ಗರಗದಲ್ಲಿರುವಾಗಲೇ ಸ್ವಾತಂತ್ರ್ಯ ಚಳುವಳಿಯ ಕಾರ್ಯಚಟುವಟಿಕೆಗಳ ಮೂಲಕ ರಾಷ್ಟ್ರೀಯ ಭಾವನೆಯನ್ನು ಬೆಳೆಸಿಕೊಂಡಿದ್ದರು. ಖಾದಿಧೋತ್ರ, ಖಾದಿಜುಬ್ಬ ತೊಡುತ್ತಿದ್ದ ಅವರು ಅಪ್ಪಟ ದೇಶಾಭಿಮಾನಿಯಾಗಿದ್ದರು. ಅವರು ಕರ್ನಾಟಕ ಕಾಲೇಜಿನಲ್ಲಿರುವಾಗಲೇ ಭಾರತ ದೇಶ ಸ್ವತಂತ್ರವಾಯಿತು. ಸ್ವಾತಂತ್ರ್ಯೋತ್ಸವ ಆಚರಿಸಲು ಕರ್ನಾಟಕ ಕಾಲೇಜಿನ ಮೈದಾನದಲ್ಲಿ ಬೃಹತ್ ಸಭೆ ಸಂಘಟಿತವಾಯಿತು. 'ಬಂಧದಿಂ ಬಿಡುಗಡೆ' ಎಂಬ ತಮ್ಮ ಕವಿತೆಯನ್ನು ಆ ಬೃಹತ್ ಸಭೆಯಲ್ಲಿ ಓದುವಾಗ ರೋಮಾಂಚನದ ಅನುಭವ ಕಣವಿಯವರಿಗಾಯಿತು. ಅದೇ ಕಣವಿಯವರು ಭಾಗವಹಿಸಿದ ಮೊದಲ ಸಾರ್ವಜನಿಕ ಕವಿತಾವಾಚನವಾಗಿತ್ತು.

ಕನ್ನಡದ ಪ್ರಸಿದ್ಧ ಲೇಖಕರಾದ ಹಿರೇಮಲ್ಲೂರ ಈಶ್ವರನ್ ಅವರು ಕಣವಿಯವರ ಕವಿತೆಗಳನ್ನು ನೋಡಿ ಸಂತೋಷಪಟ್ಟರಲ್ಲದೆ ತಮ್ಮ 'ಕಲ್ಪನಾ ಗ್ರಂಥಮಾಲೆ'ಯಲ್ಲಿ ಕಣವಿಯವರ ಮೊದಲ ಕವಿತಾ ಸಂಕಲನ 'ಕಾವ್ಯಾಕ್ಷಿ'ಯನ್ನು ಪ್ರಕಟಿಸಿದರು. (೧೯೪೯). ಅದಕ್ಕೆ ಮುನ್ನುಡಿ ಬರೆದ ಬೇಂದ್ರೆಯವರು ಕವಿತೆಗಳ ವಿಶೇಷತೆಯನ್ನು ಮೆಚ್ಚಿಕೊಂಡು ಬರೆದಾಗ ಕಣವಿಯವರಿಗಾದ ಸಂತೋಷ ಅಷ್ಟಿಷ್ಟಲ್ಲ, ಕಣವಿಯವರ 'ಕಾವ್ಯಾಕ್ಷಿ'ಗೆ ಸಾಹಿತಿಗಳ ಹಾಗೂ ಕಾವ್ಯಾಸಕ್ತರ ಮೆಚ್ಚುಗೆಯೂ ಪ್ರಕಟವಾಯಿತು. ಆಗಿನ ಯುವಕವಿಗಳಲ್ಲಿ ಕಣವಿಯವರು ಮುಂಚೂಣಿಯಲ್ಲಿರುವುದು ಸಹೃದಯರ ಗಮನಕ್ಕೆ ಬಂದಿತು.

ಕವಿತೆಗಳ ರಚನೆಗೆ ಬೇಕಾದ ಪ್ರತಿಭೆ, ಅಭ್ಯಾಸ, ವ್ಯುತ್ಪತ್ತಿಗಳು ಕಣವಿಯವರಲ್ಲಿದ್ದು ಅವರು ಶ್ರದ್ಧೆಯಿಂದ ತಮ್ಮ ಕಾವ್ಯ ರಚನೆಗೆ ತೊಡಗಿ ಒಬ್ಬ ಜನಪ್ರಿಯ ಕವಿಯೂ ಆದರು. ಕಣವಿಯವರ ಮೇಲೆ ಅಚ್ಚಳಿಯದ ಪ್ರಭಾವ ಬೀರಿದ ಕವಿತೆಗಳಲ್ಲಿ ಬೇಂದ್ರೆಯವರ 'ಸಖೀಗೀತ', ಮಧುರ ಚೆನ್ನರ 'ನನ್ನ ನಲ್ಲ' ಕುವೆಂಪು ಅವರ 'ನವಿಲು' ಪ್ರಮುಖವಾದವುಗಳು. ಕಣವಿಯವರು ತಮ್ಮ ಕವಿ ವ್ಯಕ್ತಿತ್ವ ಬೆಳೆದು ಬಂದ ಬಗೆಯನ್ನು, ಭಾವ ಜೀವನದ ವಿಕಾಸವನ್ನು ಒಂದು ನೀಳ್ಗವಿತೆಯಲ್ಲಿ ಸೆರೆಹಿಡಿಯಲು ತೊಡಗಿದಾಗ ಅದು 'ಭಾವಜೀವಿ'ಯಾಗಿ ರೂಪುಗೊಂಡಿತು. ಅದರ ಕೆಲವು ಭಾಗ ಆನಂದಕಂದರ ಅಪೇಕ್ಷೆಯ ಮೇರೆಗೆ 'ಜಯಂತಿ'ಯಲ್ಲಿ ಪ್ರಕಟವಾಯಿತು.

ಅದನ್ನು ಗಮನಿಸಿದ ಬಸವರಾಜ ಕಟ್ಟೀಮನಿಯವರು ಧಾರವಾಡಕ್ಕೆ ಬಂದಾಗ ಕಣವಿಯವರನ್ನು ಕಂಡರು. ಆಗಲೇ ಅವರಿಬ್ಬರಲ್ಲಿ ಪ್ರೀತಿ, ವಿಶ್ವಾಸಗಳು ಬೆಳೆದವು. ಪರಸ್ಪರ ಸ್ನೇಹಿತರೂ ಆದರು. ಕಣವಿಯವರ 'ಭಾವಜೀವಿ'ಯನ್ನು ಭಾಗಶಃ ಕಂಡು ಸಂತೋಷಪಟ್ಟ ಕಟ್ಟೀಮನಿಯವರು ಅದನ್ನು ಇಡಿಯಾಗಿ ತಮ್ಮ ಪ್ರಗತಿಶೀಲ ಸಾಹಿತ್ಯಮಾಲೆಯಲ್ಲಿ ಪ್ರಕಟಿಸಿದರು. ಇಪ್ಪತ್ತೆರಡನೆಯ ವಯಸ್ಸಿನಲ್ಲಿ ಮೂಡಿಬಂದ ಆ ಕವಿತೆ ಕನ್ನಡ ಆತ್ಮಕಥನ ಕವನಗಳಲ್ಲಿಯೇ ಒಂದು ಮೈಲುಗಲ್ಲಾಗಿದೆ. 'ಕಾವ್ಯಾನುಭವ ಮಂಟಪ'ದಲ್ಲಿ ಕಣವಿಯವರನ್ನು ನೋಡಿದ್ದ ಗೋಕಾಕರು 'ಭಾವಜೀವಿ'ಗೆ ಮುನ್ನುಡಿ ಬರೆದು ಕಣವಿ ಪ್ರತಿಭೆಯ ವೈಶಿಷ್ಟ್ಯವನ್ನು ಎತ್ತಿ ಹೇಳಿದರು. ಹೀಗೆ ಕಾಲೇಜು ವಿದ್ಯಾರ್ಥಿಯಾಗಿದ್ದಾಗಲೇ ಚೆನ್ನವೀರ ಕಣವಿಯವರ ಎರಡನೆಯ ಕೃತಿ 'ಭಾವಜೀವಿ' (೧೯೫೦) ಪ್ರಕಟವಾಯಿತು. ಕಣವಿಯವರ ಕಾವ್ಯಶಕ್ತಿಯನ್ನು ವಿದ್ವಾಂಸರೆಲ್ಲ ಗುರುತಿಸಿ. 'ಭಾವಜೀವಿ'ಯನ್ನು ಅತ್ಯಂತ ಪ್ರೀತಿಯಿಂದ ಸ್ವಾಗತಿಸಿದರು. ಹೀಗೆ ಕಣವಿಯವರು ಕವಿಯಾಗಿ ವಿದ್ವಾಂಸರ, ಸಹೃದಯರ ಪ್ರೀತಿಯನ್ನು ಗಳಿಸುತ್ತ ತಮ್ಮ ಕಾವ್ಯಸಾಧನೆಯಲ್ಲಿ ಮುನ್ನಡೆದರು.

೧೯೫೦ ರಲ್ಲಿ ಚೆನ್ನವೀರ ಕಣವಿ ಅವರು ಬಿ. ಎ. ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಪ್ರಥಮಸ್ಥಾನ ಗಳಿಸಿ, ವಿಶ್ವವಿದ್ಯಾಲಯದ ಬಹುಮಾನ ಪಡೆದರು. ಇದರಿಂದ ಶಿಷ್ಯವೇತನ ಮುಂದುವರಿಕೆಯಾಯಿತು. ಎಂ. ಎ. ವ್ಯಾಸಂಗ ಮಾಡಲು ತೊಡಗಿದರು. ಅದೆ ತಾನೆ ಕರ್ನಾಟಕ ವಿಶ್ವವಿದ್ಯಾಲಯ ಕನ್ನಡ ಎಂ. ಎ. ಆರಂಭಿಸಿ ಒಂದು ವರ್ಷವಾಗಿತ್ತು. ಚೆನ್ನವೀರ ಕಣವಿ ಅವರು ೧೯೫೧ ರಲ್ಲಿ ಕನ್ನಡ ಎಂ. ಎ. ಪದವಿ ತರಗತಿಗೆ ಸೇರಿದಾಗ ಪ್ರೊ. ಸ. ಸ. ಮಾಳವಾಡ, ಪ್ರೊ. ಎಸ್. ಆರ್. ಮಳಗಿ, ಪ್ರೊ. ರಾ. ಯ. ಧಾರವಾಡಕರ ಮೊದಲಾದವರು ಉಪನ್ಯಾಸ ನೀಡುತ್ತಿದ್ದರು. ಅಂತಿಮ ವರ್ಷದಲ್ಲಿದ್ದಾಗ ಪ್ರೊ. ತೀ. ನಂ. ಶ್ರೀಕಂಠಯ್ಯ ಹಾಗೂ ಡಾ. ಆರ್. ಸಿ. ಹಿರೇಮಠರು ಕನ್ನಡ ವಿಭಾಗಕ್ಕೆ ಬಂದರು. ೧೯೫೨ ರಲ್ಲಿ ಉಚ್ಚ ವರ್ಗದಲ್ಲಿ ಕನ್ನಡ ಎಂ. ಎ. ಪದವಿ ಪಡೆದ ಚೆನ್ನವೀರ ಕಣವಿ ಅವರು ಅದೇ ವರ್ಷ ಸೆಪ್ಟೆಂಬರ್ ತಿಂಗಳಲ್ಲಿ ಆಗತಾನೆ ಆರಂಭವಾದ ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣ ಹಾಗೂ ಪ್ರಕಟನ ವಿಭಾಗದ ಕಾರ್ಯದರ್ಶಿಯಾಗಿ ನೇಮಕಗೊಂಡರು.

ಚೆನ್ನವೀರ ಕಣವಿಯವರಿಗೆ ಮಾಳವಾಡ ದಂಪತಿಗಳ ಮೂಲಕ ವಿಜಾಪುರದಲ್ಲಿ ಮಾಮಲೆದಾರರಾಗಿದ್ದ ಎಸ್. ವಿ. ಗಿಡ್ನವರ. ಅವರ ಪರಿಚಯವಾಯಿತು. ಗಿಡ್ನವರ ಅವರು ಕಂದಾಯ ಇಲಾಖೆಯಲ್ಲಿ ಅಪರೂಪದ ಅಧಿಕಾರಿಯಾಗಿದ್ದರು. ಬೇಂದ್ರೆ, ಸಿಂಪಿ ಲಿಂಗಣ್ಣ, ಮಧುರಚೆನ್ನರ ನಿಕಟ ಸಂಪರ್ಕ ಪಡೆದಿದ್ದ ಅವರ ಮನೆಯಲ್ಲಿ ಪುಸ್ತಕದ ದೊಡ್ಡ ಭಂಡಾರವಿತ್ತು. ಪುಸ್ತಕ ಪ್ರೀತಿಯ ಗಿಡ್ನವರ ಅವರ ಮನೆಗೆ ಕಣವಿಯವರು ಭೇಟಿ ನೀಡಿದರು. ವಿಜಾಪುರದಲ್ಲಿ ಅವರ ಭಾವ ಗೋಗೇರಿಯವರಲ್ಲಿ ಒಂದು ತಿಂಗಳ ರಜೆ ಕಳೆಯಲು ಕಣವಿಯವರು ಹೋದಾಗ ಗಿಡ್ನವರ ಅವರ ಮೂರನೆಯ ಮಗಳು ಶಾಂತಾ ಅವರು ಕಣವಿಯವರಿಗೆ ಬೇಕಾದ ಪುಸ್ತಕಗಳನ್ನು ಆಯ್ದು ಕೊಡುತ್ತಿದ್ದರು. ಕಾವ್ಯಗಾಯನ, ಜನಪದ ಗೀತೆಗಳ ಗಾಯನ ಕಾರ್ಯಕ್ರಮದಲ್ಲಿ ಶಾಂತಾ ಭಾಗವಹಿಸುತ್ತಿದ್ದರಲ್ಲದೆ ಕಣವಿಯವರ 'ಕಾವ್ಯಾಕ್ಷಿ'ಯಲ್ಲಿಯ ಪದ್ಯಗಳಿಗೆ ಧಾಟಿ ಹಚ್ಚಿ ಹಾಡಿದ್ದು ಕಣವಿಯವರ ಗಮನ ಸೆಳೆಯಿತು. ರಜೆ ಮುಗಿಸಿ ಧಾರವಾಡಕ್ಕೆ ಬರುವ ಹಿಂದಿನ ದಿನ ಶ್ರೀಮತಿ ಗಿಡ್ನವರ ಅವರು 'ಹುಡುಗಿ ಮನಸ್ಸಿಗೆ ಬಂದಳೆ ?' ಎಂದು ಪ್ರಶ್ನಿಸಿದಾಗ ಕಣವಿ ಅವರಿಗೆ ಆಶ್ಚರ್ಯವಾಯಿತು. ತಮ್ಮ ಮನಸ್ಸಿನಲ್ಲಿದ್ದದ್ದು ಇವರಿಗೆ ಹೇಗೆ ತಿಳಿಯಿತೆಂದು ತಬ್ಬಿಬ್ಬಾದರು. ಕಣವಿಯವರು ಶಾಂತಾರನ್ನು ಮದುವೆಯಾಗಲು ಒಪ್ಪಿದರು. ಎರಡು ವರ್ಷಗಳ ವರೆಗೆ ಅವರಿಬ್ಬರಲ್ಲಿ ಪತ್ರ ವ್ಯವಹಾರ ನಡೆಯುತ್ತಿತ್ತು. ಎಂ. ಎ. ಮುಗಿಸಿದ ಮೇಲೆ ಕಣವಿಯವರು ಶಾಂತಾ ಅವರೊಂದಿಗೆ ಧಾರವಾಡದಲ್ಲಿ ಮದುವೆಯಾದದ್ದು ಮೇ ೧೯೫೨ ರಲ್ಲಿ. ಹೀಗೆ ಧಾರವಾಡದಲ್ಲಿ ಕಣವಿಯವರು ಸುಖಸಂಸಾರ ನಡೆಸಲು ಆರಂಭಿಸಿದರು. ಪ್ರೊ. ಸ. ಸ. ಮಾಳವಾಡ ದಂಪತಿಗಳ ಸಂಬಂಧದಿಂದ ಅವರ ಮನೆ ಮನಗಳ ನಡುವೆ ಕಣವಿ ದಂಪತಿಗಳು ಸಾಹಿತ್ಯ ಸಂಗಾತಿಗಳಾದರು.

ಕಣವಿಯವರು ಮಧುರಚೆನ್ನರನ್ನು ಮೊದಲು ನೋಡಿದ್ದು ವಿಜಾಪುರದ ಗಿಡ್ನವರ ಮನೆಯಲ್ಲಿಯೇ. ಅವರು ಮಧುರಚೆನ್ನರ ಅನುಭಾವದರ್ಶನದಿಂದ ಕಾವ್ಯ ಸ್ಫೂರ್ತಿ ಪಡೆದಿದ್ದರು. ಕಣವಿಯವರು 'ಭಾವಜೀವಿ'ಯನ್ನು ಮಧುರಚೆನ್ನರಿಗೆ ಅರ್ಪಿಸಿದ್ದರು. ಮಧುರಚೆನ್ನರ ಪ್ರತ್ಯಕ್ಷ ದರ್ಶನದಿಂದ ಕಣವಿಯವರು ಪುಳಕಿತರಾದರು.

ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ವಿಸ್ತರಣ ಪ್ರಕಟಣ ವಿಭಾಗದ ಪ್ರಾರಂಭಾವಸ್ಥೆಯಲ್ಲಿ ಕಾರ್ಯ ಮಾಡುವ ಹೊಣೆ ಕಣವಿಯವರದಾಗಿತ್ತು. ವಿಶ್ವವಿದ್ಯಾಲಯ ಜ್ಞಾನ ಪ್ರಸಾರವನ್ನು ಮಾಡುವ ಉದ್ದೇಶದಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಉಪನ್ಯಾಸಗಳನ್ನು ಏರ್ಪಡಿಸುವದು, ಪುಸ್ತಕಗಳ ಪ್ರಕಟನೆ ಮಾಡುವುದು, ಉನ್ನತ ವ್ಯಾಸಂಗದ ನಿಯತಕಾಲಿಕೆಗಳನ್ನು ಆರಂಭಿಸುವುದು ಇವೇ ಮೊದಲಾದ ಘನ ಉದ್ದೇಶವುಳ್ಳ ಈ ಇಲಾಖೆಗೆ ಕಣವಿಯವರು ಕಾರ್ಯದರ್ಶಿಯಾಗಿ ಬಂದದ್ದು ಒಂದು ಶುಭ ಸಮಯವೆನ್ನಬೇಕು. ಆರಂಭದಲ್ಲೇ ಕಣವಿಯವರು ಗ್ರಾಮಗಳಲ್ಲಿ ಉಪನ್ಯಾಸ ಶಿಬಿರ ಏರ್ಪಡಿಸಿ ವಿಶ್ವವಿದ್ಯಾಲಯ ಜನರ ಹತ್ತಿರ ಬರುವಂತೆ ಮಾಡಿದರು. ಜನಪ್ರಿಯವಾದ ವಿಷಯಗಳಿಗೆ ಸಂಬಂಧಿಸಿದ ವಿವಿಧ ಕ್ಷೇತ್ರಗಳ ಪರಿಣತ ಪ್ರಾಧ್ಯಾಪಕರನ್ನು ಕನ್ನಡದಲ್ಲಿ ಉಪನ್ಯಾಸ ಮಾಡಲು ಆಹ್ವಾನಿಸಿ ಅವರಿಂದ ಪುಸ್ತಕರೂಪದಲ್ಲಿ ಬರೆಯಿಸುವ ಕಾರ್ಯ ಆರಂಭಿಸಿದರು. ವ್ಯಾಸಂಗ ವಿಸ್ತರಣ ಮಾಲೆಯ ಉಪನ್ಯಾಸ ಶಿಬಿರಗಳು ಜನಪ್ರಿಯವಾಗತೊಡಗಿದವು. ಈ ಇಲಾಖೆಯನ್ನು ಬೆಳೆಸಲು ಕುಲಪತಿಗಳಾದ ಡಾ. ಡಿ. ಸಿ. ಪಾವಟೆಯವರು ಆಲೋಚಿಸಿದರು. ೧೯೫೬ ರಲ್ಲಿ ಕಣವಿಯವರನ್ನು ನಿರ್ದೇಶಕರನ್ನಾಗಿ ಮಾಡಿ ಆ ವಿಭಾಗವನ್ನು ವಿಸ್ತರಿಸಿದರು. ಮುಂದೆ ವ್ಯಾಸಂಗ ವಿಸ್ತರಣ ಇಲಾಖೆ 'ಪ್ರಸಾರಾಂಗ'ವಾಗಿ ಬೆಳೆದು ವಿಶ್ವವಿದ್ಯಾಲಯದ ಕೀರ್ತಿಗೆ ಭಾಜನವಾಗುವಂತೆ ಬಹುಮುಖ ಕಾರ್ಯಗಳನ್ನು ಕೈಕೊಂಡು ನಿರ್ವಹಿಸಿದ ಶ್ರೇಯಸ್ಸು ಕಣವಿಯವರಿಗೆ ಸಲ್ಲುತ್ತದೆ. ಸಂಶೋಧನ ಮಹಾಪ್ರಬಂಧಗಳು, ಜನಪದ ಸಾಹಿತ್ಯಕೃತಿಗಳು, ಸಮಾಜವಿಜ್ಞಾನ, ಹಾಗೂ ವಿಜ್ಞಾನ ಗ್ರಂಥಗಳು, 'ಕಲಾ ಪ್ರಪಂಚ'ದಂತಹ ಹೆಬ್ಬೊತ್ತಿಗೆಗಳು, ವ್ಯಾಸಂಗ ವಿಸ್ತರಣ ಉಪನ್ಯಾಸ ಗ್ರಂಥಗಳು, ಪಠ್ಯ ಪುಸ್ತಕಗಳು, ಕನ್ನಡ ವಿಭಾಗದ ಯೋಜನೆಗಳಾದ ವಚನ ವಾಙ್ಮಯ ಪ್ರಕಟನೆ ಸಂಪಾದನೆ, ಸಂಶೋಧನೆಯ ಗ್ರಂಥಗಳು, ಶಾಸನ ಸಂಪುಟಗಳು, ಭಾಷಾ ವಿಜ್ಞಾನ, ತಂತ್ರಜ್ಞಾನ, ತತ್ವಜ್ಞಾನ, ಇತಿಹಾಸ ಹೀಗೆ ಹಲವು ಸಾಹಿತ್ಯ ಶಾಸ್ತ್ರ ಗ್ರಂಥಗಳನ್ನು ಬೃಹತ್ ಪ್ರಮಾಣದಲ್ಲಿ ಪ್ರಕಟಿಸುವ ಗುರುತರ ಹೊಣೆಯನ್ನು ಕಣವಿಯವರು ನಡೆಸಿದ್ದಲ್ಲದೆ ನೂರಾರು ಮೌಲಿಕ ಗ್ರಂಥಗಳು ಬೆಳಕು ಕಾಣುವಂತಾದುದು ದೊಡ್ಡ ಸಾಧನೆಯಾಗಿದೆ.

ವಿಶ್ವವಿದ್ಯಾಲಯ ನಡೆಸುವ ವಿಶೇಷೋಪನ್ಯಾಸ ಮಾಲೆ ವಿದ್ವಜ್ಜನರ ಪ್ರೀತಿಗೆ ಪಾತ್ರವಾಯಿತು. ವಿಶ್ವವಿದ್ಯಾಲಯದ ಪಂಡಿತ ಪತ್ರಿಕೆಗಳೂ, 'ಕರ್ನಾಟಕ ಭಾರತಿ'ಯಂಥ ಪತ್ರಿಕೆಗಳೂ ಪ್ರಾಧ್ಯಾಪಕರ ಸಾಹಿತ್ಯ ಸಂಶೋಧನೆಯ ವ್ಯವಸಾಯಕ್ಕೆ ಮುಕ್ತ ಅವಕಾಶ ಕಲ್ಪಿಸಿದವು. ಕರ್ನಾಟಕ ವಿಶ್ವವಿದ್ಯಾಲಯ ಪ್ರಕಟಿಸಿದ ಗ್ರಂಥಗಳು ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಖ್ಯಾತಿ ಗಳಿಸಿದವು. ಹೀಗೆ ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗದ ಪ್ರಥಮ ನಿರ್ದೇಶಕರಾಗಿ ಹಲವು ಹತ್ತು ಯೋಜನೆಗಳನ್ನು ರೂಪಿಸಿ ಶ್ರದ್ಧೆಯಿಂದ ಕಾರ್ಯರೂಪಕ್ಕೆ ಬರುವಂತೆ ಮಾಡಿದ ಚೆನ್ನವೀರ ಕಣವಿಯವರ ಕಾರ್ಯದಕ್ಷತೆ, ಕನ್ನಡ ಪ್ರೀತಿ ಅದ್ವಿತೀಯವಾದದ್ದು. ಪುಸ್ತಕ ಪ್ರಕಟನೆ ಮಾಡುವುದರಲ್ಲಿ ಅವರಿಗಿರುವ ಅಪಾರ ಉತ್ಸಾಹದಿಂದಾಗಿ ಕನ್ನಡ ಪ್ರಕಟನಪ್ರಪಂಚಕ್ಕೂ, ಲೇಖಕ ಲೋಕಕ್ಕೂ ತುಂಬ ಉಪಕಾರವಾಗಿದೆ. ಇದರಿಂದ ವಿಶ್ವವಿದ್ಯಾಲಯಕ್ಕೂ, ಪ್ರಸಾರಾಂಗಕ್ಕೂ ಒಳ್ಳೆಯ ಹೆಸರು ಪ್ರತಿಷ್ಠೆ ಬಂದಿದೆಯೆಂದು ಹೇಳಿದರೆ ಅದು ಸತ್ಯದ ಮಾತಾಗುತ್ತದೆ. ವಿಶ್ವವಿದ್ಯಾಲಯದ ಶಾಶ್ವತ ಕೀರ್ತಿ ಇರುವುದು ಅದು ಪ್ರಕಟಿಸಿದ ಸಂಶೋಧನೆ ಹಾಗೂ ವಿದ್ವತ್ ಸಾಧನೆಯ ಗ್ರಂಥ ಪ್ರಕಟನೆಯ ಮೂಲಕವೇ ಎಂಬುದನ್ನು ಚೆನ್ನಾಗಿ ಅರಿತಿದ್ದ ಕಣವಿಯವರು ಪ್ರಸಾರಾಂಗವನ್ನು ಪುಸ್ತಕ ಪ್ರಕಟಣೆಯ ಗಂಗೋತ್ರಿಯನ್ನಾಗಿಸಿದರು. ಪ್ರಸಾರಾಂಗದ ಬೆಳವಣಿಗೆಯ ಜೊತೆಗೆ ಬಿಡುವಿನಲ್ಲಿ ತಮ್ಮ ಕಾವ್ಯ ರಚನೆಯ ಕಾಯಕವನ್ನು ಕಣವಿಯವರು ನಡೆಸಿದ್ದು ಮುಖ್ಯವಾದ ಸಂಗತಿ. ಪ್ರಸಾರಾಂಗದ ನಿರ್ದೇಶಕರಾಗಿದ್ದ ಅವರಿಗೆ ನಾಡಿನ ಅದೆಷ್ಟೋ ಹಿರಿಕಿರಿಯ ಸಾಹಿತಿಗಳ ಸಂಪರ್ಕ ಸಾನ್ನಿಧ್ಯ ಪ್ರಾಪ್ತವಾಯಿತು. ಅವರು ವಿದ್ವಜ್ಜನರಿಗೂ ಸಾಮಾನ್ಯರಿಗೂ ಸಾಹಿತ್ಯ ಸಂವಹನ ನಡೆಸಿದ್ದು ಒಂದು ಸಾಧನೆಯಾಗಿದೆ. ಚೆನ್ನವೀರ ಕಣವಿಯವರು ಪ್ರಸಾರಾಂಗದ ಮುಖಾಂತರ ನಡೆಸಿದ ಜ್ಞಾನಪ್ರಸಾರದ ಯೋಜನೆಗಳಿಗೆ ಕುಲಸಚಿವರೂ, ಕುಲಪತಿಗಳೂ, ಕನ್ನಡ ವಿಭಾಗದ ಮುಖ್ಯಸ್ಥರೂ ಸಂಪೂರ್ಣ ಬೆಂಬಲ ನೀಡಿದ್ದನ್ನು ಕಣವಿಯವರು ಸ್ಮರಿಸಿಕೊಳ್ಳುತ್ತಾರೆ.

ಕುಲಪತಿ ಹಾಗೂ ಕುಲಸಚಿವರುಗಳು ಕಣವಿಯವರ ಕಾವ್ಯದ ಬಗೆಗೆ ತುಂಬ ಗೌರವಭಾವ ಹೊಂದಿದ್ದರು. ಕಣವಿಯವರು ಬರೆದ 'ವಿಶ್ವಭಾರತಿಗೆ ಕನ್ನಡದಾರತಿ' ಗೀತೆಯನ್ನು ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ

ಪ್ರಾರ್ಥನಾ ಗೀತೆಯಾಗಿ ಇಂದಿಗೂ ಹಾಡಲಾಗುತ್ತಿದೆ. ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪ್ರದಾನ ಸಮಾರಂಭದ ಸಂಧರ್ಭದಲ್ಲಿ ಆ ಗೀತವನ್ನು ಕೇಳಿ ತಮಗೆ ರೋಮಾಂಚನ ಉಂಟಾಯಿತೆಂದು ರಾಷ್ಟ್ರಕವಿ ಕುವೆಂಪು ಉದ್ಗರಿಸಿದ್ದುಂಟು. ವಿಶ್ವವಿದ್ಯಾಲಯಕ್ಕೆ ಬರುವ ಯುವಕವಿಗಳಿಗೆ ನಿರಂತರ ಮಾರ್ಗದರ್ಶನ ಮಾಡುತ್ತ, ವಿವಿಧ ಕವಿಗೋಷ್ಠಿ, ಸಾಹಿತ್ಯ ವಿಚಾರಸಂಕಿರಣಗಳಲ್ಲಿ ಭಾಗವಹಿಸುತ್ತ ಕಣವಿಯವರು ಪ್ರಸಾರಾಂಗವನ್ನು ಸಾಹಿತ್ಯಸಮ್ಮುಖಿಗೊಳಿಸಿದರು, ಜನಸಮ್ಮುಖರನ್ನಾಗಿಸಿದರು. ಚೆನ್ನವೀರ ಕಣವಿ ಅವರಿಗೂ ಜಿ. ಎಸ್. ಶಿವರುದ್ರಪ್ಪನವರಿಗೂ ಅಪೂರ್ವವಾದ ಸ್ನೇಹ ಬಾಂಧವ್ಯ ಬೆಳೆದು ಬಂದಿದೆ. ಬೇಂದ್ರೆಯವರು ಚೆನ್ನ-ವೀರ, ಶಿವ-ರುದ್ರ ಇವೆರಡು ಹೆಸರುಗಳ ಅರ್ಥಸೌಂದರ್ಯ ವಿಶಿಷ್ಟವಾಗಿದ್ದು ಎಲ್ಲಿ ಚೆನ್ನ ಇರುತ್ತದೆಯೊ ಅಲ್ಲಿ ವೀರವೂ, ಎಲ್ಲಿ ಶಿವತ್ವವಿದೆಯೋ ಅಲ್ಲಿ ರುದ್ರ ಶಕ್ತಿಯೂ ತುಂಬಿರುತ್ತದೆ ಎಂದು ಒಂದೆಡೆ ವಿಶ್ಲೇಷಿಸಿದ್ದಾರೆ. ೧೯೫೦ ರಷ್ಟೊತ್ತಿಗೆ ದಾವಣಗೆರೆಯಲ್ಲಿದ್ದ ಶಿವರುದ್ರಪ್ಪನವರು ಧಾರವಾಡದ ಕಣವಿಯವರ ಸ್ನೇಹವಲಯದಲ್ಲಿ ಬೆರೆತು ಪರಸ್ಪರ ಸ್ನೇಹ ಸಂಬಂಧವನ್ನು ಇಂದಿಗೂ ಅಚ್ಚಳಿಯದೆ ಮುಂದುವರಿಸಿಕೊಂಡು ಬಂದಿದ್ದಾರೆ. ಕನ್ನಡ ಕಾವ್ಯ ಪರಂಪರೆಯ ಸಂದರ್ಭದಲ್ಲಿಯೂ ಕಣವಿ – ಶಿವರುದ್ರಪ್ಪನವರ ಕಾವ್ಯಮಾರ್ಗವನ್ನು ಒಟ್ಟಾಗಿ ವಿವೇಚಿಸುವದನ್ನು ಕಾಣಬಹುದು. ಇಬ್ಬರೂ ನವೋದಯ, ನವ್ಯ, ನವ್ಯೋತ್ತರ ಕಾವ್ಯಮಾರ್ಗದಲ್ಲಿ ಸಮಾನವಾಗಿ ಹೆಜ್ಜೆ ಹಾಕುತ್ತ ಸಾಗಿರುವದನ್ನು ಕವಿಕಾವ್ಯ ವಿಮರ್ಶಕರು ಗುರುತಿಸುತ್ತ ಬಂದಿದ್ದಾರೆ.

ಮೈಸೂರಿನಲ್ಲಿ ೧೯೫೫ ರಲ್ಲಿ ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿ ಜರುಗಿದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಚೆನ್ನವೀರ ಕಣವಿ ಅವರು ವಿಮರ್ಶೆ ಹಾಗೂ ಕವಿಗೋಷ್ಠಿಗಳಲ್ಲಿ ಮೊದಲಬಾರಿ ಭಾಗವಹಿಸಿದ್ದರು. ಆಗ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದ ಕುವೆಂಪು ಸ್ವಾಗತಾಧ್ಯಕ್ಷರಾಗಿದ್ದರು. ಆ ಸಂದರ್ಭದಲ್ಲಿ ಕನ್ನಡದ ಅನೇಕ ಹಿರಿಯ ಬರಹಗಾರರ ನಿಕಟ ಪರಿಚಯ ಕಣವಿಯವರಿಗಾಯಿತು. ವಿ. ಸೀ., ಚದುರಂಗ, ಪರಮೇಶ್ವರ ಭಟ್ಟ, ಡಿ. ವಿ. ಜಿ., ಅ.ನ.ಕೃ., ಕೆ. ಎಸ್. ನರಸಿಂಹಸ್ವಾಮಿ, ಗೋಪಾಲಕೃಷ್ಣ ಅಡಿಗ, ರಾಮಚಂದ್ರಶರ್ಮ ಮೊದಲಾದವರು ಪ್ರಮುಖರಾಗಿದ್ದರು.

ಸಾಹಿತ್ಯ ಸಮ್ಮೇಳನ, ವಿಚಾರ ಸಂಕಿರಣ, ಕವಿಗೋಷ್ಠಿಗಳ ಸಂಘಟನೆಯಲ್ಲೂ ಚೆನ್ನವೀರ ಕಣವಿಯವರದು ನಿರಂತರ ದುಡಿಮೆ. ಕರ್ನಾಟಕ ವಿಶ್ವವಿದ್ಯಾಲಯದ ಆಶ್ರಯದಲ್ಲಿ ೧೯೫೭ ರಲ್ಲಿ ರಾಷ್ಟ್ರಕವಿ ಕುವೆಂಪು ಅಧ್ಯಕ್ಷತೆಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸಲು ಸಾಹಿತ್ಯ ಪರಿಷತ್ತು ನಿರ್ಧರಿಸಿತು. ಆಗ ಕಣವಿಯವರು ಸಮ್ಮೇಳನದ ಪ್ರಧಾನಕಾರ್ಯದರ್ಶಿಯಾಗಿ ಕೆಲಸ ಮಾಡಿದರು. ಊಟಿಯಲ್ಲಿ ಕಾರ್ಯಕಾರಿ ಸಮಿತಿಯ ಸಭೆ ಮುಗಿಸಿಕೊಂಡು ಬರುವಾಗ ಮೈಸೂರಿನಲ್ಲಿ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಬಿ. ಶಿವಮೂರ್ತಿಶಾಸ್ತ್ರಿಗಳ ಜೊತೆಗೆ ಕುವೆಂಪು ಅವರನ್ನು ಸಮ್ಮೇಳನದ ಅಧ್ಯಕ್ಷತೆ ವಹಿಸಲು ಆಮಂತ್ರಿಸಲು ತೆರಳಿದಾಗ 'ನೀವು ದಂಡಾಧಿಕಾರಿಗಳಾಗಿಯೇ ಬಂದಿದ್ದೀರಿ', ಎಂದು ಶಿವಮೂರ್ತಿ ಶಾಸ್ತ್ರಿಗಳಿಗೆ ಕುವೆಂಪು ಚೇಷ್ಟೆಮಾಡಿದರಂತೆ. ಕುವೆಂಪು ಅವರನ್ನು ಸಮ್ಮೇಳನಾಧ್ಯಕ್ಷರಾಗಿ ಒಪ್ಪಿಸಿಕೊಂಡು ಬಂದ ಸಂತೋಷವೂ ಕಣವಿಯವರದಾಯಿತು. ಕುವೆಂಪು ತಮ್ಮ ಕುಟುಂಬದ ಸದಸ್ಯರೊಂದಿಗೆ ಧಾರವಾಡಕ್ಕೆ ಬಂದರು. ಸಮ್ಮೇಳನದಲ್ಲಿ ಅಧ್ಯಕ್ಷರಾಗಿ ಭಾಗವಹಿಸಿ ಸಂತೋಷಪಟ್ಟರು. ಪ್ರೊ. ಮಾಳವಾಡರು, ಕಣವಿಯವರು ಹಾಗೂ ವಿಶ್ವವಿದ್ಯಾಲಯದ ಪ್ರಾಧ್ಯಾಪಕರು ತಮಗೆ ತೋರಿದ ಪ್ರೀತಿಯನ್ನು ಪ್ರಶಂಸಿದರು. ಕರ್ನಾಟಕ ಏಕೀಕರಣ ನಂತರ ವಿಶಾಲ ವ್ಯಾಪ್ತಿಯಲ್ಲಿ ಜರುಗಿದ ಧಾರವಾಡದ ಸಾಹಿತ್ಯ ಸಮ್ಮೇಳನ ನಾಡಿನ ಎಲ್ಲ ಭಾಗಗಳ ಸಾಹಿತಿಗಳ ಪಾಲ್ಗೊಳ್ಳುವಿಕೆಯಿಂದ ಅಪೂರ್ವ ರೀತಿಯಲ್ಲಿ ನೆರವೇರಿದ್ದನ್ನು ಇಂದಿಗೂ ಅನೇಕರು ನೆನೆದುಕೊಳ್ಳುತ್ತಾರೆ.

ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಕಣವಿಯವರು ಸಾಹಿತ್ಯ ಮಂಟಪದ ಕಾರ್ಯದರ್ಶಿಯಾಗಿ ನಿರಂತರವಾಗಿ ಕಾರ್ಯಕ್ರಮ ಜರುಗಿಸುತ್ತ ಬಂದರಲ್ಲದೆ ಸಾರ್ವಜನಿಕರಲ್ಲಿ ಸಾಹಿತ್ಯಪ್ರೀತಿ ಬೆಳೆಸುವ ಕಾರ್ಯ ಮಾಡಿದರು. ಸೊಲ್ಲಾಪುರದಿಂದ ಪುನಃ ಧಾರವಾಡಕ್ಕೆ ಬಂದು ನೆಲಸಿದ ಬೇಂದ್ರೆಯವರ ಷಷ್ಟ್ಯಬ್ದಿ ಸಮಾರಂಭದ ಕಾರ್ಯದರ್ಶಿಯಾಗಿ ಡಾ. ಪಾವಟೆಯವರ ಅಧ್ಯಕ್ಷತೆಯಲ್ಲಿ ಅದನ್ನು ವೈಭವಪೂರ್ಣವಾಗಿ ಜರುಗಿಸಿದರು. ವಿಶ್ವವಿದ್ಯಾಲಯ ಹಾಗೂ ಅದರ ಹೊರಗೆ ನಡೆಯುವ ಸಾಹಿತ್ಯಿಕ ಸಾಂಸ್ಕೃತಿಕ ಸಮಾರಂಭಗಳಲ್ಲಿ ಸಾಮಾನ್ಯವಾಗಿ ಕಣವಿಯವರು

ಇದ್ದೇ ಇರುತ್ತಿದ್ದುದು ಅವರ ಸಾಹಿತ್ಯ ಸಂಸ್ಕೃತಿಯ ಅನನ್ಯ ಪ್ರೀತಿಯ ದ್ಯೋತಕವಾಗಿದೆ. ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳ, ಪ್ರಸಾರಾಂಗದ ಸಮಿತಿಗಳು, ರಾಜ್ಯ ಸಾಹಿತ್ಯ ಅಕಾಡಮಿ (ಆರು ವರ್ಷ), ಕೇಂದ್ರ ಸಾಹಿತ್ಯ ಅಕಾಡಮಿ ಜನರಲ್ ಕೌನ್ಸಿಲ್ ಹಾಗೂ ಕನ್ನಡ ಸಲಹಾ ಸಮಿತಿ, (ಹತ್ತು ವರ್ಷ), ನ್ಯಾಶನಲ್ ಬುಕ್ ಟ್ರಸ್ಟ್ (ಮೂರು ವರ್ಷ) ಹೀಗೆ ರಾಜ್ಯ ಹಾಗೂ ರಾಷ್ಟ್ರಮಟ್ಟದ ಉನ್ನತ ಸಲಹಾ ಸಮಿತಿಗಳಲ್ಲಿ ಸದಸ್ಯರಾಗಿ ಕಣವಿಯವರು ಕಾರ್ಯ ಮಾಡಿದ್ದಾರೆ.

ಚೆನ್ನವೀರ ಕಣವಿಯವರಿಗೆ ಐವತ್ತು ವರ್ಷಗಳು ತುಂಬಿದಾಗ 'ಚೆಂಬೆಳಕು' ಎಂಬ ಅಭಿನಂದನ ಗ್ರಂಥವನ್ನು ಡಾ. ಗುರುಲಿಂಗ ಕಾಪಸೆ ಸಂಪಾದಕತ್ವದಲ್ಲಿ ಹೊರತಂದು ಧಾರವಾಡ ಕಲಾಭವನದಲ್ಲಿ ವೈಭವ ಸಮಾರಂಭದಲ್ಲಿ ಅವರನ್ನು ಸನ್ಮಾನಿಸಲಾಯಿತು. ಪು. ತಿ. ನ., ಬೇಂದ್ರೆ, ಶಿವರುದ್ರಪ್ಪ ಮೊದಲಾದವರು ಭಾಗವಹಿಸಿದ ಆ ಸಮಾರಂಭ ಹಲವು ದೃಷ್ಟಿಯಿಂದ ಸ್ಮರಣೀಯವಾದದ್ದು. ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘವೂ ಕಣವಿಯವರನ್ನು ಸತ್ಕರಿಸಿತಲ್ಲದೆ ಗೌರೀಶ ಕಾಯ್ಕಿಣಿಯವರು ಬರೆದ 'ಚೆನ್ನವೀರ ಕಣವಿ ಕಾವ್ಯದೃಷ್ಟಿ' ವಿಮರ್ಶಾ ಗ್ರಂಥವನ್ನು ಆ ಸಂದರ್ಭದಲ್ಲಿ ಪ್ರಕಟಿಸಿ ತನ್ನ ಗೌರವವನ್ನು ವ್ಯಕ್ತಪಡಿಸಿತು.

ಚೆನ್ನವೀರ ಕಣವಿ ಅವರ 'ಜೀವಧ್ವನಿ' ಕವನ ಸಂಗ್ರಹಕ್ಕೆ ಕೇಂದ್ರ ಸಾಹಿತ್ಯ ಅಕಾಡಮಿಯು ಪ್ರಶಸ್ತಿ ನೀಡಿ ಗೌರವಿಸಿದ್ದು ೧೯೮೧ ರಲ್ಲಿ. ಆಗ ನಾಡಿನಾದ್ಯಂತ ಅವರಿಗೆ ಸತ್ಕಾರ ಸಮಾರಂಭಗಳು ಜರುಗಿದವು. ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತು ಕವಿದಂಪತಿಗಳನ್ನು ಸನ್ಮಾನಿಸಿತು. ಅದೇ ವರ್ಷ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠದಲ್ಲಿ ಕಣವಿಯವರು ಗೌರವ ಸಂದರ್ಶಕ ಪ್ರಾಧ್ಯಾಪಕರಾಗಿ ಎರಡು ವರ್ಷದ ಅವಧಿಗೆ ನೇಮಕವಾದರು.

ಕನ್ನಡ ನಾಡಿನ ಕನ್ನಡಪರವಾದ ದೊಡ್ಡ ಚಳುವಳಿಯೆಂದರೆ ಗೋಕಾಕ ಚಳುವಳಿ. ಕನ್ನಡ ನಾಡಿನಲ್ಲಿ ಶಿಕ್ಷಣ ಕ್ರಮದಲ್ಲಿ ಕನ್ನಡ ಭಾಷೆಗೆ ಪ್ರಥಮಸ್ಥಾನವಿರಬೇಕೆಂಬ ಗೋಕಾಕ ಚಳುವಳಿಯಲ್ಲಿ ನಾಡಿನ ಕವಿ ಸಾಹಿತಿ ಕಲಾವಿದರು ಒಂದಾಗಿ ದೊಡ್ಡ ಹೋರಾಟ ನಡೆಸಿದರು. ಧಾರವಾಡ ಈ ಹೋರಾಟದ ಮೂಲ ನೆಲೆ. ಅಖಿಲ ಕರ್ನಾಟಕ ಕೇಂದ್ರ ಕನ್ನಡ

ಕ್ರಿಯಾಸಮಿತಿಗೆ ಚೆನ್ನವೀರ ಕಣವಿಯವರು ಉಪಾಧ್ಯಕ್ಷರಾಗಿದ್ದರು. ಉಪವಾಸ ಸತ್ಯಾಗ್ರಹ, ಮೆರವಣಿಗೆ, ಘೋಷಣೆ ಪ್ರತಿದಿನ ನಡೆಯಿತು. ಹೀಗೆ ಚಳುವಳಿಯ ಉಗ್ರಸ್ವರೂಪ ಭುಗಿಲೆದ್ದಾಗ ಕಣವಿ, ಪಾಟೀಲ ಪುಟ್ಟಪ್ಪ, ಆರ್. ಸಿ. ಹಿರೇಮಠ, ಧಾರವಾಡಕರ, ಬಸವರಾಜ ಕಟ್ಟೀಮನಿ ಮೊದಲಾದ ಸಾಹಿತಿಗಳು ಎಪ್ರಿಲ್ ೨೨, ೧೯೮೨ ರಂದು ಬಂಧನಕ್ಕೊಳಗಾದರು. ಕೊನೆಗೂ ಸರಕಾರ ಗೋಕಾಕ ಚಳುವಳಿಗೆ ಮಣಿದು ಗೋಕಾಕ ವರದಿಯನ್ನು ಸಮಗ್ರವಾಗಿ ಒಪ್ಪಿಕೊಂಡಿತು. ಈ ಹೋರಾಟದಲ್ಲಿ ಕನ್ನಡಪರವಾದ ವೀರಸಂಕಲ್ಪವನ್ನು ಕಣವಿ ಪ್ರಕಟಿಸಿದರು. 'ಹೆಸರಾಯಿತು ಕರ್ನಾಟಕ, ಉಸಿರಾಗಲಿ ಕನ್ನಡ' ಎಂಬ ಅವರ ಕವಿವಾಣಿ ಜನರ ಸ್ಫೂರ್ತಿವಾಣಿಯೂ ಆಯಿತು.

ಚೆನ್ನವೀರ ಕಣವಿಯವರು ಕನ್ನಡ ನಾಡಿನಾದ್ಯಂತ ಸಂಚರಿಸಿ ವಿವಿಧ ಸಂದರ್ಭಗಳಲ್ಲಿ, ಸಭೆಗಳಲ್ಲಿ ಸಾಹಿತ್ಯಿಕ ಉಪನ್ಯಾಸ ಮಾಡಿ ಜನತೆಯ ಹೃದಯದಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿಯ ದೀಪವನ್ನು ಬೆಳಗಿಸಿದ್ದಾರೆ. ಕಣವಿ ಭಾಗವಹಿಸಿದ ಕವಿಗೋಷ್ಠಿಗಳು ಅಸಂಖ್ಯಾತ. ಕವಿಸಮ್ಮೇಳನಗಳಲ್ಲಿ ಕವಿತೆಗಳನ್ನು ಅರ್ಥಪೂರ್ಣವಾಗಿ ವಾಚಿಸುವುದರ ಜೊತೆಗೆ ಕಣವಿ ಅವರು ಕಾವ್ಯರಚನೆಯ ವಿಧಾನಗಳನ್ನು ಸಮಕಾಲೀನ ಕಾವ್ಯದ ಅಭಿವ್ಯಕ್ತಿಯ ಕುರಿತಾದ ಚರ್ಚೆಯನ್ನೂ, ವಸ್ತುನಿಷ್ಠವಾದ ವ್ಯಾಖ್ಯಾನವನ್ನೂ ವಿದಿತಪಡಿಸಿ ಹೊಸಕಾವ್ಯದ ದಿಕ್ಕುದೆಸೆಗಳನ್ನು ವಿವೇಚಿಸಿ ವಿಮರ್ಶನ ನೋಟವನ್ನು ಬೀರುತ್ತ ಬಂದಿದ್ದಾರೆ. ಕಣವಿಯವರ ಮಾರ್ಗದರ್ಶನದಿಂದ ಅನೇಕ ಯುವಕವಿಗಳು ತಮ್ಮ ಕಾವ್ಯಮಾರ್ಗವನ್ನು ಕಂಡುಕೊಳ್ಳಲು ಸಾಧ್ಯವಾಗಿದೆ. ಕಾವ್ಯದ ಬಗೆಗೆ ಕಣವಿ ಅವರಿಗೆ ಅಪಾರ ಶ್ರದ್ಧೆ, ಕಾಳಜಿ. ಕಾವ್ಯದ ರಚನಾ ಪ್ರಕ್ರಿಯೆಯ ಬಗೆಗಿರುವ ಅವರ ನಿರಂತರವಾದ ಆಸಕ್ತಿಯ ಪರಿಣಾಮವಾಗಿ ಹೊಸಕಾವ್ಯ ವಿಶಿಷ್ಟ ಆಯಾಮ ಪಡೆದುಕೊಳ್ಳಲು ಸಾಧ್ಯವಾಗಿದೆ. ನಿಜವಾದ ಶ್ರೇಷ್ಠಕವಿ ಸಮಕಾಲೀನ ಕಾವ್ಯದ ಬಗ್ಗೆ ತಾಳುವ ಉದಾರ ಧೋರಣೆ ಕಣವಿಯವರಲ್ಲಿ ಅಂತಸ್ಥವಾದುದನ್ನು ನಾವು ಕಾಣುತ್ತೇವೆ. ತನ್ನ ಕಾವ್ಯದ ಉತ್ಕರ್ಷದ ಜೊತೆಗೆ ಸಮಕಾಲೀನ ಕವಿಗಳ ಕವಿತೆಯ ವಿಶೇಷತೆಗಳನ್ನು ವಿಶಾಲವಾದ ದೃಷ್ಟಿಯಿಂದ ಸ್ವೀಕರಿಸುತ್ತ ಬಂದ ಕಣವಿಯವರು ಉತ್ತಮ ಕಾವ್ಯದ ಆವಿಷ್ಕಾರವನ್ನು ಪ್ರೀತಿಸುವವರಾಗಿದ್ದಾರೆ. ಈ ದೃಷ್ಟಿಯಿಂದ ಕಣವಿಯವರ ನಿಲುವು ಉತ್ತಮಿಕೆಯನ್ನು ಸದಾ ಸ್ವಾಗತಿಸುವಂತಹದಾಗಿದೆ.

ಹಾಸನದಲ್ಲಿ ೧೯೯೬ ರ ಡಿಸೆಂಬರ್ ೨೧ ರಿಂದ ೨೪ ರ ವರೆಗೆ ಜರುಗಿದ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಪೀಠದಿಂದ ಚೆನ್ನವೀರ ಕಣವಿ ಅವರು ಕನ್ನಡ ನಾಡು ನುಡಿ, ಸಾಹಿತ್ಯ, ಸಂಸ್ಕೃತಿಯ ಅಭಿಮಾನದ ಜಾಗೃತಿಗೆ ಕರೆನೀಡಿದರು. 'ನಮ್ಮ ದೇಶ, ನಮ್ಮ ಸಮಾಜ ಅತ್ಯಂತ ಸುಂದಿಗ್ಧ ಪರಿಸ್ಥಿತಿಯಲ್ಲಿರುವಾಗ ಲೇಖಕನಾದವನು ಅದರಿಂದ ಪ್ರತ್ಯೇಕವಾಗಿ ಉಳಿಯಲಾರ. ನಮ್ಮ ಎಲ್ಲ ಬಗೆಯ ಸೃಜನಾತ್ಮಕ ಬರವಣಿಗೆ ಹಾಗೂ ವಿಮರ್ಶೆಯ ಮೂಲಕ ಭಾರತದ ಪುನಶ್ಶೋಧ ಹಾಗೂ ಭಾರತೀಯತೆಯ ಪುನರ್ವ್ಯಾಖ್ಯಾನ ಅತ್ಯಂತ ಅಗತ್ಯವಾಗಿದೆ ಎಂಬ ಮೌಲಿಕ ವಿಚಾರಗಳನ್ನು ವ್ಯಕ್ತಪಡಿಸಿ 'ನೀವೆಲ್ಲಿಯವರು ನಾವಲ್ಲಿಯವರೆ, ನಮ್ಮೂರು ದೂರವಿಲ್ಲ, ಕನ್ನಡದ ತವರು ಕರೆದಾಗ ನಮಗೆ ಮೈನವಿರು' ಎಂಬ ಭಾವಪೂರ್ಣ ಆತ್ಮನಿವೇದನೆಯ ಕವಿತೆ ವಾಚಿಸಿದಾಗ ತುಂಬಿದ ಜನಸ್ತೋಮ ಹರ್ಷೋಲ್ಲಾಸ ಅನುಭವಿಸಿತು.

ಚೆನ್ನವೀರ ಕಣವಿಯವರ ವ್ಯಕ್ತಿತ್ವ ತನಗೆ ತಾನೆ ಪರಿಪೂರ್ಣವಾದ ಜೀವನ ದೃಷ್ಟಿಯಿಂದ ಸಮೃದ್ಧವಾದದ್ದು. ಯಾರಿಗೂ ಕೆಡುಕನ್ನು ಬಯಸದ, ಸದಸದ್ವಿವೇಕದಿಂದ ಕೂಡಿದ ಚೇತನ ಅವರದು. ಅವರು ಸದುವಿನಯವೇ ಸದಾಶಿವನೊಲುಮೆ ಎಂದು ತಿಳಿದು ಬಾಳಿದ್ದಾರೆ. ಹಿತಮಿತವಾದ ಮಾತು, ಶುದ್ಧ ಮನದ ವಿಚಾರ, ಮೃದುವಾದ ಭಾವನೆ, ಸಮನ್ವಯ ಸಮತೂಕದಿಂದ ಕೂಡಿದ ಅವರ ನಡೆನುಡಿಗಳು ಜನತೆಯ ಅಪಾರ ಪ್ರೀತಿ ವಿಶ್ವಾಸಕ್ಕೆ ಪಾತ್ರವಾಗಿವೆ. ಕೆಟ್ಟದ್ದನ್ನು ಮಾಡದ, ಯಾರಿಗೂ ಕೆಟ್ಟದ್ದನ್ನು ಬಯಸದ ಕಣವಿಯವರ ವ್ಯಕ್ತಿತ್ವದಲ್ಲಿ ಕಾಣುವ ಸಂಸ್ಕೃತಿ, ಸಜ್ಜನಿಕೆಯನ್ನು ನಾಡಿನ ಜನ ಆದರಭಾವದಿಂದ ಕೊಂಡಾಡುವುದನ್ನು ನಾವು ಕಾಣುತ್ತೇವೆ. ಶ್ರೀ ಕಣವಿಯವರಿಗೆ ಎಪ್ಪತ್ತು ವರ್ಷ ತುಂಬುತ್ತಿರುವ ಶುಭ ಸಂದರ್ಭದಲ್ಲಿ ಅವರ ಗೌರವಾರ್ಥ ಧಾರವಾಡದ 'ಸೃಜನ-ಚಿಂತನ ಬಳಗ'ವು ಪರಮಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಸನ್ಮಾನ ಸಮಾರಂಭವನ್ನು ಏರ್ಪಡಿಸಿ(೨೮-೬-೧೯೯೮) 'ಮುಗಿಯದ ಹಾಡು' ಕವನ ಸಂಗ್ರಹವನ್ನು ಅವರಿಗೆ ಅರ್ಪಿಸಲಾಯಿತು. ಕನ್ನಡ ನಾಡಿನ ವಿವಿಧ ಭಾಗದ ೫೬ ಕವಿಗಳು ಕಣವಿಯವರನ್ನು ಕುರಿತು ಬರೆದ ಕವಿತೆಗಳನ್ನು ಈ ಸಂಗ್ರಹ ಒಳಗೊಂಡಿದೆ.

ಈ ಸಂದರ್ಭದಲ್ಲಿ ಕಣವಿಯವರ ಕಾವ್ಯದ ಬಗ್ಗೆ ಯೋಜಿಸಿದ ವಿಚಾರ ಸಂಕಿರಣದಲ್ಲಿ ಡಾ. ಎಂ. ಎಂ. ಕಲಬುರ್ಗಿ, ಡಾ. ಗಿರಡ್ಡಿ ಗೋವಿಂದರಾಜ, ಡಾ. ನರಹಳ್ಳಿ ಬಾಲಸುಬ್ರಮಣ್ಯ ಹಾಗೂ ಡಾ. ಸಿದ್ಧಲಿಂಗಯ್ಯ ಅವರು ಭಾಗವಹಿಸಿದ್ದರು.

ಚೆನ್ನವೀರ ಕಣವಿ ಅವರಿಗೆ ಕರ್ನಾಟಕ ಸರಕಾರ ೧೯೯೯ ನೆಯ ವರ್ಷದ ಪ್ರತಿಷ್ಠಿತ 'ಪಂಪ ಪ್ರಶಸ್ತಿ'ಯನ್ನು ನೀಡಿ ಗೌರವಿಸಿದೆ.

ಸಾಂಸಾರಿಕ ಜೀವನದಲ್ಲೂ ಕಣವಿ ಅವರು ಭಾಗ್ಯಶಾಲಿಗಳು. ಅವರ ಬಾಳಸಂಗಾತಿ ಶಾಂತಾದೇವಿ ಕಣವಿಯವರು ಕನ್ನಡದ ಖ್ಯಾತ ಕಥೆಗಾರ್ತಿಯಾಗಿದ್ದಾರೆ. ಅವರ ಮಕ್ಕಳಾದ ಶಿವಾನಂದ, ಚಂದ್ರಮೌಳಿ, ರಂಜನಾ, ಪ್ರಿಯದರ್ಶಿ, ಕರುಣಪ್ರಸಾದ ಅವರು ಬುದ್ಧಿವಂತರಾಗಿದ್ದಾರೆ. ಜೀವನದ ವಿವಿಧ ರಂಗಗಳಲ್ಲಿ ಅವರು ಸಾಧನೆ ಮಾಡಲು ಕಣವಿ ದಂಪತಿಗಳ ಮಾರ್ಗದರ್ಶನ ಉತ್ತೇಜನ ಕಾರಣವಾಗಿದೆ. ಪ್ರೀತಿ ತುಂಬಿದ ಆದರ್ಶ ಸಂಸಾರ ಕಣವಿ ದಂಪತಿಗಳದು. ಕನ್ನಡ ಸಾಹಿತಿ ದಂಪತಿಗಳಲ್ಲಿ ಅವರಿಗೆ ವಿಶಿಷ್ಟವಾದ ಸ್ಥಾನವಿದೆ.

ಕಣವಿಯವರ ವ್ಯಕ್ತಿತ್ವ ಮತ್ತು ಸಾಹಿತ್ಯದಲ್ಲಿ ನಾವು ಭಿನ್ನತೆ ಬಿರುಕು ಕಾಣುವುದು ಸಾಧ್ಯವಿಲ್ಲ. 'ಅಲ್ಲ ಸಲ್ಲದ ವಿಷಮ ವಿಪರೀತ ಭಾವನೆಯ ವಿಷಗಾಳಿ ಎನ್ನ ಬಳಿ ಸುಳಿಯದಿರಲಿ' ಎಂದು ಆಶಿಸಿದ ಕಣವಿ ಅವರಲ್ಲಿ ವಿಶ್ವಭಾವಾತ್ಮಕ ಧೋರಣೆಯಿದೆ. ನಯವಿನಯಗಳು ಕಣವಿಯವರ ಸ್ವಭಾವದಲ್ಲಿ ಮೇಳೈಸಿವೆ. ಸಿಟ್ಟು, ಕ್ರೌರ್ಯ, ರೋಷ, ಆಕ್ರೋಶಗಳಿಂದ ದೂರವಿದ್ದು ಮನಸ್ಸಿನ ಸದಸದ್ವಿವೇಕವನ್ನು ಸದಾ ಜಾಗೃತವಾಗಿಟ್ಟುಕೊಳ್ಳುವ ಗುಣ ಚೆನ್ನವೀರ ಕಣವಿಯವರ ಚೇತನದ ವೈಶಿಷ್ಟ್ಯವಾಗಿದೆ.

# ಕಣವಿ ಕಾವ್ಯ ದರ್ಶನ

ಆಧುನಿಕ ಕನ್ನಡ ಕಾವ್ಯದ ಸಮೃದ್ಧ ಪರಂಪರೆಯಲ್ಲಿ ಚೆನ್ನವೀರ ಕಣವಿಯವರ ಕಾವ್ಯಸಾಧನೆ ಅಗಾಧವಾದದ್ದು. ನವೋದಯ, ನವ್ಯ, ನವ್ಯೋತ್ತರ ಕಾವ್ಯ ಸಂದರ್ಭದಲ್ಲಿ ಕಣವಿಯವರ ಕವಿತೆಗಳಿಗೆ ಅನನ್ಯವಾದ ಸ್ಥಾನವಿದೆ. ಕಾವ್ಯಸೃಷ್ಟಿಯ ಪ್ರಕ್ರಿಯೆಯಲ್ಲಿ ತಮ್ಮ ಪ್ರತಿಭೆಯನ್ನು ಕ್ರಿಯಾಶೀಲವಾಗಿಸುತ್ತ ಬಂದ ಕಣವಿಯವರು ಹೊಸ ಕಾವ್ಯಪರಂಪರೆಯಲ್ಲಿ ಶ್ರೇಷ್ಠ ಕವಿಯಾಗಿ ಕಂಗೊಳಿಸುತ್ತಾರೆ. ಚೆನ್ನವೀರ ಕಣವಿಯವರು ತಮ್ಮ ವಿದ್ಯಾರ್ಥಿ ಜೀವನದಲ್ಲೇ ಕಾವ್ಯರಚನೆಗೆ ತೊಡಗಿಕೊಂಡವರು. ಅರ್ಧ ಶತಮಾನದ ಹಿಂದೆ, ಹೊಸಕಾವ್ಯ ಕನ್ನಡದಲ್ಲಿ ಉತ್ಕರ್ಷ ಹೊಂದುತ್ತಿದ್ದ ಸಂದರ್ಭದಲ್ಲಿ ಕಣವಿಯವರು ಕಾವ್ಯ ರಚನೆಗೆ ಆರಂಭಿಸಿ ಅದನ್ನು ನಿರಂತರವಾಗಿ ಇಂದಿನವರೆಗೂ ಮುಂದುವರಿಸಿಕೊಂಡುಬಂದಿದ್ದಾರೆ. 'ಕಾವ್ಯಾಕ್ಷಿ' 'ಭಾವಜೀವಿ' ಕೃತಿಗಳು ಕಣವಿಯವರು ಇನ್ನೂ ವಿದ್ಯಾರ್ಥಿಯಾಗಿದ್ದಾಗಲೇ ಪ್ರಕಟವಾದವುಗಳು. ಇಪ್ಪತ್ತರ ಹಿಂದುಮುಂದಿನ ತರುಣ ವಯಸ್ಸಿನಲ್ಲಿ ಅಂಥ ಪ್ರಬುದ್ಧ ಕಾವ್ಯ ಬಂದಿದ್ದುದನ್ನು ಗಮನಿಸಿದಾಗ, ಅವರ ಪ್ರತಿಭಾಶಕ್ತಿಯ ಅನನ್ಯತೆ ಲಕ್ಷ್ಯಕ್ಕೆ ಬರುತ್ತದೆ. ಕಣವಿಯವರ ಕಾವ್ಯದ ಹರವು ವಿಸ್ತಾರವಾದದ್ದು. 'ಕಾವ್ಯಾಕ್ಷಿ' (೩೪ ಕವಿತೆಗಳು), 'ಭಾವಜೀವಿ' (ನೀಳ್ಗವಿತೆ), 'ಆಕಾಶಬುಟ್ಟಿ' (೫೦ ಕವಿತೆಗಳು), 'ಮಧುಚಂದ್ರ' (೩೪ ಕವಿತೆಗಳು), 'ದೀಪಧಾರಿ' (೧೭ ಕವಿತೆಗಳು), 'ಮಣ್ಣಿನ ಮೆರವಣಿಗೆ' (೯ ಕವಿತೆಗಳು), 'ನೆಲ ಮುಗಿಲು' (೬೦ ಕವಿತೆಗಳು), 'ಎರಡು ದಡ' (೨೮ ಕವಿತೆಗಳು), 'ನಗರದಲ್ಲಿ ನೆರಳು' (೩೧ ಕವಿತೆಗಳು), 'ಜೀವ ಧ್ವನಿ' (೪೦ ಕವಿತೆಗಳು), 'ಕಾರ್ತೀಕದ ಮೋಡ' (೩೦ ಕವಿತೆಗಳು), 'ಜೀನಿಯಾ' (೩೩ ಕವಿತೆಗಳು), 'ಶಿಶಿರದಲ್ಲಿ ಬಂದ ಸ್ನೇಹಿತ' (೪೦ ಕವಿತೆಗಳು), 'ಹಕ್ಕಿ ಪುಚ್ಚ' (೧೩ ಕವಿತೆಗಳು) ಹೀಗೆ ೧೪ ಕವಿತಾ ಸಂಕಲನಗಳಲ್ಲಿ ಬಂದ ಕಣವಿ ಅವರ

ಸಮಗ್ರಕಾವ್ಯದಲ್ಲಿ ೪೨೩ ಕವಿತೆಗಳ ಬೃಹತ್ ಸಂಚಯವನ್ನು ನಾವು ಕಾಣುತ್ತೇವೆ. ಕನ್ನಡ ಭಾಷೆಯ ಭಾವಸಂಪತ್ತನ್ನೂ, ಜೀವಧ್ವನಿಯನ್ನೂ ಸಾಕಾರಗೊಳಿಸುವ ಕಣವಿ ಕಾವ್ಯ ಬತ್ತಲಾರದ ಗಂಗೆಯಂತೆ ನಿರಂತರವಾಗಿ ಹರಿದು ಬಂದಿದೆ. ಕನ್ನಡದ ನೆಲದಲ್ಲಿ ಹೊಂಬೆಳಕಿನ ಪ್ರಭೆಯನ್ನು ಹರಡಿ ಹರ್ಷೋಲ್ಲಾಸವನ್ನು ಮೂಡಿಸಿದೆ.

ಚೆನ್ನವೀರ ಕಣವಿಯವರು ಕವಿಯಾಗಿ ಬೆಳೆದದ್ದು ಧಾರವಾಡದ ಪರಿಸರದಲ್ಲಿ. ಬೇಂದ್ರೆ, ಗೋಕಾಕ, ಆನಂದಕಂದ ಮೊದಲಾದ ಗೆಳೆಯರ ಗುಂಪಿನ ಕವಿಗಳು ಭಾವಗೀತೆಯ ಹಾದಿಯಲ್ಲಿ ನವಮನ್ವಂತರವನ್ನೇ ನಿರ್ಮಿಸಿದ ಕಾಲವದು. ಎಲ್ಲೆಲ್ಲೂ ಕಾವ್ಯದ ವಾತಾವರಣ ದುಮುದುಮಿಸುತ್ತಿದ್ದ ಸಂದರ್ಭದಲ್ಲಿ ಕಣವಿಯವರು ಕವಿತೆಗಳ ರಚನೆಗೆ ತೊಡಗಿದ್ದು ಮುಖ್ಯವಾದ ಅಂಶ. ಗೆಳೆಯರ ಗುಂಪಿನ ವಾರಸುದಾರರಾದ ಕಣವಿಯವರು ಅದರ ಆದರ್ಶಗಳನ್ನೆಲ್ಲ ಸ್ವೀಕರಿಸಿ, ಸ್ನೇಹ, ಪ್ರೀತಿ, ಅಂತಃಕರಣಗಳನ್ನು ಕಾವ್ಯದ ಮೂಲಕ ಅಭಿವ್ಯಕ್ತಿಸಲು ಸನ್ನದ್ಧರಾದವರು. ಹೊಸ ಕಾವ್ಯದಲ್ಲಿ ಕಾಣುವ ರೊಮ್ಯಾಂಟಿಕ್ ಮನೋಧರ್ಮ ಕಣವಿಯವರಲ್ಲಿ ಆಗ ರೂಹು ಪಡೆದಿತ್ತು. ಆದ್ದರಿಂದಲೇ ಕಣವಿಯವರ ಆರಂಭದ ಕವಿತೆಗಳು ಉತ್ಕೃಷ್ಟ ಭಾವಗೀತೆಗಳಾಗಿವೆ. ವ್ಯಕ್ತಿನಿಷ್ಠವಾದ ಅನುಭವ, ಭಾವತೀವ್ರತೆ, ಕನಸುಗಾರಿಕೆ, ಗೇಯಗುಣಗಳಿಂದ ಕೂಡಿದ ಭಾವಗೀತೆ ಕಣವಿಯವರ ಕವಿಚೇತನವನ್ನು ಅರಳಿಸಿತು. ಇವತ್ತಿನ ಸಂದರ್ಭದಲ್ಲಿ ಕಣವಿಯವರ ಆರಂಭದ ಕವಿತೆಗಳನ್ನು ನೋಡಿದಾಗ ಅವುಗಳ ಪ್ರೌಢವಾದ ಅಭಿವ್ಯಕ್ತಿವಿಧಾನ ಅಚ್ಚರಿಯನ್ನುಂಟು ಮಾಡುತ್ತದೆ. ಇದಕ್ಕೆ ಮುಖ್ಯ ಕಾರಣ ಕಣವಿಯವರ ಕಾವ್ಯಾಭ್ಯಾಸ ಮತ್ತು ಸಮಕಾಲೀನ ಹಿರಿಯ ಕವಿಗಳ ಕಾವ್ಯಾಭಿವ್ಯಕ್ತಿ ವಿಧಾನವನ್ನು ತನ್ನದಾಗಿಸಿಕೊಳ್ಳಲು ನಡೆಸಿದ ಪ್ರಯತ್ನ ಎನ್ನಬಹುದು.

ಕುವೆಂಪು ಅವರ ನಿಸರ್ಗಪ್ರೀತಿ, ಮಧುರಚೆನ್ನರ ಅನುಭಾವ, ಬೇಂದ್ರೆಯವರ ಜಾನಪದ ಸತ್ವ, ಗೋಕಾಕರ ಧ್ಯೇಯವಾದ, ಪು. ತಿ. ನ. ಅವರ ಚಿಂತನಪರತೆ, ಕೆ. ಎಸ್. ನರಸಿಂಹಸ್ವಾಮಿಯವರ ಸುಕುಮಾರತೆಯನ್ನು ಗರ್ಭೀಕರಿಸಿಕೊಂಡು ಬೆಳೆದ ಕಣವಿ ಕಾವ್ಯ ವಿಶಿಷ್ಟವಾದದ್ದು. ಕಣವಿ ಅವರ ಕವಿ ಪ್ರತಿಭೆಯನ್ನು ಕುರಿತು ಐವತ್ತು ವರ್ಷಗಳಷ್ಟು ಹಿಂದೆಯೇ ವರಕವಿ

ಬೇಂದ್ರೆಯುವರು ಹೇಳಿದ ಮಹತ್ವದ ಮಾತುಗಳು ಗಮನಾರ್ಹವಾಗಿವೆ. ಕಣವಿ ಅವರನ್ನು ನೋಡದ ಪೂರ್ವದಲ್ಲಿಯೇ ಅವರ ಕವಿತೆಗಳನ್ನು ಗಮನಿಸಿದ್ದ ಬೇಂದ್ರೆಯವರು 'ಕಾವ್ಯಾಕ್ಷಿ' (೧೯೪೯) ಕವಿತೆಯ ಸಂಕಲನಕ್ಕೆ ಅರ್ಥಪೂರ್ಣ ಮುನ್ನುಡಿ ಬರೆದು ಕನ್ನಡದ ಬೆಳೆಯುವ ಕವಿಯ ಕವಿವ್ಯಕ್ತಿತ್ವವನ್ನು ಗುರುತಿಸಿದರು. "ಮಾತೃವಾತ್ಸಲ್ಯ, ಮಾತೃಭಾಷಾ ವಾತ್ಸಲ್ಯ, ಸೌಂದರ್ಯದೃಷ್ಟಿ, ಅಭೀಪ್ಸೆಯ ತೀವ್ರತೆ, ನವಸ್ವಾತಂತ್ರ್ಯದ ಎಚ್ಚರ, ಹೊಸ ಮೌಲ್ಯಗಳ ಸ್ವೀಕಾರ, ದೇಶಾಭಿಮಾನ. ರಾಷ್ಟ್ರಭಕ್ತಿ ಆದರ್ಶ ಪ್ರೀತಿ —ಇವೇ ಮೊದಲಾಗಿ ಅವರ ಕಾವ್ಯಸ್ಫೂರ್ತಿಯ ವಿಷಯುಗಳಾಗಿವೆ. ಅವರ ಕವನದಲ್ಲಿ ಜೀವಂತಗತಿಯಿದೆ. ಮಾತಿಗೆ ಅಚ್ಚುಕಟ್ಟು ಇದೆ. ಅಲ್ಪ ಸಂತುಷ್ಟಿ ಇಲ್ಲ. ಮಹತ್ತಿನ ಕಡೆಯ ಎಳೆತವಿದೆ. ಅವರ ಬೆಳೆವ ಮನಸ್ಸೂ ಅಂತಃಕರಣವೂ ವಿಕೃತ ಕ್ಷೋಭದಿಂದ ಮುದುಡಿಕೊಂಡಿಲ್ಲ." ಬೇಂದ್ರೆಯವರ ಮುನ್ನುಡಿಯ ಈ ಮಾತುಗಳು ಕಣವಿಯವರ ಕಾವ್ಯದ ಬಗೆಗಿನ ವಸ್ತುನಿಷ್ಠವಾದ ವಿಮರ್ಶಾ ಮಾತುಗಳೇ ಆಗಿವೆ. ಬೇಂದ್ರೆಯವರಿಂದ ಸೈ ಎನ್ನಿಸಿಕೊಳ್ಳುವುದು ಸುಲಭವಾದ ಮಾತೇನೂ ಅಲ್ಲ. ಈ ಮಾತುಗಳು ಕಣವಿಯವರ ಮುಂದಿನ ಬೆಳವಣಿಗೆಗೆ ಪ್ರೋತ್ಸಾಹವನ್ನು ನೀಡಿದ್ದು ಸ್ವಾಭಾವಿಕವೇ ಆಗಿದೆ.

ಪ್ರೇಮಜೀವಿ ಪಟ್ಟ ಪಾಡು
ಕರುಳು ಬಗೆದು ಬಂದ ಹಾಡು
ತಾಯಿ ನಿನ್ನ ಮಡಿಲೊಳಿಡಲು ಇಂಬುಗೊಡುವೆಯಾ ?

(ತಾಯಿ ನಿನ್ನ ಮಡಿಲೊಳು —ಕಾವ್ಯಾಕ್ಷಿ)

ಎಂದು ಕವಿ ಆರಂಭದಲ್ಲಿಯೇ ಕಾವ್ಯದೇವಿಗೆ ಮೊರೆಹೊಕ್ಕಿದ್ದಾರೆ. ಕಣವಿ ಅವರ 'ಕಾವ್ಯಾಕ್ಷಿ' ಪ್ರಕೃತಿಯ ಸುಂದರ ಸೊಬಗನ್ನು ಭಾವಮಯವಾಗಿ ಚಿತ್ರಿಸುತ್ತದೆ.

ಆ ಗಿಡಾ ಈ ಗಿಡಾ
ಒಂದೊಂದು ಜೇಂಗೊಡಾ
ಬಾಂದೇವಿಗೆ
ನೆಲದಾಯಿಯು
ಹೂಗೊಂಡೆಯ ಹೊಂಗಾಡಾ

(ಕಾವ್ಯಾಕ್ಷಿ)

ಕವಿತೆಯ ಕೊನೆಯ ಸಾಲಿನಲ್ಲಿ ಕವಿ ಆನಂದಪರವಶನಾಗಿ 'ತನಗೆ ತಾನೆ ತಿಳಿಯ್ಕದಂತೆ ತುಳುಕಿತಹಹ ಭಾವನಾ' ಎಂದು ಕಾವ್ಯಾಕ್ಷಿಗೆ ವಂದನೆ ಹೇಳಿದ್ದಾರೆ. ಪ್ರಕೃತಿಯೋಪಾಸಕರಾದ ಕಣವಿಯವರು 'ನಾನು ಮಿಡಿಯುವ ಭಾವ ವೀಣೆ ತಂತಿಗಳೆಲ್ಲ ದೇವ ! ಜೀವಾಳದೋಂಕಾರಗುಡಲಿ' ಎಂದು 'ಬಿನ್ನಹ' ಮಾಡಿದ್ದಾರೆ. 'ಕಾಡುಮಲ್ಲಿಗೆ'ಯಲ್ಲೂ ಚೆಲುವು ಕಾಣುವ ಕಣ್ಣು ಕಣವಿಯವರದಾಗಿದೆ. ಬೆಳಗಿನ ವೈಭವ, ಬೆಳದಿಂಗಳಿನ ಮಾಧುರ್ಯಗಳು ಕಣವಿಯವರಿಗೆ ಪ್ರಿಯವಾಗಿವೆ. 'ಚಂದ್ರೋದಯ' ಕವಿತೆಯಲ್ಲಿ ಅವರ ಪ್ರಶಾಂತ ಮನಸ್ಸಿನ ಭಾವವಿದೆ. 'ಈಗತಾನೆ ಬಂದಿತೇನೆ ಮಧುರ ಕಂಠ ಕೋಗಿಲೆ ?' ಎಂದು ಕೇಳುವ ಕೌತುಕ 'ಕೋಗಿಲೆ' ಕವಿತೆಯಲ್ಲಿದೆ. ಕಣವಿಯವರ 'ಮೇಘೋಪಾಸನೆ' ನಿಸರ್ಗದ ವೈಭವವನ್ನು ಚಿತ್ರವತ್ತಾಗಿ ವರ್ಣಿಸುವ ವಿಶಿಷ್ಟ ಕವಿತೆ. 'ಗಾಳಿಗೂಡಿ ಕಿರುಮೋಡವಾಗಿ ಬಾನೆಲ್ಲ ಅಲೆಯುವಾಸೆ' ತುಂಬಿಕೊಂಡ ಕಣವಿಯವರ ಭಾವವಿತಾನ 'ಕಾವ್ಯಾಕ್ಷಿ'ಯ ಅನೇಕ ಕವಿತೆಗಳಲ್ಲಿ ಕಣ್ಸೆಳೆಯುತ್ತದೆ.

ರಾಷ್ಟ್ರೀಯ ಪ್ರಜ್ಞೆ, ಆದರ್ಶವಾದ ತುಂಬಿ ಹರಿಯುತ್ತಿದ್ದ ಸಂದರ್ಭದಲ್ಲಿ ಕಣವಿಯವರು ಅದಕ್ಕೆ ಸ್ಪಂದಿಸಿ ಕವಿತೆ ರಚಿಸಿದರು. ಭಾರತದ ಪ್ರಥಮ ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ಧಾರವಾಡದ ಕರ್ನಾಟಕ ಕಾಲೇಜಿನ ವಿಶಾಲವಾದ ಬಯಲಿನಲ್ಲಿ ತುಂಬಿದ ಜನಸಮೂಹದ ಮಧ್ಯೆ ಕಣವಿಯವರು ಮೊಟ್ಟ ಮೊದಲ ಬಾರಿಗೆ ಸಾರ್ವಜನಿಕ ಕವಿ ಸಮ್ಮೇಳನದಲ್ಲಿ 'ಬಂಧದಿಂ ಬಿಡುಗಡೆ' ಕವಿತೆ ಓದಿದರು. 'ಭಾರತವು ಒಂದು, ಭಾರತಿಯು ತಾಯಿ, ಕುಲವೊಂದೆ ಭರತ ಕುಲವು' ಎಂದು ಹೃದಯತುಂಬಿ ಹಾಡಿದರು.

ಕಣವಿಯವರ 'ಭಾವಜೀವಿ' (೧೯೫೦) ಕನ್ನಡದ ಭಾವಗೀತೆಯ ಯುಗದಲ್ಲಿ ಪ್ರಮುಖವಾದದ್ದು. ಕವಿಯ ಆತ್ಮಕಥನ ಇಲ್ಲಿ ಮನೋಜ್ಞವಾಗಿ ಮೂಡಿಬಂದಿದೆ. ಕಣವಿಯವರ ಭಾವಜೀವನವು ಸಾಗರದ ತೆರೆಗಳಂತೆ ಪುಟಿದೆದ್ದು ಬರುವುದನ್ನು ನಾವು ಇಲ್ಲಿ ಕಾಣುತ್ತೇವೆ. ೫೮೦ ಪಂಕ್ತಿಗಳಷ್ಟು ಸುದೀರ್ಘವಾಗಿ ಹರಿಯುವ ಈ ನೀಳ್ಗವಿತೆ ಕವಿಜೀವನದ ಬೆಳವಣಿಗೆಯನ್ನು ಅರ್ಥಪೂರ್ಣವಾಗಿ ಚಿತ್ರಿಸುತ್ತದೆ. ಪ್ರಕೃತಿಮಾತೆಯ ಮಡಿಲಿನಾಸರೆಗೆ ಆಸತ್ತು ಬೇಸತ್ತು ಬಂದು ಶಾಂತಿ ಬಯಸುವ ಕವಿ 'ಅಂತರಂಗದ ನಿಸ್ತರಂಗ ತಿಳಿಗೊಳದಲ್ಲಿ ಲಲಿತಾರವಿಂದಗಳ ಮಕರಂದ'ವನ್ನು ಸವಿಯುತ್ತಾನೆ. ತಾನು

ಹುಟ್ಟಿ ಬೆಳೆದ ಗ್ರಾಮೀಣ ಪರಿಸರ, ತನ್ನ ಮೇಲೆ ಪ್ರಭಾವ ಬೀರಿದ ವ್ಯಕ್ತಿಗಳು, ಸಾಂಸ್ಕೃತಿಕ ಉತ್ಸವಗಳು, ಬಾಲ್ಯಜೀವನದ ಆಟ ಪಾಠ, ವಿನೋದಗಳು, ಮನೆಯಲ್ಲಿ ತಂದೆಯಿಂದ ಕೇಳುತ್ತಿದ್ದ ಅನುಭವಾಮೃತ, ಮುಪ್ಪಿನ ಷಡಕ್ಷರಿಯ ಹಾಡುಗಳು, ಜನಪದ ಗೀತೆಗಳು ಕವಿಯ ಮನೋಮಂದಿರದ ಸ್ಮೃತಿ ಚಿತ್ರಮಾಲೆಯಾಗಿಸಿದೆ.

ಬಾಳಸಂಪುಟದಲ್ಲಿ ಬಾಲ್ಯವೆಂಬುವದೊಂದು
ಅಳಿಸಲಾರದ ಮಧುರ ಭಾವಗೀತ;
ಮುಂದೆ ಬಹ ಅನುಭವದ ಕಹಿಫಲವನುಣ್ಣುತಿರೆ
ಮರುಕಳಿಸಿ ನೆನೆಯುವದೆ ನಮ್ಮ ಸ್ವಾರ್ಥ ।

(ಭಾವಜೀವಿ)

ಬಾಲ್ಯದ ಮಧುರಸ್ಮೃತಿಯು ಭಾವಜೀವಿಯು ಏರುವ ಶಿಖರದ ಮೊದಲ ಮೆಟ್ಟಿಲಾಗಿದೆ. ಧಾರವಾಡಕ್ಕೆ ಬಂದ ಕವಿ ಕನ್ನಡ ಸರಸ್ವತಿಯ ಚೆಲುರಥೋತ್ಸವ ಕಂಡು ಪುಳಕಿತರಾಗುತ್ತಾರೆ. ಕಾವ್ಯ, ಕಲೆ, ಸಂಸ್ಕೃತಿಯ ತವರಿನಲ್ಲಿ ಕಣವಿ ಭಾವಜೀವನ ಮುಂದೋಡುತ್ತದೆ. ಸೌಂದರ್ಯ ದರ್ಶನಕೆ ದೀಪ್ತವಾಗಿಹ ಕವಿ ಮನವು ಪ್ರಕೃತಿಯೋಪಾಸನೆಯನ್ನು ಕೈಕೊಂಡು ಭಾವ ವೀಣೆಗೆ ಬೆರಳನಾಡಿಸುತ್ತದೆ.

ನಮ್ಮ ಬಾಳಿಗೆ ಪರಮ ಪ್ರೀತಿಯೇ ನೆಲೆಗಟ್ಟು
ಪ್ರೀತಿಯೇ ಚೌಕಟ್ಟು ಬೇರೆಯಿಲ್ಲ ;
ಪ್ರೇಮಕಾಗಿಯೆ ನವೆವ ಸತ್ಯಕಾಮರು ನಾವು
ಸತ್ಯವಾನ್ ಸಾವಿತ್ರಿಯಲ್ಲದಿಲ್ಲ.

(ಭಾವಜೀವಿ)

ಕವಿಯ ಮನಸ್ಸಿನಲ್ಲಿ ಪ್ರೇಮ–ವಿರಹಗಳು ಬಂದು ಭಾವಜೀವಿಯನ್ನು ಜಾಗೃತಗೊಳಿಸುತ್ತವೆ. ಸೌಂದರ್ಯಯೋಗಿಯೊಡಲು ಕಾಮವಾಸನೆ ತ್ಯಜಿಸಿ ದರ್ಶನವಿಶುದ್ಧಿ ಪಡೆಯುವ ಹಂಬಲ ಮೂಡುತ್ತದೆ. ಕಾರುಣ್ಯದಾಯಿನಿಯಾದ ತಂಗಿಯ ಪ್ರೀತಿ, ಜ್ಞಾನಸಿಂಧುವಿನ ಕರೆ, ಸರ್ವಸಮಭಾವದಲಿ ಬಾಳಯಾನಗೈಯುವ ಹಿರಿಯಾಸೆ ಒಡಮೂಡುತ್ತದೆ. ಕವಿಗಾಳಿ ಸವಿಗಾಳಿ ತೀಡುವ ಧಾರವಾಡದ ನೆಲದ ಗುಣ, ದತ್ತವಾಣಿಯ ಪ್ರಭಾವವು ಕವಿಯನ್ನು ಆಕರ್ಷಿಸುತ್ತದೆ. ಆತ್ಮಾನುಸಂಧಾನಕ್ಕೆ ತೊಡಗುವ ಕವಿಯ ಅಂತರಂಗ ದರ್ಶನ ನಮಗಾಗುತ್ತದೆ.

'ಮಧುರಚೆನ್ನರ ಮಧುರ ನುಡಿಯು ಮರ್ಮವನರಿತು ಮಾರು ಹೋಯಿತು ನನ್ನ ಭಾವ ಭಕ್ತಿ' ಎಂದು ಹೇಳಿದ ಕವಿ ತನ್ನ ಭಾವಜೀವನದ ಮೇಲೆ ಪ್ರಭಾವ ಬೀರಿದ ಮಧುರಚೆನ್ನರನ್ನು ಸ್ಮರಿಸಿದ್ದಾರೆ.

ಭಾವಜೀವಿಯು ನಾನು, ನನ್ನೆದೆಯ ನಂಬಿರುವ
ತುಂಬಿರುವ ಕನಸುಗಳೆ ಕಲ್ಪವೃಕ್ಷ !
ಯಾವುದಾದರು ಏನು ಕೃತಿಯಲ್ಲಿ ಬರುವನಕ
ಕನಸಲ್ಲವೆ ? ಅಲ್ಲವೆನಲು ರುಕ್ಷ.

(ಭಾವಜೀವಿ)

ಎಂದು ನುಡಿದಿರುವ ಕವಿ 'ಮನೆಯ ಕಟ್ಟುವ ಮೊದಲು ನಕ್ಷೆಯನು ತೆಗೆವಂತೆ ಭಾವ ಕಾಣುವದದನು ಕನಸಾಗಿಸು'ವ ಬಗೆಯನ್ನು ವಿದಿತಪಡಿಸಿದ್ದಾರೆ. ಗೋಕಾಕರು 'ಭಾವಜೀವಿ'ಗೆ ಬರೆದ ಮುನ್ನುಡಿಯಲ್ಲಿ 'ವಿಶ್ವದ ಜೀವನವೇ ವ್ಯಕ್ತಿಯ ಜೀವನವಾಗಿ ವ್ಯಕ್ತಿ–ವಿಶ್ವಗಳ ದ್ವಂದ್ವವು ಹೊಸತೊಂದು ಪೌರುಷದಲ್ಲಿ ಇಲ್ಲವೆ ನವೀನ ವ್ಯಕ್ತಿತ್ವದ ನಿರ್ಮಿತಿಯಲ್ಲಿ ಒಂದಾಗಿ ಲೀನವಾಗುತ್ತದೆ. ಮಾನವನು ವಿಶ್ವಮಾನವನಾಗಬೇಕಾಗಿದೆ. ಈ ಮಹಾಕಾರ್ಯದಲ್ಲಿ ಭಾವಜೀವಿಯೂ ಒಂದು ಮಹತ್ವದ ಘಟಕ ವಾಗಿದ್ದಾನೆ' ಎಂದಿದ್ದಾರೆ. ಕವಿಯ ಭಾವಜೀವನದ ವಿಕಾಸೋನ್ನತಿಯ ವಿವಿಧ ಮಗ್ಗಲುಗಳನ್ನು ಪರಿಣಾಮಕಾರಿಯಾಗಿ ಅಭಿವ್ಯಕ್ತಿಸುವ ಕಣವಿಯವರ 'ಭಾವಜೀವಿ' ಒಂದು ಅಪೂರ್ವವಾದ ನೀಳ್ಗವಿತೆಯಾಗಿದೆ. ಆತ್ಮದ ಅಂತರ್ಯಾನವನ್ನು ಕಾವ್ಯದ ಮೂಲಕ ಸೆರೆ ಹಿಡಿಯುವ ಸಾಹಸವೂ ಇಲ್ಲಿ ಪ್ರಕಟವಾಗಿದೆ. ಆದ್ದರಿಂದಲೇ ಕನ್ನಡದ ಶ್ರೇಷ್ಠ ಆತ್ಮಕಥನ ಕಾವ್ಯಪರಂಪರೆಯಲ್ಲಿ ಅದಕ್ಕೆ ಮಹತ್ವದ ಸ್ಥಾನವಿದೆ.

'ಆಕಾಶಬುಟ್ಟಿ (೧೯೫೩) ಕಣವಿಯವರ ಕಾವ್ಯದ ಬೆಳವಣಿಗೆಯ ಹಾದಿಯಲ್ಲಿ ಮುಖ್ಯವಾದ ಹೆಜ್ಜೆಯಾಗಿದೆ. ಸ್ವತಂತ್ರವಾಗಿ ಬೆಳೆಯುತ್ತ ಹೋಗುವ ಕಣವಿಯವರ ಕವಿತೆಗಳನ್ನು ನಾವಿಲ್ಲಿ ಕಾಣುತ್ತೇವೆ. ಆಕಾಶಬುಟ್ಟಿ ಕವಿತೆಯ ಕೊನೆಯಲ್ಲಿ ಬರುವ ಈ ಸಾಲುಗಳು ಗಮನಾರ್ಹವಾಗಿವೆ.

'ದೀನ ಮಾನವ ರಚಿತ ಆಕಾಶಬುಟ್ಟಿ
ದಾನವರ ಬಿರುಗಾಳಿ ದಾಳಿಯನು ಮೆಟ್ಟಿ
ಬಾನವರನಪ್ಪಿ ಒಂದಾಗಿಹುದು ನೋಡು !
ನೋಡಿದೆಯಃ ಕವಿಯೆ ?

ಊರ್ಧ್ವಮುಖಿಗಲ್ಲದಿದು ಉಳಿದವರಿಗಳವೆ ?
ಆತ್ಮ ಬಲದೆದುರು ಮೇಣುಳಿದ ಬಲವೆ ?

ಆಕಾಶಬುಟ್ಟಿಯೊಲು ಏಕಾಕಿಯಾದರೂ
ಎದೆಗೆದೆಯ ಹೊಂದೀಪ ಉದ್ದೀಪನಂಗೊಂಡು
ಬಾಳದ್ವೀಪವ ಬೆಳಗುವಂತೆ ಹಾಡು
ಎಂದೆಂದು ನೀನಿಂಥ ಹಾಡ ಹಾಡು !'

(ಆಕಾಶಬುಟ್ಟಿ-ಆಕಾಶಬುಟ್ಟಿ)

'ಹೊಸ ಬಾಳು ನಮ್ಮದಿಥೆ' ಎಂಬ ಕವಿತೆಯಲ್ಲೂ 'ಯುವ ಜನಾಂಗವೆ ಬನ್ನಿ ನವರಂಗಕೆ' ಎಂದು ಕರೆ ನೀಡಿದ ಕಣವಿಯವರು ನವೀನ ಬಾಳಿಗೆ ಬೇಕಾದ ಆದರ್ಶವಾದದ ಭಾವನೆಯನ್ನು ಪ್ರಕಟಪಡಿಸಿದ್ದಾರೆ. 'ಪ್ರಜಾಪ್ರಭುತ್ವ' ಕವಿತೆಯಲ್ಲಿ.

'ವ್ಯಕ್ತಿ-ಶಕ್ತಿಯ ಗುಣವಿಕಾಸ ಪ್ರಕಾಶದಲಿ
ಜಗವ ಬೆಳಗುವದದರ ಮೂಲತತ್ವ'

(ಪ್ರಜಾಪ್ರಭುತ್ವ-ಆಕಾಶಬುಟ್ಟಿ)

ಎಂದು ಹೇಳಿದ ಕವಿ ವ್ಯಕ್ತಿಶಕ್ತಿಯ ವಿಕಾಸವನ್ನೂ, ಜಾತಿಗೀತಿಯ ವಿಷ ಗಾಳಿಯಿಂದ ಮುಕ್ತವಾದ, ಬಡವ-ಬಲ್ಲಿದ ಭೇದ ಭಾವವಿಲ್ಲದ, ಸರ್ವರಿಗೂ ಸಮಪಾಲು ಬೆಳದಿಂಗಳು ಬಯಸುವ ಆಶಯವನ್ನು ವ್ಯಕ್ತಪಡಿಸಿದ್ದಾರೆ.

ಕಣವಿಯವರು ಸ್ನೇಹಕ್ಕೆ ಕೊಡುವ ಮಹತ್ವವು ಅವರ ಹಲವು ಕವಿತೆಗಳಲ್ಲಿದೆ. 'ಗೆಳೆತನ' 'ವಿಶ್ವದಂತಃಕರಣ ಮಂದಾಕಿನಿ' ಎಂಬುದು ಅವರ ಪರಿಭಾವನೆ. ಮುಂಜಾನೆಯ ಹಸಿರು ಹುಲ್ಲಿನ ಮೇಲೆ ಪಾರಿಜಾತವು ಹೂವ ಸುರಿಸಿದಂತೆ ಮಾತು ಮೃದುವಾಗಿರಬೇಕೆಂಬುದನ್ನು ಕಣವಿ ವ್ಯಕ್ತಪಡಿಸಿದ್ದಾರೆ.

ನಾವು ಆಡುವ ಮಾತು ಹೀಗಿರಲಿ ಗೆಳೆಯ
ಮೃದು ವಚನ ಮೂಲೋಕ ಗೆಲ್ಲುವದು ತಿಳಿಯ;
ಮೌನ ಮೊಗ್ಗೆಯನೊಡೆದು ಮಾತರಳಿ ಬರಲಿ
ಮೂರು ಗಳಿಗೆಯ ಬಾಳು ಮಗ ಮಗಿಸುತಿರಲಿ

(ಮಾತು – ಆಕಾಶಬುಟ್ಟಿ)

ಕಣವಿಯವರ ಕಾವ್ಯಾಭಿವ್ಯಕ್ತಿಯಲ್ಲೂ ಈ ಮೃದುವಚನ ಮಧುರ ಭಾವಗಳು ಕಂಗೊಳಿಸುತ್ತವೆ. ಸಿಟ್ಟು, ರೋಷ, ಆಕ್ರೋಶದಿಂದ ಮುಕ್ತವಾದ ಪ್ರಶಾಂತ ಮನಸ್ಥಿತಿ ಅವರದು. 'ಒಂದು ಮುಂಜಾವು' ಕವಿತೆಯ ಭಾವನಾಲಹರಿ ಅಪರೂಪವಾದದ್ದು.

> ಒಂದು ಮುಂಜಾವಿನಲಿ ತುಂತುರಿನ ಸೋನೆಮಳೆ
> 'ಸೋ' ಎಂದು ಶೃತಿ ಹಿಡಿದು ಸುರಿಯುತ್ತಿತ್ತು;
> ಅದಕೆ ಹಿಮ್ಮೇಳವನೆ ಸೋಸಿ ಬಹ ಸುಳಿಗಾಳಿ
> ತೆಂಗು ಗರಿಗಳ ನಡುವೆ ನುಸುಳುತಿತ್ತು

(ಒಂದು ಮುಂಜಾವು–ಆಕಾಶಬುಟ್ಟಿ)

'ಇಳೆವೆಣ್ಣು ಮೈದೊಳೆದು ಮಕರಂದದರಿಶಿಣ ಹೂಮೂಡಿದು ಮದುಮಗಳ ಹೋಲುವ' ಸುಂದರ ಭಾವನೆಗಳನ್ನು ಕಣವಿ ವರ್ಣಿಸಿರುವ ರೀತಿ ತುಂಬ ಮೋಹಕವಾದದ್ದು.

ಪ್ರಕೃತಿಯಲ್ಲಿ ನಡೆಯುವ ಋತುಮಾನದ ಲೀಲೆಗಳು ಕವಿ ಕಣವಿಯವರಲ್ಲಿ ಕೌತುಕಭಾವವನ್ನು ನಿರ್ಮಿಸಿವೆ. 'ಸೃಷ್ಟಿನೋಂತು ನಿಂತಿದೆ' ಕವಿತೆಯಲ್ಲಿ ಚೈತ್ರೋದಯದ ಸೊಬಗನ್ನು ವರ್ಣಿಸಿದ ಕವಿ 'ಶ್ರಾವಣದ ಲಾವಣ್ಯ'ವನ್ನು ಕಂಡು ಬೆರಗಾಗಿದ್ದಾರೆ.

> ಬಾನ ಸಾಣೆಗೆ ಹಿಟ್ಟು ಸಣ್ಣಸಿ–
> ದಂತೆ ಜಿನುಗಿದೆ ಸೋನೆಯು,
> ಬಿಳಿಯ ತೆಳು ಜವನಿಕೆಯ ನೆಳೆದಿಹ
> ಇಳೆಯು ಸುಂದರ ಮೇಣೆಯು.
> ಹುಲ್ಲು ಹಾಸಿದೆ ಹೂವು ಸೂಸಿದೆ
> ಗಾಳಿ ಮೂಸಿದೆ ಕಂಪನು;
> ಶ್ರಾವಣದ ಲಾವಣ್ಯ ಕುಣಿದಿದೆ
> ಮಳೆಯು ಹಣಿಸಿದೆ ತಂಪನು.

(ಶ್ರಾವಣ ಲಾವಣ್ಯ–ಆಕಾಶಬುಟ್ಟಿ)

ಧಾರವಾಡ ಶ್ರಾವಣದ ಸೊಬಗು ಬೇಂದ್ರೆಯವರಂತೆ ಕಣವಿಯವರಲ್ಲೂ ಹರ್ಷೋಲ್ಲಾಸ ತಂದಿರುವದನ್ನು ನಾವಿಲ್ಲಿ ಕಾಣುತ್ತೇವೆ. ಕಣವಿಯವರು ಬರೆದ 'ಚಿರಂತನ ದಾಹ' ಕವಿ ಹೃದಯದ ದೊಡ್ಡ ಆಶಯದ ಪ್ರತೀಕವಾಗಿದೆ.

ಜಗವ ತುಂಬಿದ ಬೆಳಕು ನಮಗೇಕೊ ಸಾಲದಿದೆ
ಎನಿತು ಮಾನವನೆದೆಯ ಆಳ ಅಗಲ !
ಬಂದಷ್ಟು ಇಂಗುತಿದೆ, ಮತ್ತೆ ಬರಿದಾಗುತಿದೆ
ಎಷ್ಟು ಸೆಲೆಯೊಡೆದರೂ ವಿಫಲ ವಿಫಲ !

(ಚಿರತನದಾಹ-ಆಕಾಶಬುಟ್ಟಿ)

ಬೆಳಕಿನ ಪ್ರತಿಮೆಯನ್ನು ಕಣವಿಯವರು ತಮ್ಮ ಹಲವಾರು ಕವಿತೆಗಳಲ್ಲಿ ಪ್ರಕಟಿಸುತ್ತ ಬಂದಿದ್ದಾರೆ. ಚೆಂಬೆಳಕನ್ನು ಸದಾ ಸವಿಯುವ ಕಣವಿ ಅವರು ಚಿರಂತನ ದಾಹದ ಕವಿಯಾಗಿದ್ದಾರೆ.

ಕಣವಿಯವರ 'ಬಸವನಾಳರಿಗೆ ಭಾಷ್ಪಾಂಜಲಿ' ಕನ್ನಡ ಶೋಕಗೀತಗಳಲ್ಲಿ ಮಹತ್ವದ ಸ್ಥಾನವನ್ನು ಪಡೆದುಕೊಳ್ಳುತ್ತದೆ. ಬಸವನಾಳರ ವ್ಯಕ್ತಿತ್ವವನ್ನು ವರ್ಣಿಸುತ್ತ ಹೋಗುವ ಕಣವಿಯವರ ಪಂಕ್ತಿಗಳಿವು.

ಕನ್ನಡದ ಹೊಂದೇರನೆಳೆದಿರಿ, ಸಂಸ್ಕೃತಿಯ ಚೈತನ್ಯದಿ
ನಾಲ್ಕು ಗಾಲಿಯು ಭದ್ರವಾಗಿವೆ ಸಾಗಿರೆಂದಿರಿ ಮೌನದಿ
'ಮೂಲೆಯಲ್ಲಿಯೆ ಕುಳಿತು ಮುದುಡುವ ಮೂಳನಿಗೆ ಜಗವಿಲ್ಲವು
ಮುಂದೆ ಬನ್ನಿರಿ' ಎಂದು ಕರೆದಿರಿ ನೂರು ಕೈ ತೇರೆಳೆದವು !

(ಬಸವನಾಳರಿಗೆ ಭಾಷ್ಪಾಂಜಲಿ–ಆಕಾಶಬುಟ್ಟಿ)

ಹೀಗೆ ಮನದ ಭಾವಗಳನ್ನು ಹೃದಯಪೂರ್ವಕವಾಗಿ ಪ್ರಕಟಿಸುತ್ತ ಬಂದ ಕಣವಿ ಅವರು ಸಾಮರಸ್ಯದ ಪ್ರತಿಪಾದಕರೂ, ಸಮದರ್ಶನದ ಚಿಂತಕರೂ ಆಗಿದ್ದಾರೆ. 'ಗಾಂಧೀಯುಗ'ದ ಆದರ್ಶದ ಬಗೆಗೂ ಕಣವಿಯವರು ತಮ್ಮ ಭಾವಧಾರೆ ಹರಿಸಿದ್ದಾರೆ.

ಕಣವಿಯವರ 'ಮಧುಚಂದ್ರ' (೧೯೫೪) ಪ್ರೇಮದ ಭಾವನೆಗಳನ್ನು ನವಿರಾಗಿ ಪ್ರತಿಮಿಸುತ್ತದೆ.

ಬಾ ಮಲ್ಲಿಗೆ
ಬಾ ಮೆಲ್ಲಗೆ
ನನ್ನೆದೆ ಮೆಲ್ವಾಸಿಗೆ
ಇಳೆಗಿಳಿದಿದೆ
ಬೆಳುದಿಂಗಳು
ನಮ್ಮೊಲುಮೆಯ ಕರೆಗೆ.

(ಮಧುಚಂದ್ರ–ಮಧುಚಂದ್ರ)

ಪ್ರಿಯತಮ ಪ್ರೇಯಸಿಯರ ಭಾವನೆಗಳನ್ನು ಕವಿತೆಗಳಲ್ಲಿ ಸೆರೆಹಿಡಿದ ಕವಿ ಸಂಸಾರಿಕ ಸುಖ–ದುಃಖಗಳನ್ನೂ ಸರಿಯಾಗಿಯೇ ಹಿಡಿದಿಟ್ಟಿದ್ದಾರೆ. 'ಮಿಲನ' ಕವಿತೆಯ ಸಾಲುಗಳಿವು :

ಎರಡೆದೆಗಳು ತುಡಿಯುತ್ತಿವೆ ಪ್ರೇಮಾಂಬುಧಿಗೆಳಸಿ
ಆ ಗಂಗಾ ಯಮುನೆಯರೊಲು ಚಿರಸಂಗಮ ಬಯಸಿ.
ನಡುದಾರಿಗೆ ಅಡ್ಡೈಸಿವೆ ಗುಡುಗಾಡಿವೆ ಮುಗಿಲು
ಹೆಡೆಯೆತ್ತುತ ಫೂತ್ಕರಿಸಿದೆ ಬಿರುಗಾಳಿಯ ಹುಯಿಲು.

(ಮಿಲನ–ಮಧುಚಂದ್ರ)

ಪ್ರೇಮಕ್ಕಾಗಿ ತುಡಿಯುವ ಜೀವಿಗಳು ತಮ್ಮ ಜೀವನ ಹೂವಿನ ಹಾಸಿಗೆಯಲ್ಲ ಎಂಬುದನ್ನು ಅರಿತಿರುತ್ತಾರೆ. ಹೊಸಬಾಳಿನ ಹೊಸಹಾಡಿಗೆ ರಸಮಯ ಸಂಸ್ಕರಣಕ್ಕೆ ಸಿದ್ಧರಾಗಿರುತ್ತಾರೆ. ಕಣವಿಯವರು ಪ್ರೇಮಿಗಳ ಕನಸು, ಆಸೆ, ಪ್ರೇಮದ ವಿಲಾಸವನ್ನು 'ಗೆ' ಎಂಬ ಇನ್ನೊಂದು ಕವಿತೆಯಲ್ಲಿ ಬಣ್ಣಿಸಿದ್ದಾರೆ.

ನಾದಲಹರಿಯೊಡನೆ ಬಂದ
ನೀನು ಹಾಡಿನೊಡತಿಯು,
ಒಲಿದು ಒಲಿಸಿಕೊಂಬ ನಗೆಯೆ
ನಿನ್ನ ನಯದ ನಡತೆಯು.
ಮಾತು ಪಾರಿಜಾತ ಪುಷ್ಪ–
ದಂತೆ ಮೃದುಲ ಕೋಮಲ,
ಹದುಳದಿಂದ ಒಡಪಿನಿಂದ
ಪಡೆದ ಭಾವನೋಜ್ವಲ !

(–ಗೆ–ಮಧುಚಂದ್ರ)

ಹೀಗೆ ಒಲವು ಬಳ್ಳಿಯಾಗಿ ಬೆಳೆದು ಚೆಂಗುಲಾಬಿಯಂತೆ ಬಾಳು ಅರಳುವದನ್ನು ಸೂಚಿಸುತ್ತ ಮುಂದೆ ಬಹುದ ಕಂಪರಾರು, ಇಂದು ಜೀವ ಕುಣಿಯಲಿ. ಎಂದು 'ಪ್ರೀತಿಯೊಂದೆ ನಮ್ಮ ನೀತಿ' ಎಂದು ಕವಿ ಹಾಡಿದ್ದಾರೆ. ಹೆಣ್ಣು ಗಂಡಿನ ಪ್ರೀತಿ ಕ್ಷಣಿಕವಾದದ್ದಲ್ಲ. ಅದು ಜನ್ಮಾಂತರದ ಸಂಬಂಧವೆಂಬುದನ್ನು ಕಣವಿಯವರು ವ್ಯಕ್ತಿಕರಿಸಿದ್ದು 'ಜೀವ ಜೀವಾಳದಲಿ ಕೂಡಿದವಳು' ಕವಿತೆಯಲ್ಲಿ.

ಸಣ್ಣ ಮನೆಯು ತುಂಬಿ ಚೆಂಗುಲಾಬಿಯ ಚೆಲುವೆ ನಾಯಕನ ದಾಂಪತ್ಯ ಜೀವನದಲ್ಲಿ ಉಲ್ಲಾಸ ತಂದವಳು.

ಹಾಲುಗಲ್ಲಿನ ಮೇಲೆ
ಬೆಳುದಿಂಗಳಿಳಿದಂತೆ
ನಗೆಯ ಹೊಂಗೇದಗೆಯ ಮುಗುದೆಯಿವಳು:
ಮುಂಜಾವು ಉಷೆಯಂತೆ
ಸಂಜೆ ಅಪ್ಸರೆಯಂತೆ
ಕಣ್ಣು ಕಣ್ಣಿಗೆ ದೀಪ ಮಿನುಗಿಸುವಳು !

(ಜೀವಜೀವಾಳದಲಿ ಕೂಡಿದವಳು – ಮಧುಚಂದ್ರ)

ಪ್ರೇಮದ ಉತ್ಕಟತೆಯನ್ನು ಕವಿ ಈ ಪ್ರೇಮಗೀತೆಯಲ್ಲಿ ವರ್ಣಿಸಿದ್ದಾರೆ. 'ಉಷೆಯ ಗೆಳತಿ'ಯನ್ನು ಸೌಂದರ್ಯದರ್ಶನಕ್ಕೆ ಕರೆಯುವ ಪಂಕ್ತಿಗಳು ಅಷ್ಟೇ ಆಪ್ಯಾಯಮಾನವಾಗಿವೆ.

ಏಳೆನ್ನ ಮನದನ್ನೆ, ಏಳು ಮುದ್ದಿನ ಕನ್ನೆ
ಏಳು ಮಂಗಳದಾಯಿ ಉಷೆಯ ಗೆಳತಿ;
ಏಳು ಮುತ್ತಿನ ಚೆಂಡೆ, ಏಳು ಮಲ್ಲಿಗೆ ದಂಡೆ
ಏಳು ಬಣ್ಣದ ಬಿಲ್ಲೆ ಮಾಟಗಾತಿ.

ಏಳೆನ್ನ ಕಲ್ಯಾಣಿ, ಏಳು ಭಾವದ ರಾಣಿ
ನೋಡು, ಮೂಡಲದಲ್ಲಿ ರಾಗಮಿಲನ !
ಮರದುದಿಯ ತೋರಣದಿ ಹೊಂಬಿಸಿಲ ಬಾವುಟವು
ಗಾಳಿವಟ್ಟೆಯಲದರ ಚಲನವಲನ

(ಉಷೆಯ ಗೆಳತಿ – ಮಧುಚಂದ್ರ)

ಪ್ರಿಯಕರನ ಭಾವನೆಗಳನ್ನು ಬಗೆಬಗೆಯ ಪದ್ಯಗಳಲ್ಲಿ ಸೆರೆಹಿಡಿದ ಕವಿ ಪ್ರಿಯತಮೆಯ 'ನಿರೀಕ್ಷೆ'ಯನ್ನೂ ಮತ್ತೊಂದು ಕವಿತೆಯಲ್ಲಿ ಚಿತ್ರಿಸಿದ್ದಾರೆ.

ಮನೆಯ ಮಂಗಳಮೂರ್ತಿ ಮೌನದಾಳದಿ ಮುಳುಗಿ
ಕಣ್ಣ ರತ್ನದ ಖಣಿಯ ದೀಪಿಸಿಹಳು
'ಸಂಜೆಯಾಯಿತು ಈಗ ಬಂದೆ ಬರುವರು' ಎಂದು
ಒಂದೆ ಚಿಕ್ಕೆಯ ತೆರದಿ ಜಾನಿಸಿಹಳು.

(ನಿರೀಕ್ಷೆ – ಮಧುಚಂದ್ರ)

ಹೀಗೆ 'ಪಡುವಣದ ಸಂಜೆವೆಣ್ ನಡುಮನೆಗೆ ಬಂದಂತೆ, ರಾಗ ಪುಲಕಿತೆ ಎದೆಯನಾಳುವ' ಬಗೆಯನ್ನು ಕಣವಿಯವರು ಎದೆದುಂಬಿ ಬಣ್ಣಿಸಿದ್ದಾರೆ. ಕಣವಿಯವರ ಕವಿತೆಗಳಲ್ಲಿಯ ಪ್ರೇಮ – ಮುಖ್ಯವಾಗಿ ದಾಂಪತ್ಯ ಪ್ರೇಮದ ಆದರ್ಶವನ್ನು ಹೇಳುತ್ತದೆ. ಜೀವನದ ಅನುರಾಗದ ಕ್ಷಣಗಳನ್ನು ಸುಕುಮಾರವಾದ ರೀತಿಯಲ್ಲಿ ಅವರು ಚಿತ್ರಿಸುತ್ತಾರೆ. ಸುಸಂಸ್ಕೃತವಾದ ಆವರಣದಲ್ಲಿ ಜೀವನದ ಮುಖ್ಯ ವಾಹಕವಾದ ಪ್ರೇಮವನ್ನು ಕಂಡರಿಸಿರುವದು ಕಣವಿಯವರ ಪ್ರೇಮ ಗೀತಗಳ ವಿಶಿಷ್ಟತೆ ಎನ್ನಬಹುದು. ಮಧುಚಂದ್ರದಲ್ಲಿ ಬರುವ 'ಗಿರಿ ಗಿರಿ ಗಿಂಡಿ'ಯಲ್ಲಿಯ ಲಾಲಿತ್ಯ ಗಮನಾರ್ಹವಾದುದು.

ಗೆಳತಿಯರೆಲ್ಲಾ
ಬಂದಾರೇನ
ಮಲ್ಲಿಗೆ ಹೂವ
ಮುಡಿದಾರೇನ
ಗುಲಾಬಿ ಲಂಗ
ಉಟ್ಟಾರೇನ ?
ಕಣ್ಣಿನ ತುಂಬ
ಕನಸಿನ ಬಿಂಬ
ಜೀವದ ಗೆಳತಿ
ಒಲವಿನ ಒರತಿ
ಇತ್ತತ್ತ ಬಾರ
ಇದಿರಿಗೆ ಬಾರ
ಬಲಗೈ ತಾರ
ಎಡಗೈ ತಾರ
ಗಿರಿಗಿರಿ ಗಿಂಡಿ
ಇಬತ್ತಿ ಉಂಡಿ.

(ಗಿರಿಗಿರಿ ಗಿಂಡಿ – ಮಧುಚಂದ್ರ)

ಬೇಂದ್ರೆಯವರ 'ಪಾತರಗಿತ್ತಿ ಪಕ್ಕ' ಕವಿತೆಯನ್ನು ನೆನಪಿಗೆ ತರುವ ಈ 'ಗಿರಿಗಿರಿ ಗಿಂಡಿ' ಸಹಜ ಪ್ರಾಸದಿಂದ ಜೀವನದ ಉತ್ಸಾಹವನ್ನು ಎಳೆಯರ ಮನೋಲ್ಲಾಸವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತದೆ.

'ಕಾವ್ಯಾಕ್ಷಿ'ಯಿಂದ 'ಮಧುಚಂದ್ರ'ದವರೆಗಿನ ಕಣವಿಯವರ ಕಾವ್ಯ ನವೋದಯ ಕಾವ್ಯದ ಆದರ್ಶಗಳಿಂದ ಸ್ಫೂರ್ತವಾದದ್ದು. ಮುಖ್ಯವಾಗಿ ಅದು ಸಂಸ್ಕೃತಿನಿಷ್ಠವಾದದ್ದು ಎನ್ನಬಹುದು. ವ್ಯಕ್ತಿನಿಷ್ಠ ಅನುಭವ, ನಿಸರ್ಗಪ್ರೀತಿ, ಧ್ಯೇಯವಾದಿತ್ವ, ಆದರ್ಶದ ಹಂಬಲ, ಕನಸುಗಾರಿಕೆ, ಸೌಂದರ್ಯನಿಷ್ಠತೆ ಇವೇ ಮೊದಲಾದ ಗುಣಗಳಿಂದ ಕೂಡಿರುವಂಥದು. ೧೯೫೦ ರ ಮುಂಬಯಿ ಸಾಹಿತ್ಯ ಸಮ್ಮೇಳನದಲ್ಲಿ ಗೋಕಾಕರು ಕನ್ನಡ ಕಾವ್ಯ ನವ್ಯತೆಯತ್ತ ಸಾಗುವ ದಿಶೆಯನ್ನು ಸೂಚಿಸಿದರು. ಅದೇ ಸುಮಾರಿಗೆ ಅಡಿಗರು ನವ್ಯಕವಿತೆ ರಚಿಸಿ ಅದರ ಸ್ವರೂಪವನ್ನು ತಮ್ಮ ರೀತಿಯಲ್ಲಿ ವಿವರಿಸಿದರು. ಸಮಕಾಲೀನ ಸಂದರ್ಭ ಸನ್ನಿವೇಶಕ್ಕೆ ಅನುಗುಣವಾಗಿ ಚೆನ್ನವೀರ ಕಣವಿಯವರೂ ೧೯೫೦ರ ದಶಕದಲ್ಲಿ ನವೋದಯದಿಂದ ನವ್ಯತೆಯತ್ತ ಸಾಗಿದ್ದನ್ನು ನಾವು ಕಾಣುತ್ತೇವೆ. ಸಾಂಸ್ಕೃತಿಕ ಆಯಾಮದಲ್ಲಿ, ಪರಂಪರೆಯಲ್ಲಿ ನಿಷ್ಠೆಯನ್ನು ಕಳೆದುಕೊಳ್ಳದ ಅಭಿರುಚಿ ಮತ್ತು ಸಂಯಮಶೀಲವಾದ ಪರಿಭಾವನೆಯಿಂದ ಅವರು ನವ್ಯತೆಯನ್ನು ಸ್ವೀಕರಿಸಿರುವರು. ಕವಿಯಾದವನಿಗೆ ಇರಬೇಕಾದ ಸಮಕಾಲೀನ ಪ್ರಜ್ಞೆ ಮತ್ತು ಕಾಳಜಿ, ವೈಯಕ್ತಿಕ ಅನುಭವದ ಶೋಧನೆ, ಭಾಷೆಯೊಂದಿಗಿನ ಹೋರಾಟ, ಪ್ರಾಮಾಣಿಕವಾದ ಅಭಿವ್ಯಕ್ತಿ, ಸ್ವತಂತ್ರ ಅನುಭವದ ಪ್ರಯೋಗಶೀಲತೆ, ಪರಂಪರಾಗತ ಶೈಲಿಯಿಂದ ಮುಕ್ತವಾಗಿ ಬರೆಯುವ ಪ್ರಯತ್ನ, ಹೊಸ ಮೌಲ್ಯಗಳ ಹುಡುಕಾಟ ಇವೇ ಮೊದಲಾದ ಅಂಶಗಳನ್ನು ಕಣವಿಯವರು ಸವಾಲಾಗಿ ಸ್ವೀಕರಿಸಿದರು. ಕಣವಿಯವರನ್ನು ಸಮನ್ವಯ ಕವಿಗಳೆಂದು ಕೆಲವರು ಹೇಳುತ್ತ ಬಂದುದು ಸಂಪೂರ್ಣ ಸರಿಯಲ್ಲ. ಯಾಕೆಂದರೆ ಕಣವಿಯವರು ಸಮಕಾಲೀನ ಕಾವ್ಯಧೋರಣೆಗಳನ್ನು ಮುಕ್ತ ಮನಸ್ಸಿನಿಂದ ಸ್ವೀಕರಿಸುತ್ತ, ಸ್ಪಂದಿಸುತ್ತ ತಮ್ಮ ಸಾಂಸ್ಕೃತಿಕ ಎತ್ತರವನ್ನು ಉಳಿಸಿಕೊಂಡು ಬಂದವರು. ಮಾನವತಾವಾದಿಯಾಗಿ ಎಲ್ಲ ತಿರುವುಗಳಲ್ಲಿ ಸಮರ್ಥವಾಗಿಯೇ ಕಾವ್ಯವನ್ನು ಸೃಷ್ಟಿಸುತ್ತ ಬಂದವರು.

ಕಣವಿಯವರ ನವ್ಯ ಕವಿತೆಗಳ ವಿಶಿಷ್ಟತೆಯನ್ನು ವಿವೇಚಿಸಬಹುದಾಗಿದೆ. 'ದೀಪಧಾರಿ' (೧೯೫೬) ಬದಲಾದ ಕಾವ್ಯ ಸಂದರ್ಭವನ್ನು ಸೂಚಿಸುತ್ತದೆ. ಈ ಸಂಕಲನದಲ್ಲಿ ನವೋದಯದ ಭಾವಗೀತಗಳಿರುವಂತೆ ನವ್ಯದ ಪ್ರಯೋಗಗಳೂ ಇವೆ. ಒಂದು

ಧೋರಣೆಯಿಂದ ಇನ್ನೊಂದು ಧೋರಣೆಗೆ ಹೊರಳುವಾಗ ಕಾವ್ಯ ಸಂಕ್ರಮಣಾವಸ್ಥೆಯನ್ನೂ ಅನುಭವಿಸುತ್ತದೆ. ಯಾವುದೇ ಬದಲಾವಣೆ ದಿಢೀರನೇ ಸಂಭವಿಸುವುದಿಲ್ಲ. ಸಂಕ್ರಮಣಾವಸ್ಥೆ ದಾಟಿದ ಮೇಲೆ ಹೊಸತನ ಗಟ್ಟಿಯಾಗಿ ನಿಲ್ಲುತ್ತದೆ. ವಸ್ತುಸ್ಥಿತಿ ಹೀಗಿದ್ದರೂ ಸತ್ಪರಂಪರೆಯ ಕೊಂಡಿಯನ್ನು ಕಳಚಿಕೊಂಡರೆ ಬದುಕು ಮುಂದುವರಿಯುವುದಿಲ್ಲ. ಪರಂಪರೆಯ ನೆಲೆಗಟ್ಟಿನ ಮೇಲೆ ಹೊಸ ಪ್ರಯೋಗದ ಕಟ್ಟಡಗಳು ನಿಲ್ಲಬೇಕಾಗುತ್ತದೆ. ಕಣವಿಯವರು ಹಾಗೆಯೇ ಪರಿವರ್ತನಗೊಂಡದ್ದು. ಅವರ ನವ್ಯಕವಿತೆಗಳಲ್ಲಿ ಒಂದಾದ ಸಂಜೆಯ ಚಿತ್ರಣದಲ್ಲಿಯ ಹೊಸತನ್ನು ಇಲ್ಲಿ ಕಾಣಬಹುದು.

ಉರಿದುರಿದು ಹಗಲು
ಆರಿಹೋಗಿಹ ಕೆಂಡವಾಯ್ತು ಮುಗಿಲು.
ನೇಸರನಿಗೂ ಬೇಸರಾಗುವದು ಸಹಜ
ನಿಜ............
ರಜೆಯೆ ಸಿಗದಿರಲು ಅವನಿಗೆಲ್ಲಿಯದು ಮಜ ?
ಅಂತೆಯೇ
ಅವನೆಂದಿನಂತೆಯೇ
ಕರಿಯ ಮೋಡದ ಬರಿಯ ಕಂಬಳಿಯ ಮುಖಕೆಳೆದು
ಹೊತ್ತೊಂಟೆ ಮಲಗಿದನು ಗಪ್ಪುಗಡದು.

(ವಿರಹಿ : ಸಂಜೆ – ದೀಪಧಾರಿ)

ಇದೇ ಕವಿತೆಯ ಕೊನೆಯಲ್ಲಿ 'ಸೇದಿ ಬೀಸಾಡಿರುವ ಸಿಗರೇಟು ತುಂಡಿನೊಲು ದೂರದಲಿ ಕಾಣಿಸಿತು ಮಂಕು ಚಿಕ್ಕೆ' ಎನ್ನುವಲ್ಲಿ ನವ್ಯಕಾವ್ಯದ ಭಾಷಿಕ ಹಾಗೂ ಪ್ರತೀಕಾತ್ಮಕ ಬದಲಾವಣೆಯನ್ನು ಗುರುತಿಸಬಹುದು. 'ಮಧ್ಯಾಹ್ನದ ಮಜಲು'. 'ಸೊಳ್ಳೆ' ಮೊದಲಾದವುಗಳಲ್ಲಿಯೂ ಈ ರೀತಿಯ ಹೊಸತನವಿದೆ. ಕಣವಿಯವರ 'ಕಲಾತೀತ' ಬಹುಚರ್ಚಿತವಾದ ಕವಿತೆಯಾಗಿದ್ದು ಅದು ಅವಲೋಕನಾರ್ಹವಾಗಿದೆ.

ಬಿಡುವಿಲ್ಲ: ಅರ್ಜಂಟು ! ಟಾರುಬೀದಿಯ ತುಡಿತ.
ಕಾರು ಮೋಟಾರು ಸೈಕಲ್ಲು ಟಾಂಗಾ ಟ್ರಕ್ಕು
ಉಸಿರು ಕಟ್ಟುವ ತೆರದಿ ಬಟ್ಟೆಯಲಿ ಹಾಸು-ಹೊಕ್ಕು.

ಗಡಿಯಾರದೆಡೆಬಿಡದ ಟಿಕ್ಕು ಟಿಕ್ಕಿನ ಬಡಿತ !
ಆಫೀಸು ಶಾಲೆ ಕಾಲೇಜು ಅಂಗಡಿ ಬ್ಯಾಂಕು
ಎಳೆಯುತಿಹವಯಸ್ಕಾಂತದೊಲು ಜೀವಾಣುಗಳ
ಮೂಗುದಾರವ ಜಗ್ಗಿ: ನೂರುಗಾಲಿಯ ಕೀಲ
ಸವೆದು ಕಿರುಗುಟ್ಟುತಿವೆ: ನರನಿಗೆ ಜಯಪರಾಕು !
ಬೀದಿಯಂಚಿನ ಕಾಲುದಾರಿಯಲಿ ದನಗಾಹಿ
ಮಹಿಷವಾಹನನಾಗಿ ಕೊಳಲೂದಿ ಸಾಗಿಹನು
ನೋಡಿದಿರ ? ನೋಡದಿದ್ದರು ಸರಿಯೆ. ಅವನೇನು
ಮಂತ್ರಿಯೆ ? ಯಾವುದಾದರು ಸಭೆಯ ಮನಮೋಹಿ
ಗಾರುಡಿಯೆ ? ಅವನಲ್ಲ ಬಿಡಿ; ಆದರೆನ್ನಾಣೆ
ಅಂಥ ಮನಸಿನ ಶಾಂತಿ ಯಾರಿಗಿಹುದೋ ಕಾಣೆ.

(ಕಾಲಾತೀತ – ದೀಪಧಾರಿ)

ನಗರ ಜೀವನದ ಯಾಂತ್ರಿಕತೆಯನ್ನು ಅರ್ಥಪೂರ್ಣವಾಗಿ ಧ್ವನಿಸುವ ಈ ಕವಿತೆಯಲ್ಲಿ ದನಗಾಹಿಯೊಬ್ಬ ಬೀದಿಯಂಚಿನ ಕಾಲುದಾರಿಯಲ್ಲಿ ಮಹಿಷ ವಾಹನವಾಗಿ ಕೊಳಲೂದಿ ಸಾಗಿರುವ ದೃಶ್ಯ ಯಾವ ಅಚ್ಚರಿಯನ್ನುಂಟು ಮಾಡದಿದ್ದರೂ ಗ್ರಾಮೀಣ ಬದುಕಿನ ನಿರಾಳತೆ, ಶಾಂತಿ ಕವಿಗೆ ಪ್ರಿಯವಾದದ್ದನ್ನು ನಾವು ಕಾಣುತ್ತೇವೆ. ಕವಿ ನಗರದ ಅಶಾಂತ ಬದುಕಿನಿಂದ ಪ್ರಶಾಂತ ಗ್ರಾಮೀಣ ಪರಿಸರದತ್ತ ನಮ್ಮ ಗಮನವನ್ನು ಸೆಳೆಯುತ್ತಾರೆ. ಹಾಗೆ ನೋಡಿದರೆ ಕಣವಿಯವರೂ ಗ್ರಾಮೀಣ ಜೀವನದಿಂದಲೇ ನಗರದತ್ತ ಪಯಣಿಸಿ ಬಂದವರು ಎಂಬುದೂ ಇಲ್ಲಿ ಗಮನಾರ್ಹ. ಆದ್ದರಿಂದಲೇ ಈ ಗಡಿಬಿಡಿ ಗಲಾಟೆಯಿಂದ ದೂರವಾಗಿ ನಿಲ್ಲುವ ತವಕ ಆಧುನಿಕ ಮನಸ್ಸಿನ ಸ್ಥಿತಿಯೂ ಆಗಿದೆ.

ಆಧುನಿಕ ಜೀವನದಲ್ಲಿ ಕಾಣುವ ದ್ವಂದ್ವ ವ್ಯಕ್ತಿತ್ವವನ್ನು ಕಣವಿಯವರು 'ದ್ವಂದ್ವ' ಕವಿತೆಯಲ್ಲಿ ವ್ಯಕ್ತಪಡಿಸಿದ್ದಾರೆ. 'ಪಡುಗಡಲು' ಕವಿತೆಯಲ್ಲಿ ಕಡಲು ಮತ್ತು ಮುಗಿಲುಗಳು ಅನಂತತೆಯ ಪ್ರತೀಕಗಳಾಗಿದ್ದು ಅನಂತತೆಯನ್ನು ಹೀರಲು ನಿಂತ ಅವುಗಳ ರಹಸ್ಯವನ್ನು ಭೇದಿಸಲು ಕವಿ ಪ್ರಯತ್ನಿಸಿದ್ದಾರೆ. ಇದರಲ್ಲಿ ಬರುವ 'ಮೊನ್ನೆ ಮೊನ್ನೆ ಯುದ್ಧವಾಯ್ತು ಮನುಕುಲದುದ್ಧಾರಕೆ' ಎಂಬ ಸಾಲಿನ ವ್ಯಂಗ್ಯ ತೀವ್ರವಾದದ್ದು.

'ದೀಪಧಾರಿ'ಯಂಥ ವಾತ್ಸಲ್ಯಭಾವದ ಕವಿತೆಗಳನ್ನು ಈ ಸಂದರ್ಭದಲ್ಲಿ ಉಳಿಸಿಕೊಂಡದ್ದು ವಿಶಿಷ್ಟವಾಗಿದೆ.

ಹಗಲು ಸತತೋದ್ಯೋಗಿ, ಇರುಳು ಕಿಂದರಿ ಜೋಗಿ
ನಿದ್ದೆ ಎಲ್ಲೋ ಯಕ್ಷಲೋಕ ಸಂಚಾರಿ,
ಇವನೆಳೆಯ ಕಂಗಳಲಿ ಹೊಳೆವ ತಿಂಗಳ ಬೆಳಕು
ದಿನದ ದಾರಿಯೊಳೆಮಗೆ ದೀಪಧಾರಿ.

(ದೀಪಧಾರಿ – ದೀಪಧಾರಿ)

ಕಾವ್ಯದಲ್ಲಿ ಮಣ್ಣಿನವಾಸನೆ ಹೊಡೆಯಬೇಕೆಂಬ ನವ್ಯಕಾವ್ಯದ ಉದ್ದೇಶದಂತೆ ಕಣವಿಯವರ ಕಾವ್ಯದಲ್ಲೂ ಇಂಥ ಅಭಿವ್ಯಕ್ತಿಯನ್ನು ನಾವು ಗುರುತಿಸಬಹುದು.

ಕಣವಿಯವರ 'ಮಣ್ಣಿನ ಮೆರವಣಿಗೆ' (೧೯೬೦) ಅವರ ಕಾವ್ಯದ ದಾರಿ ಬದಲಾದ ಬಗೆಯನ್ನು ಸ್ಪಷ್ಟವಾಗಿ ಹೇಳುತ್ತದೆ. ಕಾವ್ಯದಲ್ಲಿ ನವ್ಯತೆಯ ಆವಿಷ್ಕಾರ ಕಣವಿಯವರು ಅಭಿವ್ಯಕ್ತಿಯಲ್ಲಿ ಸಾಧಿಸಿದ ಹೊಸತನ ಎನ್ನಬಹುದು.

ತಿರುಗುತ್ತಿದೆ, ಎಂದೋ ಸಿಡಿದಾರಿದ
ಅಗ್ನಿಯ ಪಿಂಡ,
ಆರಿದೆಯೆಂದವರಾರೊ, ಇನ್ನೂ ನಿಗಿನಿಗಿ ಉರಿಯುತ್ತಿದೆ
ಅದರೆದೆಯಾಳದ ಕುಂಡ !
ಹರಿಯುತ್ತಿವೆ ಬೆಂಕಿಯ ಹೊಳೆ
ತಣ್ಣನೆ ಕಡಲೊಳಗೆ;
ಹೊಗೆಯಾಡುತ್ತಿದೆ ಸುಮ್ಮನೆ ನುಣ್ಣನೆ ಬಾನೊಳಗೆ.
ಬಿದ್ದಿವೆ
ಒಡಮುರಿದೆದ್ದಿವೆ ಗಿರಿ ಗಹ್ವರ
ಯುಗ ಯುಗಗಳ ನೋವೆ !

(ಮಣ್ಣಿನ ಮೆರವಣಿಗೆ – ಮಣ್ಣಿನ ಮೆರವಣಿಗೆ)

ಎರಡು ಮಹಾಯುದ್ಧದ ನಂತರ ಆವರಿಸಿದ ಬದುಕಿನ ಬಗೆಗಿನ ನೋವು. ನಿರಾಶೆ, ಮಾನವಕುಲದ ಸಂಕಟ. ಯಾತನೆಗಳು ದೂರವಾಗದ ಸ್ಥಿತಿಯಲ್ಲಿ

ಕವಿ ಎಚ್ಚರದಿಂದ ಅದನ್ನು ಕಾವ್ಯಾಭಿವ್ಯಕ್ತಿಗೊಳಿಸಿದ್ದು ಮುಖ್ಯವಾದ ಅಂಶ. ವಾಸ್ತವ ಬದುಕಿಗೆ ಸ್ಪಂದಿಸುವ ಕಣವಿಯವರ 'ಯುಗಾದಿ' ಕವಿತೆಯ ಸಾಲುಗಳಿವು :

ಕರೆಯದಿದ್ದರು ನಾವು ನೀನು ಬಂದೇ ಬರುವಿ
ಅಲ್ಲವೇ ? ಬಾ ಮತ್ತೆ ಬಾ ಯುಗಾದಿ;
ಎಂಥ ಬಿಸಿಲೊಳು ಬಂದೆ !
ಬೇಕೆ ಬಾಯಾರಿಕೆಗೆ ಬೇವುಬೆಲ್ಲ ?
ಚಹಕೆ ಸಕ್ಕರೆಯಿಲ್ಲ: ನಡೆದೀತೆ ಬರಿಯ ತಣ್ಣೀರ ಗುಟುಕು ?
ಇದು ಹೋದ ವರುಷವೆ ಕೊಂಡ ಬಾಳದ ಬೇರ ಬೀಸಣಿಕೆ
ನೀರು ಚಿಮುಕಿಸಿದೆ; ತಣ್ಣಗೆ ಬೀಸಿಕೊ
ಇಲ್ಲೆ ಪಾಟಿಯ ಕಲ್ಲ ಮೇಲೆ ಹಾಸಿದೆ, ಸ್ವಲ್ಪ ಅಡ್ಡಾಗಿ ಏಳು.
ಆಮೇಲೆ ಮಾತಾಡೋಣ. ಕುಳಿತು ಹಾಯಾಗಿ
ಒಂದು ಯುಗವಾಗಿ ಹೋಯಿತಲ್ಲವೆ ನಾವು ಭೆಟ್ಟಿಯಾಗಿ !

(ಯುಗಾದಿ–ಮಣ್ಣಿನ ಮೆರವಣಿಗೆ)

ಯುಗಾದಿಯ ವೈಭವೀಕರಣಕ್ಕಿಂತ ವಾಸ್ತವ ಜೀವನದ ದಾರುಣತೆಯನ್ನು ಎತ್ತಿ ಹೇಳುವ ಕವಿ ಸಮಕಾಲೀನತೆಗೆ ಸ್ಪಂದಿಸುತ್ತಿದ್ದಾರೆ. ಬದುಕಿನ ನೈರಾಶ್ಯದಲ್ಲೂ 'ನಾಳಿನ ನವೋದಯ' ಕಾಣುವ ಕವಿಯ ಆಶಾವಾದವೂ ಇಲ್ಲಿದೆ.

ಆತ್ಮಾಭಿಮಾನವನ್ನು ಕಳೆದುಕೊಂಡು ಅಧಿಕಾರಶಾಹಿಗೆ ತಮ್ಮನ್ನು ಮಾರಿಕೊಳ್ಳುವ ಜನರು ಏನು ಬೇಕಾದರೂ ಮಾಡುವುದನ್ನು ಕಣವಿಯವರು 'ಲಾಗ' ಕವಿತೆಯಲ್ಲಿ ಪ್ರಕಟಿಸಿದ್ದಾರೆ.

ಲಾಗ ಹೊಡೆಯಲೊ ಮಂಗ. ಲಾಗ ಹೊಡೆಯಲೊ ಮಂಗ
ಬಗ್ಗಿ ದಣಿಯರ ಮುಂದೆ ಲಾಗ ಹೊಡೆಯೊ;
ಹಾಕು ಅಂತರ್ಲಾಂಗ, ಹಾಕು ಜಂತರ್ಲಾಗ–
ನೆರೆದ ಮಹನೀಯರಿಗೆ ಶರಣು ಹೊಡೆಯೊ

(ಲಾಗ-ಮಣ್ಣಿನ ಮೆರವಣಿಗೆ)

ಸ್ವಾರ್ಥ ಸಾಧನೆಗಾಗಿ ರಾಜಕಾರಣಿಗಳ ಕಾಲಿಗೆ ಬೀಳುವ ಜನರನ್ನು ಬಯಲಿಗೆಳೆದು ವಿಡಂಬಿಸುವ ರೀತಿ ಪ್ರಸ್ತುತ ಸಂದರ್ಭವನ್ನು ವಿದಿತಪಡಿಸುತ್ತದೆ. ಅಪ್ಪಟ

ನವ್ಯಕಾವ್ಯವಾದ ಕಣವಿಯವರ 'ಮಣ್ಣಿನ ಮೆರವಣಿಗೆ'ಗೆ ಗೌರೀಶ ಕಾಯ್ಕಿಣಿಯವರು ಮುನ್ನುಡಿಯ ಮಶಾಲು ಹಿಡಿದಿದ್ದಾರೆ.

ಕಣವಿಯವರ 'ನೆಲಮುಗಿಲು' (೧೯೬೫) ಹೊಸಕಾವ್ಯದಲ್ಲಿ ಕವಿಯ ಪ್ರಯೋಗಶೀಲತೆಯ ಯಶಸ್ಸನ್ನು ಪ್ರಕಟಿಸಿದೆ. ಮುನ್ನುಡಿಯಲ್ಲಿ ಬೇಂದ್ರೆಯವರು ಗುರುತಿಸಿದ ಹಾಗೆ 'ನೆಲಮುಗಿಲು' ಸಂಗ್ರಹವು ಕವಿಯ ಹಳೆಯ ಗುಣಗಳ ಜತೆಗೆ ಹೊಸ ಬೆಡಗನ್ನೂ ಮೈಗೂಡಿಸಿಕೊಂಡಿದೆ. ಸದ್ಭಾವದ ಶ್ರದ್ಧೆಯು ಇಲ್ಲಿ ಗಟ್ಟಿ ಕಾಳಾಗಿದೆ. ಕಣವಿಯವರ ಕವನ ಹತ್ತುಕಡೆ ಹರಿದುಕೊಳ್ಳದೆ. ಸರ್ವಸಮಯುಗಳ ಸಮನ್ವಯ ಒಳಗೊಳ್ಳಲು ತವಕಪಡುತ್ತದೆ. ಅದು ಅದರ ಛಂದ. 'ಮೃತ್ಯುಂಜಯ'ರಿಗೆ ಪುಷ್ಪಾಂಜಲಿ ಅರ್ಪಿಸಿದ ಕೈಗಳು ಪಾಂಡಿಚೇರಿಯ ಸಮಾಧಿಗೂ ಮುಗಿದುಕೊಳ್ಳುತ್ತವೆ.' 'ರಂಜನಾ' ಕವಿ ಬದುಕಿನಲ್ಲಿ ತಂದ ಹರ್ಷೋಲ್ಲಾಸದ ಹಾಡಾಗಿ ಹರಿದಿದೆ. ಕಣವಿ ಕುಟುಂಬವತ್ಸಲರು ಎಂಬುದು ಗಮನಿಸುವ ಅಂಶ.

ರಂಜನಾ
ಕುಹೂ ಕುಹೂ ಕೂಜನ
ವಾತ್ಸಲ್ಯದ ಕೇತನ
ಇಲ್ಲಿಬಾ, ಹೆಜ್ಜೆಗಳ ಕುಣಿಸಿ ತೋರಿಸು ಜಾಣೆ
ನೋಡೋಣ, ಕಾರಂಜಿ ಬೃಂದಾವನ ।

(ರಂಜನಾ–ನೆಲಮುಗಿಲು)

ಕಣವಿಯವರ ಕಾವ್ಯದ ಮುಖ್ಯವಾದ ಅಂಶ ಹೃದ್ಯವಾದ ವರ್ಣನಾಗುಣ. ಪ್ರಕೃತಿಯ ವ್ಯಾಪಾರವನ್ನು, ತಾನು ಕಂಡ ವ್ಯಕ್ತಿ, ವಸ್ತು ವಿಷಯುಗಳನ್ನು ಬಗೆಬಗೆಯಾಗಿ ವರ್ಣಿಸುವ ಕೌಶಲ್ಯ ಇಲ್ಲಿ ಎದ್ದು ಕಾಣುತ್ತದೆ. 'ಧಾರವಾಡದಲ್ಲಿ ಮಳೆಗಾಲ', 'ಮೊದಲ ಮಳೆ', 'ಚಿಗುರಿತು ಈ ಹುಲುಗಲ' ಮುಂತಾದ ಕವಿತೆಗಳು ಇದಕ್ಕೆ ನಿದರ್ಶನಗಳಾಗಿವೆ. ಕಣವಿಯವರು ತೆರೆದ ಮನಸ್ಸಿನ ಕವಿಯಾದುದರಿಂದ ಸಾಹಿತ್ಯದಲ್ಲಿ ಬರುವ ಎಲ್ಲ ವಿಚಾರಧಾರೆಗಳನ್ನು ವಿವೇಚನೆಯಿಂದ ತನ್ನದಾಗಿಸಿಕೊಳ್ಳುತ್ತ ಸಾಗಿದವರು. 'ಭಾವಕೇಂದ್ರ'ದಲ್ಲಿ ಕವಿ ಹೇಳುತ್ತಾರೆ :

ನೂರು ಹೂಗಳ ತಂಪು ತೇಲುತಿದೆ ಗಾಳಿಯಲಿ
ಹೀರಿಕೊ; ಅಲ್ಲಿ ಇದ ಮಳೆಯ ನೀರು

ಇಲ್ಲಿ ಬಾವಿಗೆ ಸೋಸಿ ಬಂದಿಹುದು ಸೇದಿಕೊ;
ಕಾಣುವದೆ ಈ ಗಿಡ್ಡದ ಬುಡದ ಬೇರು ?

(ಭಾವಕೇಂದ್ರ–ನೆಲಮುಗಿಲು)

ಮನಸ್ಸಿನ ಸಂಕುಚಿತತೆಯನ್ನು ಹರಿದೊಗೆದು ಬದುಕಿನ ಚೆಲುವನ್ನು ಸವಿಯುವ, ಕವಿಮನಸ್ಸಿನ ವೈಶಾಲ್ಯವನ್ನು ನಾವು ಕಾಣುತ್ತೇವೆ. ಕಣವಿಯವರ 'ಕಾಲ ನಿಲ್ಲುವದಿಲ್ಲ' ಒಂದು ಮಹತ್ವದ ಕವಿತೆ. ಕಾಲದ ಚಲನಗುಣ ಮತ್ತು ಅದರ ವ್ಯಾಪ್ತಿಯು ವಿವಿಧ ಮುಖಗಳು ಮೊದಲ ಭಾಗದಲ್ಲಿ ವರ್ಣಿತವಾದರೆ ಎರಡನೆಯ ಭಾಗದಲ್ಲಿ ಕಾಲವನ್ನು ಏಕೆ ಹಿಡಿಯಲಾಗುವದಿಲ್ಲವೆಂಬುದನ್ನು ಮಾರ್ಮಿಕವಾಗಿ ಪ್ರಕಟಪಡಿಸಲಾಗಿದೆ.

ಕಾಲ ನಿಲ್ಲುವದಿಲ್ಲ; ನಾವು ಕೂಡುವುದಿಲ್ಲ.
ಮಳೆಬಂದರೂ ಕಾಮನ ಬಿಲ್ಲು ಮೂಡುವದೆಂಬ ನಿಯಮವಿಲ್ಲ.
ಹಗಲಿರುಳ ಗಾಲಿಯಲಿ ಸೋಲು-ಗೆಲುವಿನ ಕೀಲು ಭದ್ರ.
ಪಂದ್ಯಾಟದಲ್ಲಿ ಯಾರೂ ಹೆಸರು ಕೊಡಬಹುದು.
ನಿಂತವರಿಗೂ ಉಂಟು ನೋಡಿ ಸಂತಸಪಡುವ ಭಾಗ್ಯ.
ಗೆದ್ದವರಿಗಿದ್ದೆಯಿದೆ ಬೆಳ್ಳಿಯ ಥಾಲು,
ಸೋತವರ ಸೊತ್ತು
ಗೆದ್ದವರನಳೆವ ಜಗದೆಲ್ಲ ಅನುಭವದ ಪಾಲು.

(ಕಾಲ ನಿಲ್ಲುವದಿಲ್ಲ–ನೆಲಮುಗಿಲು)

ಕಾಲದಂಥ ಅಮೂರ್ತ ವಿಷಯವನ್ನು ಅಭಿವ್ಯಕ್ತಗೊಳಿಸುವಾಗ ಕಣವಿಯವರು ವ್ಯಂಜಕ ಗುಣದಿಂದ ತಾತ್ವಿಕ ಚಿಂತನೆ ನಡೆಸುವುದರ ಜೊತೆಗೆ ಬದುಕಿನ ದ್ವಂದ್ವಗಳನ್ನು ವಿವಿಧ ರೀತಿಯಲ್ಲಿ ಒರೆಗೆ ಹಚ್ಚುತ್ತಾರೆ. ಕಾಲದೊಂದಿಗೆ ಮನುಷ್ಯ ಸೆಣಸಲು ಸಾಧ್ಯವಿಲ್ಲ ಎಂಬ ಸತ್ಯವನ್ನೂ ಹೇಳುವ ಕವಿ ಮಾನವ-ಅಮಾನವ ಲೋಕಗಳ ನಡುವಿನ ಚಿಂತನೆಯನ್ನೂ ವ್ಯಕ್ತಪಡಿಸಿದ್ದಾರೆ. 'ನೆಹರೂ ಶ್ರದ್ಧಾಂಜಲಿ', 'ಭಾರತ ಸುಪುತ್ರನ ಕೊನೆಯ ಬಯಕೆ' ಕವಿತೆಗಳಲ್ಲಿ ಕಣವಿಯವರ ರಾಷ್ಟ್ರಪ್ರಜ್ಞೆಯ ಮಿಡಿತವನ್ನು ನಾವು ಕಾಣುತ್ತೇವೆ. 'ನೆಹರು ನಿವೃತ್ತರಾಗುವದಿಲ್ಲ' ಎಂದು ನವ್ಯ ಕವಿ ಅಡಿಗರು ಬರೆದ ಪದ್ಯದ ನಿಲುವಿಗಿಂತ ಕಣವಿಯವರ ಆಶಯು ಬೇರೆ ದಾರಿ ತುಳಿಯುವದನ್ನು ನಾವು ಕಾಣುತ್ತೇವೆ.

ಕಣವಿಯವರ 'ಎರಡು ದಡ' (೧೯೬೯) ಕವಿತಾ ಸಂಗ್ರಹದಲ್ಲಿ ಜೀವನದ ಸಂಕೀರ್ಣ ಅನುಭವದ ಚಿತ್ರಣವಿದೆ. ಕವಿಯ ಆಂತರಂಗಿಕ ಮತ್ತು ಬಾಹ್ಯ ವ್ಯಕ್ತಿತ್ವದ ಸ್ಪಂದನವೂ 'ಎರಡು ದಡ'ದ ಕವಿತೆಗಳಲ್ಲಿದೆ. 'ಹೊಸ ವರುಷದ ಸ್ವಾ(ಸ್ವ)ಗತ ಭಾಷಣ'ದಲ್ಲಿ ವಿಶ್ವಾವಸುವನ್ನು ಬರಮಾಡಿಕೊಂಡು ಮಾನವ ಬದುಕಿನ ಸುಖ-ದುಃಖಗಳನ್ನು ನಿವೇದಿಸುವಲ್ಲಿ ಒಂದು ಹೊಸತನವಿದೆ.

ದಿನವೂ ನಮಗೆ ಶಿವರಾತ್ರಿ
ಪ್ರತಿಯೊಂದು ಹಗಲಿರುಳ ಸಂಧಿಕಾಲವೂ ನಮಗೆ ಸಂಕ್ರಾಂತಿ.
ಎತ್ತರದ ಬಾನಿನಲಿ ಬಿಳಿಯ ಕುಸುರೆಳ್ಳುಗಳ ಹರವಿ
ಆಶೆ ತೋರಿಸಬೇಡ
ಕೊಡುವದಾದರೆ ನೆಲದ ಉಡಿತುಂಬ ಕೊಡು
ಹೊಡೆಯೆತ್ತಿ ನಿಲ್ಲಲಿ ಬದುಕು.
ಉಂಡು ಉಪವಾಸಿಗಳು ನಾವು
ಬಳಸಿದ ಬ್ರಹ್ಮಚಾರಿಗಳು;
ಸರ್ವಧರ್ಮ ಸಹಿಷ್ಣುತೆಯ ಜಗಜ್ಜಾಹೀರುಗೊಳಿಸಿ
ಜಾತಿ ಕೂಪಕೆ ಮತ್ತೆ ಜಾರಿಕೊಂಡವರು;
ಗಾಳಿ ಬೀಸಿದ ಹಾಗೆ ತೂರಿಕೊಂಡವರು.

(ಹೊಸ ವರುಷದ ಸ್ವಾ(ಸ್ವ)ಗತ ಭಾಷಣ—ಎರಡು ದಡ)

ಬದುಕಿನ ದ್ವಂದ್ವಗಳನ್ನೂ, ವಾಸ್ತವತೆಯ ನಿಜಸ್ವರೂಪವನ್ನೂ ಅನುಭವ ತೀವ್ರಗೊಳ್ಳುವಂತೆ ಕಣವಿಯವರು ಅಭಿವ್ಯಕ್ತಿಸಿದ್ದಾರೆ. 'ವಿನೂತನ ಕವಿಯ ಕೈಫಿಯತ್ತು'ದಲ್ಲಿ ಹೊಸಕಾವ್ಯದ ಅತಿರೇಕವನ್ನು ತೀವ್ರವಾಗಿ ವಿಡಂಬಿಸಿದ್ದಾರೆ.

ಭಾವಕೋಶದ ಮಾತೇಕೆ ?
ಅದಕೆ ಟಾಚಣಿ ಚುಚ್ಚಿ ಪಿನ್‌ಕುಶನ್ ಮಾಡಿ
ಎದೆಯ ಮೇಜಿನ ಮೂಲೆಯಲ್ಲಿ
ಇಟ್ಟಿದ್ದೇವೆ.
ನಿನ್ನ ಸುತ್ತಲೂ ಒಂದೇ ನಮೂನೆಯು. ಅದೇ
ಮಿಣು ಮಿಣುಕು ಚಿಕ್ಕೆಗಳ ಥಕ್ಕಥೈ
ವಿವಿಧ ಪ್ರತಿಮೆಗಳ ಬಾವುಟವನೆತ್ತಿ ಹಿಡಿದಿದೆ
ರಂಗುರಂಗಿನ ನಮ್ಮ ಬುಶ್ ಕೋಟು ತೊಟ್ಟ ಮೈ

(ವಿನೂತನ ಕವಿಯ ಕೈಫಿಯತ್ತು—ಎರಡು ದಡ)

ಕಣವಿಯವರ 'ನಂಬಿಕೆ' ಕವಿತೆ ವಿಶಿಷ್ಟ ಸಂವೇದನೆಯನ್ನು ಪ್ರಕಟಿಸುತ್ತದೆ. ನಂಬಿಕೆ ಎನ್ನುವುದು ಅಮೂರ್ತವಾದದ್ದಾದರೂ. ಅದು ಮಾನವ ಜೀವನವನ್ನು ವ್ಯಾಪಿಸಿಕೊಂಡಿರುವಂತಹದು. ಅನಂತವೆಂದರೂ ಆಕಾಶಕೊಂದು ಆಕೃತಿಯಿರುವ ಹಾಗೆ ನಂಬಿಕೆ ಬದುಕಿನೊಡನೆ ಬೆರೆತಿರುವಂತಹದು. ಅದರ ಗಾಢವಾದ ಚಿಂತನೆ. ಸಂಕೀರ್ಣಾನುಭವ. ಸ್ವಾನುಭೂತಿಯನ್ನು ಕವಿ ವಿಶಿಷ್ಟವಾದ ರೀತಿಯಲ್ಲಿ ಅಭಿವ್ಯಕ್ತಿಸಿದ್ದಾರೆ.

ನನ್ನ ನಂಬಿಕೆಯೊಂದು ಆಕಾಶ
ನಿಜ, ಅದಕೆ ತಲೆ ಬುಡವಿಲ್ಲ. ನಾನೆಷ್ಟು ಬೆಳೆದರೂ
ನನಗೆ ನಿಲುಕುವದಿಲ್ಲ, ದೂರದಿಂದಲ್ಲದೆ ನಾನದನು
ಮುಟ್ಟಿ ಅನುಭವಿಸಿಲ್ಲ. ಮೇಲೆ ನೋಡದೆ ಸೆಟೆದುಕೊಂಡೇ
ನಡೆದರೂ ಅದು ಸದಾ ನನ್ನ ತಲೆಯ ಮೇಲೆ.
ಹಗಲು ಹೊತ್ತಿನಲಿ ಅದರೆಡೆಗೆ ಲಕ್ಷ್ಯವಿಲ್ಲ. ನಮ್ಮ ಬದುಕಿನಲಿ
ನಾವು ಮಗ್ನರಾದರೆ ಸಾಕು. ಅದಕೆ ಚಿಂತೆಯಿಲ್ಲ.
ರಾತ್ರಿ ವಿದ್ಯುದ್ದೀಪ ಕೈಕೊಟ್ಟು. ಮಿಣಿ ಮಿಣಿ ಮೇಣ
ಬತ್ತಿಯ ಹಕ್ಕಿ ಅಂಜಿ ಆಕಳಿಸುತ್ತ ಕುಳಿತಾಗಲೂ
ಆಕಾಶದಲ್ಲಿ ಹೊಳೆವ ನಕ್ಷತ್ರಕ್ಕೆ ಲೆಕ್ಕವಿಲ್ಲ.

(ನಂಬಿಕೆ–ಎರಡು ದಡ)

ಇಲ್ಲಿ ಬರುವ ಹೊಸ ಅರಿವು. ಮೇಣಬತ್ತಿ ಹಾಗು ಪ್ರತಿಮೆಗಳ ವೈವಿಧ್ಯ ಕಣವಿ ಕಾವ್ಯಸಿದ್ಧಿಯ ಅಪೂರ್ವ ನಿದರ್ಶನವಾಗಿದೆ. 'ಎರಡು ದಡ' ಕವಿತೆಯಲ್ಲಿ ಏಳು ಕೊಳ್ಳದಲಿ ಮಂಜಿನಾಚೆಗೆ ಜಡೆಗಟ್ಟಿ ಕುಳಿತ ಭೂತ' ಸಾಂಕೇತಿಕವಾಗಿ ಭೂತಕಾಲವನ್ನು ಪ್ರತಿಮಿಸುತ್ತದೆ. ಇಲ್ಲಿ ಬರುವ ಪಶ್ಚಿಮದಲ್ಲಿ ಇಳಿದ ಕೆಂಬೆಳಕು ಪೂರ್ವದಲಿ ಹೊಂಬೆಳಕ ತೂರುವದು. ನೆಲ-ಮುಗಿಲು. ಸೋಲು-ಗೆಲುವು ಮೊದಲಾದವು 'ಎರಡು ದಡ' ತುಂಬಿಕೊಂಡು ಕವಿಯ ವಿಚಾರ ಪ್ರವಹಿಸುತ್ತದೆ.

'ಗಾಂಧಿ' ಮೂರ್ತಿಯ ಮುಂದೆ ನಮ್ಮ ಸತ್ವಹೀನತೆಯನ್ನು ಕವಿ ಗುರುತಿಸಿ ಚಿತ್ರಿಸಿರುವದೊಂದು ವಿಶೇಷ.

ಪಾರದರ್ಶಕದಂಥ ನಿನ್ನ ಅಂತಃಕರಣ
ಕಾಡಿಗೆ ಬಳಿದ ಕಾಜಿನಲಿ ಮಾತ್ರ ಕಾಣುವದು
ನಮಗೀಗ ಹಿಡಿದ ಗ್ರಹಣ.
ನೀನಿಂದು ಬದುಕಿದ್ದರೊಂದು ವೇಳೆ
ಗರತಿಯಾಗಬಹುದಿತ್ತೇನೊ ರಾಜಕಾರಣದ ಸೂಳೆ.

(ಗಾಂಧಿ–ಎರಡು ದಡ)

ಕಣವಿಯವರ ಕಾವ್ಯ ವಿಡಂಬನೆಯು ಸ್ಫೋಟ ಮಾಡಿಸುವ ಬಗೆಯನ್ನು ನಾವಿಲ್ಲಿ ಕಾಣುತ್ತೇವೆ. 'ಎರುಡು ದಡ'ದ ಬಲದಂಡೆಯ ಕವಿತೆಗಳು ಕನ್ನಡ ಸಂಸ್ಕೃತಿ ಪರಂಪರೆಯ ದೃಢವಾದ ಶ್ರದ್ಧೆ. ನಂಬಿಕೆಗಳನ್ನು. ಸಾಕಾರಗೊಳಿಸುತ್ತವೆ. 'ವಿಶ್ವಭಾರತಿಗೆ ಕನ್ನಡದಾರತಿ' ಕನ್ನಡ ಸಂಸ್ಕೃತಿ ಪ್ರಜ್ಞೆಯ ರೋಮಾಂಚನವನ್ನುಂಟು ಮಾಡುವ ಹಾಡಾಗಿದೆ. 'ವಿಶ್ವವಿನೂತನ ವಿದ್ಯಾಚೇತನ ಸರ್ವಹೃದಯ ಸಂಸ್ಕಾರಿ' ಎಂದು ಆರಂಭವಾಗುವ ಈ ಕವಿತೆ ಕನ್ನಡನಾಡಿನ ಸಾಂಸ್ಕೃತಿಕ ವೈಭವವನ್ನು ಸಾರುತ್ತದೆ. ಅದರ ಭಾವಸೋಲ್ಲಾಸ, ಅರ್ಥಸಂಪತ್ತು. ಲಯದ ಸೊಬಗಿನಲ್ಲಿ ಕೇಳುಗರನ್ನು ಮಂತ್ರಮುಗ್ಧರನ್ನಾಗಿ ಮಾಡಿವೆ. 'ನೀಲಾಂಬಿಕೆ', 'ಬಸವಣ್ಣನ ಬೆಳಗು', 'ಅಕ್ಕಮಹಾದೇವಿ', ಕವಿತೆಗಳು ಕಣವಿಯವರ ಸಾಂಸ್ಕೃತಿಕ ನಿಷ್ಠೆಯನ್ನು ಪ್ರಕಟಿಸುತ್ತವೆ. 'ಸಂಕ್ರಮಣ' ಗೀತ ಶ್ರವಣಿಕೆ ಮತ್ತು 'ನೆಲದ ಮಕ್ಕಳಿಗೆ ನಲ್ವಾಡು' ರೂಪಕಗಳಲ್ಲಿ ಕಾವ್ಯದ ನಾದಲಹರಿಯನ್ನು ಜನಪದ ಸಂಸ್ಕೃತಿಯ ಮೂಲಕ ಕಾಣುತ್ತೇವೆ.

ಕಣವಿಯವರ 'ನಗರದಲ್ಲಿ ನೆರಳು' (1974) ಸಂಗ್ರಹ ಸಾಮಾಜಿಕ ಬದುಕಿನ ಚಿಂತನೆಯನ್ನು ನಮ್ಮ ಮುಂದಿಡುತ್ತದೆ. ಪರಿಸರ ಪ್ರಜ್ಞೆಯಿಲ್ಲದೆ ಬೆಳೆಯುತ್ತಿರುವ ನಗರಗಳ ದಾರುಣ ಸ್ಥಿತಿಯನ್ನು ಕವಿ 'ನಗರದಲ್ಲಿ ನೆರಳು' ಕವಿತೆಯಲ್ಲಿ ಸ್ಪಷ್ಟವಾಗಿ ವಿಂಡಬಿಸಿದ್ದಾರೆ. 'ಕುಟುಂಬ ಸೌಖ್ಯದ ಆಖ್ಯಾನ' ದಲ್ಲಿ ಜನಸಂಖ್ಯೆ ಹೆಚ್ಚುತ್ತಿರುವುದರ ಚಿಂತನೆಯಿದೆ.

ನಮ್ಮ ಯೋಜನೆಗಳೆಲ್ಲ ಸ್ವಲ್ಪ ನಿದಾನ
ಯೋಚನೆ ಮಾಡುವದಂತೂ ಅದಕ್ಕೂ ನಿದಾನ
ಗಸ್ತಕ್ಕೆ ಜೆಂಕಿ ಹತ್ತಿದ ಮೇಲೆ

ಬಾವಿಯ ತೋಡುವ ಜನ. ಅದಕ್ಕೇ
ಇಂದು ಎಲ್ಲಿ ನೋಡಿದರೂ ಕಣ್ಣು ತಿವಿಯುತಿದೆ
ಕೆಂಪು ತ್ರಿಕೋನ

(ಕುಟುಂಬ ಸೌಖ್ಯದ ಆಖ್ಯಾನ-ನಗರದಲ್ಲಿ ನೆರಳು)

ಕಣವಿಯವರು ಸಮಕಾಲೀನ ಬದುಕಿಗೆ ಸ್ಪಂದಿಸುವ ಅನೇಕ ಕವಿತೆಗಳನ್ನು ರಚಿಸುತ್ತ ಬಂದಿದ್ದಾರೆ. ಭಾರತ ದೇಶದಲ್ಲಿ ಈಗ ಯಾರು ಯಾರಿಗೆ ಹೇಳಬೇಕು ? ಹಾಗೆಯೇ 'ಯಾರು ಕೇಳುತ್ತಾರೆ ಹೇಳಿರಣ್ಣ' ವೈಯಕ್ತಿಕ ಪ್ರತಿಷ್ಠೆ. ಆಡಂಬರದ ಸ್ವಾರ್ಥಗಳಿಂದ ಕೂಡಿದ ದೇಶದ ವ್ಯವಸ್ಥೆ ಹದಗೆಟ್ಟಿರುವದನ್ನು ಕವಿ ಸಮರ್ಥವಾಗಿ ಸೆರೆಹಿಡಿಯುವ ಸಾಲುಗಳಿವು.

ಮೋಜು ಗುದ್ದುತ್ತಾರೆ. ಮೈಕು ಮುರಿಯುತ್ತಾರೆ
ಮಾಲೆ ಬೇಡುತ್ತಾರೆ. ಮೋಜು ಮಾಡುತ್ತಾರೆ
ಯಾರು ಕೇಳುತ್ತಾರೆ ಹೇಳಿರಣ್ಣ.
ಘಂಡು ಎತ್ತುತ್ತಾರೆ, ಎತ್ತಿಹಾಕುತ್ತಾರೆ
ಬಂಡು ಹೂಡುತ್ತಾರೆ, ಬೆಂಡು ಸುಲಿಯುತ್ತಾರೆ
ಯಾರು ಕೇಳುತ್ತಾರೆ ಹೇಳಿರಣ್ಣ.
ಕೈಯ ಮುಗಿಯುತ್ತಾರೆ. ಕಾಲು ಕೆದರುತ್ತಾರೆ
ಬಾಲ ಹಿಡಿಯುತ್ತಾರೆ, ಮೇಲೆ ಏರುತ್ತಾರೆ
ಯಾರು ಕೇಳುತ್ತಾರೆ ಹೇಳಿರಣ್ಣ.

(ಯಾರು ಕೇಳುತ್ತಾರೆ ಹೇಳಿರಣ್ಣ—ನಗರದಲ್ಲಿ ನೆರಳು)

ಹೇಳುವವರು ಕೇಳುವವರು ಇಲ್ಲದ ಈ ದೇಶದಲ್ಲಿ ಏನುಬೇಕಾದರೂ ಆಗಬಹುದು. 'ಪ್ರಾಣಿ ಸಂಗ್ರಹಾಲಯದೊಳಗೆ ತಿರುಗಿ ಸ್ಥಾನವಿಲ್ಲದ್ದಕ್ಕೆ ಮರುಗಿ ಉಳಿದಿದ್ದಾನೆ ಮನುಷ್ಯಪ್ರಾಣಿ' ಎಂದು ಇನ್ನೊಂದು ಕವಿತೆಯಲ್ಲಿ ಕವಿ ವಿಡಂಬಿಸಿದ್ದಾರೆ. 'ಗಡಿ-ಬಿಡಿ ಗೊಂದಲಾಸುರ' ಕವಿತೆಯಲ್ಲಿ ಭಾವೈಕ್ಯವನ್ನು ನಾಶಮಾಡುವ ವ್ಯಕ್ತಿಶಕ್ತಿಗಳ ದೊಂಬರಾಟವನ್ನು ಬಿಸಿತಟ್ಟುವಂತೆ ವಿಡಂಬಿಸಿದ್ದಾರೆ. ಹೀಗೆ 'ನಗರದಲ್ಲಿ ನೆರಳು'ದ ಕವಿತೆಗಳಲ್ಲಿ ಕಣವಿಯವರ ಸಮಕಾಲೀನ ಪ್ರಜ್ಞೆಯ ಸ್ಪಂದನವನ್ನೂ, ವಿಡಂಬನೆಯ ವೈಖರಿಯನ್ನೂ ಕಾಣುತ್ತೇವೆ.

ಕಣವಿಯವರ 'ಜೀವ ಧ್ವನಿ' (೧೯೮೦) ಕವಿಯ ಕಾವ್ಯಧ್ವನಿಯೂ ಆಗಿ ಮನ್ನಣೆ ಗಳಿಸಿದೆ. ಕಣವಿಯವರು ಗ್ರಾಮೀಣ ಬದುಕಿನಿಂದ ಬಂದು ಅದರ ಅನುಭವಗಳನ್ನು ಶಿಷ್ಟ ಭಾಷೆಯಲ್ಲಿ ಪ್ರಕಟಿಸುತ್ತ ಬಂದಿದ್ದಾರೆ. ಗ್ರಾಮ ಜೀವನದ ವಿಕಾಸದಲ್ಲಿ ಆಸ್ಥೆಯಿರುವ ಕವಿಯ ಸದಾಶಯದಲ್ಲಿ ಆ ಸಂಸ್ಕೃತಿಗೆ ವಿಶಿಷ್ಟ ಸ್ಥಾನವಿದೆ. 'ಜೋಳದ ಪಾಳಿ'ಯಲ್ಲಿ ಬಡತನದ ಬವಣೆಗೆ ಕಾರಣವನ್ನು ಸೂಚಿಸುವಲ್ಲಿ ಬಂಡಾಯದ ದನಿಯೂ ಇದೆ.

ಹಂತಿಯ ಹಾಡು ಸೂಸಿ, ಬೀಸುಗಾಳಿಗೆ ಸೋಸಿ
ಕಣ ಕಣದಲ್ಲಿ ರಾಶಿಯಾಗುತ್ತೇನೆ.
ಅದೇ ಚಣವೆ ದನಕರುಗಳಿಗೆ ಹೊಟ್ಟು ಮೇವಿನ ಬಣವೆ
ಹಿಟ್ಟಾಗಿ, ಬಳೆಯ ತಾಳಕ್ಕೆ ಗುಟ್ಟಾಗಿ
ಬಡವರಂಗೈತುಂಬ ರೊಟ್ಟಿಯಾಗಿ,
ಖಾರ, ಉಳ್ಳಾಗಡ್ಡಿ, ಮೊಸರು, ಬದನೆಕಾಯಿ
ಪರಸ್ಪರ ಭೆಟ್ಟಿಯಾಗಿ,
ತುತ್ತು ತುತ್ತಿಗೆ ಶಿವ ಶಿವಾ ಎಂದು
ತುಂಬುತ್ತೇನೆ ಹಸಿದ ಹೊಟ್ಟೆ.

(ಜೋಳದ ಪಾಳಿ–ಜೀವಧ್ವನಿ)

'ಮನುವಿನ ಕೊನೆಯ ಗಳಿಗೆ' ಕವಿತೆಯಲ್ಲಿ ಕವಿ ಬದುಕಿನಲ್ಲಿರುವ ವಿಷಾದದ ಮಧ್ಯದಲ್ಲೂ ತಾಳುವ ಸಮಾಧಾನದ ನಿಲುವು ಅಚ್ಚರಿಯನ್ನುಂಟು ಮಾಡುತ್ತದೆ.

ನೆಲ-ಬಾನುಗಳನ್ನು ಸುತ್ತಿ ಬೀಸುವ
ಎಲ್ಲರ ಉಸಿರಾಗಿರುವ, ಇದ್ದೂ ಇಲ್ಲದ ಹಾಗಿರುವ
ಈ ಗಾಳಿಯಲ್ಲಿ
ಇಂಥ ಎಷ್ಟು ಜೀವಗಳ ಪರಿಮಳ ಬೆರೆತುಹೋಗಿದೆಯೋ–
ನೆಲದ ಮೇಲಿನ ಹೂವು, ಮುಗಿಲಲ್ಲಿಯ ಚಿಕ್ಕೆ
ಅವೇ ಬಾಯಿ ಬಿಟ್ಟು ಹೇಳಬೇಕು.

('ಮನು'ವಿನ ಕೊನೆಯ ಗಳಿಗೆ–ಜೀವಧ್ವನಿ)

ಕಣವಿ ಅವರು ಕನ್ನಡನಾಡು ಒಂದಾಗಬೇಕೆಂದು ಹಂಬಲಿಸಿ ಹಾಡಿದವರು. ಕರ್ನಾಟಕ ಏಕೀಕರಣವಾದ ನಂತರ ಕನ್ನಡಪ್ರಜ್ಞೆಯ ಕಳಕಳಿಯನ್ನು ಸದಾ

ಪ್ರಕಟಿಸುತ್ತ ಬಂದವರು. ಕನ್ನಡದ ಜೀವ ಚೈತನ್ಯದಲ್ಲಿ ಶ್ರದ್ಧೆ ಹೊಂದಿದ ಕಣವಿಯವರು ಬರೆದ 'ಹೆಸರಾಯಿತು ಕರ್ನಾಟಕ' ಕವಿತೆ ಅಷ್ಟೇ ಪ್ರಸಿದ್ಧವಾದುದು.

ಹೆಸರಾಯಿತು ಕರ್ನಾಟಕ
ಉಸಿರಾಗಲಿ ಕನ್ನಡ;
ಹಸಿಗೋಡೆಯ ಹರಳಿನಂತೆ
ಹುಸಿಹೋಗದ ಕನ್ನಡ.

ಹೊಸೆದ ಹಾಗೆ ಹುರಿಗೊಳ್ಳುವ
ಗುರಿತಾಗುವ ಕನ್ನಡ,
ಕುರಿತೋದದ ಪರಿಣತಮತಿ
ಅರಿತವರಿಗೆ ಹೊಂಗೊಡ.

(ಹೆಸರಾಯಿತು ಕರ್ನಾಟಕ–ಜೀವಧ್ವನಿ)

ಹೀಗೆ ಕಣವಿಯವರು ಕನ್ನಡತನದ ಜೀವಧ್ವನಿಯನ್ನು ಪ್ರಕಟಿಸುತ್ತ, ಕಾವ್ಯದ ಮೂಲಕ ಸಹೃದಯ ಸಂವಾದ ಮಾಡುವ ವಿಧಾನವು ಎದ್ದು ಕಾಣುತ್ತದೆ. ಸಾಮಾಜಿಕ ಬದುಕಿನ ಬಗೆಗೆ ಕವಿಗೆ ಕಾಳಜಿ ಇರುವದಾದರೂ ಅದು ಹೆಚ್ಚಾಗಿ ವೈಯಕ್ತಿಕ ವಿಕಾಸದ ನೆಲೆಯಲ್ಲೇ ಕವಿಯ ವಿಚಾರಧಾರೆ ಮುಂದುವರಿಯುವದು ಇಲ್ಲಿಯ ವೈಶಿಷ್ಟ್ಯವಾಗಿದೆ.

ಕಣವಿಯವರ 'ಕಾರ್ತೀಕದ ಮೋಡ'(೧೯೮೬)ದಲ್ಲೂ ಕನ್ನಡ ಪ್ರಜ್ಞೆಯ ಕವಿಯ ವೀರಸಂಕಲ್ಪ ಪ್ರಕಟಗೊಂಡಿದೆ. ಗೋಕಾಕ ಚಳುವಳಿ ಕನ್ನಡ ನಾಡಿನಾದ್ಯಂತ ನಡೆಯುತ್ತಿದ್ದ ಸಂದರ್ಭದಲ್ಲಿ ಧಾರವಾಡದಲ್ಲಿ ಸತ್ಯಾಗ್ರಹ ನಡೆಸಿದ ಕಣವಿಯವರು ಕನ್ನಡಕ್ಕಾಗಿ ಯಾವ ತ್ಯಾಗಕ್ಕೂ ಸಿದ್ಧವಾಗಿದ್ದ ಅಂದಿನ ಜನಮನವನ್ನು 'ಸತ್ಯಾಗ್ರಹ' ಕವಿತೆಯಲ್ಲಿ ಪ್ರತಿಂಬಿಸಿದರು.

ಕನ್ನಡದ ಕನಸುಗಳ ಮೋಡಗಳು ಮೇಲೇರಿ
ಎಂಟು ದಿಕ್ಕಿಗು ಹಾಡು ಭೋರಿಡುತಿವೆ;
ಮುಂಗಾರು ಸಿಡಿಲಾಗಿ, ಮಿಂಚಾಗಿ ಹೊಳೆಯಾಗಿ
'ದುಂದುಭಿ'ಗೆ ವರ್ಷವೇ ಸುರಿಯಲಿಹುದು:
ಹೊಸ ಬದುಕಿನಧ್ಯಾಯ ತೆರೆಯಲಿಹುದು,

ತಾಯ್ನಾಡ ತಾಯ್ನುಡಿಯ ಕೊರಳ ಕೊಯ್ಯುವ ದುರುಳ
ದುಷ್ಟಕೂಟದ ಭ್ರಷ್ಟ ಭಂಡರೆದುರು
ಸತ್ಯಾಗ್ರಹ-ನಮ್ಮ ಸತ್ಯಾಗ್ರಹ
ಸತ್ಯಾಗ್ರಹ-ನಿತ್ಯ ಸತ್ಯಾಗ್ರಹ

(ಸತ್ಯಾಗ್ರಹ–ಕಾರ್ತೀಕದ ಮೋಡ)

ಕನ್ನಡ ನಾಡಿನ ಅನ್ನ, ನೀರು, ಗಾಳಿಯನ್ನುಂಟು ತಾಯ್ನುಡಿಗೆ ದ್ರೋಹ ಬಗೆಯುವ ಭ್ರಷ್ಟ ಜನರ ವಿರುದ್ಧ ಕವಿ ಸಮರ ಸಾರಿದ್ದಾರೆ. ಪರಿಪೂರ್ಣ ಚೆಲುವ ಕನ್ನಡನಾಡು ಆಗುವವರೆಗೆ ನಾವು ಉದಯವಾಗಲಿ ಎಂದೇ ಹಾಡೋಣ ಎಂದಿದ್ದಾರೆ.

ಕನ್ನಡಕ್ಕಾಗಿ ಬರಿಯ ಕೈ ಎತ್ತಿದರೆ ಸಾಕೆ ?
ತೆಗೆದುಕೊಡಬೇಕು ಚೆನ್ನಾಗಿ, ಬುದ್ಧಿ ಭೆಟ್ಟಿಯಾಗುವ ಹಾಗೆ
ದ್ರೋಹಿಗಳಿಗೆ, ಸದಾ ಸಂದೇಹಿಗಳಿಗೆ.
ಆ ಮೇಲೆ ಬರಲಿ ಘೋಷಣೆ : 'ಸಿರಿಗನ್ನಡಂ ಗೆಲ್ಗೆ ಬಾಳ್ಗೆ'
ತಾಯಿಗೆ ದೊರೆತ ಸ್ವಾತಂತ್ರ್ಯದೊಡನೆ
ಮಗುವಿಗೂ ಬೆಳೆಯಬೇಕೆಂಬ ಮನಸು
ಅವಳೆದೆಯ ಚಿನ್ನದ ಪದಕವಾಗಬೇಕೆಂಬ ಕನಸು

(ರಾಜ್ಯೋದಯದ ಬೆಳ್ಳಿ ಹಬ್ಬಕೆ–ಕಾರ್ತೀಕದ ಮೋಡ)

ಕಣವಿಯವರದು ಆರೋಗ್ಯ ಪೂರ್ಣ ಮನಸ್ಸಿನ ಕಾವ್ಯಾಭಿವ್ಯಕ್ತಿಯಾಗಿರುವ ದರಿಂದ ತೆರೆದ ಮನಸ್ಸಿನಿಂದ ಎಲ್ಲವನ್ನೂ ಸ್ವೀಕಾರ ಮಾಡಿ ತಮಗೆ ಬೇಕಾದ ಒಳ್ಳೆಯ ಅಂಶಗಳನ್ನು ಗುರುತಿಸಿ. ಗೌರವಿಸುವ ವಿಶಿಷ್ಟ ಮನೋಧರ್ಮ ಕಂಡುಬರುತ್ತದೆ. ತಲೆಮಾರಿನ ಅಂತರವನ್ನು ಅವರು ಸ್ವೀಕರಿಸುವ ಬಗೆ ಇಲ್ಲಿದೆ :

ಈಗಿನ ಮಕ್ಕಳೇ ಹಾಗೆ–
(ಹೊಸಪೀಳಿಗೆ)
ಕರೆದೊಡನೆ ಅಡಬರಿಸಿ ಬರುವದಿಲ್ಲ,
ಬಂದರೂ ಹೆಗಲೇರಿ ಬಹಳ ಹೊತ್ತಿರುವದಿಲ್ಲ.
ಅವಸರದಲ್ಲಿ ಕೆಳಗಿಳಿದು, ಎದ್ದು ಬಿದ್ದು
ತಮ್ಮ ಕಾಲ ಮೇಲೆ ತಾವೇ ನಿಲ್ಲಬಯಸುತ್ತ

ಹೆಜ್ಜೆ ಹೆಜ್ಜೆಗೂ ಕುತೂಹಲ ಹುಟ್ಟಿಸುತ್ತವೆ
ಆತಂಕ ದಾಟುತ್ತ .
ದೊಡ್ಡವರೆನಿಸಿಕೊಂಡ ನಮ್ಮನ್ನು ದಂಗುಬಡಿಸುತ್ತವೆ.

(ಇಂದಿನ ಮಕ್ಕಳು—ಕಾರ್ತೀಕದ ಮೋಡ)

ಹೊಸಪೀಳಿಗೆಯನ್ನು ಆದರ ಭಾವದಿಂದ ಕಾಣುವ ಮುಕ್ತ ಮನಸ್ಸು ಕಣವಿಯವರದು. ಬದುಕಿನ ಬದಲಾವಣೆಯ ಬಗೆಗೆ ಕವಿಯ ನೋವು ನಿರಾಶೆಗಳಿಗಿಂತ ಸಹನೆ ಮತ್ತು ಗಾಢವಾದ ಜೀವನಪ್ರೀತಿ ಕಣವಿಯವರ ವ್ಯಕ್ತಿತ್ವದ ವಿಶಿಷ್ಟತೆಯಾಗಿದೆ.

'ಜೀನಿಯಾ'(೧೯೮೯)ದಲ್ಲಿ ಕಣವಿಯವರು ಪರಿಸರ ಪ್ರಜ್ಞೆಯ ಜಾಗೃತಿಯ ಅಭಿವ್ಯಕ್ತಿಯಿದೆ. ಸುಂದರ ಪ್ರಕೃತಿಯ ವಿನಾಶವು ಮಾನವ ಕುಲ ತತ್ತರಿಸುವಂತೆ ಮಾಡುವದನ್ನು ಅವರು ಕಾವ್ಯಮುಖದಿಂದ ಪ್ರಕಟಪಡಿಸಿದ್ದಾರೆ :

ಕಾಯಲಾರದೆ ಮನುಷ್ಯ ಕೊಡಲಿಯೆತ್ತುತ್ತಾನೆ
ಮಾಯಲಾರದ ಗಾಯ ಭವಿಷ್ಯಕ್ಕೆ, ಭೂತಕ್ಕೆ ಬಲಿ ?
ಒಂದೊಂದು ಏಟಿಗೂ ಒಂದೆಡೆಗೆ ಭೂಕಂಪ
ಮತ್ತೊಂದೆಡೆಗೆ ಚಂಡಮಾರುತ. ನೂರು ಅಪಘಾತ.
ಕಡಿದ ಟೊಂಗೆಯ ಬದಿಗೆ ಚಿಗುರು ಪಿಳಿಪಿಳಿಕಣ್ಣು,
ಅನುಮಾನಿಸುವ ಮೊಗ್ಗೆ : ಈ ಮನುಷ್ಯನ ಬಗ್ಗೆ
ಎಲ್ಲೆಡೆಗೂ ಸಂಶಯವೆ. ಇದರ ತಣ್ಣೆಲಲ್ಲಿ ಕುಳಿತು
ನಲ್ಲೆಯ ಗಲ್ಲ ಮುಟ್ಟಿ, ಮಗುವ ಮುದ್ದಿಸಿದವನು
ಹೂಹಣ್ಣುಕಾಯಿಗಳ ಪಡೆದು ಗುಡಿಗೆ ಹೋದವನು
ಯಾರು ? ಹೌದು ಇವನೆ, ಈ ಮನುಷ್ಯನೆ.

(ಮನುಷ್ಯ-ಪ್ರಕೃತಿ—ಜೀನಿಯಾ)

ಕವಿ ಭವಿಷ್ಯದ ಚಿಂತಕನಾಗಿ, ಮಾನವಕಲ್ಯಾಣದ ಸದಾಶಯವನ್ನು ಬಯಸುತ್ತ ನಿಸರ್ಗದ ವಿನಾಶದ ವಿರುದ್ಧ ದನಿ ಎತ್ತುತ್ತಲಿರುವದು ಮಹತ್ವದ ಅಂಶವಾಗಿದೆ.

ಹೂವು ಹೊರಳುವವು ಸೂರ್ಯನ ಕಡೆಗೆ
ನಮ್ಮ ದಾರಿ ಬರಿ ಚಂದ್ರನವರೆಗೆ

(ಹೂವು ಹೊರಳುವವು–ಜೀನಿಯಾ)

ಎಂದು ನಮ್ಮ ಮನಸ್ಸನ್ನು ಹೊಸ ಸಂವೇದನೆಯತ್ತ ಕೊಂಡೊಯ್ಯುವ ಕವಿಯ ಕಾವ್ಯಪ್ರಜ್ಞೆ ಅಪರೂಪವಾದದ್ದು.

'ಶಿಶಿರದಲ್ಲಿ ಬಂದ ಸ್ನೇಹಿತ' (೧೯೬೪) ಕವಿಯ ಜೀವನೋಲ್ಲಾಸದ ಪ್ರತೀಕವಾಗಿದೆ. ಸ್ವಾನುಭೂತಿಯನ್ನು ಕಣವಿಯವರು ಮೊದಲಿನಿಂದಲೂ ತಮ್ಮ ಕಾವ್ಯದಲ್ಲಿ ಅಭಿವ್ಯಕ್ತಿಸುತ್ತ ಬಂದಿದ್ದು ಅದು ಪ್ರಸ್ತುತ ಕವಿತಾಸಂಗ್ರಹದಲ್ಲೂ ಕಾಣುತ್ತದೆ. ಜೀವನದ ಶಿಶಿರದಲ್ಲೂ ಬದುಕಿನ ಇತಿಮಿತಿಯನರಿತ ಸಂತೃಪ್ತಿ, ನಿಶ್ಚಿತ ನಿಲುವು, ಚೆಲುವಿನಾವಿಷ್ಕಾರ ಸುಕುಮಾರಲೀಲೆ ಕಾಣುವ ಕವಿಯ ದೃಷ್ಟಿ ಇಲ್ಲಿದೆ :

ಬೆಳಗಿನ ವಿಹಾರದಲಿ ಮೈಕೊರೆವ ಚಳಿ, ಮೂಡಗಾಳಿಯ ಮೊರೆತ
ನಗುನಗುತ ಹಣ್ಣೆಲೆಗಳುದುರಿ ಚದುರುವಾಟ.
ಜೀವನ ಲಯದ ಸ್ವೀಕಾರದಲ್ಲಿದೆ ಸೊಗಸು :

(ಶಿಶಿರದಲ್ಲಿ ಬಂದ ಸ್ನೇಹಿತ–ಶಿಶಿರದಲ್ಲಿ ಬಂದ ಸ್ನೇಹಿತ)

ಜೀವನದ ಲಯದ ಸ್ವೀಕಾರದಲ್ಲೇ ಸೊಗಸನ್ನು ಕಾಣುವ ಕಣವಿ ದೃಷ್ಟಿ ಅವರ ವಿಶಾಲ ಮನಸ್ಸಿನ ಪ್ರತೀಕವೂ ಆಗಿದೆ. ಕಣವಿಯವರು ಯಾವಾಗಲೂ ಮಾನವೀಯ ಅಂತಃಕರಣಗಳನ್ನು ಧ್ವನಿಸುತ್ತ ಬಂದಿದ್ದಾರೆ. ಸಾಮಾಜಿಕ ಪ್ರಜ್ಞೆ ಕಾಳಜಿಗಳು ಅವರ ಕಾವ್ಯದಲ್ಲಿ ನೆಲೆ ಪಡೆದುಕೊಂಡಿವೆ. ಪ್ರಕೃತಿಯ ವರ್ಣನೆ ಅನೇಕ ಸಂದರ್ಭಗಳಲ್ಲಿ ಬದುಕಿನ ವಿವಿಧ ಮಗ್ಗಲುಗಳನ್ನು ಚಿತ್ರಿಸುವುದನ್ನು ಕಾಣಬಹುದು. ಮೈಕೊರೆವ ಚಳಿ, ಮೂಡುಗಾಳಿಯ ಮೊರೆತ, ಹಣ್ಣೆಲೆಗಳುದುರಿ ಚದುರುವಾಟ –ಇವು ಜೀವನದ ಸ್ಥಿತ್ಯಂತರಗಳನ್ನೇ ಸೂಚಿಸುತ್ತಿದ್ದು, ಈ ಬಗೆಯ ಪ್ರತೀಕ ಮತ್ತು ಪ್ರತಿಮೆಗಳಿಗೆ ಹೆಚ್ಚಿನ ಅರ್ಥವಂತಿಕೆ ಮತ್ತು ಧ್ವನಿಶಕ್ತಿ ಇರುವುದನ್ನು ಗಮನಿಸಬೇಕಾಗುತ್ತದೆ.

ಈ ಗುಲ್‌ಮೊಹರ್ ಕಂಡ ಸಲಕೊಮ್ಮೆ ಎಲ್ಲಿಂದ–
ರಲ್ಲಿ ಚೆಲ್ಲಾಡಿರುವ ಮುಗ್ಧಜೀವಿಗಳ ನೆತ್ತರು
ಸಿಡಿದು ಕಣ್ಗೆ ಕತ್ತಲು. ದೇಶದುದ್ದಗಲಕ್ಕು
ಹರಿದು ತಿನ್ನುವ ಹದ್ದುಗಳ ಸದ್ದು ಮೇಲಿಂದ
ಕೆಳತನಕ. ಉಗಮದಲ್ಲಿಯೆ ನದಿಯು ಬತ್ತಿದರೆ
ಹರಿವ ಮಾತೆಲ್ಲಿ ? ಸಂಗಮಕಾವ ಪುರುಷಾರ್ಥ ?
ನಡುವೆ ತೋಡಿದಂತಃಕರಣದೊರತೆ ವ್ಯರ್ಥ–
ವಾಗದ ಹಾಗೆ ಮಾನವೀಯತೆಗಿಲ್ಲ ಮೇರೆ.
ಕೊರಡು ಕೊನರುವದು ಆಳದ ಬೇರಿನೊಲವಿಂದ.
ಮೋಡಗಳ ಮನಸು ಹೇಗೋ : ಓಡುವವು ಬೇಕು
ಬೇಡಗಳ ಗಮನಿಸದೆ; ಮಿಂಚಿ ಬಂದರೆ ಸಾಕು
ಸಾಕೆನಿಸಿ ಕರುಣಾವೃಷ್ಟಿ : ಪ್ರಕೃತಿ ಸ್ವಚ್ಛಂದ.
ಲಯ ತಪ್ಪಿದರೆ ಹಿಂಸೆ, ಆಘಾತ. ಸಮತೋಲ–
ಕ್ಕೆ ಬೇಕು. ತಾಳ್ಮೆ ನಿಗ್ರಹ ಬದುಕಿನಾದ್ಯಂತ.

(ಗುಲ್‌ಮೊಹರ್–ಶಿಶಿರದಲ್ಲಿ ಬಂದ ಸ್ನೇಹಿತ)

ಹೀಗೆ ಕವಿ ಕಣವಿಯವರು ತಾಳ್ಮೆ ನಿಗ್ರಹಕ್ಕೆ ಒತ್ತುಕೊಟ್ಟು ತಮ್ಮ ಕಾವ್ಯವನ್ನು ಮಾನವೀಯ ಪ್ರೀತಿ, ಅಂತಃಕರಣದ ಜೀವಲಹರಿಯಾಗಿಸುತ್ತ ನಡೆದದ್ದು ಮುಖ್ಯವಾದ ಅಂಶವಾಗಿದೆ. ಆದ್ದರಿಂದಲೇ ಅದು ಸಮಕಾಲೀನವೂ ಸಾರ್ವಕಾಲಿಕ ಚಿಂತನ ಮೌಲ್ಯಗಳ ಅಭಿವ್ಯಕ್ತಿಯೂ ಆಗಿ ಮಹತ್ವ ಪಡೆಯುತ್ತದೆ.

ಕಣವಿಯವರ ಕಾವ್ಯಾಸಕ್ತಿ ಅಗಾಧವಾದದ್ದು. ಇಂಗ್ಲೀಷ್, ಬಂಗಾಲಿ, ಉರ್ದು, ಪಂಜಾಬಿ, ಕಾಶ್ಮೀರಿ, ಆಫ್ರಿಕನ್, ಗ್ರೀಕ್, ಅರೇಬಿಕ್ ಹೀಗೆ ಜಗತ್ತಿನ ಬೇರೆ ಬೇರೆ ಭಾಷೆಯ ಕವಿಗಳ ಕವಿತೆಗಳನ್ನು ಅವರು ಕನ್ನಡಕ್ಕೆ ವಿಶೇಷ ಆಸಕ್ತಿಯಿಂದ ಅನುವಾದಿಸಿದ್ದಾರೆ. 'ಕಾವ್ಯಾಕ್ಷಿ'ಯಿಂದ 'ಶಿಶಿರದಲ್ಲಿ ಬಂದ ಸ್ನೇಹಿತ'ದವರೆಗಿನ ಸಂಕಲನಗಳಲ್ಲಿಯ ಕಣವಿ ಕಾವ್ಯಾನುವಾದ ಸ್ವತಂತ್ರ ಕವಿತೆಯಂತೆ ಪ್ರಕಟವಾಗಿದೆ. ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಅನುವಾದ ಮಾಡುವುದು ಅತ್ಯಂತ ಕಠಿಣವಾದ ಕಾರ್ಯ. ಕವಿತೆಯನ್ನು ಅನುವಾದಿಸುವಾಗ ಬೇರೆ ಭಾಷೆಯ ಸೂಕ್ಷ್ಮಗಳನ್ನು ಲಯದ ವೈಶಿಷ್ಟ್ಯವನ್ನು

ಗಮನಿಸಿ ನಮ್ಮ ಭಾಷೆ ಮತ್ತು ಲಯಗಳಿಗೆ ಸಾಂಗತ್ಯಗೊಳಿಸಬೇಕಾಗುತ್ತದೆ. ಪರಕಾಯ ಪ್ರವೇಶ ಮಾಡುವ ಶಕ್ತಿ ಕವಿಗಿಲ್ಲದಿದ್ದರೆ ಅನುವಾದ ಶುಷ್ಕವಾಗುತ್ತದೆ. ಕಣವಿಯವರು ಕನ್ನಡದ ಸತ್ವಕ್ಕೆ ಬೇರೆ ಕವಿತೆಗಳನ್ನು ಬಗ್ಗಿಸುವ ರೀತಿ ಅಸಾಧಾರಣವಾದದ್ದು ಎನಿಸುತ್ತದೆ. ಕಣವಿಯವರು ಮೊದಲು ಅನುವಾದಿಸಿದ್ದು ಶೇಕ್ಸಪಿಯರ್, ರಾಬರ್ಟ ಬರ್ನ್ಸ್ ಹಾಗೂ ರವೀಂದ್ರನಾಥ ಟ್ಯಾಗೋರ ಅವರ ಕವಿತೆಗಳನ್ನು. ನವ್ಯಕಾವ್ಯದ ಸಂದರ್ಭದಲ್ಲಿ ಎಲಿಯಟ್, ಆಡೆನ್ ಮೊದಲಾದ ಪಾಶ್ಚಾತ್ಯ ಕವಿಗಳತ್ತ ನಮ್ಮ ನವ್ಯಕವಿಗಳು ಹೊರಳಿದಾಗ ಕಣವಿ ಅವರು ತಮಗೆ ಪ್ರಿಯವಾದ ಬೇರೆ ಕವಿಗಳ ಕಾವ್ಯವನ್ನು ಕನ್ನಡಕ್ಕೆ ತರುವ ಪ್ರಯತ್ನ ಮಾಡಿದರು. ಇತಿಕಾ ಅಂತೂಲಿ, ಜೊಸೆಫ್ ಮಿಶಾಲಿ. ಡಾನ್ ಮಟೌರಾ, ಮೊದಲಾದ ಆಫ್ರಿಕನ್ ಕವಿಗಳ ಕವಿತೆಗಳನ್ನು ಕನ್ನಡಕ್ಕೆ ತಂದರು. ಅರೇಬಿಕ್, ಕಾಶ್ಮೀರಿ. ತಮಿಳು. ಗುಜರಾತಿ, ಪಂಜಾಬಿ, ಬಂಗಾಲಿ ಹೀಗೆ ಭಾರತೀಯ ಭಾಷೆಯ ಕೆಲವು ಉತ್ಕೃಷ್ಟ ಕವಿಗಳ ಕವಿತೆಗಳೂ ಕಣವಿಯವರ ಮೂಲಕ ಕನ್ನಡ ನೆಲದಲ್ಲಿ ಅರಳುವಂತಾಯಿತು. ಅನುವಾದದ ಸಹಜತೆಗೆ ಒಂದು ಉದಾಹರಣೆಯಾಗಿ ಆಫ್ರಿಕನ್ ಕವಿ ಇತಿಕಾ ಅಂತೂಲಿ ಕವಿತೆಯನ್ನು ನೋಡಬಹುದು.

ದುಃಖದಲ್ಲಿಯೂ ನಾವು ನಗುವುದೇಕೆ ?<br>
ಎಂದು ಅವರು ಸದಾ ಕೇಳುತ್ತಾರೆ.<br>
ಅವರ ಕಪಿಮುಷ್ಟಿಗಳಿಂದ ನಾವು<br>
ಪಾರಾಗುತ್ತೇವೆಂಬ ತುಂಬು ನಂಬಿಕೆ<br>
ನಮಗಿರುವಾಗ<br>
ನಗದಿರುವುದು ಹೇಗೆ ?

(ಅವರು ಸದಾ ಕೇಳುತ್ತಾರೆ—ಶಿಶಿರದಲ್ಲಿ ಬಂದ ಸ್ನೇಹಿತ)

ದಕ್ಷಿಣ ಆಫ್ರಿಕಾದ ಕಪ್ಪು ಜನರ ನೋವು ದುಃಖದುಮ್ಮಾನಗಳನ್ನು. ಸ್ವಾತಂತ್ರ್ಯಕ್ಕಾಗಿ ಅವರು ನಡೆಸಿದ ಹೋರಾಟವನ್ನು ಪ್ರತಿಮಿಸುವ ಈ ಕವಿತೆಗಳು ಕಣವಿಯವರ ಮೂಲಕ ಕನ್ನಡದ ನೆಲವನ್ನು ಸ್ಪರ್ಶಿಸಿವೆ. ನೆತ್ತರಗೆಂಪು ಬಣ್ಣದ ಕವಿತೆ ಬರೆಯಲು ಹೊರಟ ಜನರನ್ನು ಮುಟ್ಟಿ ಬಡಿದೆಬ್ಬಿಸಲು ನಿಂತ ಆಫ್ರಿಕಾದ ಕವಿಗಳ ಕವಿತೆಗಳ ರೀತಿ ಒಂದು ವಿಧವಾದರೆ ಜೆಕ್ ಕವಿತೆಗಳ ಸೊಗಸು ಇನ್ನೊಂದು ವಿಧವಾಗಿದೆ. ಹೀಗೆಯೇ ಕಣವಿಯವರು ಮಾಡಿದ ಭಾರತೀಯ ಭಾಷೆಗಳ ಕಾವ್ಯಾನುವಾದದಲ್ಲಿ ಸಾಮಾಜಿಕ ಸ್ಪಂದನಕ್ಕೆ

ಹೆಚ್ಚು ಒತ್ತು ಇರುವುದನ್ನು ಕಾಣುತ್ತೇವೆ. ನಿಸರ್ಗದ ವಸ್ತುವೂ ಇದೆ. ಈ ಎಲ್ಲ ಕವಿಗಳ ದೇಶ, ಭಾಷೆ, ಸಂಸ್ಕೃತಿ ಬೇರೆ ಬೇರೆಯಾಗಿದ್ದರೂ ಅವರ ಭಾವ ಚಿಂತನೆಗಳು ಕನ್ನಡದ ನೆಲದಲ್ಲಿ ಮೂಡಿಬರುವಂತೆ ಮಾಡುವಲ್ಲಿ ಕಣವಿಯವರ ಕಾವ್ಯಾನುವಾದ ಯಶಸ್ವಿಯಾಗಿದೆ ಎನ್ನಬಹುದು.

ಕಣವಿಯವರು ಮಕ್ಕಳಿಗಾಗಿಯೂ ಕವಿತೆಗಳನ್ನು ಬರೆದಿದ್ದಾರೆ. ಅವರ 'ಹಕ್ಕಿಪುಚ್ಚ' (೧೯೮೫) ಕನ್ನಡದ ಮಕ್ಕಳ ಮನಸ್ಸನ್ನು ಸೂರೆಗೊಂಡಿದೆ. ನವೋದಯ ಹಾಗೂ ನವ್ಯ ಮಾರ್ಗದಲ್ಲಿ ಉತ್ಕೃಷ್ಟ ಕವಿತೆಗಳನ್ನು ರಚಿಸಿದ ಕಣವಿಯವರು ಮಕ್ಕಳ ಮನಸ್ಸಿನ ಹಂತಕ್ಕಿಳಿದು ಅವರಿಗೆ ಪ್ರಿಯವಾದ ಕವಿತೆ ರಚಿಸುವುದು ಗಮನಾರ್ಹ ಸಂಗತಿಯಾಗಿದೆ. ಮಕ್ಕಳಲ್ಲಿ ಬೆರಗನ್ನು ಮೂಡಿಸುವ 'ಮಿಂಚು ಹುಳು', 'ಬಿದಿಗೆಯ ಚಂದಿರ', 'ಮಿಯಾಂವ್ ಮಿಯಾಂವ್ ಬೆಕ್ಕಣ್ಣ', 'ಅಮೆ', 'ಕಪ್ಪೆ' ಮೊದಲಾದವುಗಳ ಆಕರ್ಷಣೆ ಅಪರೂಪವಾದದ್ದು. 'ದುಡಿಮೆ' ಕವಿತೆ ಮೊದಲು ಕೆಲವು ದೃಷ್ಟಾಂತಗಳನ್ನು ಮಕ್ಕಳ ಕಣ್ಣ ಮುಂದಿಡುವುದರಿಂದ ಕೊನೆಯ ಸಾಲುಗಳಲ್ಲಿಯ ನೀತಿ ಸಹಜವಾಗಿ ಒಡಮೂಡುತ್ತದೆ.

ಎಲ್ಲರು ತಮ್ಮಯ ಕೆಲಸವ ತಾವೇ
ಮಾಡಲು ದೇಶವು ಬೆಳೆಯುವದು;
ದುಡಿದರೆ ಮಾತ್ರವೆ ದೊಡ್ಡವನಾಗುವೆ
ಸ್ವಾತಂತ್ರ್ಯದ ಸವಿ ತಿಳಿಯುವದು.

(ದುಡಿಮೆ – ಹಕ್ಕೀಪುಚ್ಚ)

ಸ್ವಾವಲಂಬಿಗಳಾಗಬೇಕೆಂಬ ಸಂದೇಶವನ್ನು ಮಕ್ಕಳಲ್ಲಿ ಮೂಡಿಸುವ ಆಶಯ ಇಲ್ಲಿದೆ. ಮಕ್ಕಳಿಗೆ ರಚಿಸುವ ಕವಿತೆಗಳಲ್ಲಿ ಕಣವಿಯವರ ಭಾವ ಭಾಷೆಗಳೂ ರೋಚಕವಾಗಿವೆ. ಹಕ್ಕೀಪುಚ್ಚದಲ್ಲಿ ಬರುವ ಪ್ರಾಸ ವೈವಿಧ್ಯ ಕುತೂಹಲಕಾರಿ ಹಾಗೂ ಅಷ್ಟೇ ಮೋಹಕವಾದದ್ದು.

ಮಿರಿಮಿರಿ ಮಿಂಚುವ ಹಕ್ಕೀಪುಚ್ಚ
ಗಿರಿಗಿರಿ ತಿರುಗಿದೆ ನೋಡಣ್ಣ,
ಹಣ್ಣಿನ ತೋಟದ ಬೇಲಿಯ ಹೊರಗೆ
ಸಿಕ್ಕಿತು ನನಗೀ ಗರಿಯಣ್ಣ

(ಹಕ್ಕೀಪುಚ್ಚ – ಹಕ್ಕೀಪುಚ್ಚ)

ಕಣವಿಯವರ ಕಾವ್ಯಾಭಿವ್ಯಕ್ತಿಯ ಸ್ವರೂಪದ ಬಗೆಗೂ ಚಿಂತನೆ ನಡೆಸುವದು ಅವಶ್ಯಕವಾಗಿದೆ. ಕಣವಿ ಅವರು ನಿಸರ್ಗದ ವಸ್ತುವ್ಯಾಪಾರವನ್ನು ಕೌತುಕ ಭಾವದಿಂದ ಅವಲೋಕಿಸುತ್ತ ಪ್ರಕೃತಿ ಪ್ರತಿಮೆಗಳನ್ನು ಸಂದರ್ಭೋಚಿತವಾಗಿ ಕಾವ್ಯದಲ್ಲಿ ಸಾಕಾರಗೊಳಿಸಿದರು. ಮೋಡದ ಪ್ರತಿಮೆಗಳಲ್ಲಿ ಕವಿಗಿರುವ ಆಸಕ್ತಿ ಅನೇಕ ಕವಿತೆಗಳಲ್ಲಿ ಎದ್ದು ಕಾಣುತ್ತದೆ.

ಬಾನ ಬೀದಿಗೆ ಜೋಲಿ ಹೊಡೆದು ಉರುಳಿವೆ ಮೋಡ
ಪಡುವಣದ ಪಡಖಾನೆಯಿಂದ ತೂರಿ,
ಬೇಕು ಬೇಕಾದತ್ತ ಹೊರಳಿ ಅಸ್ತವ್ಯಸ್ತ
ಸುಸ್ತಾಗಿ ಬಿದ್ದಿಹವು ನೆರಳು ಕಾರಿ.

(ಮಧ್ಯಾಹ್ನದ ಮಜಲು – ದೀಪಧಾರಿ)

ಮಧ್ಯಾಹ್ನದ ಮಜಲಿನಲ್ಲಿ ಸೂರ್ಯನು ನೆತ್ತಿಗೇರಿದಾಗ ಉರಿಬಿಸಿಲಿನಲ್ಲಿ ಮತ್ತೇರಿದ ಮೋಡಗಳು ಸುಸ್ತಾಗಿ ಅಸ್ತವ್ಯಸ್ತವಾಗಿ ನೆರಳು ಕಾರಿ ಬಿದ್ದ ಬಗೆಯನ್ನು ನವ್ಯ ಪ್ರತಿಮೆಯ ಮೂಲಕ ಕಣವಿಯವರು ಶಕ್ತಿಶಾಲಿಯಾಗಿ ಬಳಸಿಕೊಂಡಿದ್ದಾರೆ. ಇನ್ನೊಂದು ಸಂದರ್ಭದಲ್ಲಿ ಮೋಡ ಯಾತ್ರೆಗೆ ಹೊರಟಂತೆ ಕವಿ ವರ್ಣಿಸುತ್ತಾರೆ.

ನೋಡು, ಮೋಡದ ಬಸ್ಸು, ಭರಭರ ತುಂಬಿಕೊಂಡೇ ಸಾಗಿವೆ.
ಯಾವ ಗಿರಿ ಶಿಖರದಲಿ ಜಾತ್ರೆಯೊ, ಏಳುಕೊಳ್ಳಕೆ ಬಾಗಿವೆ.
ದೂರ ದೇಶದ ಯಾತ್ರಿಕರು ತಾ ಬೇರೆ ದೇಶಕೆ ಬಂದರು,
ಕಂಡ ಗುಡಿ ಗೋಪುರಕೆ ಕೈ ಮುಗಿಯುತ್ತ ಅಲ್ಲಿಯೆ ನಿಂದರು.

(ಧಾರವಾಡದಲ್ಲಿ ಮಳೆಗಾಲ – ನೆಲಮುಗಿಲು)

ಕಣವಿಯವರು ಬಳಸುವ ಪ್ರತಿಮೆಗಳಲ್ಲಿ ಸಾಕಷ್ಟು ವೈವಿಧ್ಯವಿರುವದನ್ನು ಗುರುತಿಸಬಹುದು.

ಬಾಡಿಗೆಯ ಚಕ್ಕಡಿಗೆ ಎಣ್ಣೆ ಇಲ್ಲದ ಕೀಲ
ಎಳೆಯಲಾರದ ಎತ್ತು ಎಳೆಯುತ್ತಿದೆ.

(ಮಧ್ಯಾಹ್ನದ ಮಜಲು – ದೀಪಧಾರಿ)

ಏರಿ ಗಗನಕೆ ಹಾರಿ ತೂರಿ ಬಿನ್ನಾಣದಲಿ
ಬಗೆಬಗೆಯ ಲಾಗ ಹಾಕಿ
ಗೂಡಿಗಿಳಿವುದು ಪಾರಿವಾಳ ನೆಟ್ಟಗೆ ಬಂದು
ಬಾನಿನಲಿ ಸಂಜೆಯಾಗಿ

(ಇವನಿಂದಲೇ ನಮಗೆ ಬೈಗು ಬೆಳಗು–ದೀಪಧಾರಿ)

ಕುಸಿಯ ತೊಡಗಿದೆ ಕೆಳಗೆ ನೆಲೆಗಟ್ಟು, ಮೇಲೆ ಬಿದ್ದಿದೆ ಭಾರ ನೀಗದಷ್ಟು;
ಎಷ್ಟು ಮಣ್ಣನು ಹಾಕಿ ಮೆತ್ತಿದರು ಪ್ರತಿವರ್ಷ ಇದರ ಹಾಡೇ ಇಷ್ಟು-
ಮಾಳಿಗೆಯ ಮೇಲೆ ಇರುವೆಗಳ ಸಾಲುದುರ್ಗ–
ಜಂತಿಯಲಿ ಇಲಿಗಳೋಡಾಡಿ ದಿನವೂ ಬುಟ್ಟಿ ಬುಟ್ಟಿ ಮಣ್ಣುದುರಿ
ಎಲ್ಲಿ ನೋಡಿದರಲ್ಲಿ ಸುರಂಗ ಮಾರ್ಗ.

(ಮಣ್ಣಿನ ಮೆರವಣಿಗೆ–ಮಣ್ಣಿನ ಮೆರವಣಿಗೆ)

ಕಣವಿಯವರು ಬಳಸುವ ಪ್ರಾಸ, ಅನುಪ್ರಾಸ, ನಾದಲಯ ವೈವಿಧ್ಯದ ಮೂಲಕ ಕಾವ್ಯದ ಧ್ವನಿಶಕ್ತಿಯನ್ನು ಅಧಿಕಗೊಳಿಸುವ ನೂರಾರು ಉದಾಹರಣೆಗಳನ್ನು ನೀಡಬಹುದು. ಕಣವಿ ಕವಿತೆಯ ಭಾವಪ್ರವಾಹ ಮೋಹಕವಾದದ್ದು.

ಹರಿಹರಿದು ಸುರಿಸುರಿದು ಮೊರೆಮೊರೆದು ಕರೆಕರೆದು
ತ್ವರಿತದಿಂದೊಡ್ಡನೊಡ್ಡಿ ಜಲಸಂಗ್ರಹಿಪೆನೆಂಬಿಚ್ಛೆ

(ಈ ಘಟಪ್ರವಾಹ–ಕಾವ್ಯಾಕ್ಷಿ)

ಜಾಜಿ, ಮಲ್ಲಿಗೆ ಬಕುಳ ಸಂಪಿಗೆಯ ಹೂಗಾಳಿ
ಬಾನ ಬೆಳದಿಂಗಳಿನ ಗಂಧಲೇಪ:
ನೂರು ಸ್ನೇಹದ ಒಲುಮೆ ಚಿಲುಮೆ ಪುಟಿಯುವ ರಂಗ
ಏಕಾಂತಕಿದು ಮತ್ತೆ ನಿಸ್ತರಂಗ

(ಮನೆ-ಕಿಟಕಿ–ದೀಪಧಾರಿ)

ಸುವ್ವಿಬಾ ಚೆನ್ನಯ್ಯ ಸುವ್ವಿಬಾ ಲಿಂಗಯ್ಯ
ಸುವ್ವಿ ಬಾ ಎನ್ನುತ್ತ ಸಾರುವಯ್ಯ
ಇರುಳಿನಲಿ ಕಂದೀಲ ಬೆಳಕಿನಲಿ ಬರುವಂತೆ
ಬಾಲ್ಯದನುಭವ ಮರಳಿ ಕರೆವುದಯ್ಯ

(ಭಾವಜೀವಿ)

ಕಣವಿಯವರು ಸಾಮಾಜಿಕ ಪ್ರಜ್ಞೆಯ ಮಿಡಿತವನ್ನು ತಮ್ಮ ಕಾವ್ಯದಲ್ಲಿ ಆರಂಭದಿಂದಲೂ ಪ್ರಕಟಿಸುವ ಮೂಲಕ ತಮ್ಮ ಮಾನವೀಯ ಜೀವಸ್ಪಂದನವನ್ನು ವ್ಯಕ್ತಪಡಿಸುತ್ತ ಬಂದುದು ಮುಖ್ಯವಾದ ಅಂಶ. 'ಭಾವಜೀವಿ'ಯಲ್ಲಿಯ ಈ ನುಡಿಯನ್ನು ಗಮನಿಸಿ :

> ಕೆರವು ಹೊಲಿಯುವ ದೀನ ದಲಿತ ಮಾದರ ದುರುಗ
> 'ಮುಟ್ಟ ಬೇಡಿರಿ ತಂದೆ' –ಎಂಬ ನುಡಿಗೆ,
> ನನ್ನೆದೆಯ ಕಸವಿಸಿಯ ಹೇಳತೀರದು ಆಗ
> ಬಾಲಕರಿಗೆಲ್ಲಿಯದು ಮಡಿಮೈಲಿಗೆ ?

(ಭಾವಜೀವಿ)

ಕಣವಿಯವರು ಸರ್ವರಿಗೆ ಸಮಪಾಲು ಸರ್ವರಿಗೆ ಸಮಬಾಳು ಬೇಕೆಂಬ ವಾದವನ್ನು ಒಪ್ಪುತ್ತಾರಲ್ಲದೆ ಜೀವಧ್ವನಿಯ 'ಜೋಳದ ಪಾಳಿ'ಯಲ್ಲಿ 'ನನ್ನ ಮುಚ್ಚಿಟ್ಟು ಮುಗ್ಗು ನಾರಿಸಬೇಡಿ ಎಲ್ಲರಿಗೂ ಹಂಚಿ, ಅಡ್ಡ ಬರಬೇಡಿ', ಎಂದು ಕರೆ ನೀಡುತ್ತಾರೆ. ಅದೇ ರೀತಿಯಲ್ಲಿ ಪ್ರತಿಭಟನೆಯ ಧ್ವನಿ ಕಣವಿಯವರ ಕಾವ್ಯದಲ್ಲಿ ಒಡೆದು ಕಾಣದಿದ್ದರೂ ವಾಸ್ತವವನ್ನು ಅರಿತು ನಡೆಯಲು ಅವರು ಸ್ಪಂದಿಸುವದನ್ನು ಕಾಣಬಹುದು : ಇದಕ್ಕೊಂದು ನಿದರ್ಶನ ಇಲ್ಲಿದೆ.

> ಸಾವಿರದ ಸತ್ಯ ಸೌಂದರ್ಯದ ಮಹಾಮಸ್ತಕಕ್ಕೆ
> ಸಾವಿರದೆಂಟು ಕಲಶಗಳ ತುಂಬಿ ತುಂಬಿ
> ಹಾಲು ಸುರಿದಾಗ
> ಒಂದು ಹನಿಯೂ ಚೆಲ್ಲದಂತೆ ಬಯಲ ಬೊಗಸೆಯಲಿ ಹಿಡಿದು
> ದೂರದೂರದ ಕಪ್ಪು ಮಕ್ಕಳನೆಲ್ಲ ಕರೆದು
> ಬೆಳ್ಳಗೆ ಕುಡಿಸಿದಂತೆ

(ಕನಸಿನ ಗೊಮ್ಮಟ–ಕಾರ್ತೀಕದ ಮೋಡ)

ಕಣವಿಯವರು ಎಂತಹ ಪ್ರಸಂಗದಲ್ಲಾದರೂ ಕಾವ್ಯವನ್ನು ಬರಿ ಘೋಷಣೆಯಾಗುವಂತೆ ಮಾಡದೆ ಭಾವ ಭಾಷೆಗಳ ಸಂವಹನಕ್ಕೆ, ಅರ್ಥಪೂರ್ಣ ಪ್ರಯೋಗಶೀಲತೆಗೆ ಬಳಸುತ್ತ ಬಂದುದು ಎದ್ದು ಕಾಣುವ ಅಂಶವಾಗಿದೆ.

# ಕಣವಿ ಅವರ ಸುನೀತಗಳು

ಹೊಸಗನ್ನಡ ಕಾವ್ಯ ಪರಂಪರೆಯಲ್ಲಿ ಸುನೀತಗಳನ್ನು ನಿರಂತರವಾಗಿ ರಚಿಸುತ್ತ ಬಂದ ಚೆನ್ನವೀರ ಕಣವಿ ಅವರು ಸುನೀತವು ತಮಗೆ ಅತ್ಯಂತ ಪ್ರಿಯವಾದ ಕಾವ್ಯ ಪ್ರಕಾರವಾಗಿದ್ದು ಅವುಗಳ ಕೆತ್ತನೆಯ ಕೆಲಸದಲ್ಲಿ ಸಂತೋಷಪಟ್ಟಿರುವುದಾಗಿ 'ಎರಡುದಡ'ದ ಮುನ್ನುಡಿಯಲ್ಲಿ ಹೇಳಿದ್ದಾರೆ. ಮಿತವಾದ ಚೌಕಟ್ಟಿನಲ್ಲಿ ಹಿತವಾದ ಚಿತ್ರಕಶಕ್ತಿಯಿಂದ ಭಾವ-ವಿಚಾರಗಳು ಸಮ್ಮಿಲನಗೊಂಡು ತನ್ನ ಕಲೆಗಾರಿಕೆಯನ್ನು ಮೆರೆಯುವ ಈ ರೂಪ ಕಣವಿಯವರ ಮನಸನ್ನು ಸೂರೆಗೊಂಡಿದೆ. ಕನ್ನಡ ನವೋದಯ ಕಾವ್ಯದ ಪ್ರಮುಖ ಕಾವ್ಯ ಪ್ರಕಾರವಾದ ಸುನೀತಗಳನ್ನು ಹಿರಿಯ ಕವಿಗಳಾದ ಗೋವಿಂದ ಪೈ, ಮಾಸ್ತಿ, ಬೇಂದ್ರೆ, ಕುವೆಂಪು, ಪು. ತಿ. ನ., ಗೋಕಾಕ ಮೊದಲಾದವರು ರಚಿಸಿದ್ದು ಅದು ಆಧುನಿಕ ಕನ್ನಡ ಕಾವ್ಯದಲ್ಲೂ ಬೆಳೆದು ಬಂದಿದೆ. ಸಾನೆಟ್ಟು ಅಥವಾ ಸುನೀತದ ರಚನೆ ಮತ್ತು ಕಣವಿಯವರ ಮೂಲಸಂವೇದನೆಯಲ್ಲಿ ನಿಕಟವಾದ ಸಂಬಂಧವಿದೆಯೆಂದು ಅದು ಭಾವನೆ ಮತ್ತು ಚಿಂತನಾಂಶಗಳ ಸಮತೋಲನವೆಂದೂ ಶಾಂತಿನಾಥ ದೇಸಾಯಿ ಅವರು ಹೇಳಿದ್ದಾರೆ. ಚೆನ್ನವೀರ ಕಣವಿ ಅವರಿಗೆ ಇರುವ ಕನ್ನಡ ಕವಿ ಕಾವ್ಯ ಪರಂಪರೆಯ ಬಗೆಗಿನ ಚಾರಿತ್ರಿಕ ಪ್ರಜ್ಞೆ ಮತ್ತು ಸಾಂಸ್ಕೃತಿಕ ಧೋರಣೆಗಳ ಫಲಸ್ವರೂಪವಾದ ಸುನೀತಗಳ ಪರಂಪರೆಯನ್ನು ಅವರು ಸಮೃದ್ಧವಾಗಿ ಬೆಳೆಸಿದ್ದು ಎದ್ದುಕಾಣುವ ಅಂಶವಾಗಿದೆ. ಅವ್ಯಾಹತವಾಗಿ ಹರಿದು ಬಂದ ಕಣವಿ ಅವರ ಸುನೀತಗಳು ಈ ಪರಂಪರೆಯಲ್ಲಿ ವಿಶೇಷ ಮಹತ್ವ ಪಡೆಯುತ್ತವೆ. 'ಕಾವ್ಯಾಕ್ಷಿ'ಯಿಂದ 'ಶಿಶಿರದಲ್ಲಿ ಬಂದ ಸ್ನೇಹಿತ'ದವರೆಗಿನ ಕಣವಿ ಅವರ ಸಮಗ್ರ ಕಾವ್ಯದಲ್ಲಿ ಪ್ರಕಟಗೊಂಡ ಸುನೀತಗಳನ್ನು ಪರಿಶೀಲಿಸಿದಾಗ ಸುನೀತದ ಎಲ್ಲ ಶಿಲ್ಪಸೌಷ್ಠವದಲ್ಲಿ ಕಣವಿ ಅವರ ಕಾವ್ಯಪ್ರತಿಭೆ ಅನನ್ಯವಾದ ಕಾರ್ಯ ಮಾಡಿರುವದನ್ನು ಕಾಣಬಹುದು.

ಕಣವಿಯವರ ನೂರಾರು ಸುನೀತಗಳಲ್ಲಿ ವ್ಯಕ್ತಿಚಿತ್ರಗಳೊಂದಿಗೆ ಪ್ರಕೃತಿಯ ವೈಭವವೂ, ತಾತ್ವಿಕ ವಿಷಯಗಳೂ, ರಾಜಕೀಯ ಸಾಮಾಜಿಕ ಸಂಗತಿಗಳೂ ಆಕಾರ ಪಡೆದಿವೆ. ಕವಿಯ ಕಾವ್ಯಸಂವೇದನೆಯ ಆಳ ವಿಸ್ತಾರಗಳು ಅವರ ಸುನೀತಗಳಲ್ಲಿ ಅಂತಸ್ಥವಾಗಿವೆ. ನವೋದಯ ಮತ್ತು ನವ್ಯಕಾವ್ಯ ಪರಂಪರೆಯ ವಿಚಾರಧಾರೆ ಅಂತಸ್ಥವಾಗಿದೆ. ನವೋದಯ ಮತ್ತು ನವ್ಯಕಾವ್ಯ ಪರಂಪರೆಯ ವಿಚಾರಧಾರೆಯನ್ನು ತನ್ನದಾಗಿಸಿಕೊಂಡು ಕಾವ್ಯನಿರ್ಮಿತಿ ಮಾಡಿದ ಕಣವಿಯವರು ತಮ್ಮ ಕಾವ್ಯ ಜೀವನದುದ್ದಕ್ಕೂ ಸುನೀತದ ಕಾವ್ಯರೂಪವನ್ನು ಪ್ರಭಾವಶಾಲಿಯಾಗಿ ಬೆಳೆಸುವಲ್ಲಿ ಕ್ರಿಯಾಶೀಲರಾಗಿರುವದನ್ನು ನಾವು ಕಾಣುತ್ತೇವೆ.

ಕನ್ನಡದ ಕವಿ ಪರಂಪರೆಯ ಬಗೆಗಿನ ಕಣವಿಯವರ ಸುನೀತಗಳು ಮಹತ್ವಪೂರ್ಣವಾಗಿವೆ. ಸುನೀತಗಳ ಮೂಲಕ ಕವಿಕುಲದ ವ್ಯಕ್ತಿತ್ವ, ಸಾಧನೆ ಸಿದ್ಧಿಗಳನ್ನು ಸಾಕಾರಗೊಳಿಸುವ ಇವರ ಸಾಹಿತ್ಯ ಸಂಸ್ಕೃತಿಯ ಅಗಾಧ ಪ್ರೀತಿ ಶ್ರದ್ಧೆ, ಸಾಂಸ್ಕೃತಿಕ ಕಾಳಜಿಗಳು ಎದ್ದುಕಾಣುತ್ತವೆ. ಸಾಮಯಿಕ ಮಹತ್ವದಿಂದಲೂ, ಪ್ರಯೋಗಶೀಲತೆಯಿಂದಲೂ ಕೂಡಿರುವ ಕಣವಿ ಸುನೀತಗಳು ಕನ್ನಡ ವ್ಯಕ್ತಿಗೀತ ಪರಂಪರೆಯಲ್ಲಿ ಗಣ್ಯಸ್ಥಾನ ಪಡೆದಿವೆ. 'ಶ್ರೀ' ಕಾವ್ಯನಾಮದ ಬಿ. ಎಂ. ಶ್ರೀಕಂಠಯ್ಯನವರು ಕನ್ನಡ ನವೋದಯ ಸಾಹಿತ್ಯದ ಆಚಾರ್ಯ ಪುರುಷರು. ಅವರ 'ಇಂಗ್ಲೀಷ್ ಗೀತಗಳು' ಭಾವಗೀತೆಯ ಯುಗಕ್ಕೆ ನಾಂದಿಯಾಯಿತು. ಶ್ರೀಯವರ ಸ್ಫೂರ್ತಿ, ಪ್ರೇರಣೆಗಳಿಂದ ಅವರ ಶಿಷ್ಯ ಮತ್ತು ಮಿತ್ರವರ್ಗದವರು ಕನ್ನಡದಲ್ಲಿ ಭಾವಗೀತೆಗಳನ್ನೂ, ಹೊಸ ಸಾಹಿತ್ಯವನ್ನೂ ನಿರ್ಮಿಸಿದರು. 'ಶ್ರೀಯವರನ್ನು ನೆನೆದು' ಸುನೀತದಲ್ಲಿ ಕಣವಿಯವರು ಅವರ ವ್ಯಕ್ತಿತ್ವವನ್ನು ಹೀಗೆ ಕಂಡರಿಸಿದ್ದಾರೆ.

ಕಂನಾಡ ಬಾನಿನಲಿ ಶ್ರೀಕಾರ ಬರೆದಂತೆ
'ಶ್ರೀ' ಬೆಳ್ಳಿಚಿಕ್ಕೆ ಲಕಲಕಿಸಿ ಬೆಳ್ಳಂಗೆಡೆಯೆ
ನಾಡ ನಾಡಿಗಳಲ್ಲಿ ಚೈತನ್ಯ ಸೆಲೆಯೊಡೆಯೆ
ಬಾವುಟವನೆತ್ತಿ ದಿಗ್ವಿಜಯಮಂ ಪಡೆದಂತೆ
ದಂಡಯಾತ್ರೆಯುಗೈದ ವಾಗ್ವಿಭವದುನ್ನತಿಯು !
ತುಂಬು-ವಿದ್ಯೆಯ ತುಂಬು ಗಾಭೀರ್ಯದಲಿ ಮೆರೆದು
ಕನ್ನಡದ ಸಾರಸರ್ವಸ್ವ ಕಡಲಂ ಕಡೆದು

ನವನೀತಮಂ ತೆಗೆದ ಹಿರಿಗೌರವದ ಪರಿಯು.
ಥೇಮ್ಸನದಿ, ಕಾವೇರಿ ಸಂಗಮಿಸಿ ಹರಿಯುವೊಡೆ
ನಿಮ್ಮ ಗೀತಸ್ರೋತ. ಏನಿದಚ್ಚರಿಯೆಂದು
ಕಂದೆರೆದು ನೋಡುತಿರೆ ಆ ಪ್ರವಾಹದಿ ಮಿಂದು
'ಸಿರಿಗನ್ನಡಂ ಗೆಲ್ಗೆ' ! ಎಂದು ಮುನ್ನಡೆದ ಪಡೆ !
'ಬೀಳ್ಕೊಡಿಂ' ಎನಲೇಕೆ ? ಕರುಣಾಳು ಬಾ ಬೆಳಕೆ !
ಸದ್ಗುರು ಪರಂಪರೆಯ ಪುಣ್ಯ ಶ್ರೀಕಂಠಿಕೆ !
('ಶ್ರೀಯವರನ್ನು ನೆನೆದು'–ಆಕಾಶಬುಟ್ಟಿ)

ಶ್ರೀಯವರ ವಾಗ್ವಿಭವದುನ್ನತಿ, ಗಾಂಭೀರ್ಯ, ಪ್ರತಿಭೆ ಪಾಂಡಿತ್ಯ, ಪೂರ್ವ ಪಶ್ಚಿಮಗಳ ಭಾವಸಮನ್ವಯ ಅವರು ಕನ್ನಡಿಗರಿಗೆ ಕೊಟ್ಟ 'ಸಿರಿಗನ್ನಡಂಗೆಲ್ಗೆ' ಎಂಬ ಮಂತ್ರ, 'ಕರುಣಾಳು ಬಾ ಬೆಳಕೆ' ಎಂಬ ಪ್ರಾರ್ಥನೆ ಇವುಗಳನ್ನು ಸುನೀತದಲ್ಲಿ ನೆನೆಯುವ ಕವಿ ಕಣವಿಯುವರು ಶ್ರೀಯುವರು ಕನ್ನಡದ ಶ್ರೀಕಂಠಿಕೆಯಾಗಿದ್ದನ್ನು ಭಾವಮಯವಾಗಿ ವರ್ಣಿಸಿದ್ದಾರೆ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಮಹಾಕಾವ್ಯ ಪರಂಪರೆಗೆ ನಾಂದಿ ಹಾಡಿದವರು ಮಹಾಕವಿ ಕುವೆಂಪು ಅವರು. ಕುವೆಂಪು ಮಹಾಕಾವ್ಯ 'ಶ್ರೀರಾಮಾಯಣ ದರ್ಶನಂ' ಆಧುನಿಕ ಸಂದರ್ಭದಲ್ಲಿ ರಾಮಾಯಣವನ್ನು ಪುನಃಸೃಷ್ಟಿಸಿದೆ. ಭಾರತೀಯ ಸಮಕಾಲೀನ ಮಹಾಕಾವ್ಯಗಳಲ್ಲೇ ತನ್ನ ದರ್ಶನ ಧ್ವನಿಯಿಂದ ಅಗ್ರಗಣ್ಯವಾಗಿರುವ 'ರಾಮಾಯಣದರ್ಶನವನ್ನೋದಿ' ಸುನೀತದಲ್ಲಿ ಅದರ ಭವ್ಯಸ್ವರೂಪವನ್ನು ಕಣವಿಯವರು ವಿದಿತಪಡಿಸಿದ್ದಾರೆ.

ಮಲೆನಾಡ ನಿರ್ಝರಿಣಿ ತಡಿಯ ತಳಿರ್ದೊಂಗಲಲಿ
ನಲಿವ ಮಂಗಲಪಕ್ಷಿ ನಿಚ್ಚ ಹಸುರಿನ ಒಸಗೆ
ಹಾಡೆ ಈ ನೆಲದ ಮಣ್ಣಿಂದೊಗೆದ ಹಾಲ್ದೆನೆಗೆ,
ಸೂರ್ಯ ಚಂದಿರ ತಾರೆ ಮೂಡಿ ಮುಳುಗುವ ನೀಲಿ
ತೇಲಿಸಿತು ನಿನ್ನೆಡೆಗೆ ತನ್ನಮೃತ ಲೀಲೆಯಂ !
ಭವ್ಯತೆಯ ಕನಸು ಗರಿಗೆದರಿ ಮರದುದಿಯಿಂದ
ಬಾನ ಮುಡಿಗೇರಿ ಬೆಳಕಿನ ಗರ್ಭ ಗುಡಿಯಿಂದ
ಮಿಡಿಯಿತೊಂದದ್ಭುತೋಂಕಾರ ವೀಣಾರವಂ !
ಗುಣಕೆ ಮತ್ಸರವುಂಟೆ ? ದೇಗುಲದ ಗಂಟೆಯಲಿ

ಕಂಬ ಕಂಬವ ತುಂಬಿ ಮೈದುಂಬಿ ನಿಂತ ಬಗೆ
ನಿಂತೆ: ನಿಂತೆನೆ ? ನಾದ ತಂತುವಾದೆನು ಕೊನೆಗೆ
ರಸಋಷಿಯ ಪದ್ಮ ಶಾಂತಿಯ ಪರ್ಣಶಾಲೆಯಲಿ.
ಯುಗಯುಗಕು ಸಾಗಿರುವ ಜಗದ ರಾಮಾಯಣಂ
ನೂರು ಸೂರ್ಯೋದಯದ ಬಿಂಬ ಕವಿದರ್ಶನಂ !
(ಶ್ರೀರಾಮಾಯಣ ದರ್ಶನವನ್ನೋದಿ–ದೀಪಧಾರಿ)

ಕುವೆಂಪು ರಾಮಾಯಣದರ್ಶನ ರಸಋಷಿಯ ಮಹಾಪ್ರತಿಭೆಯ ಭವ್ಯ ಸೃಷ್ಟಿಯಾಗಿರುವಂತೆಯೇ ಅದು 'ನೂರು ಸೂರ್ಯೋದಯದ ಬಿಂಬ ಕವಿದರ್ಶನಂ' ಎಂದು ಕಣವಿಯವರು ಸಾರವತ್ತಾಗಿ ನಿರೂಪಿಸುತ್ತಾರೆ.

ಬೇಂದ್ರೆಯವರು ಕನ್ನಡದ ಸಾವಿರದ ಮನೆಗಳಲಿ ಮನೆ ಮಾಡಿದ ವರಕವಿಗಳು. ಧಾರವಾಡದಲ್ಲಿ ಗೆಳೆಯರ ಗುಂಪನ್ನು ಕಟ್ಟಿ ಕನ್ನಡದ ನವೋದಯದ ಸಂದರ್ಭದಲ್ಲಿ ಹೊಸಕವಿಗಳಿಗೆ ಪ್ರೇರಕಶಕ್ತಿಯಾದವರು. ಬೇಂದ್ರೆಯವರ ಇಡಿಯ ಕಾವ್ಯ ವ್ಯಕ್ತಿತ್ವವನ್ನು ಕಣವಿ ಅವರು 'ಎಪ್ಪತ್ತರ ಬೇಂದ್ರೆಯಲ್ಲಿ' ವರ್ಣಿಸಿದ್ದಾರೆ :

ಕಣ್ಣು ಮಿಂಚಿಸಿ, ನೂರು ಹಂಚಿಕೆಯ ಸಂಚಿಕೆಯ
ತುಂಬಿ–ತಲೆಯಾಡಿಸುತ, ಯಾವುದೋ ಒಳದನಿಗೆ
ನಾದಕೂಡಿಸಿ, ನೆಲಕೆ ನೀರು ಬರಿಸುವ ಹಾಗೆ
ಬೀಸುಗಾಳಿಯ ಜೊತೆಗೆ ಬಂದರದೊ ಬೇಂದ್ರೆ ! ಕೈಯ
ಮಾಟಕ್ಕೆ ಮಾತು ಮಾಂತ್ರಿಕನಾಟ, ಅರಗಳಿಗೆ
ಹೊರ-ಒಳಗೆ ತುಂಬಿತುಳುಕುವ ಬೆಡಗು, ಕಡಲ ಗುಟು–
ಕರಿಸಿ, ಚಿಕ್ಕೆಗಳ ಮುಕ್ಕಳಿಸುವರು; ತಟ್ಟನೆ ಒಗಟು
ಒಡೆಯುವ ಒಡಪು–ನುಡಿ : ಕುಡಿಮಿಂಚು ಬಾನ ಗುಡಿಗೆ.
ಇಪ್ಪತ್ತೊ ಎಪ್ಪತ್ತೊ ಮುಪ್ಪತ್ತು ಮುಂದೆ ನಡೆ:
ಅಂಬಿಕಾತನಯದತ್ತನಿಗೆ ದತ್ತುಕೊಟ್ಟಂದು ಇವ–
ರೊಪ್ಪತ್ತು. ಜಗದಂಬೆ-ಹಡಲಿಗೆ ಹೊತ್ತು ಕುಣಿವ–
ಗೆಲ್ಲಿ ಪುರಸೊತ್ತು ? ಹಣ್ಣಾದ ಕೇದಿಗೆಯ ಹೊಡೆ:
ಚೂಪಾದ ಗರಿ : ಹುಷಾರಿ: ಕಂಪಿಗೆಲ್ಲಿಯ ಕೊರತೆ ?
ನಡೆದದ್ದೆ ಸಾಧನಕೇರಿ. ನುಡಿದದ್ದೆ ಕವಿತೆ.
(ಎಪ್ಪತ್ತರ ಬೇಂದ್ರೆ–ಎರಡುದಡ)

ಬೇಂದ್ರೆಯವರ ಕವಿತ್ವ ಶಕ್ತಿಯನ್ನು ಅಪೂರ್ವವಾದ ಮಳೆಗಾಲದ ಮೋಡದ ಪ್ರತಿಮೆಯ ಮೂಲಕ ಧ್ವನಿರಮ್ಯತೆಯಿಂದ ಕಣವಿ ಚಿತ್ರಿಸಿದ್ದಾರೆ. ಆಕಾಶದಲ್ಲಿ ಮಳೆ ಬರುವ ಪೂರ್ವದಲ್ಲಿ ಮೋಡಗಳ ಸಂಚಾರ, ಮಿಂಚು ಹಾಗೂ ತಂಪಾದ ಗಾಳಿಗೆ ನೆಲಕೆ ನೀರು ಬರಿಸುವ ಮಳೆ ಹೇಗೆ ಉಂಟಾಗುತ್ತದೋ ಅದೇ ರೀತಿಯಲ್ಲಿ ಕವಿಯಲ್ಲೂ ಕಾವ್ಯ ಹುಟ್ಟುವಾಗ ನೂರಾರು ಭಾವನೆಗಳು, ಹೃದಯದ ಅನುಭವವಾಗಿ ಹೊರಹೊಮ್ಮುವಾಗ ಒಂದು ಕವಿಕಾರ್ಯ ನಡೆದಿರುತ್ತದೆ ಎಂಬುದನ್ನು ಬೇಂದ್ರೆಯವರ ಕಾವ್ಯಪ್ರಕ್ರಿಯೆಯಲ್ಲಿ ಕಂಡ ಕಣವಿಯವರು ಕನ್ನಡ ಭಾವಗೀತೆಯ ಸಕಲ ಮಾಧುರ್ಯವೆಲ್ಲ ಬೇಂದ್ರೆಯವರಲ್ಲಿ ಅಂತಸ್ಥವಾಗಿರುವದನ್ನು ನಿರೂಪಿಸಿದ್ದಾರೆ. ಗಾರುಡಿಗತನ. ಮಾಂತ್ರಿಕ ಪ್ರತಿಭೆಗಳಿಂದ ಕೂಡಿದ ಬೇಂದ್ರೆ ವ್ಯಕ್ತಿತ್ವದಲ್ಲಿ ಬೆಳದಿಂಗಳಿನ ಮಾಧುರ್ಯವಿದೆ. ಪಾರಿಜಾತದ ಕೋಮಲತೆಯಿದೆ. ಬೇಂದ್ರೆಯವರು ಎಪ್ಪತ್ತರಲ್ಲೂ ಇಪ್ಪತ್ತರ ತಾರುಣ್ಯದ ನವೋಲ್ಲಾಸ ಹೊಂದಿದವರು. ಇಲ್ಲಿ 'ಜಗದಂಬೆ ಹಡಲಿಗೆ ಹೊತ್ತು ಕುಣಿವಗೆಲ್ಲಿ ಪುರುಸೊತ್ತು ?' ಎಂಬ ರೂಪಕವನ್ನು ಬಳಸಿದುದು ಅರ್ಥಪೂರ್ಣವಾಗಿದೆ. ಬೇಂದ್ರೆಯವರು 'ನಡೆದದ್ದೆ ಸಾಧನಕೇರಿ ನುಡಿದದ್ದೆ ಕವಿತೆ' ಎಂಬ ಒಂದೇ ಸಾಲಿನಲ್ಲಿ ಅವರ ಸಾಧನೆ ಸಿದ್ಧಿಗಳ ಎರಕವಿದೆ. 'ಕೇದಿಗೆಯ ಹೊಡೆ'ಯಂತೆ ಬೇಂದ್ರೆ ಮಾತು ಅರ್ಥದ ಪರಿಮಳವನ್ನು ಬಹುಕಾಲ ಬೀರುತ್ತದೆ. ಹಾಗೆಯೇ 'ಚೂಪಾದ ಗರಿ ಹುಷಾರಿ' ಎಂಬ ಎಚ್ಚರಿಕೆಯಲ್ಲಿ ಬೇಂದ್ರೆ ಸ್ವಭಾವವನ್ನು ಸೂಚಿಸಲಾಗಿದೆ. ಹೀಗೆ ಬೇಂದ್ರೆಯವರ ವ್ಯಕ್ತಿತ್ವವನ್ನು ಸಾಕಾರಗೊಳಿಸಿದ ಕಣವಿಯವರ 'ಎಪ್ಪತ್ತರ ಬೇಂದ್ರೆ' ಕನ್ನಡ ಸುನೀತ ಪರಂಪರೆಯಲ್ಲೇ ಇನ್ನಿಲ್ಲದ ಮಹತ್ವ ಪಡೆಯುತ್ತದೆ.

ಹೊಸಗನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಅಪ್ರತಿಮ ಸಾಹಿತ್ಯ ಸಾಧನೆ ಮಾಡಿದ ಪ್ರತಿಭೆ ಗೋಕಾಕರದು. 'ವಿನಾಯಕ' ಕಾವ್ಯನಾಮದ ಗೋಕಾಕರ ಪ್ರತಿಭಾಪ್ರಪಂಚ ಮತ್ತು ವ್ಯಕ್ತಿತ್ವದ ವೈಶಿಷ್ಟ್ಯಗಳನ್ನು ಅಪೂರ್ವವಾದ ರೀತಿಯಲ್ಲಿ ಕಣವಿ ಅವರು ತಮ್ಮ ಸುನೀತದಲ್ಲಿ ಕೆತ್ತಿದ್ದಾರೆ.

ತುಂಬಿದ ತಲೆಯ ಬೆಳ್ಳಿಗೂದಲಿಗೆ ಬೆರಳಾಡಿ
ಚಿಂತನೆಯ ಅಷ್ಟಪೈಲಿನ ಹರಳ ಹೊರಳಿಸುತ
ಅಂತಃಕರಣದಂಗೈಯಲಿ ತೂಗಿ, ಬದುಕ
ಬೆಲೆಗೈವ 'ಅದೇನದಲ್ಲ' ಅದೆಲ್ಲವ ಕೂಡಿ.
ಕನ್ನಡಕ ದಾಟಿ ನುಣ್ಣಗೆ ಎದೆಯ ಮೀಟಿ, ಹದ
ಬರುವವರೆಗು ಮಿದಿಯುವ ದೃಷ್ಟಿ. ಸೂಟು ಬೂಟನು
ಕಳಚಿ, ಲಂಡಂಗಿ ಧೋತರದಿ ಮುಗುಳ್ನಗೆ ಹದನು.
'ಹಲೊ ಬರ್ರಿ' ತೆರೆಯುವದು ನಡುಮನೆಯು ಕಿಡಕಿ, ಕದ.
ಎಂಟು ದಿಕ್ಕಿನ ಗಾಳಿಗಲ್ಲಿ ಕಡಲಿನ ಹಾಡು
ಮೂಡ-ಪಡುವಣ ನೆಳಲು-ಬೆಳಕಿನಲಿ ತೇಲುವರ–
ಸಂಚೆ, ಬಾಳ ದೇಗುಲದಿ ಸಮನ್ವಯ ತೇರ
ಸಿಂಗಾರ, ಅರವತ್ತರಲು ಭಾರಿ ಕಸರತ್ತು.
ಎತ್ತರದಲ್ಲು ಬಾಗಿ ಹತ್ತಿರ ಬರುವ ಮಹತಿ
ಸಂಕ್ರಾಂತಿ; ಕೈ ಕುಲುಕಿದಂತೆ ದ್ಯಾವಾ–ಪೃಥಿವಿ.

(ವಿನಾಯಕರಿಗೆ ವಂದನೆ–ನಗರದಲ್ಲಿ ನೆರಳು)

ವಿನಾಯಕರ ಸಂವೇದನಾಶೀಲ, ಚಿಂತನಪರ ವ್ಯಕ್ತಿತ್ವದಲ್ಲಿ ನಿರಾಡಂಬರತೆ, ಋಜುತ್ವ, ಆತ್ಮೀಯತೆಯಿದೆ. ಸದಾ ಪಯಣಗರಾದ ಗೋಕಾಕರು ಬಾಳ ದೇಗುಲದ ಸಮನ್ವಯದ ತೇರ ಸಿಂಗರಿಸಿದವರು. ಆಧ್ಯಾತ್ಮ ಚಿಂತನೆಯೊಂದಿಗೆ ಕಾವ್ಯದಲ್ಲಿ ನವ್ಯತೆಯನ್ನು ಸ್ವಾಗತಿಸಿದ ಗೋಕಾಕರು 'ಕೈಕುಲುಕಿದಂತೆ ದ್ಯಾವಾಪೃಥಿವಿ' ಎನ್ನುವಲ್ಲಿ ಧ್ವನಿಪೂರ್ಣವಾಗಿ ಅವರ ವ್ಯಕ್ತಿತ್ವ ಸಿದ್ಧಿಯನ್ನು ಕಂಡರಿಸಲಾಗಿದೆ.

ಕಣವಿಯವರು ಸುನೀತದಲ್ಲಿ ವ್ಯಕ್ತಿತ್ವವನ್ನು ಚಿತ್ರಿಸುವಾಗ ಬಾಹ್ಯ ಮತ್ತು ಅಂತರಂಗಿಕ ವ್ಯಕ್ತಿತ್ವವನ್ನು ಪರಿಶೀಲಿಸುವದರಿಂದ ಅದು ಅವರ ಸಾಹಿತ್ಯಿಕ ಮುಖವನ್ನು ತಿಳಿಸುವ ಹಾಗೆ ವೈಯಕ್ತಿಕ ಜೀವನದ ವೈಶಿಷ್ಟ್ಯಗಳ ವರ್ಣನೆಯೂ ಆಗುತ್ತದೆ. ರಂ. ಶ್ರೀ. ಮುಗಳಿಯವರ ಬಗೆಗೆ ಬರೆದ ಸುನೀತ ಇದಕ್ಕೊಂದು ನಿದರ್ಶನವಾಗಿದೆ.

ಜೀವನದ ಯಾತ್ರೆಯಲಿ ಕಣ್ಣೀರ ತೀರ್ಥವ
ಕುಡಿದು, ನೋವುಗಳ ತಗ್ಗಿನಲಿ ನುಗ್ಗುನುರಿಯಾಗಿ
ಮುಗ್ಗರಿಸದೆಯೆ ಮುಂದಕಡಿಯಿಟ್ಟು, ಮುಡಿಬಾಗಿ
ಹಿಗ್ಗು ದಿಣ್ಣೆಯನೇರಿ ನಿಂತ ರಸಿಕ ! ಭೈರವ
ರೂಪದೆದುರು ಸೌಮ್ಯ ನಂದಾದೀಪ. ಮಲ್ಲಿಗೆ
ಬಕುಲ. ಸಂಪಿಗೆಯ ತಂಪನು ಜೀವಕೋಲಯಿಸಿ
ಸಖ್ಯದ ಕಂಪನುಂಡು. ತಂಬೂರಿ ನಾದದಲಿ
ತುಂಬಿ ಕರುಣೆಯ ಪಡೆದೆ ರಸಸರಸ್ವತಿ ಹರಕೆ.
ನಾಡಗುಡಿಯಲಿ ಒಲವು-ಗುಡಿ ಕಟ್ಟಿ, ಚೆಲುವಿಗೆದೆ
ತೆರೆದು, ಸಜ್ಜನಿಕೆಯಲಿ ಹಾಲು-ಜೇನನು ಕರೆದು
ಹಲವು ಪಣತಿಗೆ ಎಣ್ಣೆಯೆರೆದು, ಮಕ್ಕನು ತೆಗೆದು
ದೀಪಾವಳಿ ಗೈದೆ : ಮುಳ್ಳಿನಲು ಮುಗುಳೊಡೆದೆ.
ನಂದನದ ಮಂದಾರ ಒಂದಾರ ಕೊಳ್ಳೋಣ
ಲೋಕದೀ ಹೂವದಕೆ ಬಾಸಿಂಗ ಬಾಗಿನ.

(ರಸಿಕರಂಗ–ಎರಡು ದಡ)

ಮುಗಳಿಯವರು ವೈಯಕ್ತಿಕ ಜೀವನದ ನೋವನ್ನು ನುಂಗಿ ಸಾಹಿತ್ಯ ವ್ಯವಸಾಯ ನಡೆಸಿದವರು. ಅವರು ಸಾಹಿತ್ಯ ಸಂಗೀತದಲ್ಲಿ ತಮ್ಮ ದುಃಖ ಮರೆತವರು. ಮಹಾರಾಷ್ಟ್ರದಲ್ಲಿ ಕನ್ನಡದ ಪಾಂಡಿತ್ಯಧ್ವಜವನ್ನು ಎತ್ತಿ ಹಿಡಿದು ಅನೇಕ ವಿದ್ಯಾರ್ಥಿಗಳಿಗೆ ಕನ್ನಡ ದೀಕ್ಷೆ ಕೊಟ್ಟವರು. 'ನಂದನದ ಮಂದಾರ ಒಂದಾರ ಕೊಳ್ಳೋಣ ಲೋಕದೀ ಹೂವದಕೆ ಬಾಸಿಂಗ ಬಾಗಿನ' ಸಾಲುಗಳು ಈ ಸುನೀತದ ಪರಿಣಾಮಕಾರಿಯಾದ ಅಭಿವ್ಯಕ್ತಿಯಾಗಿ ಮುಗಳಿ ಸಾಹಿತ್ಯ ವ್ಯಕ್ತಿತ್ವದತ್ತ ಮನ ಸೆಳೆಯುವಂತೆ ಮಾಡುತ್ತವೆ.

ಕಣವಿಯವರು ಕಾವ್ಯಾಭ್ಯಾಸಿಯಾಗಿ, ಶ್ರೇಷ್ಠ ಮಟ್ಟದ ಸಹೃದಯಿಯಾಗಿ ಯಾವುದೇ ಕವಿಯ ಮೌಲ್ಯವನ್ನು ನಿರ್ಧರಿಸಬಲ್ಲರು. ಅವರ ರಸಗ್ರಾಹಕ ದೃಷ್ಟಿಗೆ 'ಪು. ತಿ. ನ.' ಸುನೀತ ನಿದರ್ಶನವಾಗಿದೆ. ಕನ್ನಡ ನವೋದಯ ಕಾವ್ಯದಲ್ಲಿ ಪು. ತಿ. ನ. ಅವರದು ವಿಶಿಷ್ಟವಾದ ಸ್ಥಾನ. ಅವರ ಕಾವ್ಯದಲ್ಲಿ ಕಾಣುವ ಚಿಂತನೆಯ ಮಾಧುರ್ಯ, ಪ್ರಸನ್ನತೆ, ಅನುಭೂತಿ ಮಧುರಚೆನ್ನರನ್ನು ಬಿಟ್ಟರೆ ಇನ್ನಾರಲ್ಲೂ ಕಾಣಲು ಸಿಗದು. ಅವರ ಕವಿ ವ್ಯಕ್ತಿತ್ವವನ್ನು ವರ್ಣಿಸುವ ಕಣವಿ ಸುನೀತ ಹೀಗಿದೆ :

ತುಂಬಿದುದು ತುಳುಕಿ ಹೋಗದ ಹಾಗೆ ತುಟಿಯಂಚಿ-
ನಲಿ ನಗು. ಒಗುಮಿಗುವ ನಮ್ರ ಪ್ರತಿಭೆಯ ಮಿನುಗು
ಕಣ್ಣಿನಲಿ, ಬಾನ ಬೆಳ್ಳಕ್ಕಿ ಹಾರಿದ ಬೆರಗು.
ಬೆಳ್ಳಿ ಬಟ್ಟಲಿಗೆ ದಾಳಿಂಬೆ ಬಿಡಿಸಿಡುವ ಶುಚಿ-
ರುಚಿ ಮಾತು, ಮೈದಡವಿ ಚಿಗುರಿ ಹೂಬಿಡುವ ಕೆಳೆ.
ಇರವಿನೊಳ ಹೊರಗು ಸ್ವರಲಹರಿ, ಶರದದ ಹಗಲು
ತೆರವು ತುಂಬುತ್ತ ತೇಲುವಾಗಂತುಕ ಮುಗಿಲು.
ಜಗದಚ್ಚರಿ ತೆರಂಬೊಳೆವ ಮನದಪೂರ್ವಕಳೆ.
ಘೊಚ್ಚ ಹೊಸ ಪ್ರಕೃತಿ ವಿನಯದ ಪ್ರಜ್ಞೆ, ದೈವಾಜ್ಞೆ
ಸಂಪ್ರದಾಯಕ್ಕೊಸೆದು ಮಸೆದು ಭಾವದ ಮೊಸೆ
ಹೊರ-ಒಳ ಜಗದ ಸೊಗದ ನಿರ್ಲಿಪ್ತ ಜಿಜ್ಞಾಸೆ.
ಆತ್ಮ ಪ್ರಕಟನೆ ಚೆಲುವ ಸೃಷ್ಟಿಯರಳುವ ಸಂಜ್ಞೆ.
ಮಲೆ ದೇಗುಲದ ಗಂಟೆಯುಲಿಗೆ ಚಲಿಸುವ ಲೋಕ
ಬದುಕನವಲೋಕಿಸಿದಲೌಕಿಕ ಜೀವಪಾಕ.

(ಪು. ತಿ. ನ.—ನಗರದಲ್ಲಿ ನೆರಳು)

ಕಣವಿಯವರ ನವ್ಯ ಮನೋಧರ್ಮ ಅವರ ಸುನೀತಗಳಲ್ಲೂ ಪ್ರಕಟವಾಗಿದೆ. ನವೋದಯದ ಹಿರಿಯ ಕವಿ ಪಂಜೆ ಮಂಗೇಶರಾಯರ ಬಗೆಗೆ ಬರೆಯುವ ಸುನೀತವು ನವ್ಯಕಾವ್ಯದ ಪ್ರತಿಮಾವಿಧಾನದ ಮಾತುಗಳಿಂದ ಆರಂಭವಾಗುವದು ಇದಕ್ಕೆ ನಿದರ್ಶನವಾಗಿದೆ.

ಶಿಟಿ ಶಿಟಿ ಟೈಟ್ ಪ್ಯಾಂಟು, ಒತ್ತು-ಬೂಟಿಗೆ ಗುಡ್
ನೈಟ್ ಎಂದು, ತೆಳು ಪಂಜೆಯುಟ್ಟು, ಚಪ್ಪಲಿ ಮೆಟ್ಟಿ
ತೆಂಕಣಗಾಳಿಗೊಡ್ಡಿ ಮೈಯ, ಸಹಜ ಭೆಟ್ಟಿ-
ಯಾದ ಗೆಳೆಯರ ಜೊತೆಗೆ ಮಾತಾಡುತ್ತ ಗುಡ್ಡ-
ವೇರಿ ಕುಳಿತಂತೆ ಹಾಯೆನಿಸುವದು : ಪಂಜೆ ನಿಮ್ಮ
ನೆನೆದಾಗ

(ಪಂಜೆಯುವರನ್ನು ನೆನೆದು—ನಗರದಲ್ಲಿ ನೆರಳು)

'ಭಾರತೀಯ ಕಾವ್ಯಮೀಮಾಂಸೆ'ಯಂತಹ ಆಚಾರ್ಯ ಕೃತಿಯನ್ನು ರಚಿಸಿದ ತೀ. ನಂ. ಶ್ರೀ. ಅಗಲಿದಾಗ ಅವರ ಆದರ್ಶಮಯ ಬದುಕನ್ನು ಸ್ಮರಿಸುತ್ತ

ಅವರ ಪಾಂಡಿತ್ಯ-ರಸಿಕತೆಗಳಿಗೂ ಎಡೆಕೊಟ್ಟು ಅಗಲಿಕೆಯ ನೋವನ್ನು ಅವರ ಕರ್ತವ್ಯ ಪ್ರಜ್ಞೆಯೊಂದಿಗೆ ನೆನೆಯುತ್ತಾರೆ.

ಮೈಸೂರು-ಧಾರವಾಡದ ಉತ್ತರೋತ್ತರಕೆ
ಸಂದಿತು ಹರಕೆ, ದಿಲ್ಲಿಯನು ದಾಟಿ ಕಲಕತ್ತೆ—
ಕನ್ನಡದ ಕಲಶ ತುಳುಕಿತ್ತೇ ? ಕೈಯ ಹೊತ್ತಗೆ
ಜಾರಿ ಸರಸತಿಯ ವಜ್ರದ ಓಲೆ ಕಳಚಿತ್ತೆ ?

ಕಲ್ಪವೃಕ್ಷದೆಳನೀರು, ಬಾಗಿರುವ ಗೊನೆಬಾಳೆ
ವಸಂತದ ಚಂದನ ಗಂಧ. ಒಲುಮೆ ಹೂಮಾಲೆ.
ಸ್ನೇಹದೂದುಬತ್ತಿಯ ನವುರು, ನರುದಂಬುಲವ
ರುಚಿ-ಶುಚಿಗೊಳಿಸಿ, ನಸುನಗೆಯ ರೇಶಿಮೆ ವಸ್ತ್ರ
ಹೊದಿಸಿ, ನುಡಿಯ ಕನ್ನಡಿ ನೋಡಿ, ತಿದ್ದಿ ತೀಡಿ.
ಜನಪದದ ಭಾವ-ಬುದ್ಧಿಯ ಬೃಹತ್ ಕೋಶದಲಿ
ಪ್ರೀತಿ ಪಾಥೇಯವನು ಕೈಕೊಂಡು ಬಲುದಿನದ
ಪಯಣಕ್ಕೆ ಹೊರಟು ಬಿಟ್ಟರು ನಮ್ಮ ತೀ. ನಂ. ಶ್ರೀ.

ಇಂದಿಲ್ಲ ನಾಳೆ ಬಂದು 'ಎಲ್ಲಿಗೆ ಬಂತು ಕೆಲಸ ?'
ಎಂದಾರು; ಈ ಗುಡಿಗೆ ಯಾರಿಡಬೇಕು ಕಳಸ ?

(ತೀ. ನಂ. ಶ್ರೀ.ಯವರ ಪಯಣ—ಎರಡು ದಡ)

ಶಿವರುದ್ರಪ್ಪನವರ ಐವತ್ತರ ಅಭಿನಂದನದಲ್ಲಿ ಕಣವಿ ಬರೆದ ಸುನೀತ 'ಸ್ನೇಹ ಕಾರ್ತೀಕ'.

ಮುಖವಾಡಗಳ ಆಟಮಟದ ನಟನೆಯ ನಡವೆ
ದಿಟವ ದಿಟ್ಟಿಸಿ, ಧೈರ್ಯದಲಿ ಮುಂದಿಟ್ಟು ಹೆಜ್ಜೆ
ಬುಟ್ಟಿಗಟ್ಟಲೆ ಮಾತು ಹೊರಿಸಿದವರಿಗೆ ಒಜ್ಜೆ.
ಶ್ರುತಿಗೆ ಸರಿಯಾದ ಕೃತಿ; ಏಕೆ ಉಪಕೃತಿಗೊಡವೆ ?
ಕತ್ತಲೆಯ ಜೀರುಂಡೆ ಮೇಳಕುತ್ತರವಾಗಿ
ನಕ್ಷತ್ರಗಳ ಮುಗುಳು ನಗೆ, ಬಾನ ಗಂಭೀರ
ಬಗೆ, ಧ್ಯಾನ. ನಸುಕಿನಲಿ ನಿದ್ದೆ ತಿಳಿದೆದ್ದವರ
ಕಂಡರಳುವದು ಕೈಮುಗಿದ ಮೊಗ್ಗೆ ತಾನಾಗಿ.

ನೋವು ತುಂಬಿದ ಸಾವೆ ನಡೆಸಿ ಕವಿತೆಯು ಹುಟ್ಟು
ಅಟ್ಟಹಾಸದ ದೂರ ತೆರೆಯಾಚೆ ಸೌಂದರ್ಯ–
ಶೋಧ ಚಿಂತನ ಕ್ಷಿತಿಜ: ಗುರಿ ನಿರಿಗೊಳಿಪ ಕಾರ್ಯ
ತತ್ಪರತೆ. ಸತ್ವವೆಲ್ಲಿದೆ ರಜ-ತಮವ ಬಿಟ್ಟು ?
ನೂರು ಶರದೈಸಿರಿಗೆ ಏರಬೇಕಿದೆ ಜೀಕ–
ತೂಕ; ಅದಕೆ ಹಾರೈಕೆ : ಸ್ನೇಹಕಾರ್ತೀಕ.

(ಸ್ನೇಹ ಕಾರ್ತೀಕ–ಜೀವಧ್ವನಿ)

ಶಿವರುದ್ರಪ್ಪನವರ ಬಾಹ್ಯ ವ್ಯಕ್ತಿತ್ವದಲ್ಲಿ ಕಾಣುವ 'ನಕ್ಷತ್ರಗಳ ಮುಗುಳು ನಗೆ. ಬಾನ ಗಂಭೀರ ಬಗೆಧ್ಯಾನ' ಹಾಗೂ ಆಂತರಿಕ ವ್ಯಕ್ತಿತ್ವದಲ್ಲಿ ಮೊಗ್ಗೆ ಅರಳಿದ ಹಾಗೆ ಕವಿತೆಯನ್ನು ರಚಿಸಿ ಉಲ್ಲಾಸಗೊಳಿಸುವ, ಸೌಂದರ್ಯಶಾಸ್ತ್ರ ಶೋಧಕರಾದ ಚಿತ್ರವನ್ನೂ, ಅವರ ಕಾರ್ಯತತ್ಪರತೆಯ ಗುಣವನ್ನೂ ಹೇಳುತ್ತ ಸ್ನೇಹದ ದೀಪೋತ್ಸವವಾಗಲಿ ಎಂಬ ಕಣವಿಯವರ ಹಾರ್ದಿಕ ಭಾವ ಈ ಸುನೀತದ ಮೂಲಕ ಸಾರವತ್ತಾಗಿ ಪ್ರಕಟವಾಗಿದೆ.

ಜಾನಪದಕ್ಕಾಗಿ ತಮ್ಮ ಬಾಳನ್ನು ಶ್ರೀಗಂಧದಂತೆ ತೇದುಕೊಂಡ ಸಿಂಪಿ ಲಿಂಗಣ್ಣನವರು ಪ್ರಾಥಮಿಕ ಶಾಲೆಯ ಶಿಕ್ಷಕರಾಗಿದ್ದುಕೊಂಡು ಕನ್ನಡ ಸಾಹಿತ್ಯಸೇವೆ ಮಾಡಿದ ಮಹನೀಯರು. ಅವರನ್ನು ಕುರಿತ ಸುನೀತ ಲಿಂಗಣ್ಣನವರ ಜೀವನಾದರ್ಶವನ್ನು ವರ್ಣಿಸುವಲ್ಲಿ ಯಶಸ್ವಿಯಾಗಿದೆ.

ಜಾನಪದ ಶುದ್ಧ ಸಿಂಪಿನೊಳಿಂದ ಹೊರಬಿದ್ದ
ಜಾತಿ ಮುತ್ತಿನೊಲು ತಂಪಾಗಿ. ಮುಖದಲುಕ್ಕುವ
ಮುಗ್ಧಬಗೆ. ಮಾತೆತ್ತಿದರೆ ಹಳ್ಳಿ ಹೊಳೆಯಿಸುವ
ಒಳ್ಳೆ ಮಾಸ್ತರ ಶಿಸ್ತು, ಬದುಕಿನಲಿ ಮುಳುಗೆದ್ದ
ತಿಳಿವು; ತಳದಲ್ಲಿ ತಳತಳ ಹೊಳೆವ ಹರಳು-ನುಡಿ.
ತೃಪ್ತಿ ತುಂಬಿಕೊಂಡೇ ಇರುವ. ನಂಬಿಕೊಂಡೇ
ನಡೆವ. ಅಧ್ಯಾತ್ಮ-ವ್ಯವಹಾರ ಬೆರೆತುಕೊಂಡೇ
ಬರುವ ಲಿಂಗಣ್ಣ: ಗುರು ಮಧುರಚೆನ್ನರ ಗರಡಿ-
ಯಾಳು. ಕೊರಳಲ್ಲಿ ಸದಾ ಅರವಿಂದ ಗ್ರಂಥ
ಮಾಲೆ. ಹೊಸಗನ್ನಡದ ಹೊಸತಿಲ ದಾಟಿ, ಗರತಿ

ಹಾಡಿಗೆ ಮಲ್ಲಿಗೆ ದಂಡೆ ಮುಡಿಸಿ, ಈ ಸರಸತಿ
ಜೀವನದ ಸಂಗೀತವೆನಿಸಿ, ಎಲ್ಲರ ಪಂಥ
ತಣಿಸಿ, ನವಿಲನು ಕುಣಿಸಿ, ದಣಿವ ತೋರಗೊಡದವರು.
ಬಾಯಾರಿದವರಿಗೆ ಹಲಸಂಗಿ ಬೆಲ್ಲ-ನೀರು.

('ಸಿಂಪಿ'ನೊಳಗಿನ ಮುತ್ತು–ಜೀವಧ್ವನಿ)

ಕೊರಳಲ್ಲಿ ಅರವಿಂದ ಗ್ರಂಥಮಾಲೆ ಕಟ್ಟಿಕೊಂಡು ಮಧುರಚೆನ್ನರ ಗರಡಿಯಲ್ಲಿ ಬೆಳೆದು, ಸರಸತಿಯ ಜೀವನ ಸಂಗೀತವಾಗಿ, ಹಲಸಂಗಿ ಗೆಳೆಯರ ಬಳಗದ ಸಾಹಿತ್ಯ ಸಾಧಕರಾಗಿದ್ದ ಲಿಂಗಣ್ಣನವರು ಸಿಂಪಿನೊಳಗಿನ ಮುತ್ತು ಎಂದು ಕಣವಿ ಹೇಳಿರುವದು ತುಂಬ ಮನೋಜ್ಞವಾಗಿದೆ.

ಕನ್ನಡದಲ್ಲಿ ವಿಚಾರಸಾಹಿತ್ಯವನ್ನು ನಿರ್ಮಾಣ ಮಾಡಿದವರಲ್ಲಿ ಗೌರೀಶ ಕಾಯ್ಕಿಣಿ ಹೆಸರು ಪ್ರಮುಖವಾದುದು. ಗೌರೀಶರಿಗೂ ಕಣವಿಯವರಿಗೂ ಬಹುಕಾಲದ ಸಾಹಿತ್ಯಿಕ ನಂಟು. ಕಾಯ್ಕಿಣಿಯವರಿಗೆ ಅರವತ್ತು ತುಂಬಿದಾಗ ಕಣವಿಯವರ ಕಾವ್ಯ ಗೌರವದ ಸುನೀತ ಹೀಗಿದೆ :

ಕಣ್ಣೆದುರು ರಸ-ಕಡಲು, ಶಾಸ್ತ್ರ ಕಾನನ ಬದಿಗೆ
ಅನುಭವ ಘಟ್ಟವೇರಿಳಿದು ಭಾವ ಸಂತುಷ್ಟ,
ವಾಸ್ತವದ ಕ್ಲೇಶ ಶ್ಲೇಷೆಯಲದ್ದಿ ಸಂಪುಷ್ಟ.
ಪುಟ್ಟ ಗೂಡಿನ ನೆಟ್ಟನೋಟ ಕ್ಷಿತಿಜದವರೆಗೆ
ದೂರದೂರದಿ ಸಾಗಿ ಬರುವ ಹಡಗಿನ ಬೆಡಗು
ಸೆರೆಹಿಡಿದು, ರಂಪಣಿ ದೋಣಿ ಕೈ ಬಿಡದೆ-ಮೀನು
ಕೊಂಡು ಕೊನೆದಾಡಿ ಜನತೆಯ ನಾಡಿ ಹಿಡಿದವನು:
ಹತ್ತು ಕಡೆ ಕೈಚಾಚಿ, ಮಳಲದಂಡೆಯ ಬುರುಗು
ತೊರೆದು, ತೆರೆಮರೆಗಿಳಿದು ಮುತ್ತು-ಹವಳವ ಬಾಚಿ
ಬಯಲುಸೀಮೆಯ ಕೊರಳಿಗಿತ್ತೆ ತುಂಬಿಸಿ ಕೊರತೆ.
ಕ್ಷೇತ್ರದೊಳಗಿದ್ದು ವಿಚಿಕಿತ್ಸೆ, ವೈಚಾರಿಕತೆ
ನಿಷ್ಕಪಟ ಸೂತ್ರಧಾರಿ, ಸಮದಿಕ್ಸೂಚಿ.
ಬೆಟ್ಟದ ನೆಲ್ಲಿಗುಪ್ಪುಕೊಟ್ಟೆ ನೀ ರುಚಿಕಟ್ಟು
ಸೌಹಾರ್ದ ಸಾಗರಕೆ ಎಲ್ಲಿದೆ ಎಲ್ಲೆಕಟ್ಟು ?

(ಗೌರೀಶರ ಗೌರವ–ಜೀವಧ್ವನಿ)

ಗೋಕರ್ಣದ ಕಡಲತಡಿಯಲ್ಲಿದ್ದು ವೈಚಾರಿಕತೆಯ ಅನನ್ಯತೆಯನ್ನು ಮೆರೆದ ಗೌರೀಶರಲ್ಲಿರುವ ಸಾಹಿತ್ಯ ಸಹೃದಯತೆ ಅಪರೂಪದ್ದು. 'ಸೌಹಾರ್ದ ಸಾಗರಕೆ ಎಲ್ಲಿದೆ ಎಲ್ಲೆಕಟ್ಟು ? ಎಂದು ಕವಿ ಕೇಳಿರುವದು ಗೌರೀಶರ ವ್ಯಕ್ತಿತ್ವದ ಸಹೃದಯ ಸಂಪನ್ನತೆಯ ಪ್ರತೀಕವಾಗಿದೆ.

ಕಣವಿಯವರು ಕನ್ನಡದ ಹಿರಿಯರನ್ನು ಸುನೀತದಲ್ಲಿ ಚಿತ್ರಿಸುವಾಗ ಅವರ ವ್ಯಕ್ತಿತ್ವದ ಗುಣಗಳನ್ನು ಶಬ್ದಗಳ ಮೂಲಕ ಕೆತ್ತಿ ನಿಲ್ಲುವಂತೆ ಮಾಡುವದಕ್ಕೆ ಡೆಪ್ಯೂಟಿ ಚೆನ್ನಬಸಪ್ಪನವರ ಬಗೆಗೆ ಬರೆದ ಸುನೀತದ ಕೊನೆಯ ಸಾಲುಗಳು ನಿದರ್ಶನವಾಗಿವೆ :

ಕರ್ತವ್ಯಕ್ಕೆ ಕಲಿ. ವಾದಿ. ವಾಗ್ಮಿ, ನಿಸ್ಪೃಹರು
ಸಾಹಿತ್ಯ-ಶಿಕ್ಷಣಕೆ ಒಡವೆರೆದು, ತಾಯ್ನುಡಿಗೆ
ಗುಡಿಯಾಗಿ. ಕೋಟೆ ಕೊತ್ತಳ ಭದ್ರವಾಗಿಡಲು
ಧಾರವಾಡದೆತ್ತರಕೆ ಬಿತ್ತರದ ಅಡಿಗಲ್ಲು.
ಆ ಗಣಿತದ ಗುಣಾಕಾರ ವರ್ಧಿಸಿತು ಹೀಗೆ.
ನೂರು ವರುಷದ ಮೇಲೆ ಮೂಲ ಪುರುಷನ ಕಂಡು
ಕೈಮುಗಿದೆ, ಇದ್ದರಿರಬೇಕಪ್ಪ ಇಂಥ ಗಂಡು.

(ಕನ್ನಡದ ಕುಲದೀಪ–ಕಾರ್ತೀಕದ ಮೋಡ)

ಕನ್ನಡದ ಹುಲಿ ಡೆಪ್ಯೂಟಿ ಚೆನ್ನಬಸಪ್ಪನವರು ಧಾರವಾಡದಲ್ಲಿ ಕನ್ನಡದ ಕಲಿಕೆಗೆ ಅಸ್ತಿವಾರ ಹಾಕಿದವರು. ಅವರ ಬಹುಮುಖ ವ್ಯಕ್ತಿತ್ವಕ್ಕೆ ಕಣವಿ ಕವಿ ಮನಸ್ಸು ನೂರು ವರುಷದ ಮೇಲೆ ಕನ್ನಡದ ಮೂಲಪುರುಷನೆಂದು ಕೈಮುಗಿದು ಗೌರವಿಸುವದು ಸಾಂಸ್ಕೃತಿಕವಾಗಿ ಮಹತ್ವದ್ದಾಗಿದೆ.

ಕರ್ನಾಟಕದ ಕುಲಪುರೋಹಿತರಾದ ಆಲೂರು ವೆಂಕಟರಾಯರು 'ಜಯಕರ್ನಾಟಕ' ಪತ್ರಿಕೆಯ ಸಂಪಾದಕರಾಗಿ ಕನ್ನಡಿಗರಲ್ಲಿ ಭಾಷೆ. ಸಂಸ್ಕೃತಿಯ ಅಭಿಮಾನವನ್ನು ಜಾಗೃತಗೊಳಿಸಿದವರು; ಕರ್ನಾಟಕತ್ವದ ವಿಕಾಸದ ವಿಚಾರಗಳನ್ನು ತಿಳಿಸಿ ಎದೆಯಲ್ಲಿ ಕನ್ನಡತನದ ಆವೇಶ ಉಕ್ಕೇರುವಂತೆ ಮಾಡಿದವರು. ಅವರ ವ್ಯಕ್ತಿಚಿತ್ರವನ್ನು ಕಣವಿಯವರ ಸುನೀತ ತೆರೆದಿಟ್ಟಿದ್ದು ಹೀಗೆ :

ಭಾರತದಲ್ಲಿ ಅಖಂಡ ಕರ್ನಾಟಕ ಕಡೆದು,
ಅಧ್ಯಾತ್ಮ ಚಿಂತನೆಯ ಖಾದಿಯ ಶಾಲು ಹೊದೆದು
ಮುಡಿಪಿಟ್ಟ ಜೀವಸ್ಮೃತಿಯ ಸಂಪುಟವ ತೆರೆದು
ರೇಶಿಮೆ ಗಡ್ಡ ನೀವಿ, ತೆರಳಿದಿರಿ ಹರಿಯ ನೆನೆದು.
'ನನ್ನ ಪೂರಾ ಮರೆತು ಕರ್ನಾಟಕವ ಸ್ಮರಿಸಿ'
ಎಂದಿರಾ ? ಇಂದಿನೀ ಕುಬ್ಜರನೆತ್ತಿ ಹರಸಿ'

(ಜಯಕರ್ನಾಟಕ ತಿಲಕ—ಕಾರ್ತೀಕದ ಮೋಡ)

ಸಾಹಿತ್ಯ ಸಂಗಮದ ಸ. ಸ. ಮಾಳವಾಡರು ನಿಜವಾಗಿಯೂ ವ್ಯಾಸಂಗ ಸಂಗಮವಾಗಿದ್ದರು. ಅವರ ಪ್ರಶಾಂತ ಮನಸ್ಸಿನ ಶುದ್ಧ ಅಭಿರುಚಿಯ ವ್ಯಕ್ತಿತ್ವ ಕಣವಿಯವರ ಜೀವನದುದ್ದಕ್ಕೂ ಪ್ರೇರಕಶಕ್ತಿಯಾಗಿದೆ. ಮಾಳವಾಡರ ಬಗೆಗೆ ಬರೆದ ಸುನೀತದ ಮುಕ್ತಾಯದ ಸಾಲುಗಳಿವು :

ಹತ್ತು ದಿಕ್ಕಿನ ಹಳ್ಳ ಹೊಳೆಗಳಿಗೆ ಧುಮುಕಿ ನದಿ
ಯಾಗಿ ವ್ಯಾಸಂಗ ಸಂಗಮದಲ್ಲಿ ಹರಿದಷ್ಟು
ಜಲ, ಅರಿದಷ್ಟು ವಿಸ್ತಾರ ಮುಂದಿನಂಬೋಧಿ.
ತಿಳಿಯಷ್ಟೆ ಬಸಿದುಕೊ : ಬರದಂತೆ ಗಪ್ಪು
ಗಟ್ಟಿ ಕವಚದ ಒಳಗೆ ಬೆಳವಲ ಹಣ್ಣು ತಿಳಲು :
ರುಚಿಗೆ ಬೆಲ್ಲವ ಬೆರಸು, ಬಿದಿರಲ್ಲವೇ ಕೊಳಲು ?

(ವ್ಯಾಸಂಗ ಸಂಗಮ—ಕಾರ್ತೀಕದ ಮೋಡ)

ಬೆಳವಲ ನಾಡಿನ ಸಂಸ್ಕೃತಿ ಸಂಸ್ಕಾರಗಳ ಸಾಕಾರಮೂರ್ತಿಗಳಾಗಿದ್ದ ಮಾಳವಾಡರು ಬೆಳವಲ ಹಣ್ಣು ತಿರುಳಂತೆ ಇದ್ದರೆಂಬುದನ್ನು (ಹೊರಗೆ ಬಿರುಸು, ಒಳಗೆ ಮೃದು) ಕಣವಿಯವರು ರೂಪಕದ ಮೂಲಕ ಹೊಳೆಯಿಸಿದ್ದಾರೆ.

ಗಡಿನಾಡಿನ ಕನ್ನಡ ಸಂಶೋಧಕರಾದ ಕೆ. ಜಿ. ಕುಂದಣಕಾರರು ಕನ್ನಡದ ಕುಂದಣವಾಗಿ ಬಾಳಿದವರು.

ಬಾಳ ಅಗ್ಗಿಷ್ಟಿಯಲಿ ಬೆಂದು ನೊಂದರೂ ಒಂದು
ಕುಂದಿರದ, ಅಂಗಾರ ವಡಗಿಸಿದ ಬಂಗಾರ—
(ಕೌಜಲಗಿಯಿಂದ ಕೊಲ್ಹಾಪುರಕೆ ಸಿಂಗಾರ)
ಕರಗಿ, ದಿಟಪುಟಗೊಂಡು ಒರೆಬಣ್ಣಕ್ಕೆ ಬಂದು
ಬೀರಿದ ಮಂದಹಾಸ; ಸಾಹಸದ ವಿನ್ಯಾಸ.

(ಕುಂದಣ—ಜೀನಿಯಾ)

ಶಿಲಾಶಾಸನ, ತಾಮ್ರಪಟ, ನಾಣ್ಯ, ತಾಡೋಲೆ, ಹಳೆಗನ್ನಡ ಸಾಹಿತ್ಯ, ಜೈನ ಸಾಹಿತ್ಯ ಶಾಸ್ತ್ರ ವಿಷಯಗಳಲ್ಲಿ ಸಂಶೋಧನೆ ಮಾಡಿದ ಕುಂದಣಗಾರರು ಕನ್ನಡದ ಶಿಷ್ಯಪರಂಪರೆಗೆ ನಾಂದಿ ಹಾಡಿದವರು. 'ಆ ಸತ್ವ ಸಾತ್ವಿಕತೆಯೇ ಈ ಕನ್ನಡದ ತೇರು' ಎಂದು ಕಣವಿಯವರು ಕುಂದಣಗಾರರ ವ್ಯಕ್ತಿತ್ವವನ್ನು ಚಿತ್ರಿಸಿದ್ದಾರೆ.

ಕನ್ನಡದ ರಮ್ಯ ಸಂಪ್ರದಾಯದ ಕವಿ ಡಿ. ಎಸ್. ಕರ್ಕಿಯವರು ಭಾವ, ನಾದ, ಛಂದಗಳನ್ನು ಮುಪ್ಪುರಿಗೊಳಿಸಿದವರು. ಅವರ ವ್ಯಕ್ತಿತ್ವ ಕಣವಿಯವರ ಸುನೀತದಲ್ಲಿ ಹೀಗೆ ಕಂಗೊಳಿಸಿದೆ :

ತೀರ ಎತ್ತರವಿರದ ದೇವಕಣಗಿಲ ಗಿಡದ
ಸುತ್ತು ನೀರುಂಡು ನಳಿನಳಿಸಿರುವ ಹಸಲೆ; ಎಳೆ
ಬಿಸಿಲ ಮಿಂದು, ಸಂತೃಪ್ತಿ-ಸುಳಿಗಾಳಿಯಲಿ ತಲೆ
ಯೊಲೆದು, ಮಾಸದ ಹಸುಗೂಸಿನಂತೆ ನಸುನಗುತ
ಕೊಂಬೆ ತುತ್ತತುದಿಗೆ ಹಳದಿ-ಬಿಳಿ ಮಧುರಪಾಕದಿ
ಹೂವಿನಾರತಿಯ ಬಾನಿಗೆ ಹಿಡಿದು, ನಿರುಮ್ಮಳ
ನಿಂತ ರಸಿಕ.

(ಕರಿಕಿ-ಕಣಗಿಲ — ನಗರದಲ್ಲಿ ನೆರಳು)

ಕರ್ಕಿಯವರ ಜೀವನ ಸಿದ್ಧಿಯನ್ನು ದೇವಕಣಗಿಲದ ಪ್ರತಿಮೆಯ ಮೂಲಕ ಚಿತ್ರಿಸಿರುವರು ಅರ್ಥಪೂರ್ಣವಾಗಿದೆ.

ಕನ್ನಡ ಸಾಹಿತ್ಯದಲ್ಲಿ ಸಂತ ಸಂಶೋಧಕರಾದ ಉತ್ತಂಗಿ ಚೆನ್ನಪ್ಪನವರ ವ್ಯಕ್ತಿತ್ವ ವೃಕ್ಷಪ್ರತಿಮೆಯ ಮೂಲಕ ಉತ್ತಮವಾಗಿ ಮೂಡಿದೆ.

ಉತ್ತಂಗಿ ! ಜೀವನದ ಸತ್ವದಿಂದೆತ್ತರಕೆ
ಬೆಳೆದು ಬಾಗಿದ ವೃಕ್ಷ : ಎಲ್ಲ ಋತುಮಾನಕ್ಕು
ಎದೆಗೊಟ್ಟು, ಎಂಥ ಕಾಲಕು ಚಿಗುರುನಗೆ ನಕ್ಕು
ಹೂಗೊಂಚಲವ ಹಿಡಿದು; ಎಲೆಯ ಮರೆಗಿವೆ ಹರಕೆ
ಹೊತ್ತ ಹಣ್ಣುಗಳೆಷ್ಟೋ, ಇಳಿಸಿಕೊಳ್ಳುವರಾರು ?

(ಉತ್ತಂಗಿಯವರನ್ನು ನೆನೆದು — ನೆಲಮುಗಿಲು)

ಸರ್ವಜ್ಞ ಸಾಹಿತ್ಯವನ್ನು ಸಂಪಾದಿಸಿ, ತಿರುಳ್ಗನ್ನಡದ ತಿರುಕರೆಂದು ತಮ್ಮನ್ನು ವರ್ಣಿಸಿಕೊಂಡ ಉತ್ತಂಗಿಯವರು ಕ್ರೈಸ್ತ ಮತೋಪದೇಶಕರಾದರೂ, 'ಕನ್ನಡದ ಭಕ್ತಿಯಲಿ ಮುಕ್ತಿಪಡೆದವರು' ಎಂದಿರುವುದು ಅರ್ಥಪೂರ್ಣವಾಗಿದೆ !

ಕನ್ನಡದ ಮಹಾ ಸಂಶೋಧಕರೂ, ಕವಿ ಸಾಹಿತಿಗಳೂ ಆದ ಗೋವಿಂದ ಪೈ ಅವರ ಭೂಮವ್ಯಕ್ತಿತ್ವ ಕಣವಿಯವರ ಸುನೀತದಲ್ಲಿ ವಿಶಿಷ್ಟವಾದ ರೀತಿಯಲ್ಲಿ ವ್ಯಕ್ತವಾಗಿದೆ.

ಕಣ್ಮುಟ್ಟಕಂಡಿಲ್ಲ; ಆದರೂ ಮನದೊಳೆಂದೊ
ಮೂರ್ತಿಗೊಂಡಿದೆ ಚಿತ್ರ. ಎಲೆ ಹೂವ ಕಂಡರೂ
ಮೂಲ ಆಧಾರವನು ಕಾಂಬ ಕಣ್ಣಿನ ಹೊಳಪು.
ಎಲ್ಲವನು ಎಣಿಸಿಟ್ಟ ಬೆಳ್ಳಿಯ ತಿಜೋರಿ. ಅಗೊ
ನೆನಹು ಬೀಗದಕೈ, ನಮಿಸು; ಗೋವಿಂದ ಪೈ.

(ನಮಿಸು : ಗೋವಿಂದ ಪೈ–ನೆಲಮುಗಿಲು)

'ದಿಗ್ಗಜದ ಭಾರವನು ಹೊರಲಿಕೆಲ್ಲಿದೆ ಹೆಗಲು ?' ಎಂಬ ಸುನೀತದ ಕೊನೆಯ ಸಾಲು ಗೋವಿಂದ ಪೈ ಸಾಹಿತ್ಯಭಂಡಾರದ ಬೃಹದ್‌ಸ್ವರೂಪವನ್ನು ವಿದಿತಪಡಿಸುತ್ತದೆ.

ಕನ್ನಡದ ಪ್ರಗತಿಶೀಲ ಲೇಖಕರೂ ಕಾದಂಬರಿಕಾರರೂ ಆಗಿದ್ದ ಬಸವರಾಜ ಕಟ್ಟೀಮನಿಯವರನ್ನು ನೆನೆದು ರಚಿಸಿದ ಕಣವಿಯವರ ಸುನೀತ ಅವರ ವ್ಯಕ್ತಿತ್ವದ ವಿಶಿಷ್ಟತೆಗಳನ್ನು ಅತ್ಯಂತ ಸಹಜವಾಗಿ ಚಿತ್ರಿಸುತ್ತದೆ.

ಕೊನೆವರೆಗು ಕೈಬಿಡದೆ ಹರಿತವಾಗಿಹ ಪೆನ್ನು
ಬಿಳಿಹಾಳೆಗಚ್ಚೊತ್ತಿ, ಬಿಚ್ಚುಗತ್ತಿಯ ನೆನಪು
ಪದವಿಟ್ಟಳುಪದಗ್ಗಳಿಕೆ, ಸ್ವಂತಿಕೆಯ ಛಾಪು
ಅಟ್ಟಹಾಸದಾಡಂಬರವ ಭೇದಿಸಿ, ಹೊನ್ನು
ಹೆಣ್ಣು ಮಣ್ಣಿನ ತೀಕ್ಷ್ಣ ವಾಸ್ತವ ಬದುಕ ಬಗೆದು
ನೆಲದ ಮಕ್ಕಳ ಕಷ್ಟದೊಡಲು ಕುದಿಯುವ ಭಟ್ಟಿ
ಇಳಿಸಿ ತೆಗೆದಿಟ್ಟ ಪಾತ್ರ; ನೇರ ಜೀವನದೃಷ್ಟಿ.
ತಂತಾನೆ ಜಾರಿತ್ತು ಕಲೆಗೆ ಹೊಚ್ಚಿದ ಮುಸುಕು.

(ಕಟ್ಟೀಮನಿಯವರನ್ನು ನೆನೆದು–ಶಿಶಿರದಲ್ಲಿ ಬಂದ ಸ್ನೇಹಿತ)

ಸುನೀತದ ಮೊದಲ ಎಂಟು ಸಾಲುಗಳು ಕಟ್ಟೀಮನಿಯವರ ಸಾಹಿತ್ಯಿಕ ವ್ಯಕ್ತಿತ್ವ ವಾಸ್ತವ ಬದುಕಿಗೆ ಸ್ಪಂದಿಸುವ, ನೆಲದ ಮಕ್ಕಳ ಕಷ್ಟಕ್ಕೆ ಮಿಡಿಯುವ ಬಗೆಯನ್ನು ತಿಳಿಸಿದರೆ ಮುಂದಿನ ಆರು ಸಾಲುಗಳು ಅವರ ರಾಜಕೀಯ ನಿಲುವು, ಹೋರಾಟ, ವಾದವಿವಾದದ ಹೊಗೆ ಹಾಗೂ ಕೊನೆಗೆ ಉಕ್ಕುವ ನಗೆಯನ್ನು, ಮಲಾರಮರಡಿಯ ಮಣ್ಣಲ್ಲಿ ಕರಗಿ ಹೋದದ್ದನ್ನು ಚಿತ್ರಿಸುತ್ತವೆ.

ಹೈದರಾಬಾದ ಕರ್ನಾಟಕದ ಜನಜೀವನವನ್ನು ತಮ್ಮ ಸಾಹಿತ್ಯದಲ್ಲಿ ಹೃದ್ಯವಾಗಿ ಚಿತ್ರಿಸಿದ ಶಾಂತರಸರು ಪ್ರಗತಿವಾದಿ ಲೇಖಕರು.

ಹೊಟ್ಟೆಯೊಳಗಿನ ಸಿಟ್ಟು ರಟ್ಟೆಯೊಳಗಿದ್ದರೆ
ಎಷ್ಟೋ ವ್ಯಕ್ತಿಗಳ ವಿರೋಧಾಭಾಸ ಸೂಕ್ತಿ
ಗಳ ಹುಟ್ಟಡಗಿಸಿ ಬಿಡುತ್ತಿದ್ದರೊ ಏನೊ. ಶಕ್ತಿ
ಸಾಲದ ಈ ಅಶಾಂತ ಶಾಂತರಸ. ನಕ್ಕರೆ
ಅಷ್ಟೇ ಸಹಜ, ಪ್ರಶಾಂತ.

(ಶಾಂತರಸ–ಶಿಶಿರದಲ್ಲಿಬಂದ ಸ್ನೇಹಿತ)

ಬಯಲುಸೀಮೆಯ ಹತ್ತಿಯ ತೊಳೆ ಅರಳೆಯಾಗಿಸಿ ನೂಲು ತೆಗೆದು ಕೊಂಡಿ ಮಾಡಿದ ಹಾಗೆ ಶಾಂತರಸ ಕಥೆ ಹೆಣೆಯುವದನ್ನೂ; ಮನೆಯ ಮಾಡದಲ್ಲಿ ಹಚ್ಚಿಟ್ಟ ಚಿಮಣಿಯ ಬೆಳಕಿನಂತೆ ಕವಿತೆ ಬೆಳಗುವದನ್ನು, ಹೈದರಾಬಾದ ಕರ್ನಾಟಕದ ಬಗೆಗಿನ ಕಾಳಜಿ ಹಾಗೂ ಕೊರಗನ್ನು ತೋರುವ ಶಾಂತರಸ ಬದುಕಿನ ರೀತಿಯನ್ನು ಈ ಸುನೀತ ಸಮರ್ಥವಾಗಿ ಸೆರೆಹಿಡಿದಿದೆ.

ಜ. ಚ. ನಿ. ಅವರು ಆಧುನಿಕ ವಚನಕಾರರಲ್ಲಿ ಪ್ರಮುಖರಾಗಿದ್ದಾರೆ. ಅವರಷ್ಟು ಬಹುಸಂಖ್ಯೆಯ ಆಧುನಿಕವಚನ ಬರೆದವರು ಇನ್ನೊಬ್ಬರಿಲ್ಲವೇನೋ. ಜ. ಚ. ನಿ. ಆಧ್ಯಾತ್ಮಿಕ ವ್ಯಕ್ತಿತ್ವ ಮತ್ತು ಜೀವನದರ್ಶನವನ್ನು ಈ ಸುನೀತ ಚಿರಂತನವಾಗಿಸಿದೆ.

.........ಷಟ್‌ಸ್ಥಲದ ಕಣದಲ್ಲಿ ಜೀವನದಹಂ
ಕೃತಿಯು ಹುತಿಯು ಕಟ್ಟಿ ತುಳಿಸಿ ಗಾಳಿಗೆ ತೂರಿ
ಸ್ವಾನುಭವಸಾರ ಸಿದ್ಧಾಂತ ಸಂಪುಟರಾಶಿ.
ಹಗೆಹದಲಿ ಹಾಕಿ ಬರಗಾಲಕ್ಕೆ ತೆಗೆದಿರಿಸಿ

ಮುಗ್ಗು ತಿನ್ನುವುದಲ್ಲ, ನಿತ್ಯ ಬದುಕಿನ ದಾರಿ.
ದಣಿವಿರದೆ ತೋಡಿ ತೆಗೆಯುವವರು ಚಿನ್ನದ ಗಣಿಯ
ಇರವು ಬರೆಹದ ನಡುವೆ ತೆರವು ತುಂಬುವ ಮಣಿಹ.
(ಶ್ರೀ ಚ. ಜ. ನಿ.–ನರಗದಲ್ಲಿ ನೆರಳು)

ಜಯದೇವಿ ತಾಯಿ ಲಿಗಾಡೆಯವರು ಆಧುನಿಕ ಕನ್ನಡ ಕವಯಿತ್ರಿಯರಲ್ಲಿ ಹಿರಿಯರು ಸೊಲ್ಲಾಪುರದ ಸೊನ್ನಲಿಗೆಯಲ್ಲಿ ಕಾವ್ಯಕಾಯಕ ನಡೆಸಿದ ಮಹಾನುಭಾವೆ ಅವರು. ಸಿದ್ಧರಾಮನ ಮೇಲೆ ತ್ರಿಪದಿ ಮಹಾಕಾವ್ಯ ಬರೆದ ಜಯದೇವಿ ತಾಯಿಯವರ ಜೀವನ ಹಾಗೂ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿದಂತಿದೆ ಈ ಸುನೀತ.

ತ್ರಿಪದಿಯಲ್ಲವೆ ನಮ್ಮ ವೃತ್ತ-ವೃತ್ತಿಗೆ ತಾಯಿ ?
ಸರಳ ಶ್ರೀಮಂತಿಕೆಯ ಮೂರು ಬೆರಳ ವಿಭೂತಿ
ನುಡಿ ಗಡಿಯ ಮೀರಿದಂತಃಕರಣದನುಭೂತಿ.
ಬಾಳಿ ಬದುಕಿಸಿದುಭಯ ಭಾಷೆಗಳಿಗೂ 'ಬಾಯಿ'.
ಕಂಟಕವ ದಾಟಿದುತ್ಕಂಠೆಯಲಿ ಆಡಿದರೆ
ಎದೆತುಂಬಿ ಹಾಡಿದರೆ ಹಾಲು ಹಳ್ಳವೆ ಹರಿದು
ಮುಳ್ಳು ಕಂಟಿಗೆಳೆದೆಯ ಕೊಳ್ಳವೂ ತುಂಬುವದು
ತುಳುಕುವದು ಸೊನ್ನಲಾಪುರ ಸಿದ್ಧರಾಮನ ಕೆರೆ.
ಗಡಿಯಲ್ಲಿ ಕಟ್ಟಿ ಕನ್ನಡ ಕೋಟೆ, ಉಡಿಯಲ್ಲಿ
ಇಡಿಯ ನಾಡಕ್ಕರೆಯ ಮಕ್ಕಳಾಡುಂಬೊಲವೆ
ಒಡವೆಗಳನುಳಿದ ರುದ್ರಾಕ್ಷಿ ಕಂಕಣ ಬಲವೆ.
ಕಲ್ಯಾಣ ಮುಟ್ಟಿ ಮರಳಿದಿರಿ ಕೊನೆಗಳಿಗೆಯಲಿ.
ಕನ್ನಡದ ಕರ್ಮೋದ್ಯೋಗ ಭೂಮಿಯಲಿ ಯೋಗ-
ಯೋಗ್ಯರ ಕೊರತೆ. ಯೋಚಿಸಬೇಕು ಮತ್ತೆ ಈಗ.
(ಜಯದೇವಿ ತಾಯಿ–ಶಿಶಿರದಲ್ಲಿ ಬಂದ ಸ್ನೇಹಿತ)

ಹೀಗೆ ಕಣವಿಯವರ ಸುನೀತಗಳಲ್ಲಿ ಕನ್ನಡ ಸಾಹಿತ್ಯ ಪ್ರಪಂಚದ ದಿಗ್ಗಜರ ವ್ಯಕ್ತಿತ್ವ, ಸಾಧನೆ ಸಿದ್ಧಿಗಳು ಅಪೂರ್ವವಾದ ರೀತಿಯಲ್ಲಿ ಮೂಡಿ ಬಂದಿವೆ. ಕಣವಿಯವರಿಗೆ ಕನ್ನಡದ ಸಾಹಿತ್ಯಪರಂಪರೆಯ ಬಗೆಗೆ ಅಪಾರ ಗೌರವಭಾವವಿದೆ. ಹೊಸಗನ್ನಡದ ಹಿರಿಯ ಚೇತನಗಳನ್ನು ಕುರಿತು ಅವರು

ಸುನೀತ ರಚಿಸಿದಂತೆಯೇ ಹಳೆಯ ಸಾಹಿತ್ಯದ 'ಶ್ರೀಕವಿರತ್ನಂ', 'ಸರ್ವಜ್ಞ', 'ಮಾಯಾ ಕೋಲಾಹಲ', 'ಗೆಲುವೆನೆಂಬುವ ಭಾಷೆ', 'ಮುದ್ದಣ್ಣ ಮನೋರಮೆ' ಮೊದಲಾದವರ ಬಗೆಗೂ ತಮ್ಮ ಕವಿಕಾವ್ಯ ಶ್ರದ್ಧೆಯನ್ನು ಸುನೀತದ ಮೂಲಕ ಪ್ರಕಟಿಸಿದ್ದಾರೆ. ನವ್ಯ ಸಾಹಿತ್ಯದ ಅನೇಕ ಲೇಖಕರು ಪರಂಪರೆಯ ಸಾಹಿತ್ಯವನ್ನು ತಿರಸ್ಕಾರ ಮಾಡುತ್ತಿದ್ದ ಸಂದರ್ಭದಲ್ಲಿ ಕಣವಿಯವರು ಸಾವಿರಾರು ವರ್ಷಗಳಿಂದ ಸಂಪನ್ನವಾದ ಕನ್ನಡ ಸಾಹಿತ್ಯ ಪರಂಪರೆಯ ಬಗೆಗೆ ದೃಢವಾದ ಆದರಾಭಿಮಾನ ಪ್ರಕಟಿಸುವದನ್ನು ಅವರ ಸುನೀತಗಳಲ್ಲಿ ನಾವು ಕಾಣುತ್ತೇವೆ. ನಿಜವಾದ ಶ್ರೇಷ್ಠಕವಿ ತನ್ನ ಕಾಲದ ಕವಿಕೃತಿಗಳನ್ನೂ ಎಲ್ಲ ಕಾಲ, ದೇಶ, ಭಾಷೆಯ, ಸಾಹಿತ್ಯವನ್ನೂ ಪ್ರೀತಿಸುತ್ತಾನೆ, ಗೌರವಿಸುತ್ತಾನೆ. ಅವರಿಂದ ಸ್ಫೂರ್ತಿ ಪ್ರೇರಣೆ ಪ್ರಭಾವಕ್ಕೆ ಪಾತ್ರನಾಗುತ್ತಾನೆ. ಕಣವಿಯವರು ಷೆಲ್ಲಿ ಕವಿಯ ಕುರಿತು ಆರಂಭದಲ್ಲಿಯೇ ಸುನೀತ ಬರೆದಿದ್ದಾರೆ. ಇದರಿಂದ ಅವರ ಮನಸ್ಸು ಎಲ್ಲೆಲ್ಲಿ ಒಳ್ಳೆಯ ಅಂಶಗಳಿವೆಯೋ, ತಾವು ಕಂಡ ಕವಿಪರಂಪರೆಯ ವ್ಯಕ್ತಿಶಕ್ತಿಗಳನ್ನು ಯಾವುದೇ ಸಾಹಿತ್ಯ ಪರಂಪರೆಗೆ ಸೇರಿದ ಸಂದರ್ಭದಲ್ಲೂ ಅವರನ್ನು ಕನ್ನಡದ ಸಮಗ್ರ ಸಾಹಿತ್ಯ ಪರಂಪರೆಯ ಹಿನ್ನೆಲೆಯಲ್ಲಿ ಗ್ರಹಿಸಿ ಮೌಲ್ಯನಿರ್ಧಾರ ಮಾಡುವ ದೃಷ್ಟಿಯಿಂದ ಸುನೀತದಲ್ಲಿ ಸೆರೆಹಿಡಿದಿರುವದು ಮುಖ್ಯವಾದ ಸಂಗತಿಯಾಗಿದೆ. ಕವಿಯಾದ ಕಣವಿಯವರು ಕೇವಲ ಕವಿಗಳ ಬಗೆಗೆ ಮಾತ್ರ ಸುನೀತ ರಚಿಸದೆ ಕಾದಂಬರಿಕಾರ, ಲೇಖಕಿ, ಸಂಶೋಧಕ, ಅನುಭಾವಿ, ಮಹಾತ್ಮರ ಬಗೆಗೂ ಸುನೀತ ರಚಿಸಿದ್ದಾರೆ. ಕಣವಿಯವರು ಬರೆದ ಸುನೀತಗಳಲ್ಲಿ ಕನ್ನಡ ಸಾಹಿತ್ಯ ಪರಂಪರೆಯ ದರ್ಶನ ನಮಗಾಗುತ್ತದೆ. ಕನ್ನಡದ ಸಾಂಸ್ಕೃತಿಕ ಸಂದರ್ಭವನ್ನು ದಾಖಲಿಸುವ ಈ ಸುನೀತಗಳು ಕಣವಿಯವರ ಸಹೃದಯತೆಯನ್ನು ಮೌಲ್ಯ ನಿರ್ಧಾರಕ ನಿಲುವುಗಳನ್ನೂ ಪ್ರಕಟಪಡಿಸುತ್ತವೆ.

ಚೆನ್ನವೀರ ಕಣವಿ ಅವರು ಸಂಗೀತ ಪ್ರಪಂಚಕ್ಕೆ ಸೇರಿದ ಸಾಧಕರ ಬಗೆಗೂ ಸುನೀತಗಳನ್ನು ರಚಿಸಿ ತಮ್ಮ ಕಲಾಪ್ರೀತಿಯನ್ನು ಪ್ರಕಟಿಸಿದ್ದಾರೆ. ಹಿಂದೂಸ್ತಾನಿ ಸಂಗೀತದಲ್ಲಿ ಅಖಿಲ ಭಾರತ ಖ್ಯಾತಿ ಪಡೆದ ಮಲ್ಲಿಕಾರ್ಜುನ ಮನ್ಸೂರರ ಸಿದ್ಧಿ 'ಮಲ್ಲಿಕಾರ್ಜುನನ ಶಿಖರಕ್ಕೆ ಬೆಳಕಾಗಿ' ಅವರಿಗೆ ಕಂಡಿದೆ.

ನಸುಕಿನ ಕ್ಷಿತಿಜ ಕಂಠಕ್ಕೆ ಹೊಮ್ಮಿ ಅಕಾಶ—
ಕ್ಕುಲಿವರಾಗ, ಬಯಲನಾಲೋಡಿಸುತ, ಪ್ರತಿಪ
ದಾರ್ಥವ ಹಿಂಜಿ. ಆಲಾಪಕ್ಕೆ ಸ್ವರ ಸ್ವರೂಪ—
ದ ಹಂಜಿ; ಸೃಷ್ಟಿಮೂಲದ ನಾದ : ಸ್ವ-ಪ್ರಕಾಶ
ಹಿಗ್ಗಿ ತಳತಳ ಹೊಳೆದು, ಎಳೆದು ತನ್ನೊಳ ಸೆಳೆದು
ಹಡೆದ ಮೂರ್ತಿಗೆ ಜೀವದುಂಬಿ ಮೊರೆವ ನಿನಾದ.
ಜಗದ ಒಡಲೊಳು ಕುದಿವ ವಿರೋಧ ತಗ್ಗಿಸಿ ಸಮೆದ
ಸ್ವಸ್ಥ ಪಿಂಡಸ್ಥಭಾವ: ಐಕ್ಯಸ್ಥಲಕೆ ನಡೆದು
ಅನುಭಾವಿ—ಪದ ಮಧ್ಯ ನಿರವಧಿ ಕಾವುಕೊತು
ಕಣ್ಮುಚ್ಚಿತೆರೆವ ಹೊಸಜೀವ—ಭಾವದೆರಂಕೆ.
ವಚನಕ್ಕೆ ವಚನ ಕೊಟ್ಟಂತೆ ಕಟ್ಟಿದ ಸೇತು—
ಸೋಂತು ಶರಣರ ಕರುಳಮಿಡಿದು ಇಹಪರ ಸೋಂಕೆ—
ಕಿವಿಗೊಟ್ಟ ಸಲಕೆ ಹೊಸಮಿಂಚು—ಕಂಚಿನತಾನ
ರಸವರ್ಷ, ದಿಗ್ದಿಗಂತ ಸ್ಪರ್ಶ: ಪುನರುತ್ಥಾನ
(ಮಲ್ಲಿಕಾರ್ಜುನ ಶಿಖರಕ್ಕೆ ಬೆಳಕಾಗಿ—ನಗರದಲ್ಲಿ ನೆರಳು)

ಸ್ವರ, ರಾಗ, ನಾದ, ಲಯಗಳ ಭಾವಾಭಿವ್ಯಕ್ತಿ ಮನ್ಸೂರ ಸಂಗೀತದ ವಿಶೇಷತೆಯಾಗಿದ್ದು ಅವರು ವಚನಗಾಯನ ಪರಂಪರೆಯನ್ನು ಹಾಕಿಕೊಟ್ಟವರು. ಇಲ್ಲಿ ಬರುವ ಹೊಸಮಿಂಚು, ಕಂಚಿನತಾನ, ರಸವರ್ಷ ಮೊದಲಾದವು ಸುನೀತದ ಅರ್ಥಸ್ವಾರಸ್ಯ ಹೆಚ್ಚಿಸಿವೆ. ವಿಮರ್ಶಕರು ಬಹುವಾಗಿ ಮೆಚ್ಚಿಕೊಂಡ ಸುನೀತವೆಂದರೆ 'ಬಿಸಮಿಲ್ಲಾಖಾನರ ಶಹನಾಯಿ ವಾದನ ಕೇಳಿ'

ಒಂದೆ ಉಸಿರಿಗೆ ಹಸಿರ ಹೊಮ್ಮಿಸುವ; ನೂರು ಬಗೆ
ಭಾವಕುಸುಮವನೆತ್ತಿ ಗಾಳಿಸುಳಿಯಲಿ ಹೀಗೆ
ನರುಗಂಪ ತೇಲಿಸುವ, ಹಂಬಲದ ಸವಿದನಿಗೆ
ತುಂಬಿ ಆಲಿಸುವ; ಮನಸಿನ ಮಧ್ಯಬಿಂದುವಿಗೆ
ಕನಸು ಕಾಮನಬಿಲ್ಲ ವರ್ತುಳವ ರಚಿಸಿ, ನೆಲ
ಮುಗಿಲನೊಂದು ಸಲ ಬಂಧಿಸಿ ಜೀವ ಸ್ಪಂದಿಸುವ
ಮೋಡದೊಡಲಿಗೆ ಮಿಂಚು ಸಂಚರಿಸಿ ಹನಿಗರೆವ
ರಾಗ ಲಹರಿಯ ತೊರೆಗಳೋಡಿ ತಬ್ಬಿವೆ ಕಡಲ.
(ಬಿಸಮಿಲ್ಲಾ ಶಾಹನಾಯಿ ವಾದನ ಕೇಳಿ—ನೆಲಮುಗಿಲು)

ಬಿಸಮಿಲ್ಲಾಖಾನರ ಶಹನಾಯಿಯ ಸ್ವರ ಮಾಧುರ್ಯ ನೂರು ಬೆಳಕಿಂಡಿ ತೆರೆದಂತೆ 'ಆಗಸದ ಚಿಪ್ಪೊಡೆದು ಜೀವ ತೆರೆಯಿತು ಬಾಯಿ' ಎಂಬ ಮುಕ್ತಾಯವಂತೂ ಅತ್ಯಂತ ಧ್ವನಿಪೂರ್ಣ !

ಭಾರತದ ಮಹಾ ವ್ಯಕ್ತಿಗಳ ಬಗೆಗೂ ಕಣವಿಯವರು ಸುನೀತಗಳನ್ನು ಬರೆದಿದ್ದಾರೆ. ಭಾರತದ ಪ್ರಧಾನಮಂತ್ರಿಯಾಗಿದ್ದ ಲಾಲಬಹದ್ದೂರ ಶಾಸ್ತ್ರಿಯವರನ್ನು ಕುರಿತು ಬರೆದ ಸುನೀತದಲ್ಲಿ ಅವರ ಸರಳತೆ, ಬಡತನ, ಪ್ರಾಮಾಣಿಕತೆ, ಕಾಯಕನಿಷ್ಠೆಯ ಅಪೂರ್ವ ವ್ಯಕ್ತಿತ್ವ ಅಷ್ಟೇ ಸರಳವಾಗಿ ಆದರೆ ಪರಿಣಾಮಕಾರಿಯಾಗಿ ಬಂದಿದೆ.

ನಮ್ಮ ಮಧ್ಯೆ ಇವನಿದ್ದನೆಂದರೆ ನಂಬುವೆಯ
ಇಷ್ಟು ಸಾದಾ ಸೀದಾ ಮನುಷ್ಯ ? ಬಡತನದ
ಪಲ್ಲಕ್ಕಿ ಹೊತ್ತು ಮೆರೆಸಿದ ಪ್ರಾಮಾಣಿಕತೆಯ.
ಹೆಂಡತಿಮಕ್ಕಳಿಗೆ ಆಸ್ತಿ ಸಂಪಾದಿಸದ
ಮನೆಯಿರದ ಪ್ರಧಾನಿ. ಇವನೆಂಥ ಭಾರತೀಯ ?!

(ಲಾಲಬಹಾದ್ದೂರ ಶಾಸ್ತ್ರಿ–ಎರಡು ದಡ)

ರಾಜಕೀಯ ಕ್ಷೇತ್ರದಲ್ಲಿ ಮಂತ್ರಿ ಮಹೋದಯರು ನಡೆಸುವ ಭ್ರಷ್ಟಾಚಾರಗಳು ಭಾರತದ ಭವಿಷ್ಯವನ್ನು ಮಸಕಾಗಿಸುತ್ತಿರುವ ಸಂದರ್ಭದಲ್ಲಿ ಲಾಲಬಹಾದ್ದೂರ ಶಾಸ್ತ್ರಿಯವರಂಥ ಪ್ರಾಮಾಣಿಕ ವ್ಯಕ್ತಿಗಳು ಈ ದೇಶದಲ್ಲಿ ಪ್ರಧಾನಿಯಾದದ್ದು ನಂಬುವದೂ ಕಷ್ಟ ಎಂದು ಕವಿ ಪ್ರತಿಕ್ರಿಯಿಸಿದ್ದಾರೆ. ಲಾಲಬಹಾದ್ದೂರ 'ಯಾರಿಗೂ. ಸಿಗದ ಪಾರಿವಾಳವ ಹಿಡಿದ', 'ಮಧ್ಯರಾತ್ರಿಯಲಿಂತು ಕೊರೆದು ಮಿಂಚಿನ ಗೆರೆಯ ಮರೆಯಾದ' ಈ ನುಡಿಗಳು ಧ್ವನಿಪೂರ್ಣವಾಗಿವೆ. ಇದೇ ರೀತಿ 'ಶತಾಯುಷಿ ವಿಶ್ವೇಶ್ವರಯ್ಯ'ನವರ ಬಗೆಗೆ ಬರೆದ ಸುನೀತದಲ್ಲಿ ಕನ್ನಡದ ಗುಡಿಗೆ ಚಂದನದ ತೇರು, ಚಿನ್ನದ ಕಳಸದಂತಿದ್ದ ವಿಶ್ವೇಶ್ವರಯ್ಯನವರು ನವಭಾರತದ ಕನಸುಗಾರರಾಗಿ ಹಲವು ಯೋಜನೆಗಳ ಯೋಜಕರಾಗಿ ಮೇಧಾ ಕಿರೀಟವಾಗಿದ್ದರು. ಅವರು ಭಾರತದ ವಜ್ರ ! ಎಂದು ಕಣವಿ ತಮ್ಮ ಸುನೀತದಲ್ಲಿ ಉದ್ಗರಿಸಿದ್ದಾರೆ. ಇದೇ ರೀತಿ ಧಾರ್ಮಿಕ ಕ್ಷೇತ್ರದ ಚೇತನಗಳ ಬಗೆಗೂ ಕಣವಿಯವರು ಸುನೀತಗಳನ್ನು ಬರೆದಿರುವದು ಒಂದು ವಿಶೇಷ. ಸಿದ್ಧಗಂಗಾ ಕ್ಷೇತ್ರದ 'ಶ್ರೀ'ಗಳು ನಡೆಸಿದ ಸೇವಾಕಾರ್ಯಗಳನ್ನೂ

ನಿತ್ಯದಾಸೋಹವನ್ನೂ, ವಿದ್ಯಾಶಾಲೆಯನ್ನೂ ವರ್ಣಿಸುತ್ತ ಕವಿಕಂಡ ಶ್ರೀಗಳ ಮೂರ್ತಿ ಚಿತ್ರವಿದು :

ತ್ಯಾಗದೆತ್ತರಕೆ ತೂಗಿ, ಮುಗಿಲು ಸುತ್ತಲು ಬಾಗಿ
ನೆಲದ ಬದುಕಿಗೆ ಕರುಣೆ–ಕಾಯಕದಲ್ಲಿ ಕರಗಿ
ಮಿರುಗುವ ವಿಭೂತಿ, ನಿರ್ಭಾವದಲಿ ನಡೆಯುವಂದ !
ಘನದೊಳಗೆ ಆಗೀಗ ಸದ್ದಿಲ್ಲದೆಯೆ ಮೂಡಿ
ಗೆದ್ದವರು ಶತಮಾನಕ್ಕೆ ಹೊಸತು ಹಾದಿಮಾಡಿ.

(ಸಿದ್ಧಗಂಗಾಶ್ರೀ–ಜೀವಧ್ವನಿ)

ಧರ್ಮಸ್ಥಳದ ಧರ್ಮಾಧಿಕಾರಿ, ಆಧುನಿಕ ಚಾವುಂಡರಾಯ ವೀರೇಂದ್ರ ಹೆಗ್ಗಡೆಯವರ ಬಗೆಗಿನ ಸುನೀತ ಮೂರ್ತಿಶಿಲ್ಪದಂತೆ ಮನೋಹರವಾಗಿದೆ.

ನಂಬಿಕೆಯ ಮಾತಿರಲಿ, ಹೃದಯವಂತಿಕೆ ತುಂಬು
ಧೀಮಂತ ಚೇತನವನೊಡಗೂಡಿದಧಿಕಾರ
ತೆರೆದಂತೆ ಲೋಕೋಪಕಾರಕೆ ಮಹಾದ್ವಾರ.
ಸತ್ಕರ್ಮಧರ್ಮದ ಪ್ರಜ್ಞೆ ಸರ್ವಾಂಗದಲು
ಮೊಳೆತು. ನಾಡ ಬಾಳಿನ ಗಾಳಿಗಾಡುತ್ತ ಬೆಳೆದು
ಹಾಲ್ದೆನೆಯ ಸಫಲತೆಯಲ್ಲು ನಿರ್ಲಿಪ್ತನಿಲುವು.
ಎದುರಿಗೆ ರಾಶಿ ಒಕ್ಕಿ ಒಡ್ಡಿದರು. ಅಳೆದು ಸುರಿದು
ನೋಡುವ, ಪರಂಪರೆಗೆ ಪ್ರಗತಿಮುಖವನು ಪಡೆದ
ಸರ್ವಸಮರಸಭಾವ; ನಿಗರ್ವ, ತಿದ್ದಿ ತೀಡಿದ
ನಿರಾಡಂಬರದ ಶುಭ್ರತೆಯ ಸಹಜ ವೈಭವ.
ತರುಣದಲಿ ಈ ಬಗೆಯ ಅನಾವರಣಕ್ಕಾವ
ಕಾರಣವೆಂಬ ಶೋಧಕ್ಕೆ ಸಿಗಬಹುದು, ಸ್ಥಳದ
ಮಹಿಮೆಯು ಮೀರಿದಂತಃಕರಣದಮೃತ ಕೊಡುಗೆ
ಧವಳದೈಸಿರಿಗೇಕೆ ಮುತ್ತು ಹವಳದ ತೊಡಿಗೆ ?

(ಧವಳಶ್ರೀ–ಶಿಶಿರದಲ್ಲಿ ಬಂದ ಸ್ನೇಹಿತ)

ವೀರೇಂದ್ರ ಹೆಗ್ಗಡೆಯವರ ನಿರಾಡಂಬರವಾದ ಧವಳ ವ್ಯಕ್ತಿತ್ವವನ್ನು ಸ್ಥಳದ ಮಹಿಮೆಗೆ ಮೀರಿದ ಅಂತಃಕರಣದಮೃತ ಕೊಡುಗೆಯನ್ನು ಕಣವಿಯವರ ಸುನೀತ ಅರ್ಥಪೂರ್ಣವಾಗಿ ಧ್ವನಿಸಿದೆ. ಶಿಕ್ಷಣತಜ್ಞರಾದ ಡಿ. ಸಿ. ಪಾವಟೆ ಅವರ ಬಗೆಗೂ ಕಣವಿ ಸುನೀತ ಬರೆದಿದ್ದಾರೆ.

ಹೀಗೆ ಕವಿ, ಕಲಾವಿದ, ಅನುಭಾವಿ, ಮಹಾತ್ಮರ ವ್ಯಕ್ತಿತ್ವ ನೆಲೆ-ನಿಲುವುಗಳನ್ನು ಸುನೀತಗಳಲ್ಲಿ ಮಾರ್ಮಿಕವಾಗಿ ಚಿತ್ರಿಸಿದ ಕಣವಿಯವರು ಕನ್ನಡ ವ್ಯಕ್ತಿಗೀತ ಪರಂಪರೆಗೆ ಮಹತ್ವದ ಕೊಡುಗೆ ನೀಡಿದ್ದಾರೆ. ಈ ಸುನೀತಗಳ ರಚನೆಯಲ್ಲಿ ಸೂಕ್ಷ್ಮವಾದ ಕೆತ್ತನೆಯ ಕೆಲಸವಿದೆ. ನಾ. ಡಿಸೋಜ ಅವರ 'ಕುಂಜಾಲು ಕಣಿವೆಯ ಕೆಂಪುಹೂ' ಕಾದಂಬರಿ ಅವರ 'ಕುಂಜಾಲು ಕಣಿವೆ' ಸುನೀತಕ್ಕೆ ಪ್ರೇರಣೆಯೊದಗಿಸಿದೆ. ಕರ್ನಾಟಕ ಕಾಲೇಜಿನ ವಜ್ರಮಹೋತ್ಸವಕ್ಕೆ ಎಂಬ ಸುನೀತದಲ್ಲಿ ಸಂಸ್ಥೆಯೊಂದರ ಉತ್ಕರ್ಷದಲ್ಲಿ ಆತ್ಮೀಯತೆಯ 'ವಜ್ರದೊಸಗೆ'ಯನ್ನು ಕಾಣಲಾಗಿದೆ.

ಕಣವಿಯವರು ಬರೆದ ನಿಸರ್ಗ ಕುರಿತ ಸುನೀತಗಳು ವಿಪುಲವಾಗಿದ್ದು ಅವು ಕವಿಯ ಪ್ರಕೃತಿಪ್ರೀತಿಯ ದ್ಯೋತಕಗಳಾಗಿವೆ. 'ಕಾವ್ಯಾಕ್ಷಿ'ಯಿಂದ 'ಶಿಶಿರದಲ್ಲಿಬಂದ ಸ್ನೇಹಿತ' ಕವಿತಾಸಂಕಲನದವರೆಗೆ ನಿಸರ್ಗ-ಸುನೀತಗಳನ್ನು ನಿರಂತರವಾಗಿ ರಚಿಸಿರುವ ಕಣವಿಯವರಲ್ಲಿ ಪ್ರಕೃತಿಯ ಜೀವಚೈತನ್ಯದ ಬಗೆಗೆ ಲವಲವಿಕೆ ತುಂಬಿದೆ. 'ಕಾವ್ಯಾಕ್ಷಿ'ಯ ರಮ್ಯ ಸಂಪ್ರದಾಯದ ಸುನೀತಗಳಲ್ಲಿ ಇದನ್ನು ಕಾಣಬಹುದು. 'ಉಷಾ' ಸುನೀತದಲ್ಲಿ ಬರುವ ಬೆಳಗಿನ ವೈಭವದ ನುಡಿಚಿತ್ರ ಇದು :

ಚಿಗುರು ಚೆಂಗುಡಿಗಳಿಗೆ ಪನ್ನೀರ ಚಿಮುಕಿಸುತ
ಮೂಡಣದ ಹೊಸತಿಲಿಗೆ ಹೊಂಬಣ್ಣ ನೀರಿನಲಿ
ಸಾರಣೆಯ – ಕಾರಣೆಯಗೈದು, ಕುಂಕುಮದಿಂದ
ಬೊಟ್ಟಿಟ್ಟು ತಳತಳಿಸಿ ಸಂತಸ ಶುಭೋದಯದ
ಝಣಝಣರು ಚಕಮಕಿತ ಭೂಸಭೋರಂಗದಲಿ
ಉನ್ಮತ್ತರಾಗಿಣಿಯು, ಜಗದುದಯಕಾರಿಣಿಯು
ಚೆಲುವೆ. ಶುಭದರ್ಶಿನಿಯು – ಹೋ ! ನರ್ತಿಸಿದಳುಷೆಯು.

(ಉಷಾ – ಕಾವ್ಯಾಕ್ಷಿ)

ಜಗದುದಯಕಾರಿಣಿ ಚೆಲುವೆ ಶುಭದರ್ಶಿನಿ ಉಷೆಯು ನರ್ತಿಸುವ ಬಗೆಯನ್ನು ವರ್ಣಿಸುವಾಗ ಕಣವಿಯವರ ಕಾವ್ಯಭಾಷೆ ನಾಟ್ಯಗುಣವನ್ನು ಪಡೆಯುತ್ತದೆ. 'ನೆಲಮುಗಿಲು' ಸುನೀತದಲ್ಲಿ ಕಣವಿ ಅವರ ತತ್ವಜ್ಞಾನ ಹರಳುಗಟ್ಟಿದೆ. ಪ್ರಕೃತಿಯ ಸಂತಾನವಾದ ಮನುಷ್ಯನ ಸೀಮೆಗಳನ್ನು ಗುರುತಿಸುವ ದೃಷ್ಟಿ ಇಲ್ಲಿದೆ. ಈ ಸುನೀತದ ಕೊನೆಯ ಸಾಲುಗಳು ಮಹತ್ವಪೂರ್ಣವಾಗಿವೆ.

ತಾಯಮೊಗ ಸೂರ್ಯಪಾನವು ಹೊರಳೆ ಹೊಂಬೆಳಗು !
ಎಲ್ಲಿಡೆಗು ಏಕಕಾಲಕ್ಕೆ ಬಹುದೆ ಮಳೆ ? ಹರಗು
ಒಳಹೊರಗು ಸಿದ್ಧವಿರು. ಹೊಸನೀರು ನಿಬ್ಬೆರಗು
ಗುರುತ್ವಾಕರ್ಷಣ ಕುರುಣೆ-ಕೇಂದ್ರ ನೆಲದೊಡಲು
ಬಾನತೀಂದ್ರಿಯಸ್ಪರ್ಶ, –ತುಂಬಿ ತೇಲಿವೆ ಮುಗಿಲು.

(ನೆಲಮುಗಿಲು–ನೆಲಮುಗಿಲು)

ನಿಸರ್ಗದಲ್ಲಿ ನಡೆವ ಋತುಮಾನದ ಲೀಲೆಯ ಸೊಗಸು ಸೌಂದರ್ಯಗಳು ಸುನೀತಗಳಲ್ಲಿ ವಿಶಿಷ್ಟವಾಗಿ ಮೂಡಿವೆ. ಚೈತ್ರ, ವೈಶಾಖಗಳನ್ನು ಹೊರತು ಪಡಿಸಿ ವರ್ಷದ ಎಲ್ಲ ಮಾಸಗಳಲ್ಲಿ ಪ್ರಕೃತಿಯ ವಿವಿಧ ಮುಖಗಳನ್ನು ಕಣವಿಯವರು ಸುನೀತದಲ್ಲಿ ಪ್ರಕಟಿಸಿರುವದು ಕನ್ನಡ ಕಾವ್ಯ ಪರಂಪರೆಯ ಸಂದರ್ಭದಲ್ಲೂ ಮಹತ್ವದ ಅಂಶ ಎನ್ನಬಹುದು. ಕಾಳಿದಾಸನ 'ಋತುಸಂಹಾರ'ದಂತೆ ಕವಿ ಕಣವಿ ನಿಸರ್ಗದರ್ಶನದಲ್ಲಿ ಜೀವನಪ್ರೀತಿಯನ್ನು ತುಂಬುವದು ನಿಜಕ್ಕೂ ಆಶ್ಚರ್ಯಕರವಾದುದು. ಕಾಳಿದಾಸನ ಮೇಘಸಂದೇಶದಲ್ಲೂ ಆಷಾಢ ಮಾಸದಲ್ಲಿಯೇ (ಆಷಾಢಸ್ಯ ಪ್ರಥಮ ದಿವಸೆ ಮೇಘಮಾಶ್ಲಿಷ್ಟ ಸಾನುಃ) ಯಕ್ಷನ ಮೂಲಕ ಮೋಡವನ್ನು ಯಾಚಿಸುವದು ನಡೆಯುತ್ತದೆ. ಹಾಗೆಯೇ ಕಣವಿಯುವರ ಮನಸಿನಾಗಸಕ್ಕೆ ಆಷಾಢ ಆಕ್ರಮಿಸಿ ಬೆಳಕನು ಬದಿಗೆ ಸರಿಸಿ ಈಸತೊಡಗುತ್ತಾನೆ. ಕಣ್ಣುಮುಚ್ಚಾಲೆ ಆಡುವ ಬೆಳಕು ಕತ್ತಲು, ಆಗಲೆ ಹೊಲಗದ್ದೆಗಳಲ್ಲಿ ಬಿತ್ತಿಗೆ ಬೆಳೆಸಾಲು, ಸುಯ್ಯುವ ಗಾಳಿ ಇತ್ಯಾದಿ ಚಿತ್ರಿಸುತ್ತ ಸುನೀತ ಮುಕ್ತಾಯವಾಗುವದು ಹೀಗೆ :

ನೆಲದ ಮಣ್ಣೆದ್ದು ಗುಳ್ಳವ್ವನಾಗಿ ಗೋಪುರ
ಕಟ್ಟಿ : ಗುಲಗಂಜಿ: ಹಳ್ಳಿ ಹೆಂಗಳ ಭಾವದಲಿ
ಬಾಲ್ಯವನು ತುಂಬಿ ಪಲ್ಲವಿ 'ಸುವ್ವಿಸುವ್ವಾಲಿ',

ಒಳವಿಗೆ ತಾಗಿ, ಏರಿ ಕನಸಿನಂತಃಪುರ
'ಆಷಾಢ ಓ ಆಷಾಢ ನೀ ಆಡಿಸ್ಯಾಡಬ್ಯಾಡ'
ಬೀಸಿ ಬೀಸಿ ಬಡಿ, ಬರೇ ತಿದ್ದಿ ತೀಡಬೇಡ.

(ಆಷಾಢ–ಕಾರ್ತೀಕದ ಮೋಡ)

ಇಂಥಲ್ಲಿ ಗ್ರಾಮೀಣ ಸಂಸ್ಕೃತಿಯ ವಿವರಗಳು ಸಜೀವವಾಗಿ ಕಣ್ಣ ಮುಂದೆ ನಿಲ್ಲುತ್ತವೆ. ಹಸಿರು ತುಂಬಿ ನೆಲದ ಕೊರತೆಯನೆಲ್ಲಾ ನೀಗಿಸಿ ಬರುವ 'ಶ್ರಾವಣ'ದ ವೈಭವ ಅಪರೂಪವಾದದ್ದು.

ಶ್ರಾವಣವು ಸೂರೆಗೊಳಿಸಿದ ಹೂವು ನಸುಕಿನಲಿ
ಕಣ್ಣು ತೆರೆದು, ಸಂಜೆಯವರೆಗೂ ಮಾಸದಬಣ್ಣ.
ದಿನದಿನವು ಪರ್ವ, ಆಡಿ ಬಿಟ್ಟಿರುವ ಜೋಕಾಲಿ.
ಮುರುಕು ಜೋಪಡಿ ಹರಕು ಚಿಂದಿ ಮಂದಿಯ ಬದುಕು
ಕಂಡಕಂಡಲ್ಲಿ ಕೈಯೊಡ್ಡಿ ಕೇಳುವ ಪ್ರಶ್ನೆ–
ಪುಸ್ತಕವ ಬಿಟ್ಟು ವಾಸ್ತವದಿ ಉತ್ತರ ಹುಡುಕು.
ವ್ರತ ನಿಯಮ, ಇಷ್ಟ-ಕುಲ-ಗ್ರಾಮದೈವತ ಪೂಜೆ
ಮುಗಿಯಿತೇ ? ಈ ಸಮಷ್ಟಿಗೆ ಸೃಷ್ಟಿ ನೀಡಿರುವ ಕೊಡುಗೆ ?

(ಶ್ರಾವಣ–ಕಾರ್ತೀಕದ ಮೋಡ)

ಕವಿ ವಾಸ್ತವದ ಬದುಕಿಗೆ ಸ್ಪಂದಿಸುವ ರೀತಿ ನಿಜಕ್ಕೂ ಇದರ ಸಾಮಾಜಿಕ ಮುಖವನ್ನು ಪ್ರಕಟಿಸುತ್ತದೆ. ಪ್ರಕೃತಿಯ ವರ್ಣನೆಯಲ್ಲೂ ಮುರುಕು ಜೋಪಡಿಯಲ್ಲಿ ಹರಕು ಚಿಂದಿ ಉಟ್ಟು ಬದುಕು ನಡೆಸುವ ಸ್ಥಿತಿಯನ್ನು ಕವಿ ಮರೆತಿಲ್ಲ.

ಸುತ್ತಲೂ ಜಾರಿಕೆ; ಗಟ್ಟಿ ಹೆಜ್ಜೆಯನಿಟ್ಟು ತೂಕಹಿಡಿದು
ನಡೆದವರೆಷ್ಟು ? ಆಗೀಗ ಮುಖತೋರಿ ಸೂರ್ಯ–
ಭಾದ್ರಪದ ಬಾನೆಲ್ಲ ಸ್ವಚ್ಛಗೊಳಿಸುವ ಕಾರ್ಯ

(ಭಾದ್ರಪದ–ಕಾರ್ತೀಕದ ಮೋಡ)

ಸೇವಂತಿಗೆ, ಗೊರಟಗೆ, ಕೇದಗೆ ಹಲವು ಬಣ್ಣದ ಹೂಗಳು ನಳನಳಿಸುವ ಭಾದ್ರಪದ ಮಾಸದಲ್ಲಿ ಹುಲ್ಲಿಗೂ ಉಲ್ಲಾಸ ತುಂಬಿರುತ್ತದೆ. ನೂರು ದುರಂತಗಳ ನೋವಿನ ನಡುವೆ ಮಂಗಲ ಮೂರ್ತಿ (ಗಣಪತಿ) ಕಂಗೊಳಿಸಿ ಜನಮನದ ಆವಿಷ್ಕಾರ ಆಗುವದನ್ನು ಕವಿ ಕಾಣಿಸಿದ್ದಾರೆ.

ಆಶ್ವಿನಕೆ ಆಸನವೇ ? ತೊಳೆದ ನೀಲಿಯ ಬಾನು
ಲಕಲಕ ಹೊಳೆವ ಬಿಸಿಲು, ಸಂಜೆ ಹೊತ್ತಿಗೆ ಸುರಿದು
ಸರಿವ ಮಳೆ : ಗದ್ದೆಯಲಿ ಮುದ್ದುಗರೆಯುವ ನೆಲ್ಲು
ಹೊಲದುದ್ದ ಜೋಳದ ನಿಲುವು, ಹಕ್ಕಿ-ತೆನೆ-ತೂಗು
ಕಾಡು-ನಾಡು-ಹೂವು ದಂಡು ದಿಗ್ವಿಜಯ ಪಯಣ.

(ಆಶ್ವಿನ–ಕಾರ್ತೀಕದ ಮೋಡ)

ಆಶ್ವಿನ ಮಾಸದಲ್ಲಿ ಒಂಬತ್ತು ಇರುಳು ಉತ್ಸವ, ದೇವತೆಗೆ ನಂದಾದೀಪ, ಆಯುಧಪೂಜೆ ಜರುಗುವದು, ಅಣ್ವಸ್ತ್ರ ಪೈಪೋಟಿ, ಸದ್ಯದ ವರ್ತಮಾನ ಎಂದು ಕವಿ ಜಾಗತಿಕ ಬದುಕಿನ ಬಗೆಗೂ ಬೆಳಕು ಚೆಲ್ಲುತ್ತಾರೆ. ಎಲ್ಲೆಡೆಗೂ ಸೋಲನೊಪ್ಪದ ನರಕಾಸುರರು ತುಂಬಿರುವಾಗ ಯಾರಿಗಾರತಿ ಬೆಳಗುವವರು ? ಎಂಬ ಪ್ರಶ್ನೆ ಮಾರ್ಮಿಕವಾಗಿದೆ.

ಅರ್ಧದಾರಿಯ ಸಮೆದ ಶರದೃತು ಹೇಮಂತ–
ನೊಡ ಸಲ್ಲಾಪ, ಸ್ವಾತೀ ಹನಿಯ ಜಾತಿ ಮುತ್ತು
ತೆನೆ-ಧಾನ್ಯ, ಎಲೆದೋಟ ಫಲಭಾರ ಸಂಪತ್ತು.
ಜೇನ್ಹೊಣದ 'ಗುಂ'. ಜೀರುಂಡೆ ನಾಡಿನಾದ್ಯಂತ,
ಬಲಿಚಕ್ರವರ್ತಿ ಕೀರ್ತಿ : ದೊರೆಯದೆ ಪ್ರತಿಯೊಬ್ಬ
ನಿಗೂ ಮೂರು ಪಾದದ ಭೂಮಿ, ಮೇಲೊಂದು ಸೂರು ?

(ಕಾರ್ತೀಕ–ಕಾರ್ತೀಕದ ಮೋಡ)

ನೆಲದ ಮಕ್ಕಳಿಗೆ ಮೂರು ಪಾದದ ಭೂಮಿ ಮೇಲೊಂದು ಸೂರೂ ಇಲ್ಲದಿದ್ದರೂ ಹಬ್ಬದ ವೈಭವ, ದೀಪಗಳ ಸಾಲು, ಗಾಳಿಯಲಿ ಕನಸು ತೇಲುವದು ಕಾರ್ತೀಕ ಮಾಸದ ಪೌರಾಣಿಕ ಪ್ರತಿಮೆಗಳು ಈ ಸಂದರ್ಭದಲ್ಲಿ ಅರ್ಥವಂತಿಕೆಯನ್ನು ಪಡೆಯುತ್ತವೆ. ಮಾರ್ಗಶಿರ ಮಾಸದ ಸುನೀತದಲ್ಲಿ ಕವಿ 'ಮನುಷ್ಯನ ಜೊತೆಗೆ ಋತುಗಳೂ ಗತಿ ಬದಲಿಸಿವೆ' ಎಂದು ಹೇಳಿರುವದು ತುಂಬ ಧ್ವನಿಪೂರ್ಣವಾಗಿದೆ.

ಹೊಲದೂಟ, ಬಯಲಾಟ. ನಾಗರಿಕನಿಗೆ ಶುಂಠಿ.
ಮೈಲಾರ ಗೊಗ್ಗಯ್ಯ ಉಗ್ಗಡಿಸು 'ಏಳ್ಕೋಟಿ'
ದೇವರ ಗುಡ್ಡ ಸುತ್ತಿ ಬೆಳೆದರವತ್ತು ಕೋಟಿ !
'ಮಾರ್ಗಶಿರ ಮಾಸವೆ ತಾನು' ಶ್ರೀಕೃಷ್ಣನೆಂದ.
ಪಥಿಕನಿಗೆ ಮಾರ್ಗಾಯಾಸ ನೀರಡಿಸಿ ನಿಂದ.

(ಮಾರ್ಗಶಿರ–ಕಾರ್ತೀಕದ ಮೋಡ)

ಪುಷ್ಯ ಮಾಸದಲ್ಲಿ ಚಳಿ ತುಂಬಿದಾಗ ಬೆಳೆಗಳನ್ನು ಮನೆತುಂಬಿಸುವ ಕಾರ್ಯದಲ್ಲಿ ರೈತರು ತೊಡಗಿದಾಗ ಬನದ ಹುಣ್ಣಿವೆಗೆ ಹಣ್ಣೆಲೆ ಉದುರುವದು ಇತ್ಯಾದಿ ಸಂಗತಿಗಳು 'ಬಯಕೆ-ಬದಲಾವಣೆ' ತರುವದನ್ನು 'ಪುಷ್ಯ' ಚಿತ್ರಿಸುತ್ತದೆ.

ಉತ್ತರಾಯಣ ಮಹಾಪರ್ವ, ಉತ್ತರವೆಲ್ಲ
ಹಿಮ ಕೊಡವಿ ಏಳುವದೇ ? ರಣ ಹಲಗೆ ಮೆರವಣಿಗೆ
ಭುಪ್ಪರ ಬೇಟೆ, ನೈವೇದ್ಯ ಬನಶಂಕರಿಗೆ.
ಮುಡಿಪು ಹರಕೆ ಸಲ್ಲಿಸಿದಷ್ಟೆ ಮುಗಿದಂತಲ್ಲ
ಅವರಾತ್ರಿ ಅಮಾವಾಸ್ಯೆಯಲೀಸಬೇಕಿದ್ದು
ಜಯಿಸಬೇಕು : ತಂಬೂರಿ ಶ್ರುತಿಯ ಹಿಡಿದು.

(ಪುಷ್ಯ–ಕಾರ್ತೀಕದ ಮೋಡ)

ಚಳಿಗಾಲದ ವಾತಾವರಣದಲ್ಲಿ ಬದುಕನ್ನು ಕಂಡರಿಸಿದ ಪುಷ್ಯ ಮಾಸದ ನಂತರ ಕಣವಿಯವರು ಮಾಘದಲ್ಲಿ ಮಾಘಸ್ನಾನ, ರಥಸಪ್ತಮಿಯ ಸೂರ್ಯ, ಮಾಮರದ ಹೂಗೊನೆಗಳ ವೈಭವಕ್ಕೆ ಹೊರಳಿ,

ಎಲ್ಲಮ್ಮ ನಿನ್ನೋಲಗಕುಧೋ ಅದೋ ಪ್ರತಿಧ್ವನಿ
ಉಪವಾಸ ಜಾಗರಣೆ, ಸ್ಮರಣೆ ಶಿವರಾತ್ರಿಯಲಿ
ಮಾತ್ರವೇ ? ಸೂತ್ರವಾಗಿದೆ ಕೋಟಿ ಸಂಖ್ಯೆಯಲಿ
ದಾಟಿ ಬಂದಾಗ ದಡಕೆ ಜನಕೆ ನಿಜ ಪಾರಣೆ.

(ಮಾಘ–ಕಾರ್ತೀಕದ ಮೋಡ)

ಪ್ರತಿಯೊಂದು ಮಾಸದ ಚಿತ್ರಣದಲ್ಲಿ ಕಣವಿಯವರು ಕನ್ನಡ ನಾಡಿನ ಸಾಂಸ್ಕೃತಿಕ ಹಬ್ಬ ಉತ್ಸವಗಳನ್ನು ದಾಖಲಿಸಿ ಅವುಗಳ ಮಹತ್ವ ಮತ್ತು

ಆಚರಣೆಯನ್ನು ಸ್ಮರಣೆಗೆ ತಂದುಕೊಡುತ್ತಾರೆ. ವರ್ಷದ ಕೊನೆಯ ಮಾಸ
'ಫಾಲ್ಗುಣ' ಸುನೀತದ ಸಾಲುಗಳಿವು :

ದಿನಕ್ಕೊಂದು ಚಂದ ಬೆಳೆದ ಫಾಲ್ಗುಣ ಚಂದ್ರ,
ಪಡುವಣದ ಸುಳಿಗಾಳಿ ಮುಗಿದ ಸುಗ್ಗಿಯ ಹಿಗ್ಗು.
ಕೋಗಿಲೆ ಕಹಳೆ; ಬೇವಿನ ಹೂವ ಕುಸುರು ಸೊವಡು
ದುಂಡು ಮಲ್ಲಿಗೆ ಮದವೆ ? ಎದೆ ಚಿಗುರಿದ ಹಂದರ.
ಕಾಮನ ಹಬ್ಬಕ್ಕೆ ಆಧಾರ ಬೇಕೆ, ಹೇಳಿ

(ಫಾಲ್ಗುಣ–ಕಾರ್ತೀಕದ ಮೋಡ)

ದುಂದುಮೆ ಪದಗಳನ್ನು ಹಾಡುವ, ಹೋಳಿ ಹಬ್ಬದ ಬಣ್ಣದೋಕುಳಿ, ಹಲ
ಬಡಿತ, ಹೆಜ್ಜೆ ಮೇಳ ಮೊದಲಾದ ಜಾನಪದ ಜೀವನದ ರಸಚಿತ್ರಗಳು ಈ
ಸುನೀತದಲ್ಲಿ ತಕ್ಕ ವಾತಾವರಣವನ್ನು ನಿರ್ಮಿಸುತ್ತವೆ. ಹೀಗೆ ವರ್ಷದ ವಿವಿಧ
ಮಾಸಗಳಲ್ಲಿ ಕಾಣುವ ಪ್ರಕೃತಿಯ ವರ್ಣನೆ ಜೊತೆಗೆ ಕನ್ನಡ ಜನಪದದ
ಜೀವನವೈವಿಧ್ಯ, ಸಾಮಾಜಿಕ ಸ್ಪಂದನವನ್ನೂ ಕಣವಿಯವರು ಈ
ಸುನೀತಗಳಲ್ಲಿ ಅನಾವರಣಗೊಳಿಸಿದ್ದಾರೆ.

ನಿಸರ್ಗದ ದೃಶ್ಯಪ್ರಪಂಚದಲ್ಲಿ ಕಣವಿ ಅವರನ್ನು ಸದಾ
ಪುಲಕಗೊಳಿಸಿದ್ದು ಹೂವುಗಳ ಸೌಂದರ್ಯರಾಶಿ.

ಹಳದಿ ಹೂ-ಚೆಂಡು ಲೋಕಕ್ಕೆ ತಾನೇ ಗಂಡು
ಎನುವಂತೆ ಬಡವರಂಗಳದಲ್ಲು ಸಿಂಗಾರ.
ಹೊಟ್ಟೆಗೆ ಹಿಟ್ಟಿಲ್ಲವಾದರೂ ಜುಟ್ಟಿಗೆ ಹೂವು–
ಕೊಟ್ಟು ಮರೆತಿದೆ ಸೃಷ್ಟಿ : ಪ್ರೀತಿಗೆ ನೋವು ಕಾವು

(ಹಳದಿ ಹೂ–ಕಾರ್ತೀಕದ ಮೋಡ)

ಸಾಲಾಗಿ ನವಿಲು ಗರಿಗೆದರಿ ನರ್ತಿಸಿದಂತೆ
ಮುಂಜಾವದಲಿ ಬೇಲಿತುಂಬ ನೀಲಿಯ ಹೂವು
ಜೀವನೋತ್ಸಾಹದಲಿ ಎದೆದುಂಬಿಸುವ ರೂಹು !
ವಿಮಲ ಕೋಮಲ ಕಾಂತಿಯೊಗುಮಿಗುವ ಚೈತ್ಯಾಕ್ಷಿ
ಅದೋ ಅಲ್ಲಿ, ಇದೋ ಇಲ್ಲಿ ಪ್ರತ್ಯಕ್ಷ ಸುಮಸಾಕ್ಷಿ !

(ಬೇಲಿಯ ಮೇಲಿನ ನೀಲಿಯ ಹೂಗಳು–ದೀಪಧಾರಿ

ಸುತ್ತು ಬೇಲಿಯ ಮೇಲೆ ಮತ್ತೆ ನೀಲಿಯ ಹೂವು !
ಇಡಿಯ ಮುಂಜಾವನ್ನೆ ಹಿಡಿದು, ಮಿದುವಾಗಿ ಹೂ-
ಗೆನ್ನೆಗೊತ್ತಿದ ಮುತ್ತು ಆಕಾಶ ನೆಲದಲ್ಲಿ
ಕಂಡ ನೀಲಿಯ ಕನಸು ನನಸಾಗಿ, ಉತ್ತರೆಯ
ಮಳೆಗೆ ಹೂವಿನ ಹುತ್ತ : ವಿದ್ಯುತ್ ಕಂಬ ಸುತ್ತಿ
ತಂತಿಗೆ ಹಬ್ಬಿ, ಹಚ್ಚಿ ನೀಲಿ ಬಣ್ಣದ ಬಲ್ಬು !
ಸೂರ್ಯ ಮೇಲೇರಿದರೆ ಮುದುಡಿ ಅಡಗುವ ನೀಲ
ಬೆಡಗಿಯರು. ಅಂಗೈಯಗಲ ಎಲೆ ಎಲೆಯಮರೆಗೆ.

(ಮತ್ತೆ ನೀಲಿಯ ಹೂವು !–ಶಿಶಿರದಲ್ಲಿ ಬಂದ ಸ್ನೇಹಿತ)

ಕಣವಿ ಅವರ ನಿಸರ್ಗ ಕುರಿತ ಸುನೀತಗಳಲ್ಲಿ ವಸ್ತುವೈವಿಧ್ಯವಿದೆ. ಕತ್ತಲೆ ಬೆಳಕು, ರಾತ್ರಿ, ಕಾರ್ತೀಕದ ಮೋಡ, ಹಕ್ಕಿಗಳು, ಸುನೀತಗಳಲ್ಲಿ ಅವರ ತೆರೆದ ಮನದ ಅವಲೋಕನವಿದೆ. ಪಕ್ಷಿಲೋಕದ ಬಗೆಗೆ ಪ್ರೀತಿ ತುಂಬಿದ್ದು ಪರಿಸರ ಪ್ರೀತಿಯ ಮಿಡಿತ ಕಾಣಿಸುವ ರೋಮ್ಯಾಂಟಿಕ್ ಮನೋಧರ್ಮ ಕವಿ ಕಣವಿ ಅವರ ವ್ಯಕ್ತಿತ್ವದಲ್ಲಿ ಕಾಣುವದಾದರೂ ಅಲ್ಲಿ ನೆಲದ ಬದುಕನ್ನು ಬಿಟ್ಟು ಓಡುವ ಪಲಾಯನವಿಲ್ಲ. ವಾಸ್ತವ ಬದುಕನ್ನು ಅವಲೋಕಿಸುತ್ತ ನಿಸರ್ಗದ ಚೆಲುವು ನೀಡುವ ಅಮಿತಾನಂದಗಳನ್ನು ಅನುಭವಿಸುವ ಲವಲವಿಕೆ ಕಣವಿಯವರಲ್ಲಿರುವದನ್ನು ನಾವು ಕಾಣುತ್ತೇವೆ. ಜೀವಪರ ದೃಷ್ಟಿ ಅವರದಾಗಿದೆ.

'ಕಿತ್ತೂರಿನ ಕೋಟೆಯನ್ನು ಕಂಡು' 'ಕಿತ್ತೂರಿನ ಕಿಡಿಗಳು' ಸುನೀತಗಳು ಸ್ವಾತಂತ್ರ್ಯಕ್ಕಾಗಿ ಹೋರಾಡಿದ ವೀರರನ್ನು ನೆನಪಿಸುತ್ತವೆ. ಗೋಕಾಕರು ಇಂಗ್ಲೆಂಡಿನ ಎಡಿನ್‌ಬರೋ ಕೋಟೆಯನ್ನು ಕಂಡಾಗ ಅವರಿಗಾದ ಅನುಭವವನ್ನು ಕಾವ್ಯದಲ್ಲಿ ಪ್ರಕಟಿಸಿದಂತೆ ಕಣವಿಯವರ ಸುನೀತ ಕಿತ್ತೂರು ಕೋಟೆಯ ಚಾರಿತ್ರಿಕ ವೈಭವದತ್ತ ನಮ್ಮ ಮನಸ್ಸು ತೆರೆಯುತ್ತದೆ. ಐತಿಹಾಸಿಕ ಸ್ಮಾರಕವಾದ, ಜಗತ್ತಿನ ಅದ್ಭುತಗಳಲ್ಲೊಂದಾದ 'ಗೋಲಗುಮ್ಮಟ'ದ ಬಗೆಗೂ ಕಣವಿ ಸುನೀತ ರಚಿಸಿದ್ದಾರೆ. ಚರಿತ್ರೆಯನ್ನು ಕಾವ್ಯಾಭಿವ್ಯಕ್ತಗೊಳಿಸುವ ಕಣವಿಯವರು ಸುನೀತದ ಮೂಲಕ ಸಾಮಾಜಿಕ ಸ್ಪಂದನಕ್ಕೂ ತಮ್ಮ ಹೃದಯವನ್ನು ತೆರೆದುಕೊಂಡಿದ್ದಾರೆ. ದೇಶ ಜನಸಂಖ್ಯಾ ಸ್ಫೋಟದಿಂದ ತತ್ತರಿಸುತ್ತಿರುವಾಗ ಕಣವಿ ಅವರು 'ನಾವು ನಾಲ್ವತ್ತು ಕೋಟಿ'

ಸುನೀತ ಬರೆದು ಭಾವೈಕ್ಯತೆಯ ಸಂದೇಶ ಪ್ರಕಟಿಸಿದ್ದಾರೆ. 'ಅಖಂಡ ಕರ್ನಾಟಕ' ಸುನೀತದಲ್ಲಿ ಕನ್ನಡನಾಡಿನ ಏಕೀಕರಣದಿಂದಲೇ ನವಭಾರತದ ಬಾಗಿಲಿಗೆ ತೋರಣ ! ಎಂದು ನಾಡ ಏಕೀಕರಣಕ್ಕೆ ಕರೆ ನೀಡಿದ್ದಾರೆ.

ಕಣವಿಯವರ ಸುನೀತಗಳು ಶಿಲ್ಪಸೌಷ್ಠವ, ಛಂದೋಪ್ರಯೋಗ, ಭಾಷೆಯ ಸಂವಹನ ಗುಣದಿಂದ ಮಹತ್ವಪೂರ್ಣವಾಗಿವೆ. ಅವರು ಇಟಾಲಿಯನ್ ಮಾದರಿಯ ಸುನೀತ (೮+೬ ಪಂಕ್ತಿಗಳು) ಮತ್ತು ಶೇಕ್ಸ್‌ಪಿಯರನ್ ಮಾದರಿಯ ಸುನೀತ(೪ x ೩ + ೨ ಪಂಕ್ತಿಗಳು)ಗಳೆರಡನ್ನೂ ಬಳಸಿದ್ದಾರೆ. 'ರಸಿಕರಂಗ', 'ಎಪ್ಪತ್ತರ ಬೇಂದ್ರೆ' ಮೊದಲಾದವು ಇಟಾಲಿಯನ್ ಮಾದರಿಯ ಸುನೀತವಾದರೆ, ಪ್ರಸಿದ್ಧವಾದ 'ವಿನಾಯಕರಿಗೆ ವಂದನೆ', ಶೇಕ್ಸ್‌ಪಿಯರನ್ ಮಾದರಿಯ ಸುನೀತವಾಗಿದೆ. ಇದೂ ಅಲ್ಲದೆ ಸ್ವತಂತ್ರವಾದ ವಿವಿಧ ಪ್ರಯೋಗಶೀಲತೆಯನ್ನೂ ಕಣವಿಯವರು ಸಾಧಿಸಿದ್ದಾರೆ. ರಸಿಕ ರಂಗರ ಬಗ್ಗೆ ಹೇಳುವಾಗ 'ಮುಳ್ಳಿನಲು ಮುಗುಳೊಡೆದೆ' (ಜೀವನದ ಕಷ್ಟದಲಿ ಹೂವಾಗಿ ಅರಳಿದರು) ಪು. ತಿ. ನ. ಅವರ ಕುರಿತು 'ಜಗದಚ್ಚರಿ ತೆರಂಬೊಳೆವ ಮನದಪೂರ್ವಕಳೆ' (ಪಂಪನಲ್ಲಿ ಬರುವ 'ತೆರಂಬೊಳೆ' ಪದವನ್ನು ಬಳಸಿಕೊಂಡು) ಎಂದಿರುವರು. ವಿನಾಯಕರ ಮನೋಧರ್ಮದಲ್ಲಿ ಕಾಣುವ 'ಅಂತಃಕರಣದಂಗೈಯಲ್ಲಿ ಬೆಲೆಗೈವ' ಸಾಧನೆಯನ್ನು ಗುರುತಿಸಿದ್ದಾರೆ. ಬೇಂದ್ರೆಯವರ ಕಾವ್ಯ ಪ್ರತಿಭೆಯ ಬಗೆಗೆ 'ಹಣ್ಣಾದ ಕೇದಿಗೆಯ ಹೊಡೆ, 'ನಾದ' 'ಒಳದನಿ' 'ಮಾಂತ್ರಿಕನಾಟ' ಮುಂತಾದ ಪದಪ್ರಯೋಗಗಳು ಅರ್ಥಕ್ಕೆ ಧ್ವನಿಶಕ್ತಿ ಹೆಚ್ಚಿಸುವದು ಕಂಡುಬರುತ್ತದೆ. 'ತುಂಬುದಿಂಗಳು' ಸುನೀತ (ಮಧುಚಂದ್ರ ಸಂಕಲನ)ದಲ್ಲಿ ವಾತ್ಸಲ್ಯ-ಖುಷಿ-ವಿನೋದಗಳ ಸುಂದರ ಸಾಮರಸ್ಯವಿದೆ. ಕಣವಿಯವರ ನವೋದಯ ಮತ್ತು ನವ್ಯ ಮನೋಧರ್ಮಗಳೆರಡೂ ಅವರ ಸುನೀತಗಳ ಅಭಿವ್ಯಕ್ತಿ ವಿನ್ಯಾಸದಲ್ಲಿ ಪ್ರಕಟಗೊಂಡಿವೆ. ತಾತ್ವಿಕ ವಿಷಯಗಳ ಜಿಜ್ಞಾಸೆಯೂ ಸುನೀತದಲ್ಲಿ ಬಂದು ಚಿಂತನೆಗೆ ನಮ್ಮನ್ನು ತೊಡಗಿಸುತ್ತದೆ. ಕಣವಿ ಅವರು ಬರೆದ ಸುನೀತಗಳಲ್ಲಿ ಭಾವಸೌಂದರ್ಯವಿದೆ, ಅರ್ಥದ ವಿಭಿನ್ನ ಪದರುಗಳು ತುಂಬಿವೆ. ಬುದ್ಧಿ-ಭಾವಗಳ ಸಮತೋಲನವೂ ಸಮನ್ವಯ ಚಿಂತನೆಗಳೂ ಅಂತಸ್ಥವಾಗಿವೆ.

ಕಣವಿ ಅವರ ಸುನೀತಗಳ ಮೋಹಕತೆ ಅವು ಬೀರಿದ ಪ್ರಭಾವ ಮತ್ತು ಸಾಂಸ್ಕೃತಿಕ ಮೌಲ್ಯಗಳು ಕವಿ ಸಾಹಿತಿಗಳ ವ್ಯಕ್ತಿತ್ವದ ಗುಣಮೌಲ್ಯಗಳು ಅವುಗಳದೇ ಆದ ವಿಶಿಷ್ಟತೆಯಿಂದ ರಾರಾಜಿಸುತ್ತವೆ.

ಎಷ್ಟು ಹಣತೆಗಳಿಂದ ಕತ್ತಲೆಯು ಕರಗುವದು ?
ಎಷ್ಟು ಕವಿತೆಗೆ ಜಗದ ಕಣ್ಣು ತೆರೆಯುವದು ?
ಒಂದಿದ್ದರೂ ಸಾಕು, ಮನೆಗೆ ಬೆಳಕಾಗುವದು
ಒಂದು ಕವಿತೆಗೆ ಕೂಡ ಮನ ಕರಗಬಹುದು.

(ಒಂದು ಹಲವು–ಜೀನಿಯಾ)

ಕಣವಿಯುವರೇ ಒಡನುಡಿದ ಈ ಸುನೀತದ ಸಾಲುಗಳು ಅವುಗಳ ಮೌಲ್ಯವನ್ನು ಬೆಳಗುತ್ತವೆ. ಕಾವ್ಯ ಮಾಡುವ ಕೆಲಸ ಮನಕರಗಿಸುವದು, ಹೃದಯಕ್ಕೆ ಸಂತೋಷ ತರುವದು. ಅದನ್ನು ಕಣವಿಯುವರ ಸುನೀತಗಳು ಯಥೇಚ್ಛವಾಗಿ ನೀಡಿವೆ ಎಂಬುದರಲ್ಲಿ ಎರಡು ಮಾತಿಲ್ಲ.

# ಕಣವಿ ಅವರ ಸಾಹಿತ್ಯ ವಿಮರ್ಶೆ

ಹೊಸಗನ್ನಡ ಸಾಹಿತ್ಯದ ಪ್ರಮುಖ ಕವಿಗಳಾದ ಚೆನ್ನವೀರ ಕಣವಿ ಅವರು ಕಾವ್ಯದ ಜೊತೆಗೆ ವಿಮರ್ಶೆಯ ವ್ಯವಸಾಯವನ್ನೂ ನಡೆಸಿಕೊಂಡು ಬಂದಿರುವದು ಅವರ ಪ್ರತಿಭೆಯ ವಿಶಿಷ್ಟತೆಯಾಗಿದೆ. ವಾಸ್ತವವಾಗಿ ಕಾವ್ಯ ಮತ್ತು ವಿಮರ್ಶನ ಕ್ರಿಯೆಗಳೆರಡೂ ಬೇರೆ ಬೇರೆಯಾಗಿದ್ದರೂ ಕವಿ ವಿಮರ್ಶಕನೂ ಆದಾಗ ಆತನ ಕಾವ್ಯ ಸಹಜವಾಗಿಯೇ ಶ್ರೇಷ್ಠತೆ ಸಾಧಿಸುತ್ತದೆ ಎಂದು ಮಾಸ್ತಿಯವರು ಸಾಹಿತ್ಯದಲ್ಲಿ ವಿಮರ್ಶೆಯ ಕಾರ್ಯವನ್ನು ಕುರಿತು ಹೇಳಿದ ಮಾತು ಕಣವಿಯಂಥವರಲ್ಲಿ ಸಾರ್ಥಕಗೊಂಡಿದೆ. ಕಣವಿ ಹಾಗೂ ಶಿವರುದ್ರಪ್ಪನವರು ಕಾವ್ಯ ಮತ್ತು ವಿಮರ್ಶೆಯ ಕ್ಷೇತ್ರಗಳಲ್ಲಿ ಮಹತ್ವದ ಕಾರ್ಯ ಮಾಡಿದ್ದಾರೆ. ಇಬ್ಬರ ಕಾವ್ಯ ಹಾಗೂ ವಿಮರ್ಶೆಯ ಮನೋಧರ್ಮದಲ್ಲಿ, ತಾತ್ವಿಕ ಗ್ರಹಿಕೆಯಲ್ಲಿ, ಪ್ರಾಚೀನ ನವೀನ ಸಾಹಿತ್ಯದ ಅನುಸಂಧಾನದಲ್ಲಿ ಸಮಾನವಾದ ಅಂಶಗಳು ಗೋಚರಿಸುತ್ತವೆ. ಹಾಗಿದ್ದರೂ ಶಿವರುದ್ರಪ್ಪನವರ ವಿಮರ್ಶೆ ಹೆಚ್ಚು ವ್ಯಾಪಕವಾದದ್ದಾಗಿದೆ.

ಕಣವಿಯವರ ಮೊದಲ ಆಸಕ್ತಿ ಕಾವ್ಯವಾಗಿದ್ದರೂ ಅವರು ಮಾಡಿದ ಸಾಹಿತ್ಯಿಕ ಅಧ್ಯಯನ ಗಮನಾರ್ಹವಾಗಿದೆ. ಕನ್ನಡದ ಪ್ರಾಚೀನ ಕಾವ್ಯದಿಂದ ಹಿಡಿದು ಆಧುನಿಕ ಸಾಹಿತ್ಯದವರೆಗೆ ಅವರು ಗಮನಿಸದೆ ಇರುವ ಸಂಗತಿಯಿಲ್ಲ. ಜನಪದಸಾಹಿತ್ಯವನ್ನೂ ಅವರು ವಿವರವಾಗಿಯೇ ನೋಡಿದ್ದಾರೆ. ಕಾವ್ಯದಲ್ಲಿ ಬದುಕಿನ ವಿಮರ್ಶೆ ಮಿಳಿತವಾದಂತೆ ವಿಮರ್ಶೆಯಲ್ಲಿ ಕಾವ್ಯಾತ್ಮಕವಾದ ಮಾತುಗಳೂ ಬೆರೆತುಕೊಂಡಿವೆ. ಕಣವಿಯವರ ವಿಮರ್ಶೆಯ ಗ್ರಂಥಗಳಲ್ಲಿ ಅವರ ಆಳವಾದ ಸಾಹಿತ್ಯಾಭ್ಯಾಸ, ಸೂಕ್ಷ್ಮವಾದ ಅವಲೋಕನದೃಷ್ಟಿ, ಅನೇಕ ಒಳನೋಟಗಳು ಎದ್ದು ಕಾಣುತ್ತವೆ.

ಸಾಹಿತ್ಯ ಚಿಂತನ (೧೯೬೬), ಕಾವ್ಯಾನುಸಂಧಾನ (೧೯೭೧), ಸಮಾಹಿತ (೧೯೭೭), ಮಧುರಚೆನ್ನ (೧೯೮೦), ಸಮತೋಲನ (೧೯೮೯), ವಚನಾಂತರಂಗ (೧೯೯೯) ಇವು ಇವರ ವಿಮರ್ಶಾ ಗ್ರಂಥಗಳು. ಕಣವಿಯವರು ಹಲವಾರು ಕವಿಗಳ ಸಾಹಿತ್ಯ ಕೃತಿಗಳ ಮತ್ತು ಧೋರಣೆಗಳ ವಿವೇಚನೆಯನ್ನು ಒಂದು ಶಿಸ್ತಿನಿಂದಲೇ ಮಾಡಿರುವುದು ಕಂಡುಬರುತ್ತದೆ. ಕಾವ್ಯಬಂಧಲ್ಲಿ ಒಂದು ಅಚ್ಚುಕಟ್ಟು ಇರುವಂತೆ ಅವರ ಗದ್ಯದಲ್ಲಿಯೂ ಅಚ್ಚುಕಟ್ಟು ಇದೆ. ಕಣವಿಯವರ ಸಮಗ್ರ ವಿಮರ್ಶೆಯನ್ನು ಜನಪದ ಸಾಹಿತ್ಯ ವಿಮರ್ಶೆ, ವಚನ ಸಾಹಿತ್ಯ ವಿಮರ್ಶೆ, ನಡುಗನ್ನಡ ಕವಿಗಳ ಸಾಹಿತ್ಯ ವಿಮರ್ಶೆ, ಆಧುನಿಕ ಸಾಹಿತ್ಯ ವಿಮರ್ಶೆ ಇತ್ಯಾದಿಯಾಗಿ ಸ್ಥೂಲವಾಗಿ ವಿಭಜಿಸಿಕೊಂಡು ಅಧ್ಯಯನ ನಡೆಸಬಹುದು.

ನವೋದಯ ಕಾಲದಲ್ಲಿ ಜಾನಪದ ಅಧ್ಯಯನವು ವಿಶೇಷವಾಗಿ ನಡೆಯಿತು. ಜನಪದ ಸಾಹಿತ್ಯ ಸಂಗ್ರಹ, ಸಂಪಾದನೆ, ಅವುಗಳ ಸಾಹಿತ್ಯ ರಸ ವಿಮರ್ಶೆಯನ್ನು ಕನ್ನಡದ ನವೋದಯ ಸಾಹಿತ್ಯದ ಹಿರಿಯರು ಮಾಡಿದರು. ಚೆನ್ನವೀರ ಕಣವಿ ಅವರೂ ತಮ್ಮ ಕೆಲವು ಲೇಖನಗಳಲ್ಲಿ ಜನಪದ ಸಾಹಿತ್ಯದ ಸತ್ವ, ಸೊಗಸುಗಳನ್ನು ವಿವೇಚಿಸಿದ್ದು ಮಹತ್ವದ ಅಂಶವಾಗಿದೆ. 'ಜನವಾಣಿ ಬೇರು ಕವಿವಾಣಿ ಹೂವು' ಹೇಳಲ್ಪಡುತ್ತಿದ್ದರೂ ಆ ಸಾಹಿತ್ಯಕ್ಕೆ ಸರಿಯಾದ ಸಾಹಿತ್ಯಿಕ ಮಾನ್ಯತೆ ಬಹಳ ಕಾಲದವರೆಗೆ ದೊರಕಿರಲಿಲ್ಲ. ಅರ್ಥಪೂರ್ಣ ವಿವೇಚನೆ ಆಗಿರಲಿಲ್ಲ. 'ಸ್ವಾತಂತ್ರ್ಯಪೂರ್ವದ ಜನಪದ ಸಾಹಿತ್ಯ' ಲೇಖನದಲ್ಲಿ ಕಣವಿಯವರು ಜನಪದ ಸಾಹಿತ್ಯ ಸಂಪಾದನೆಗಳ ಬಗ್ಗೆ ಮತ್ತು ಸಂಗ್ರಾಹಕರ ಬಗೆಗೆ ವಿವೇಚನೆ ನಡೆಸಿದ್ದಾರೆ. ಅದು ಜನಪದ ಸಾಹಿತ್ಯದ ಇತಿಹಾಸವನ್ನು ತಿಳಿಸುವುದರ ಜೊತೆಗೆ ಆ ಸಾಹಿತ್ಯದ ವಿಶೇಷತೆಗಳನ್ನು ವಿವರಿಸುತ್ತದೆ.

'ಜನಪದ ಕಾವ್ಯದಲ್ಲಿ ಪ್ರತಿಮಾ ವಿಧಾನ' ಕಣವಿಯವರ ಒಂದು ಮಹತ್ವದ ಲೇಖನ. ಇಲ್ಲಿಯ ವಿವೇಚನೆ ಅಲಂಕಾರ ಶಾಸ್ತ್ರಕ್ಕೆ ಸಂಬಂಧಿಸಿದ್ದು. ಜನಪದ ಸಾಹಿತ್ಯದ ಪ್ರತಿಮೆ ರೂಪಕಗಳನ್ನೂ ಕುರಿತ ಅಧ್ಯಯನಪೂರ್ಣವಾದ ಚರ್ಚೆ ಇಲ್ಲಿರುವುದನ್ನು ಕಾಣಬಹುದು. 'ಜನಪದ ಕಾವ್ಯದ ಭಾಷೆ' ಎಂಬ ಇನ್ನೊಂದು ಲೇಖನದಲ್ಲಿ ಕಣವಿಯವರು ಕನ್ನಡ ಆಡುನುಡಿಯ ಪ್ರಯೋಗಗಳಲ್ಲಿಯ ಅರ್ಥವಂತಿಕೆ ಮತ್ತು ಧ್ವನಿಶಕ್ತಿಗಳನ್ನು ಲಕ್ಷ್ಯಗೊಟ್ಟು ನೋಡುತ್ತಾರೆ. ಪದಗಳನ್ನು ಉಜ್ಜಿನೋಡುವ ಇಲ್ಲಿಯ

ಕಾರ್ಯ ಮಹತ್ವದ್ದಾಗಿದೆ. ಸ್ವತಃ ತಮ್ಮ ಕವಿತೆಗಳಲ್ಲಿ ಜನಪದರ ನುಡಿಗಳನ್ನು ಧಾರಾಳವಾಗಿ ಬಳಸಿಕೊಂಡ ಕಣವಿಯವರಿಗೆ ಅಲ್ಲಿಯ ಸೊಗಡನ್ನು ಗುರುತಿಸುವುದು ಕಷ್ಟದಾಯಕವೇನಲ್ಲ. ಚತುರೋಕ್ತಿ, ವಕ್ರೋಕ್ತಿ, ವ್ಯಂಜಕಶಕ್ತಿಗಳಿಂದಲೂ, ಜನಪದ ಕಾವ್ಯದ ಸೊಗಡನ್ನು ಕಣವಿಯವರು ಮನೋಜ್ಞವಾಗಿ ವಿವರಿಸಿದ್ದಾರೆ. ಹೋಳಿ ಸಂಪ್ರದಾಯ ಜನಪದರಲ್ಲಿ ಅನೇಕ ದೃಷ್ಟಿಯಿಂದ ಮಹತ್ವ ಪಡೆದ ಒಂದು ವಿಶೇಷ ಸಂದರ್ಭ. ಹೋಳಿಹಾಡುಗಳು ಮತ್ತು ಅದರ ರಂಜನೀಯವಾದ ಆಚರಣೆಗಳು ವಿಶಿಷ್ಟವಾದವುಗಳು. ಕಣವಿಯವರು ಸಾಂಸ್ಕೃತಿಕ ಮಟ್ಟದಲ್ಲಿ ನಿಂತು ಅದನ್ನು ವಿವೇಚಿಸಿದ್ದಾರೆ. 'ಜನಪದ ಕಾವ್ಯದ ಮೂಲಕ ಜನಾಂಗದ ಸಂಸ್ಕೃತಿಯ ಅಧ್ಯಯನ'. ಲೇಖನದಲ್ಲಿ ಭಾರತೀಯ ಸಂಸ್ಕೃತಿಯ ಪದರುಗಳನ್ನು ಗುರುತಿಸುವ ಪ್ರಯತ್ನ ನಡೆದಿದೆ. 'ಆಧುನಿಕ ಪರಿಸರ ಮತ್ತು ಜನಪದ ಸಾಹಿತ್ಯ' ಲೇಖನದಲ್ಲಿ ಜನಪದ ಸಾಹಿತ್ಯ ಬದಲಾದ ಸಾಹಿತ್ಯಿಕ ಸನ್ನಿವೇಶದಲ್ಲಿ ಬೀರಿದ ಪ್ರಭಾವ ವಿಶ್ಲೇಷಣೆ ಇದೆ. ಜನಪದ ಸಾಹಿತ್ಯಕ್ಕೆ ಸಂಬಂಧಿಸಿದ ಎಲ್ಲ ಲೇಖನಗಳಲ್ಲಿ ಸಾಂಸ್ಕೃತಿಕ, ಸಾಮಾಜಿಕ ಬದುಕಿನ ವಿಶೇಷತೆಗಳಿದ್ದು ಭಾಷೆಯಲ್ಲಿ ಅಥವಾ ಜನಪದ ಸಾಹಿತ್ಯದ ಮಾಧ್ಯಮದಲ್ಲಿ ಅವು ಹೇಗೆ ಅಭಿವ್ಯಕ್ತಗೊಂಡಿವೆ ಎಂಬುದನ್ನು ಕಣವಿಯವರು ಆಧಾರಗಳೊಂದಿಗೆ ವಿವರಿಸುತ್ತಾರೆ. ಅನೇಕ ಕುತೂಹಲಕರವಾದ ಸಂಗತಿಗಳು ಇಲ್ಲಿದ್ದು ಓದುಗರಲ್ಲಿ ಹೊಸ ಜಿಜ್ಞಾಸೆಯನ್ನು ಮೂಡಿಸುತ್ತವೆ. ಇಲ್ಲಿಯ ವ್ಯಾಪಕವಾದ ಅಧ್ಯಯನವೂ ಬೆರಗುಗೊಳಿಸುತ್ತದೆ.

ಕಣವಿಯವರ ಮೇಲೆ ಪ್ರಭಾವ ಬೀರಿದ ಸಾಹಿತ್ಯದಲ್ಲಿ ವಚನಸಾಹಿತ್ಯ ಮುಖ್ಯವಾದದ್ದಾಗಿದೆ. ಕಣವಿಯವರು ವಚನಸಾಹಿತ್ಯವನ್ನು ತನ್ಮಯತೆಯಿಂದ ಅವಲೋಕಿಸುತ್ತಾರೆ. ಇಲ್ಲಿ ವಿಮರ್ಶೆಗಿಂತ ವಿವೇಚನೆ ಮತ್ತು ವಿಶ್ಲೇಷಣೆ ಹೆಚ್ಚಾಗಿರುವುದನ್ನು ಕಾಣಬಹುದು. 'ಬಸವಣ್ಣನವರ ಭಾವಚಿತ್ರ', 'ಅಚ್ಚ ಬದುಕಿನ ರತ್ನಮೌಕ್ತಿಕದಚ್ಚು ಬಸವಣ್ಣ'. 'ಬಸವಣ್ಣನವರ ವಚನಗಳ ಆಶಯ', 'ವಚನ ಸಾಹಿತ್ಯದಲ್ಲಿ ಉಪಮೆ' ಇವುಗಳಲ್ಲಿ ಕಣವಿಯವರ ಚಿಂತನಶೀಲತೆ, ತತ್ವ ಜಿಜ್ಞಾಸೆ ಎದ್ದುಕಾಣುತ್ತದೆ. ಬಸವಣ್ಣನವರನ್ನು ಅತ್ಯಂತ ಶ್ರದ್ಧೆಯಿಂದಲೇ ಪರಿಚಯಿಸುವ ಕಣವಿಯವರು ಅವರ ವ್ಯಕ್ತಿತ್ವದ ಘನತೆಗೆ ಕನ್ನಡಿ ಹಿಡಿಯುತ್ತಾರೆ. ಭಾವಪೂರ್ಣವಾದ

ವಚನಗಳ ಉದ್ಧರಣೆ ಮತ್ತು ಅವುಗಳ ವಿಶ್ಲೇಷಣೆಗಳು ಸಹೃದಯರನ್ನು ಸೆರೆಹಿಡಿಯುತ್ತವೆ. ಅವರು ನೀಡುವ ವಿಶೇಷಾರ್ಥಗಳು ಗಮನ ಸೆಳೆಯುತ್ತವೆ. ಕಣವಿಯವರು ವಚನಗಳ ಸಾಹಿತ್ಯಿಕ, ಸಾಂಸ್ಕೃತಿಕ ಮಹತ್ವವನ್ನು ವಿವೇಚಿಸಿ ವಚನ ಸಾಹಿತ್ಯದ ಅಧ್ಯಯನಕ್ಕೆ ಹೊಸ ತಿರುವನ್ನು ಕೊಡುತ್ತಾರೆ. ಈ ಪ್ರಬಂಧಗಳು ಈಚೆಗೆ 'ವಚನಾಂತರಂಗ'ದಲ್ಲಿ ಸಂಗ್ರಹಗೊಂಡಿವೆ. ಅವರು ಬಸವಣ್ಣನವರ ವಚನಗಳಲ್ಲಿ ಕಾವ್ಯದ ಸೊಗಸನ್ನು ಗುರುತಿಸಿದಂತೆ 'ಪುರಂದರದಾಸರ ಪದಗಳಲ್ಲಿಯ ಕಾವ್ಯಗುಣ'ವನ್ನೂ ಗಮನಿಸಿದ್ದಾರೆ. ಕಣವಿಯವರಿಗೆ ಕಾವ್ಯದ ಉತ್ತಮಿಕೆಯನ್ನು ಎಲ್ಲ ಮೂಲಗಳಿಂದಲೂ ಬರಮಾಡಿಕೊಳ್ಳುವ ಮನೋಧರ್ಮವಿದ್ದು, ದಾಸ ಸಾಹಿತ್ಯವೂ ಅವರ ಅಧ್ಯಯನದ ಒಂದು ಭಾಗವಾಗಿದೆ. 'ಮುಪ್ಪಿನ ಷಡಕ್ಷರಿಯ ಮುಪ್ಪರಿಯದ ಹಾಡುಗಳು' ಲೇಖನದಲ್ಲಿ ಆತನ ಪ್ರಾಸಾದಿಕ ವಾಣಿಯನ್ನು ರೂಪಕದಲ್ಲಿ ಎರಕ ಹೊಯ್ಯುವ ಭಾವತರಂಗಿಣಿಯನ್ನು ವಿಶ್ಲೇಷಿಸಿದ್ದಾರೆ. 'ಸರ್ವಜ್ಞ : ಹೊಲಬರಿತು ಹೊತ್ತಿಗೊದಗುವ ಮಾತು'ಗಳನ್ನು ವಿವೇಚಿಸಿ ಆತನ ಸಾಮಾಜಿಕ ಪ್ರಜ್ಞೆಯನ್ನೂ, ರಸಿಕ ವ್ಯಕ್ತಿತ್ವವನ್ನೂ ವರ್ಣಿಸಿದ್ದಾರೆ. ಹೀಗೆ ನಡುಗನ್ನಡ ಸಾಹಿತ್ಯ ವಿಮರ್ಶೆಯಲ್ಲೂ ಕಣವಿಯವರ ರಸಜ್ಞತೆಯನ್ನು ನಾವು ಕಾಣುತ್ತೇವೆ.

ಆಧುನಿಕ ಸಾಹಿತ್ಯ ವಿಮರ್ಶೆಯಲ್ಲಿ ಕಣವಿಯವರ ಸಾಧನೆ ಗಮನಾರ್ಹವಾದದ್ದು. ಕವಿ-ಕಾವ್ಯಸಮೀಕ್ಷೆ, ಸಾಹಿತ್ಯ ಪರಂಪರೆಗಳ ಬೆಳವಣಿಗೆಯ ಕುರಿತಾದ ಕಣವಿಯವರ ಆಲೋಚನೆಗಳು ಅವಲೋಕನೀಯವಾಗಿವೆ, 'ಬೇಂದ್ರೆಯವರ ಕಾವ್ಯದಲ್ಲಿ ಭಾವಸಂಪತ್ತು' ಲೇಖನದಲ್ಲಿ ಬೇಂದ್ರೆ ಭಾವಗೀತೆಗಳ ವಿಶಿಷ್ಟಾಂಶಗಳನ್ನು ಕಣವಿಯವರು ಗುರುತಿಸಿದ್ದಾರೆ. 'ಮಧುರಚೆನ್ನರ ಮಧುರಗೀತ' ಎಂಬ ಲೇಖನದಲ್ಲೂ ಕಣವಿಯವರು ಅನುಭಾವಿ, ಚಿಂತಕ, ದಾರ್ಶನಿಕ ಕವಿ ಜೀವನ, ಸಾಹಿತ್ಯ ಸಾಧನೆಗಳನ್ನು ವಿವೇಚಿಸಿದ್ದಾರೆ. 'ಕುವೆಂಪು ಕಾವ್ಯದಲ್ಲಿ ಪಕ್ಷಿಲೋಕ' ಲೇಖನದಲ್ಲಿ ಪಕ್ಷಿ ಸಂಕುಲದ ಚಟುವಟಿಕೆಯನ್ನೂ ಪ್ರತ್ಯೇಕ ಪಕ್ಷಿಗಳ ಕುರಿತ ಕವನಗಳ ವಿಶ್ಲೇಷಣೆಯನ್ನೂ ನಾವು ಕಾಣುತ್ತೇವೆ. 'ಆನಂದಕಂದರ ಕಾವ್ಯ ಒಂದು ಸಮೀಕ್ಷೆ' ಲೇಖನದಲ್ಲಿ ಬೆಟಗೇರಿ ಕೃಷ್ಣಶರ್ಮರ 'ಮುದ್ದಿನಮಾತು'ದಿಂದ 'ನಲ್ವಾಡು'ಗಳವರೆಗೆ ಎಲ್ಲ ಕಾವ್ಯಗಳ ಮುಖ್ಯ ಆಶಯವನ್ನು ವಿವೇಚಿಸಿದ್ದಾರೆ. ಜಾನಪದ ಸತ್ವದಿಂದ ಕೂಡಿದ ಆನಂದಕಂದರ

ಕಾವ್ಯದ ಬಗೆಗೆ ಕಣವಿ ಬಹುಹಿಂದೆಯೇ ಕಾವ್ಯಾಸಕ್ತಿ ತೋರಿದ್ದು ಕಂಡುಬರುತ್ತದೆ. ವಿ. ಸೀ. ಕಾವ್ಯದ ಹೆಜ್ಜೆಪಾಡನ್ನು ವಿವೇಚಿಸುತ್ತ ಅವರ ಕಾವ್ಯದಲ್ಲಿ ಸರಳತೆ. ಲಾಲಿತ್ಯ, ಗಾಂಭೀರ್ಯ. ಔದಾರ್ಯಗಳು ಕಾವ್ಯಶಿಲ್ಪ ಪಡೆದಿರುವದನ್ನು ಕಣವಿಯವರು ಎತ್ತಿ ಹೇಳಿದ್ದಾರೆ. ಸಿದ್ಧಯ್ಯ ಪುರಾಣಿಕರ 'ವಚನೋದ್ಯಾನದ ವೈಶಿಷ್ಟ್ಯ'ದಲ್ಲಿ ಅವು ಆಧುನಿಕ ವಚನ ಸಾಹಿತ್ಯದಲ್ಲಿ ಸಾಧಿಸಿದ ಯಶಸ್ಸನ್ನು ಇನ್ನೊಂದು ಲೇಖನದಲ್ಲಿ ವಿವೇಚಿಸಿದ್ದಾರೆ. 'ಬೆರಗಿನಿಂದ ನಿಬ್ಬೆರಗಿಗೆ'ದಲ್ಲಿ ಶಿವರುದ್ರಪ್ಪನವರ ಕಾವ್ಯದ ಪರಿಶೀಲನೆ ನಡೆಸಿ ಅದರ ಅಭಿವ್ಯಕ್ತಿವಿಧಾನಗಳನ್ನು ಚರ್ಚಿಸಿದ್ದಾರೆ. 'ಇತ್ತೀಚಿನ ಕಾವ್ಯ ಪರಿಚಯ. ಹೊಸ ಪೀಳಿಗೆಯ ಕೆಲಕವಿಗಳು' ಲೇಖನದಲ್ಲಿ ಸಿದ್ಧಲಿಂಗ ಪಟ್ಟಣಶೆಟ್ಟಿ, ಬುದ್ಧಣ್ಣ ಹಿಂಗಮಿರೆ, ದೇಶಪಾಂಡೆ ಸುಬ್ಬರಾಯ. ಶೈಲಜಾ ಉಡಚಣ. ಸಿದ್ಧಲಿಂಗ ದೇಸಾಯಿ ಅವರ ಕವಿತೆಗಳ ಅವಲೋಕನ ಮತ್ತು ಮುನ್ನುಡಿ ಮಾತುಗಳು ಸೇರಿವೆ. ಕಣವಿಯವರು ಹೊಸಕಾವ್ಯ ವಿಮರ್ಶೆಯಲ್ಲಿ ಮುಖ್ಯವಾದ ಪ್ರಾಯೋಗಿಕ ವಿಮರ್ಶೆಯನ್ನೂ ನಡೆಸಿದ್ದು ಅದು ಬೇಂದ್ರೆಯವರು ಬರೆದ 'ಎದೆಯ ಒಕ್ಕಲಿಗನ ಹಾಡು'ದಲ್ಲಿ ಕಾಣುವ ಹೊಸ ವ್ಯಾಖ್ಯಾನದಲ್ಲಿ ಕಾಣುತ್ತದೆ. 'ಎಂ. ವಿ. ಸೀತಾರಾಮಯ್ಯ ಅವರ ಸುನೀತಗಳು' ಲೇಖನದಲ್ಲಿ ಅದರ ಸೋಲು ಗೆಲವುಗಳ ವಿಮರ್ಶೆ ಇದೆ. 'ಕವಿ ಕಂಡ ರವಿ'ಯಲ್ಲಿ ಹಿಂದಿನ ಮತ್ತು ಇಂದಿನ ಕವಿಗಳು ಸೂರ್ಯನನ್ನು ನೋಡುವ, ವರ್ಣಿಸುವ ಬಗೆಯನ್ನು ಕಣವಿಯವರು ಅವಲೋಕಿಸಿದ್ದಾರೆ. 'ಕೆ. ಎಸ್. ನರಸಿಂಹಸ್ವಾಮಿ ವಾತ್ಸಲ್ಯಗೀತಗಳು,' 'ದಿನಕರದೇಸಾಯಿ ಅವರ ಕವನ ಸಂಗ್ರಹ' ಲೇಖನಗಳಲ್ಲಿ ಕಣವಿಯವರ ಸಹೃದಯ ವಿಮರ್ಶೆ ಇದೆ.

'ಸ್ವಾತಂತ್ರ್ಯೋತ್ತರ ಕನ್ನಡ ಕಾದಂಬರಿಗಳು' ಹಾಗೂ 'ಕನ್ನಡದಲ್ಲಿ ವಿಮರ್ಶೆಯ ಒಲವು-ನಿಲವು' ಲೇಖನಗಳು ಸಮೀಕ್ಷಾತ್ಮಕ ಅಧ್ಯಯನಗಳಾಗಿವೆ. 'ಹೊಸಕಾವ್ಯದ ಒಗರು-ಹೊಗರು' ಮತ್ತು 'ಕನ್ನಡ ಕಾವ್ಯದಲ್ಲಿ ನೂತನ ಪ್ರತಿಮೆ ಸಂಕೇತಗಳು', 'ಕಾವ್ಯದಲ್ಲಿ ವಸ್ತು ಮತ್ತು ರೂಪ ಒಂದು ಟಿಪ್ಪಣಿ' ಲೇಖನಗಳಲ್ಲಿ ಹೊಸ ಕವಿಗಳ ಕಾವ್ಯ ಸಮೀಕ್ಷೆ ಮತ್ತು ಹೊಸ ಪ್ರತಿಮೆ ಸಂಕೇತಗಳ ವಿವೇಚನೆಯನ್ನು ಕಣವಿಯವರು ಅರ್ಥಪೂರ್ಣವಾಗಿ ಮಾಡಿದ್ದಾರೆ. ಕಣವಿಯವರು ಕನ್ನಡದ ಸುಮಾರು ೬೦ ಕಾವ್ಯಕೃತಿಗಳಿಗೆ ಮುನ್ನುಡಿ ಬರೆದು ಹೊಸ ಕವಿಗಳ ಕಾವ್ಯದ ಮೌಲ್ಯಮಾಪನ ಮಾಡಿ

ಗುಣದೋಷಗಳನ್ನು ಚರ್ಚಿಸಿ ಮಾರ್ಗದರ್ಶನ ಮಾಡಿದ್ದಾರೆ. ಕಾವ್ಯದ ನಿಜವಾದ ಸತ್ವವನ್ನು, ಪದ್ಯದ ಲಯಗಾರಿಕೆಯನ್ನು ಪ್ರಯೋಗಶೀಲತೆಯನ್ನು ಅರ್ಥಪೂರ್ಣ ಪ್ರತಿಮೆ. ಸಂಕೇತಗಳ ಅಭಿವ್ಯಕ್ತಿಯ ವಿಚಾರವನ್ನು ಕಣವಿಯವರು ವಿವೇಚಿಸುತ್ತ ಪ್ರತಿಯೊಬ್ಬ ಕವಿಯ ಗುಣವನ್ನು ಮೆಚ್ಚಿ ಹುರುಪು ತುಂಬುವದರ ಜೊತೆಗೆ ದೋಷಗಳ ಕಡೆಗೂ ಪಟ್ಟಿಮಾಡಿ ಅವರ ಕಾವ್ಯಶಕ್ತಿಯ ಉತ್ಕರ್ಷಕ್ಕೆ ಪೋಷಕವಾಗುವ ಮುನ್ನುಡಿ ಬರೆದಿರುವದು ಗಮನಾರ್ಹವಾಗಿದೆ. ಕಣವಿಯವರಲ್ಲಿ ಯಾವುದೇ ಸಾಹಿತ್ಯ ಪ್ರಕಾರ, ಪಂಥಗಳ ಬಗೆಗೆ ವ್ಯಗ್ರತೆಯಿಲ್ಲ. ಅವರು ಎಲ್ಲ ಕವಿಕೃತಿಗಳಲ್ಲೂ ಒಳ್ಳೆಯ ಅಂಶಗಳನ್ನು ಅರಸುವವರು, ಮೆಚ್ಚಿಕೆಯಾದಾಗ ಪ್ರಶಂಸಿಸುವವರು, ದೋಷಗಳಿದ್ದಲ್ಲಿ ಸೂಚ್ಯವಾಗಿ ಹೇಳುವವರು. ಅವರ ಮುನ್ನುಡಿಗಳೂ ಅವರ ಕವಿಕಾವ್ಯ ವಿಮರ್ಶೆಯ ಭಾಗವೇ ಆಗಿವೆ. ಪಾಶ್ಚಾತ್ಯ ಸಾಹಿತ್ಯ ವಿಮರ್ಶೆಗೆ ಸಂಬಂಧಿಸಿದಂತೆ ರಾಬರ್ಟ ಬರ್ನ್ಸನನ್ನು ಕುರಿತು ಕಣವಿ ಲೇಖನ ಗಮನಾರ್ಹವಾದುದು. ಕೆ. ಎಸ್. ನರಸಿಂಹಸ್ವಾಮಿ ಅವರಿಗೂ ಪ್ರಿಯನಾದ ಕವಿ ಬರ್ನ್ಸ ಬರೆದ ಪ್ರೇಮಗೀತ, ಆತನ ಕಾವ್ಯಾಭಿವ್ಯಕ್ತಿಯ ವಿಧಾನ ವೈಶಿಷ್ಟ್ಯಗಳು ಕಣವಿಯವರಿಗೂ ಪ್ರಿಯವಾಗಿದ್ದು ಅದರ ವಿವೇಚನೆ ಇಲ್ಲಿ ಹೃದ್ಯವಾಗಿ ಪ್ರಕಟವಾಗಿದೆ.

ಕಣವಿ ಅವರ ಆಧುನಿಕ ಸಾಹಿತ್ಯ ವಿಮರ್ಶೆ ಸಮಕಾಲೀನ ಕವಿಕೃತಿಗಳ ಬಗೆಗೆ ಸಹೃದಯತೆ ವಿಮರ್ಶೆಯಾಗಿ ಕಂಗೊಳಿಸುತ್ತದೆ. ಕನ್ನಡ ಲೇಖಕ ಲೋಕದ ಬಗೆಗೆ ಸ್ನೇಹ, ಪ್ರೀತಿ ಇಟ್ಟುಕೊಂಡ ಕಣವಿ ಅವರು ರಸಜ್ಞತೆಯಿಂದ ಸಾಹಿತ್ಯಾಸ್ವಾದದ ಶುದ್ಧ ಅಭಿರುಚಿಯಿಂದ, ಗುಣ ಪಕ್ಷಪಾತ ದೃಷ್ಟಿಯಿಂದ ವಿಮರ್ಶೆ ಮಾಡಿರುವುದು ಕಂಡುಬರುತ್ತದೆ. ಆಧುನಿಕ ಸಾಹಿತ್ಯ ವಿಮರ್ಶೆಯಲ್ಲಿ ಕಣವಿಯವರ ಪ್ರಮುಖ ಆಸಕ್ತಿ ಕಾವ್ಯವೇ ಆಗಿರುವುದನ್ನು ನಾವು ಗುರುತಿಸಬಹುದು. ಹೀಗಿದ್ದರೂ ಕಾದಂಬರಿ, ವಿಮರ್ಶೆಯ ಸ್ವರೂಪದ ಬಗೆಗೂ ಅವರ ನೋಟ ಹರಿದಿದೆ. ಕಣವಿಯವರ ವಿಮರ್ಶೆಯಲ್ಲಿ ಮುಖ್ಯವಾಗಿ ರಸವಿಮರ್ಶೆಯ ಸ್ವರೂಪ ಎದ್ದು ಕಾಣುವುದೂ ಪ್ರಾಯೋಗಿಕ ವಿಮರ್ಶೆ, ಕೃತಿನಿಷ್ಠ ವಿಮರ್ಶೆಯೂ ಇದೆ. ಕನ್ನಡ ಸಾಹಿತ್ಯದ ಉತ್ತಮವಾದ ಭಾಗವನ್ನು ಜನತೆಗೆ ಪರಿಚಯಿಸಿ ಅವುಗಳತ್ತ ನಮ್ಮ ಗಮನ ಸೆಳೆಯುವಂತೆ ಮಾಡುವ ದೃಷ್ಟಿಕೋನವೂ ಅವರಿಗಿದೆ. ಕಣವಿಯವರು ಯಾವ ಕವಿಕೃತಿಗಳ

ಬಗೆಗೂ ತೇಲಿಸಿ ಮಾತಾಡದೆ ಗಂಭೀರವಾಗಿಯೇ ಆಲೋಚಿಸುತ್ತಾರೆ. ಅವರ ಎಲ್ಲ ಗದ್ಯ ಬರವಣಿಗೆಯಲ್ಲಿ ಅಧ್ಯಯನಶೀಲತೆ ಚಿಂತನೆಗಳು ಎದ್ದು ಕಾಣುತ್ತವೆ. ಒಂದು ಮಾತು ಮಾತ್ರ ನಿಜ. ಅವರದು ಕಟು ವಿಮರ್ಶೆಯಲ್ಲ, ದೋಷಗಳನ್ನು ಸೂಚ್ಯವಾಗಿ ಹೇಳುವ ಸ್ನೇಹ-ಪ್ರೀತಿಗಳಿಗೆ ಚ್ಯುತಿ ತರದ ಬರವಣಿಗೆ.

ಕಣವಿ ಅವರ ಗದ್ಯದಲ್ಲಿ ಅವರ ಪ್ರಬಂಧಗಳೂ ಸೇರುತ್ತವೆ. 'ರಸಿಕನಾಡಿದ ಮಾತು', 'ಸಂಭಾಷಣೆ ಕಳೆದು ಹೋಗುತ್ತಿರುವ ಕಲೆ', ಸಮತೋಲನದಲ್ಲಿ 'ಮಾಸ್ತಿ –ನಾನು ಕಂಡಂತೆ', 'ತೀ. ನಂ. ಶ್ರೀ. ಕೆಲವು ನೆನಪುಗಳು', 'ವಿ. ಎಂ. ಇನಾಂದಾರ –ನಾನು ಕಂಡಂತೆ' ಮತ್ತು 'ಪ್ರೊ. ಮಾಳವಾಡರೊಂದಿಗೆ ಸಾಹಿತ್ಯ ಸಂವಾದ' ವ್ಯಕ್ತಿಚಿತ್ರಗಳೂ ಸೇರಿದ್ದು ಆಯಾ ಸಾಹಿತಿಗಳ ಬಗೆಗೆ ಕಣವಿ ಸಾಹಿತ್ಯ ಸಂಬಂಧ-ಸಂವಾದ ವಿಶೇಷತೆ ಚೆನ್ನಾಗಿ ಪ್ರಕಟವಾಗಿದೆ.

ಕಣವಿ ಅವರು ಬರೆದ ಆತ್ಮಚರಿತ್ರಾತ್ಮಕ ಬರಹಗಳು ಕುತೂಹಲ ಹುಟ್ಟಿಸುತ್ತವೆ. 'ನನ್ನ ನಾ ಕಂಡಂತೆ' 'ಪ್ರಭಾವ ಬೀರಿದ ಪುಸ್ತಕಗಳು' ಪ್ರಬಂಧಗಳಲ್ಲಿ ಕಣವಿಯವರ ಸಾಹಿತ್ಯಿಕ ವ್ಯಕ್ತಿತ್ವ ಬೆಳೆದು ಬಂದ ಬಗೆಯನ್ನು ನಾವು ಕಾಣುತ್ತೇವೆ. ಹೀಗೆ ಕಣವಿ ಅವರ ಗದ್ಯ ಸಾಹಿತ್ಯವೂ ವೈವಿಧ್ಯಪೂರ್ಣವಾಗಿದ್ದು ನಮ್ಮ ಜ್ಞಾನದ ಕ್ಷಿತಿಜವನ್ನು ವಿಸ್ತರಿಸುತ್ತದೆ.

ಚೆನ್ನವೀರ ಕಣವಿ ಅವರ ಸಾಹಿತ್ಯಿಕ ವ್ಯಕ್ತಿತ್ವ ಅರ್ಥಪೂರ್ಣವಾದ ಜೀವನದೃಷ್ಟಿಯಿಂದಲೂ. ಉನ್ನತವಾದ ಆದರ್ಶಗಳಿಂದಲೂ ಸಂಪನ್ನವಾಗಿದೆ. ಕಾವ್ಯಸೃಷ್ಟಿಯಲ್ಲಿ ಕಲಾವಂತಿಕೆಯನ್ನೂ, ವಿಮರ್ಶೆಯಲ್ಲಿ ವೈಚಾರಿಕತೆಯನ್ನೂ ಪ್ರಕಟಿಸಿ ಕಣವಿ ಅವರು ಆಧುನಿಕ ಕನ್ನಡ ಸಾಹಿತ್ಯದಲ್ಲಿ ಪ್ರಭಾವಶಾಲಿ ವ್ಯಕ್ತಿತ್ವದಿಂದ ಅಪಾರ ಜನಮನ್ನಣೆ ಗಳಿಸಿದ್ದಾರೆ. ಮಾನವೀಯ ಮೌಲ್ಯಗಳಲ್ಲಿ ಆಸಕ್ತಿಯ ಬೇರುಗಳನ್ನು ಭದ್ರಗೊಳಿಸಿಕೊಂಡ ಕಣವಿಯವರು ನಿರಂತರವಾದ ಕಾವ್ಯ ಸಾಧನೆ ಮಾಡುತ್ತ ಬಂದಿದ್ದಾರೆ, ಆಗಾಗ ವಿಮರ್ಶಾ ಲೇಖನಗಳನ್ನು ಪ್ರಕಟಿಸುತ್ತ ಮುನ್ನಡೆದಿದ್ದಾರೆ. ಕಣವಿಯವರ ಕಾವ್ಯಪ್ರತಿಭೆ ಬತ್ತಲಾರದ ನಿರ್ಝರಿಣಿಯಾಗಿ ಪ್ರವಹಿಸುತ್ತಿದೆ. ಜನ ಮನಸ್ಸಿಗೆ ಉಲ್ಲಾಸಕೊಡುವ ಕಾವ್ಯರಚನೆ ಮಾಡಿರುವ ಅವರು ಸದಾ ಸಮಕಾಲೀನ

ಸಂದರ್ಭ ಸನ್ನಿವೇಶಕ್ಕೆ ಸ್ಪಂದಿಸುತ್ತ ಬಂದವರು. ತಮ್ಮ ಸ್ವಂತಿಕೆಯನ್ನು ಜೋಪಾನವಾಗಿರಿಸಿಕೊಂಡು ತಮ್ಮದೇ ಆದ ಸಾಂಸ್ಕೃತಿಕ ಹೆಜ್ಜೆಗಳನ್ನು ಕಾವ್ಯದಲ್ಲಿ ಮೂಡಿಸಿದವರು. ಶ್ರೀ ಸಾಮಾನ್ಯರಿಗೆ ಅವರ ಕಾವ್ಯ ಎಟಕುತ್ತಿರುವಂತೆ ವಿಮರ್ಶಕರ ವಿವೇಚನೆಗೆ ಆಹಾರವನ್ನು ಒದಗಿಸುತ್ತದೆ. ಗ್ರಾಮೀಣ ಪರಿಸರ ಅವರ ಕಾವ್ಯದಲ್ಲಿರುವಂತೆ ಆಧುನಿಕ ನಾಗರಿಕ ಜೀವನದ ವಿವಿಧ ಫೈಲುಗಳೂ ಇವೆ. ಒಂದು ವಿಶೇಷವೆಂದರೆ ಅನನ್ಯವಾದ ಅವರ ಪ್ರಕೃತಿ ಪ್ರೇಮ ಬೇಲಿಯ ಮೇಲಿನ ಹೂವುಗಳು, ಹೂತ ಹುಲುಗಲ, ಶ್ರಾವಣದ, ಸಂಕ್ರಮಣದ ಸೊಗಸು ಏನೆಲ್ಲ ಕಾವ್ಯದಲ್ಲಿ ಮೈಪಡೆದುಕೊಳ್ಳುತ್ತವೆ. ಮಳೆಗಾಲವಂತೂ ಜೀವವಾಹಿನಿಯಾಗಿ ಮತ್ತೆ ಮತ್ತೆ ಕಾವ್ಯರೂಪ ತಾಳಿ ವಿಜೃಂಭಿಸುತ್ತದೆ.

ಬದುಕಿನ ಉಲ್ಲಾಸ, ಉತ್ಸಾಹ, ವಾತ್ಸಲ್ಯ, ಸ್ನೇಹ, ಪ್ರೇಮ, ನೋವು, ವ್ಯಥೆ, ವೈಪರಿತ್ಯಗಳೂ ಅವರ ಕಾವ್ಯದಲ್ಲಿದ್ದು ಎಲ್ಲ ರಸಗಳಿಗೂ, ವರ್ಣನೆಗಳಿಗೂ ಅವಕಾಶ ನೀಡುವ ಅವರು ಈ ತಲೆಮಾರಿನ ಬಹುದೊಡ್ಡ ಕವಿಯಾಗಿದ್ದಾರೆ, ಹಾಗೆಯೇ ಉತ್ತಮ ವಿಮರ್ಶಕರೂ ಆಗಿದ್ದಾರೆ.

# ಕಣವಿ ಕವಿ ವ್ಯಕ್ತಿತ್ವ

ಚೆನ್ನವೀರ ಕಣವಿಯವರು ಕನ್ನಡ ಕಾವ್ಯಪ್ರಪಂಚದಲ್ಲಿ ತಮ್ಮ ಸೃಜನಶೀಲ ಪ್ರತಿಭೆಯಿಂದ ಆಳವಾದ ಕಾವ್ಯಸಂವೇದನೆಯಿಂದ, ಅರ್ಥಪೂರ್ಣ ಜೀವನೋಲ್ಲಾಸವನ್ನು ಕಾವ್ಯಾಭಿವ್ಯಕ್ತಿಗೊಳಿಸಿದ ಕವಿಯಾಗಿದ್ದಾರೆ. ಏಕಪ್ರಕಾರವಾಗಿ ಹರಿಯುವ ವಿಕಸನಶೀಲವಾದ ಕಾವ್ಯಸ್ರೋತವನ್ನು ಕಣವಿಯವರ ಕಾವ್ಯದಲ್ಲಿ ನಾವು ಕಾಣುತ್ತೇವೆ. ಬುದ್ಧಿಭಾವಗಳ ಸಮತೋಲನವನ್ನು ನಿರಂತರವಾಗಿ ಕಾಯ್ದುಕೊಂಡು ಹೋಗಿರುವದು ಅವರ ವ್ಯಕ್ತಿತ್ವದ ವೈಶಿಷ್ಟ್ಯವಾಗಿದೆ. ಜನಪರವಾದ ನಿಲುವುಗಳಿಗೆ ಸ್ಪಂದಿಸುತ್ತ ಬಂದ ಕಣವಿಯವರು ಉದಾರವಾದ ಮಾನವತಾವಾದದ ಧೋರಣೆಯಲ್ಲಿ ಕಾವ್ಯವನ್ನು ನೆಲೆಗೊಳಿಸುತ್ತಾರೆ. ಭಾವನೆ, ಚಿಂತನೆಗಳ ಸಮನ್ವಯವನ್ನು ಅವರು ಸಾಧಿಸಿದ್ದಾರೆ. ನವೋದಯ ಕಾವ್ಯದಲ್ಲಿರುವ ಭಾವತೀವ್ರತೆ, ಕನಸುಗಾರಿಕೆ ಹಾಗೂ ನವ್ಯದಲ್ಲಿರುವ ಬೌದ್ಧಿಕ ಚಿಂತನ, ಪ್ರತಿಮೆ, ಸಂಕೇತಗಳ ಮೂಲಕ ಧ್ವನಿಶಕ್ತಿಯನ್ನು ಹೆಚ್ಚಿಸಿಕೊಳ್ಳುವ ಎರಡೂ ವಿಧಾನಗಳನ್ನು ಕಣವಿಯವರು ತಮ್ಮದಾಗಿಸಿಕೊಂಡದ್ದು ಒಂದು ವಿಶೇಷವಾಗಿದೆ. ಸಮತೂಕ, ಸಮಾಹಿತ ಪ್ರತಿಭೆಯು ಕಣವಿಯವರಲ್ಲಿ ಕಾವ್ಯಪರಂಪರೆಯ ಬಗೆಗೆ ಶ್ರದ್ಧೆ ಇರುವದರಿಂದ ಸಮಗ್ರ ಕನ್ನಡ ಕವಿಪರಂಪರೆಯ ಒಂದು ಭಾಗವಾಗಿ ತಾವು ಕಾವ್ಯಸೃಷ್ಟಿಸುತ್ತಿರುವ ಗ್ರಹಿಕೆ ಅವರಲ್ಲಿ ಅಂತಸ್ಥವಾದುದನ್ನು ನಾವು ಕಾಣುತ್ತೇವೆ.

ಕನ್ನಡ ವಿಮರ್ಶಾಲೋಕದಲ್ಲಿ ಕಣವಿಯವರ ಕಾವ್ಯ ವಿವಿಧ ಆಲೋಚನೆ, ವಿಮರ್ಶೆ, ವಿಚಾರಗಳಿಗೆ ವಸ್ತುವಾಗಿದೆ. ಗೌರೀಶ ಕಾಯ್ಕಿಣಿಯವರು ಬರೆದ 'ಚೆನ್ನವೀರ ಕಣವಿ ಕಾವ್ಯದೃಷ್ಟಿ' (೧೯೭೭) ಸಮೀಕ್ಷಾಗ್ರಂಥ; ಡಾ. ಗುರುಲಿಂಗ ಕಾಪಸೆ ಸಂಪಾದಿಸಿದ 'ಚೆಂಬೆಳಕು'

(೧೯೮೦) ಅಭಿನಂದನಗ್ರಂಥ, ಡಾ. ಗುರುಪಾದ ಮರಿಗುದ್ದಿ ಸಂಪಾದಿಸಿದ 'ಕಣವಿ ಸಾಹಿತ್ಯ ಸಂಪದ' (೧೯೯೪) ಈ ಗ್ರಂಥಗಳಲ್ಲಿ ನಾಡಿನ ಹಿರಿ ಕಿರಿಯ ಲೇಖಕರಿಂದ ಕಣವಿ ಸಾಹಿತ್ಯವಿಮರ್ಶೆಯ ವಿಸ್ತಾರವಾದ ಅಧ್ಯಯನ ನಡೆದಿದೆ. 'ಚೆನ್ನವೀರ ಕಣವಿ : ಬದುಕು ಬರಹ' ಗ್ರಂಥದಲ್ಲಿ ಪ್ರಸಿದ್ಧ ವಿಮರ್ಶಕರಾದ ಕೀರ್ತಿನಾಥ ಕುರ್ತಕೋಟಿಯವರು ಕೆಲವು ಹೊಸ ಒಳನೋಟಗಳನ್ನು ಒದಗಿಸಿದ್ದಾರೆ. ಇದರಿಂದ ಕಣವಿ ಕಾವ್ಯವನ್ನು ಬೇರೆ ಬೇರೆ ದೃಷ್ಟಿಕೋನಗಳಿಂದ ಚಿಂತನೆ ನಡೆಸಲು ಸಾಧ್ಯವಾಗಿದೆಯೆಂಬುದು ಅವರ ಕವಿ ವ್ಯಕ್ತಿತ್ವದ ವಿಶಿಷ್ಟತೆಯೂ ಆಗುತ್ತದೆ. ಕಣವಿ ಅವರು ಯಾವುದೇ ಪಂಥ, ಪ್ರಭಾವ, ಬದ್ಧತೆಗೆ ಒಳಗಾಗದೆ ಜೀವನದ ವಾಸ್ತವಕ್ಕೆ ಸ್ಪಂದಿಸುತ್ತ ಕಾವ್ಯವನ್ನು ರಚಿಸುತ್ತ ಬಂದಿದ್ದಾರೆ. ಹೀಗೆ ಕಣವಿಯವರು ತಾವೇ ಒಂದು ಪರಂಪರೆಯಾಗಿ ಬೆಳೆದಿದ್ದಾರೆ. ಎಲ್ಲ ಕಾಲದ ಪ್ರತಿಭೆ ಚೈತನ್ಯಗಳಿಗೆ ಗೌರವಾದರ ಸೂಚಿಸುತ್ತ ಅದರ ವಾರಸುದಾರರಾಗಿ ಕಾವ್ಯರಚಿಸುತ್ತ ಸಾಗಿದ್ದಾರೆ. ಪ್ರಕೃತಿಯನ್ನು ಅದರ ನೈಜರೂಪದಲ್ಲಿ ಗ್ರಹಿಸಿ ಮನುಷ್ಯನ ಬದುಕಿನ ಸಂಬಂಧಗಳಿಗೆ ಸಾಂಗತ್ಯಗೊಳಿಸಿ, ಅದನ್ನು ಪ್ರತೀಕ, ಪ್ರತಿಮೆಯನ್ನಾಗಿ ಮಾಡಿಕೊಂಡು, ನವೀನ ಆವಿಷ್ಕಾರಗಳನ್ನು ನೀಡುವುದು ಅವರ ಕಾವ್ಯದ ಅಭಿವ್ಯಕ್ತಿಯ ಸ್ವರೂಪವಾಗಿದೆ. ಪ್ರಕೃತಿಯನ್ನು ಮನುಷ್ಯ ಜೀವನದಿಂದ ಪ್ರತ್ಯೇಕಿಸಿ ನೋಡದೆ, ಅದರ ಅವಿಭಾಜ್ಯ ಅಂಗವಾಗಿ ಅವರು ಅವಲೋಕಿಸುತ್ತ ಬಂದಿರುವುದು ಕಂಡುಬರುತ್ತದೆ.

ಕಣವಿಯವರ ಕಾವ್ಯದಲ್ಲಿ ಮನುಷ್ಯ ಸ್ವಭಾವದ ಕ್ರಿಯೆಗಳು ಜೀವಧಾತುವಾಗಿ ಬರುತ್ತವೆ. ಬೇರೆ ಬೇರೆ ಸ್ತರಗಳಲ್ಲಿಯೂ ಅವರ ಕವಿತೆಗಳ ಮಹತ್ವವನ್ನು ಅರಿಯಬಹುದಾಗಿದೆ. ಕಣವಿಯವರು ಸ್ವವಿಮರ್ಶೆಯ ಕವಿಯೂ ಆಗಿದ್ದಾರೆ. ಅವರು ಕಾವ್ಯದ ಮೂಲಕ ಕನ್ನಡ ಸಂಸ್ಕೃತಿಯ ವ್ಯಾಖ್ಯೆ ಬರೆಯುತ್ತಿರುವಂತೆ ಭಾಸವಾಗುತ್ತದೆ. ಕವಿತೆಯ ರಚನೆಯಲ್ಲಿ ಚಾಕಚಕ್ಯತೆಯನ್ನು ಉಳಿಸಿಕೊಂಡ ಕಲಾಭಿಜ್ಞತೆಯಿಂದ ಜೀವನ ಮೌಲ್ಯಗಳನ್ನು ಎತ್ತಿಹಿಡಿಯುತ್ತ ವಿಶೇಷವಾದದ್ದನ್ನು ಜನತೆಗೆ ನೀಡುತ್ತಾರೆ. ಅವರು ನವೋದಯ, ನವ್ಯ ಕಾವ್ಯದ ನಂತರದ ಸಂದರ್ಭದಲ್ಲೂ ತಮ್ಮ ರೊಮ್ಯಾಂಟಿಕ್ ಮನೋಧರ್ಮವನ್ನು ಬಿಟ್ಟುಕೊಡಲಿಲ್ಲ ಎಂದು ನಮಗೆ ಅನ್ನಿಸುವ ಹಾಗೆಯೇ ರೊಮ್ಯಾಂಟಿಕ್ ಗುಣ ಅದು ನಿಷೇಧಾತ್ಮಕವಲ್ಲ ಎಂಬ

ದೃಷ್ಟಿಕೋನವೂ ಇರುತ್ತದೆ. ರಮ್ಯಾತ್ಮಕ ವರ್ಣನೆಯಲ್ಲೂ ಚೇತೋಹಾರಿಯಾದ ಗುಣ ಇದ್ದೇ ಇರುತ್ತದೆ ಎನ್ನುವುದನ್ನು ನಾವು ಮರೆಯಬಾರದು. ನಮ್ಮ ಚಿಂತನೆಯನ್ನು ಸದಾ ಕ್ರಿಯಾಶೀಲಗೊಳಿಸುತ್ತ ಬಂದ ಕಣವಿಯವರದು ಆತ್ಮವಿಮರ್ಶಕ ಕಾವ್ಯವೆಂದೂ ಹೇಳಬಹುದು. ಸಮಕಾಲೀನ ಜೀವನ, ವ್ಯಕ್ತಿ, ಪರಿಸರಗಳು ಚರಿತ್ರೆಯ ಭಾಗವೆಂದು ಅವರು ಗ್ರಹಿಸುತ್ತ ಬಂದಿದ್ದಾರೆ. 'ಎಷ್ಟು ಹಣತೆಯಿದ್ದರೂ ಕತ್ತಲೆಯು ಕರಗುವದಿಲ್ಲ' ಎಂದು ಹೇಳುವಲ್ಲಿ ಕಣವಿಯವರ ಆಳವಾದ ಚಿಂತನೆಯಿದೆ. ಕವಿತೆಯ ಕೆಲಸ ಮನ ಕರಗಿಸುವದು ಹಾಗೂ ಹೃದಯಕ್ಕೆ ಮುಟ್ಟುವುದು ಎಂಬ ನಿಲುವು ಕಣವಿಯವರದು. ತಮ್ಮ ಕವಿತೆಗಳಲ್ಲಿ ನಿಸರ್ಗ ವ್ಯಾಪಾರದ ಬಗೆಗೆ, ಜೀವನದ ನೂರಾರು ಸಮಸ್ಯೆಗಳ ಬಗೆಗೆ ಅಸಂಖ್ಯ ಪ್ರಶ್ನೆಗಳ ಮೂಲಕ ಸಹೃದಯನ ಜೊತೆ ಕವಿ ಸಂವಾದ ನಡೆಸುತ್ತಾರೆ. ಕಾವ್ಯ ಜಿಜ್ಞಾಸೆಯ ಚರ್ಚೆಯೂ 'ಸ್ಫೂರ್ತಿ' ಮೊದಲಾದ ಕವಿತೆಗಳಲ್ಲಿ ಬಂದಿದೆ.

ಕಾವ್ಯವನ್ನು ಘೋಷಣೆ, ಶಬ್ದಜಾಲಗಳ ಮೂಲಕ ಹದಗೆಡಿಸದೆ ಭಾಷೆಯ ಲಯಶಕ್ತಿಯನ್ನು ಜೀವಧ್ವನಿಯಾಗಿಸಿದವರು ಕಣವಿಯವರು. ಸಾಮಾಜಿಕ ಪ್ರತಿಭಟನೆ, ಬಂಡಾಯದ ಘೋಷಣೆಯ ಬೀಜಗಳು ಸ್ಫೋಟಗೊಳ್ಳುವ, ವಾಚಾಳಿತನದಿಂದ ಬಿತ್ತರಿಸುವ ಕಾರ್ಯವನ್ನು ಕಣವಿಯವರು ಮಾಡಲಿಲ್ಲ ನಿಜ. ಆದರೆ ಸಾಮಾಜಿಕ ವಿಷಮತೆಯ ಕಾರಣಗಳ ಶೋಧನೆ ಅದರ ಬಗೆಗೆ ಆಳವಾದ ಬೌದ್ಧಿಕ ಚಿಂತನೆ, ವ್ಯಂಗ್ಯ, ವಿಡಂಬನೆಯ ಮೂಲಕ ಕಾವ್ಯಾಭಿವ್ಯಕ್ತಿಗೊಳಿಸಿರುವ ವಿಧಾನ ಕಣವಿಯವರ ಕವಿತೆಗಳಲ್ಲಿ ಬಂದಿದೆ. ಸ್ವಾನುಭೂತಿಯಿಂದ ವಿವೇಕಯುತವಾದ ಬದಲಾವಣೆಗೆ ಕರೆಕೊಡುತ್ತ, ಭಾರತದ ಸಾಮಾಜಿಕ ಪರಿವರ್ತನೆಗೆ ಮುಖ ಮಾಡಿನಿಂತ ಕವಿಯ ವ್ಯಕ್ತಿತ್ವ ನಿಜಕ್ಕೂ ಆಶ್ಚರ್ಯಕರವಾದದು. ತಮ್ಮ ಕವಿತೆಗಳಲ್ಲಿ ಅನುಭಾವದ ಅಥವಾ ಧರ್ಮದ ತಾತ್ವಿಕ ಅಂಶಗಳಿಗೆ ಒತ್ತು ಕೊಡದೆ ಜೀವನದ ಮೂಲಭೂತವಾದ ಆಶಯಗಳಿಗೆ ಇದನ್ನು ವಿಸ್ತರಿಸಿ ಹೇಳುವದಾದರೆ ಹರ್ಷ, ಸ್ನೇಹ, ಪ್ರೀತಿ, ಕರುಣೆಯ ಭಾವಗಳಿಗೆ ಕಣವಿಯವರು ಮಹತ್ವ ನೀಡಿರುವದು ಕಂಡುಬರುತ್ತದೆ. ಉದಾರವಾದ ಮಾನವಾನುಭವಗಳನ್ನು ಎರಕ ಹೊಯ್ಯುವದರಲ್ಲಿ ಕಣವಿ ನಿರಂತರ

ಪ್ರಯತ್ನಶೀಲರಾಗಿದ್ದಾರೆ. ಇದರಿಂದ ಕಣವಿ ಕಾವ್ಯ ಜೀವಸ್ಪಂದಿಯಾದ ಅನುಭವಗಳನ್ನು ನೆಲೆಗೊಳಿಸಿದಂತಾಗಿದೆ. ಇರುವೆಯಿಂದ ಹಿಡಿದು ವಿಶ್ವದ ಸಮಷ್ಟಿ ವಸ್ತು ಅನುಭವಗಳನ್ನು ಅದು ತನ್ನದಾಗಿಸಿಕೊಳ್ಳುತ್ತದೆ.

ಬೇಂದ್ರೆಯವರು ಮೊದಲೇ ಗುರುತಿಸಿದ ಜೀವಂತಗತಿ, ಕಣವಿ ಕಾವ್ಯದಲ್ಲಿ ಎದ್ದು ಕಾಣುತ್ತದೆ. ಬೇಂದ್ರೆಯವರ ಕಾವ್ಯ ವಿಮರ್ಶೆಯ ಮಾತಿನ ಮೂಲಕವೇ ಕಣವಿ ಕಾವ್ಯ ವಿಮರ್ಶೆ ಆರಂಭವಾದದ್ದು ಒಂದು ಚಾರಿತ್ರಿಕವಾದ ಸಂದರ್ಭ ಎನ್ನಬಹುದು. ಗೋಕಾಕರೂ ಕೂಡ 'ಸೂಕ್ಷ್ಮಾಂತಃಕರಣ ಪ್ರಜ್ಞೆಯಲ್ಲಿಯೇ ಕಣವಿಯವರ ಕಾವ್ಯದ ಉಗಮಸ್ಥಾನವಿದೆ. ಅವರ ಆಂತರಿಕ ಹಾಗೂ ಸಾಮಾಜಿಕ ಸ್ಪಂದನಗಳು ಇಲ್ಲಿಂದ ಉದ್ಭವಿಸುತ್ತವೆ. ಅವರ ಪ್ರತಿಮೆ ಸಂಕೇತಗಳನ್ನು ಈ ಪ್ರಜ್ಞೆಯೇ ಒದಗಿಸುತ್ತದೆ' ಎಂದಿದ್ದಾರೆ. ನವೋದಯ ಸಾಹಿತ್ಯದ ಹಿರಿಯ ಕವಿ ಪು. ತಿ. ನ. ಅವರೂ ಕಣವಿ ಕಾವ್ಯದಲ್ಲಿ 'ಅಮೋಘವಾದ ಅನುಭವ, ರಸಾರ್ದ್ರವಾದ, ಉಜ್ವಲ ಮನಸ್ಸಿನ ಸಂಪರ್ಕ ನಮಗಿಲ್ಲಿ ಸಿಕ್ಕಿ ನಾವು ಒಂದು ತೆರನ ಅಲೌಕಿಕವಾದ ಉಲ್ಲಾಸವನ್ನು ಪಡೆಯುತ್ತೇವೆ' ಎಂದು ಮುಕ್ತಮನಸ್ಸಿನಿಂದ ಪ್ರಶಂಸಿಸಿದ್ದಾರೆ.

ಕಣವಿಯವರ ಕಾವ್ಯವನ್ನು ನಡೆದುಬಂದ ದಾರಿಯ ಸಂದರ್ಭದಲ್ಲಿ ವಿಮರ್ಶಿಸುತ್ತ ಕುರ್ತುಕೋಟಿಯವರು 'ಕಣವಿ ಅವರ ಕಾವ್ಯದೃಷ್ಟಿ, ನಿಸರ್ಗದ, ಜೀವನದ ಚೆಲುವಿಗೆ ಆಕರ್ಷಿತವಾದ 'ರೊಮ್ಯಾಂಟಿಕ್' ದೃಷ್ಟಿಯಾಗಿದೆ' ಎಂದು ಹೇಳಿದ್ದರು. ನವ್ಯಕಾವ್ಯ ಪ್ರಯೋಗದ ಸಂದರ್ಭದಲ್ಲಿ 'ಪ್ರೀತಿ, ಅಂತಃಕರಣಗಳ ಮೂಲಕ ಭಾಷೆಗೆ ಮೂಡಿದ ರೋಮಾಂಚನವೇ ಇವರ ಕಾವ್ಯವಾಗಿದೆ' ಎಂದಿದ್ದಾರೆ. ನವ್ಯೋತ್ತರದ ಸಂದರ್ಭದಲ್ಲಿ 'ಪ್ರಾಸಂಗಿಕ ಕಾವ್ಯಕ್ಕಾಗಿ ಒಂದು ವಿಶಿಷ್ಟ ಶೈಲಿಯನ್ನು, ವಿನಯವೇ ಸ್ಥಾಯಿಯಾಗಿ ಉಳ್ಳ ಒಂದು ಭಾವಸಂದೋಹವನ್ನು, ಗುಣ ಗ್ರಾಹಕಪ್ರಜ್ಞೆಯನ್ನು ಕಣವಿಯವರ ಕಾವ್ಯ ಮೊದಲಿನಿಂದಲೂ ರೂಢಿಸಿಕೊಂಡು ಬಂದಿದೆ' ಎಂದು ಅದರ ಚಾರಿತ್ರಿಕ ಸಂದರ್ಭವನ್ನು ಕುತುಕೋಟಿ ಅವರು ಎತ್ತಿ ಹೇಳಿದ್ದಾರೆ.

ಜಿ. ಎಸ್. ಶಿವರುದ್ರಪ್ಪನವರು ಕಣವಿ ಕಾವ್ಯವನ್ನು ವಿಮರ್ಶಿಸುತ್ತ 'ನವ್ಯಕಾವ್ಯದಿಂದಾಗಿ ರೂಪುಗೊಂಡ ಮುಕ್ತಛಂದಸ್ಸು, ವಾಸ್ತವಮುಖತೆ,

ಸಾಮಾಜಿಕ ಎಚ್ಚರ, ವ್ಯಂಗ್ಯವಿಡಂಬನೆಗಳನ್ನು ಕಣವಿಯವರ ಕವಿತೆ ಹಿಡಿದುಕೊಂಡಿತಾದರೂ, ಕಣವಿಯವರು ತಮ್ಮ ವ್ಯಕ್ತಿತ್ವದ ಮೂಲದ್ರವ್ಯಗಳಾದ ನಿಸರ್ಗಪ್ರಿಯತೆ, ಮಾರ್ದವತೆ, ಅನುಭಾವಿಕದೃಷ್ಟಿ, ಮಾನವೀಯತೆ, ಮೌಲ್ಯಪ್ರಜ್ಞೆ, ಇತ್ಯಾದಿಗಳನ್ನು ಬಿಟ್ಟುಕೊಡಲಿಲ್ಲ. ಈ ಹಲವು ವರ್ಷಗಳ ನಡುವಣ ಕಾಲದ ಯಾವ ಕಾವ್ಯಪಂಥಗಳ ದಾಳಿಗೂ ಹೊಯ್ದಾಡದೆ ತನ್ನ ನಿಶ್ಚಿತ ನೆಲೆಯನ್ನು ಕಾಯ್ದುಕೊಂಡು ಕನ್ನಡ ಕಾವ್ಯಶರೀರಕ್ಕೆ 'ಹೊಸ ನೆತ್ತರಿನ ಕೊಡುಗೆ'ಯನ್ನು ಕೊಟ್ಟಿದೆ' ಎಂಬ ಮೌಲಿಕ ಮಾತನ್ನು ಆಡಿದ್ದಾರೆ.

ಶಾಂತಿನಾಥ ದೇಸಾಯಿ ಅವರು ಕಣವಿ ಕಾವ್ಯದ ಆವಿಷ್ಕಾರದ ಸಾಂಸ್ಕೃತಿಕ ಸಂದರ್ಭವನ್ನು ಗುರುತಿಸುತ್ತ 'ಕಣವಿಯವರು ಕನ್ನಡ ನಾಡಿನ ಸಾಹಿತ್ಯಿಕ ಬೆಳವಣಿಗೆಯೊಂದಿಗೆ ಸಾಧಿಸಿದ ತಾದಾತ್ಮ್ಯದ ಪರಿಣಾಮವಾಗಿ ಕನ್ನಡದ ಅನಭಿಷಿಕ್ತ 'ರಾಜಕವಿ'(Poet laurate)ಯಾಗಿ ಕೆಲಸ ಮಾಡುವ ಹೊಣೆಗಾರಿಕೆ ಅವರ ಮೇಲೆ ಬಿದ್ದಿತು. ಅಂತೆಯೇ ಅವರು ಸಾರ್ವಜನಿಕಭಾವದ ಅಭಿವ್ಯಕ್ತಿಯಾಗಿ ಸಾಂದರ್ಭಿಕ (Occasional) ಕಾವ್ಯ ಬರೆಯಬೇಕಾಯಿತು' ಎಂದಿದ್ದಾರೆ.

ಗೌರೀಶ ಕಾಯ್ಕಿಣಿಯವರು ಕಣವಿಯವರ ಕಾವ್ಯದೃಷ್ಟಿಯಲ್ಲಿ 'ಕವಿಯ ಕಾವ್ಯಸಿದ್ಧಿ, ಕವಿತ್ವದ ಕಲಾಸಿದ್ಧಿ, ಶೈಲಿಯ ಶಕ್ತಿ, ಪಾಕ ಮತ್ತು ಮೇಧಕತೆ ಅಂದಿನಿಂದ ಇಂದಿನ ತನಕವೂ ಒಂದೇ ಹದದಲ್ಲಿ ತನ್ನ ಮೌಲ್ಯವನ್ನು ಸರಿಯಾಗಿ ಕಾಪಾಡಿಕೊಂಡಿವೆ. ಅವರ ಕವಿತೆಗಳ ಕಸಬುಗಾರಿಕೆ, ನಯನಾಜೂಕು, ಮೂರ್ತಿಶಿಲ್ಪದಂತೆ ಕವಿತೆಯ ಅಭಿವ್ಯಕ್ತಿ ಅಸಾಧಾರಣವಾದದ್ದು' ಎಂಬ ಅಭಿಪ್ರಾಯವನ್ನು ತಳೆದಿದ್ದಾರೆ.

ಕಣವಿಯವರ ಸಮಗ್ರಕಾವ್ಯ 'ಹೊಂಬೆಳಕು' ಪ್ರಸ್ತಾವನೆಯಲ್ಲಿ ಜಿ. ಎಸ್. ಆಮೂರ ಅವರು ಕಣವಿ ಕಾವ್ಯದ ಪುನರ್ವಿಮರ್ಶೆ ಮಾಡುತ್ತ 'ಏಕಾಗ್ರತೆ, ಅಮೂರ್ತಕ್ಕೆ ಆಕಾರ ಕೊಡುವ ಮೂರ್ತಪ್ರತಿಮೆಗಳ ಸೃಷ್ಟಿ, ವಚನಕಾರರಲ್ಲಿ ಕಂಡುಬರುವ ದರ್ಶನದ ಸ್ಪಷ್ಟತೆ, ನಿರಾಭರಣ ಸುಂದರವಾದ ಭಾಷೆ, ಲಯದ ನಿಯಂತ್ರಣದಲ್ಲಿ ಹುಟ್ಟಿಕೊಳ್ಳುವ ಅರ್ಥಕ್ರಿಯೆ, ಮೌನ ಹೊರಡಿಸುವ ಶಬ್ದ ಇವು ಈ ಕವಿತೆಗಳ ಶ್ರೇಷ್ಠ ಗುಣಗಳಾಗಿವೆ. ಈ ಎಲ್ಲ ಕವಿತೆಗಳ ಯಶಸ್ಸಿನ ಮಟ್ಟ ಏಕರೂಪವಾಗಿಲ್ಲವಾದರೂ ಅವು ಕಣವಿಯವರ

ಕಾವ್ಯ ಸಾಧಿಸಿದ ಪಕ್ವತೆಯ ಫಲಗಳೆನ್ನುವದರಲ್ಲಿ ಸಂಶಯವಿಲ್ಲ' ಎಂದು ಹೇಳಿರುವದು ಒಂದು ವಸ್ತುನಿಷ್ಠ ವಿಮರ್ಶೆಯಾಗಿದೆ.

ಡಿ. ಆರ್. ನಾಗರಾಜ ಅವರು 'ಜೀವನದ ಸಮಸ್ತ ಸವಾಲುಗಳಿಗೆ ಪ್ರತಿಸ್ಪಂದಿಸುತ್ತಲೇ ತಮ್ಮ ಸೃಜನಶೀಲತೆಯನ್ನು ಉಳಿಸಿಕೊಳ್ಳಬೇಕಾದ ಭಾರತದ ಈಗಿನ ಚಾರಿತ್ರಿಕ ಸಂದರ್ಭದಲ್ಲಿ ಕಣವಿಯವರ ಕಾವ್ಯಮಾರ್ಗ ಉದಾರವಾದಿ ಮಾನವತಾ ಧೋರಣೆಯನ್ನು ಹೊಂದಿಯೂ ಅರ್ಥಪೂರ್ಣ ಕಾವ್ಯ ರಚಿಸಬಲ್ಲ ಸಾಧ್ಯತೆಯನ್ನು ತೋರಿಸುತ್ತದೆ' ಎಂದು ಅಭಿಪ್ರಾಯಪಟ್ಟಿದ್ದಾರೆ.

ಎಚ್. ಎಸ್. ರಾಘವೇಂದ್ರರಾವ್ ಅವರು 'ಕಣವಿಯವರ ಕಾವ್ಯವು ಎಲ್ಲಾ ಹಂತಗಳಲ್ಲೂ ತನ್ನ ಭಾವಗೀತಾತ್ಮಕತೆಯನ್ನು (Lyricality) ಉಳಿಸಿಕೊಂಡು, ವರ್ಣನಾನಿಷ್ಠ ನಿರೂಪಣಾ ವಿಧಾನದ ವಾಸ್ತವಿಕತೆಯ ಸ್ಪರ್ಶವನ್ನೂ ಪಡೆದುಕೊಂಡಿರುವದು ಅದರ ಮತ್ತೊಂದು ಸಾಧನೆ' ಎಂದಿರುವದು ಕಣವಿ ಕಾವ್ಯದ ಅಭಿವ್ಯಕ್ತಿವಿಧಾನದ ಸ್ವರೂಪವನ್ನು ಸೂಚಿಸುತ್ತದೆ.

ನರಹರಿ ಬಾಲಸುಬ್ರಹ್ಮಣ್ಯ ಅವರು 'ಚೆನ್ನವೀರ ಕಣವಿ ಹೊಂಬೆಳಕಿನ ಹೊಳಹಿನಲ್ಲಿ' 'ಕನ್ನಡ ಭಾಷೆಯ ಲಯ ಸಂಪತ್ತನ್ನು ಕಣವಿಯವರು ಅರ್ಥಪೂರ್ಣವಾಗಿ ಬಳಸಿಕೊಂಡಿದ್ದಾರೆ. ಅವರ ಸಾನೆಟ್‌ಗಳಂತೂ ಕಣವಿಯವರ ಕಲೆಗಾರಿಕೆಯ ಶ್ರೇಷ್ಠ ಮಾದರಿಗಳು. ವರ್ಣನೆಯನ್ನು ತಮ್ಮ ಕಾವ್ಯದ ಪ್ರಮುಖ ಉಪಕರಣವನ್ನಾಗಿ ಮಾಡಿಕೊಂಡಿರುವ ಕಣವಿಯವರು ಕಟ್ಟಿಕೊಡುವ ಶಬ್ದಚಿತ್ರಗಳು ಮೇಲು ದರ್ಜೆಯವು. ಕಣವಿಯವರ ಕಾವ್ಯದ ಓದು ಮನಸ್ಸಿಗೆ ಉಲ್ಲಾಸ ನೀಡುತ್ತದೆ; ಹೃದಯವನ್ನು ಬೆಚ್ಚಗಾಗಿಸುತ್ತದೆ. ಬದುಕಿನ ಬಗೆಗಿನ ನಮ್ಮ ಅರಿವಿಗೆ ಹೊಸ ಬೆಳಕು ನೀಡುತ್ತದೆ' ಎಂದಿದ್ದಾರೆ.

ಕಣವಿಯವರ ಕಾವ್ಯ, ವಿಮರ್ಶಕರ ವಿಭಿನ್ನವಾದ ಸಂವಾದಗಳಿಗೆ ಆಸ್ಪದವನ್ನು ನೀಡುತ್ತದೆ. ನಿರಂತರವಾಗಿ ಹರಿಯುವ ಅವರ ಕಾವ್ಯ ಅಂದಂದಿನ ವಿಮರ್ಶಕರ ಗಮನ ಸೆಳೆಯುತ್ತಲೇ ಬಂದಿದೆ. ಅರ್ಧಶತಮಾನದ ಕಾಲಾವಧಿಯಲ್ಲಿ ಆಧುನಿಕ ಕಾವ್ಯ ವಿವಿಧ ಮಜಲುಗಳನ್ನು ಕಂಡಿದ್ದರೂ ಕಣವಿಯವರು ಆ ಮಜಲಿನ ಅಂತಸ್ಸತ್ವವನ್ನು ಅರಿತುಕೊಂಡು, ಯಾವುದನ್ನೂ

ತಿರಸ್ಕರಿಸದೆ, ತಮ್ಮದೇ ಆದ ದಾರಿಯಲ್ಲಿ ನಡೆದಿದ್ದು ಕಂಡುಬರುತ್ತದೆ. ಅವರೇ ಹೇಳಿದಂತೆ, 'ಕಾಲ ನಿಲ್ಲುವುದಿಲ್ಲ' ಸದಾ ಚಲಿಸುವುದೇ ಅದರ ಗುಣ. ಕಾಲದೊಂದಿಗೆ ಸಾರ್ಥಕವಾಗಿ ಸ್ಪಂದಿಸುವುದು ಅಷ್ಟು ಸುಲಭವಾದದ್ದೇನಲ್ಲ ತಲೆಮಾರಿನಿಂದ ತಲೆಮಾರಿಗೆ ಕಂದಕಗಳು ನಿರ್ಮಾಣವಾಗುತ್ತಿರುವುದನ್ನೂ ನಾವು ಕಾಣುತ್ತೇವೆ. ಕಂದಕಗಳಿಗೆ ಸೇತುವೆ ನಿರ್ಮಿಸುವವರು ಕೆಲವರು ಮಾತ್ರ. ಆ ಕೆಲವರಲ್ಲಿ ಕವಿ ಕಣವಿಯವರೂ ಒಬ್ಬರು. ಯಾಕೆಂದರೆ ಅವರದು 'ಚಿರಂತನ ದಾಹ'. ತೀವ್ರ ಸಂವೇದನಾಶೀಲರಾದ ಅವರು ಭಾರತ ಸ್ವಾತಂತ್ರ್ಯದ ಸಂದರ್ಭದಲ್ಲಿ ಉಲ್ಲಸಿತರಾಗಿ ಹಾಡಿದವರು, ಇತ್ತೀಚಿನ ಅಯೋಧ್ಯಾ ಘಟನೆಯ ಬಗ್ಗೆ ಮಮ್ಮಲ ಮರುಗಿದರು. 'ಹೂವು ಹೊರಳುವವು ಸೂರ್ಯನ ಕಡೆಗೆ ನಮ್ಮ ದಾರಿ ಬರಿ ಚಂದ್ರನವರೆಗೆ' ಎಂದು ನಿಸರ್ಗ ಪ್ರೀತಿಯನ್ನೂ ಮಾನವನ ವೈಜ್ಞಾನಿಕ ಬೆಳವಣಿಗೆಯನ್ನೂ ಒಟ್ಟಿಗೆ ಗುರುತಿಸುವ ರಸಜ್ಞರೂ ಅಹುದು. ವಿಚಾರವಾದಿಗಳೂ ಅಹುದು. ಕಣವಿಯವರೇ ಒಂದೆಡೆಯಲ್ಲಿ ಹೇಳಿದಂತೆ 'ಬರೆದ ಕವಿತೆಗಿಂತ ಬರೆಯದ ಕವಿತೆಯ ಭಾರ ಹೆಚ್ಚು'. ಕವಿತೆಯ ಭಾರಹೊತ್ತಿರುವ ಈ ಕವಿ ತಮ್ಮ ಕಾವ್ಯದ ಸಾಧನೆಯನ್ನು ಅನುಸ್ಯೂತವಾಗಿ ಮುಂದುವರಿಸುವುದು ಕನ್ನಡದ ಭಾಗ್ಯ, ಕನ್ನಡಿಗರ ಭಾಗ್ಯವೆಂದೇ ಹೇಳಬೇಕು.

# ಕಣವಿ ಸಂದರ್ಶನ

## ಮಾನವ ಸಂಬಂಧಗಳ, ಪ್ರೀತಿ, ಸ್ನೇಹದ ಅನನ್ಯಕವಿ ಚೆನ್ನವೀರ ಕಣವಿ

ಧಾರವಾಡದ ನೆಲದ ಗುಣವೇನೊ ಋಣವೇನೊ !
ಕವಿಗಾಳಿ ಸವಿಗಾಳಿ ತೀಡುತಿಹುದು.
ಧಾರವಾಡದ ತಾಯ ಮಡಿಲಲ್ಲಿ ಮೊರೆಯಿಟ್ಟ
ದತ್ತವಾಣಿಗೆ ಎದೆಯು ಕೋಡುತಿಹುದು

(ಚೆನ್ನವೀರ ಕಣವಿ : 'ಭಾವಜೀವಿ')

ಕನ್ನಡ ಕಾವ್ಯಪ್ರಪಂಚಕ್ಕೆ ಧಾರವಾಡವು ನೀಡಿದ ಕವಿಪರಂಪರೆಯಲ್ಲಿ ಚೆನ್ನವೀರ ಕಣವಿ ಅವರಿಗೆ ಮಹತ್ವದ ಸ್ಥಾನ. ಕಣವಿ ಅವರು ಭಾವಜೀವಿಯಾಗಿ ಸ್ನೇಹಜೀವಿಯಾಗಿ ಪ್ರೀತಿ, ಅಂತಃಕರಣಗಳಿಂದ ಮಾನವೀಯ ಸಂಬಂಧಗಳನ್ನು ಕನ್ನಡ ಕಾವ್ಯದಲ್ಲಿ ಹೊಳೆಯಾಗಿ ಹರಿಸಿದವರು. ನವೋದಯ, ನವ್ಯ, ನವ್ಯೋತ್ತರ ಹೀಗೆ ಆಧುನಿಕ ಕನ್ನಡ ಕಾವ್ಯಪರಂಪರೆಯಲ್ಲಿ ಕಣವಿಯವರ ಕಾವ್ಯ ಜೀವಧ್ವನಿಯಾಗಿ ಪ್ರಕಟವಾದದ್ದು ಕನ್ನಡದ ಭಾಗ್ಯವೆನ್ನಬೇಕು. ಬತ್ತಲಾರದ ಗಂಗೆಯಂತೆ ಕಾವ್ಯವನ್ನು ನಿರಂತರವಾಗಿ ನೀಡುತ್ತಲಿರುವ ಕಣವಿಯವರ ಸೃಜನಶೀಲತೆ ಅಗಾಧವಾದದ್ದು. ನಿಸರ್ಗದ ಬಗೆಗೆ ಗಾಢವಾದ ಪ್ರೀತಿ, ಮಾನವ ಬದುಕಿನ ಉತ್ಕರ್ಷದ ಬಗೆಗೆ ಪ್ರೀತಿ ತುಂಬಿದ ಕಣವಿ ಅವರ ಕವಿತೆಗಳು ಅವರ ಸುಸಂಸ್ಕೃತ ಮನಸ್ಸಿನ ಪ್ರತಿಬಿಂಬವಾಗಿವೆ. ಕನ್ನಡ ಜನರ ಪ್ರೀತಿಯ ಕವಿ ಕಣವಿ ಹಾಸನದಲ್ಲಿ ಜರುಗಲಿರುವ ಅರವತ್ತೈದನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರಾದದ್ದು ಕನ್ನಡಿಗರಿಗೆ ಅಪಾರ ಹರ್ಷೋಲ್ಲಾಸವನ್ನುಂಟು ಮಾಡಿದೆ.

ಕಾವ್ಯರಚನೆ ಕಣವಿ ಅವರ ಪ್ರತಿಭೆಯ ವಿಶಿಷ್ಟತೆಯಾಗಿರುವದಾದರೂ ಕಾವ್ಯದ ಕಸಬುಗಾರಿಗೆಯಲ್ಲಿ ಅವರ ಸಾಧನೆ ಮಹತ್ತರವಾದದ್ದು. ಸಮಕಾಲೀನ ಸಂವೇದನೆಗಳಿಗೆ ಹೊಸ ಹೊಸ ಅನುಭವಕ್ಕೆ ಕಾವ್ಯಶಿಲ್ಪ ನೀಡುವ ಕಲೆಗಾರಿಕೆ ಕಣವಿ ಕವಿತೆಗಳ ವೈಶಿಷ್ಟ್ಯವಾಗಿದೆ. 'ಕಾವ್ಯಾಕ್ಷಿ', 'ಭಾವಜೀವಿ', 'ಆಕಾಶಬುಟ್ಟಿ', 'ಮಧುಚಂದ್ರ', 'ದೀಪಧಾರಿ', 'ಮಣ್ಣಿನ ಮೆರವಣಿಗೆ', 'ನೆಲಮುಗಿಲು', 'ಎರಡು ದಡ', ನಗರದಲ್ಲಿ ನೆರಳು, 'ಜೀವಧ್ವನಿ,' 'ಕಾರ್ತೀಕದ ಮೋಡ', ಜೀನಿಯಾ, ಶಿಶಿರದಲ್ಲಿ ಬಂದ ಸ್ನೇಹಿತ – ಈ ಕವಿತಾ ಸಂಕಲನಗಳು ಕಣವಿ ಕಾವ್ಯದ ಜೀವಂತ ಗತಿಯನ್ನು ಪ್ರಕಟಿಸುತ್ತವೆ; ಕಣವಿ ಅವರ ಸಮಗ್ರಕಾವ್ಯ 'ಹೊಂಬೆಳಕು' ೩೭೦ ಕವಿತೆಗಳ ಬೃಹತ್ ಸಂಪುಟವಾಗಿದೆ. ಚಿರಂತನದಾಹ (ಆಯ್ದ ಕವಿತೆಗಳು) ಹೂವು ಹೊರಳುವುವು ಸೂರ್ಯನ ಕಡೆಗೆ(ಗೇಯ ಕವಿತೆಗಳು) ಹಕ್ಕೀಪುಚ್ಚ (ಮಕ್ಕಳ ಕವಿತೆ) ಹೀಗೆ ಹದಿನಾರು ಕವಿತಾ ಸಂಕಲನಗಳಲ್ಲಿ ಹರಿದು ಬಂದ ಕಣವಿ ಕಾವ್ಯದಲ್ಲಿ ಸಮೃದ್ಧಿ, ವೈವಿಧ್ಯ ಹಾಗೂ ಸಂಭ್ರಮವನ್ನು ಕಾಣುತ್ತೇವೆ. ಸಮಾಹಿತ ಪ್ರತಿಭೆಯ ಅನನ್ಯತೆ ಕಣವಿ ಅವರಲ್ಲಿದೆ 'ಭಾವ ಜೀವಿಯು ನಾನು ನನ್ನೆದೆಯ ನಂಬಿರುವ, ತುಂಬಿರುವ ಕನಸುಗಳೆ ಕಲ್ಪವೃಕ್ಷ' ಎಂದ ಕಣವಿಯವರು ಭಾವಗೀತೆಯ ಉತ್ಕರ್ಷದ ಕಾಲದಲ್ಲಿ ಕನ್ನಡದಲ್ಲಿ ಕಾವ್ಯ ರಚನೆಗೆ ತೊಡಗಿಕೊಂಡವರು, ನವೋದಯ ಕಾವ್ಯ ದುಮದುಮಿಸಿ ಬರುವಾಗ ಕಣವಿ, 'ಸೌಂದರ್ಯ ದರ್ಶನಕೆ ದೀಪ್ತವಾಗಿಹ ಮನವು ಪ್ರಕೃತಿಯೋಪಾಸನೆಯ ಕೈಕೊಂಡು' ಮಧುಚಂದ್ರದ ಉಲ್ಲಾಸವನ್ನು ನೀಡಿದವು. ನವೋದಯ, ನವ್ಯ ಎರಡು ದಡಗಳ ನಡುವೆ ಕಣವಿಯವರು ತಮ್ಮ ಕವಿತ್ವಶಕ್ತಿಯನ್ನು ಪ್ರವಹಿಸಿ ಸಮಕಾಲೀನ ಸಂವೇದನೆ, ಕ್ರಿಯೆ ಪ್ರತಿಕ್ರಿಯೆ ಸೃಜನಶೀಲವಾಗಿಸಿದ್ದು ಅದರ ಮುಂದುವರಿಕೆಯನ್ನು ನಾವು ಇಂದಿನವರೆಗೂ ಕಾಣುತ್ತೇವೆ. ಕಣವಿ ಕಾವ್ಯದಲ್ಲಿ ಅವರ ಸುನೀತಗಳು ಕನ್ನಡ ಕಾವ್ಯಪರಂಪರೆಗೆ ಕೊಟ್ಟ ಮುಖ್ಯ ಕೊಡುಗೆಗಳಾಗಿವೆ. ಸುನೀತಗಳಲ್ಲಿ ನಾಡಿನ ಕವಿಗಳು, ಸಾಂಸ್ಕೃತಿಕ ಚೇತನಗಳನ್ನು, ವ್ಯಕ್ತಿತ್ವದ ವಿಭಿನ್ನ ಮುಖಗಳನ್ನು ಕಣವಿ ಸೆರೆ ಹಿಡಿದ ರೀತಿ ವಿಶಿಷ್ಟವಾದದ್ದು. ಕಣವಿಯವರ ನೂರಾರು ಸುನೀತಗಳು ಕಾವ್ಯಬಂಧ, ಲಯಗಾರಿಕೆ, ವಸ್ತುವಿನ ಅನನ್ಯತೆಯ ನೆಲೆಯಿಂದಲೂ ಮಹತ್ವಪೂರ್ಣವಾಗಿವೆ. 'ಜಗವ ತುಂಬಿದ ಬೆಳಕು

ನಮಗೇಕೋ ಸಾಲದಿದೆ ಎನಿತು ಮಾನವನೆದೆಯ ಆಳ ಅಗಲ' ಎಂದ ಕಣವಿಯವರು ಚೆಂಬೆಳಕಿನ ಕವಿಯಾಗಿದ್ದಾರೆ. 'ಹೊಂಬೆಳಕು' (ಸಮಗ್ರಕಾವ್ಯ)ದಲ್ಲಿ ಕವಿಯ ಪ್ರಜ್ಞೆಯ ಬೆಳಕನ್ನು, ಚಿಂತನಶೀಲತೆಯನ್ನು, ಸುಕುಮಾರ ಭಾವನೆಯನ್ನು, ಕಾವ್ಯಾನುಭೂತಿಯ ವೈವಿಧ್ಯವನ್ನು, ಅರ್ಥಪೂರ್ಣ ಪ್ರತಿಮಾವಿಧಾನವನ್ನು ಅನುಭವಿಸುತ್ತೇವೆ. ಕಣವಿಯವರು ಸಹೃದಯನೊಡನೆ ಕವಿತೆಯ ಮೂಲಕ ನಡೆಸುವ ಭಾವಸಂವಾದ ಮನೋಜ್ಞವಾದದ್ದು. ಸಾಮಾಜಿಕ ಪ್ರಜ್ಞೆಯ ವಿಡಂಬನೆಯ ಸ್ಪಂದನವೂ ಕಣವಿ ಕಾವ್ಯದಲ್ಲಿದೆ. ದೇಶೀಯ ಸಂಸ್ಕೃತಿಯ ಬೇರುಗಳಲ್ಲಿ ಆಸ್ಥೆಯಿಟ್ಟು ಅದನ್ನು ಭದ್ರಗೊಳಿಸುವ ಆಶಯವನ್ನು ಪ್ರಕಟಿಸಿದ ಕಣವಿ ಅವರು ಸಮಕಾಲೀನ ಸನ್ನಿವೇಶದಲ್ಲಿ ಕನ್ನಡಕಾವ್ಯ ನವೀನ ಮಾರ್ಗವನ್ನು ಕಂಡುಕೊಳ್ಳಬೇಕೆಂದು ಹೇಳಿದ್ದಾರೆ. ಅನ್ಯ ಸಂಸ್ಕೃತಿಯ ಅಕ್ರಮಣದಿಂದ, ಪಾಶ್ಚಾತ್ಯ ಪ್ರಭಾವದಿಂದ ಕನ್ನಡದ ಸಂಸ್ಕೃತಿ ಪರಂಪರೆಗೆ ಧಕ್ಕೆ ಆಗದಂತೆ ಕಾವ್ಯ ಕಟ್ಟುವ ಹೊಸ ಸಂವೇದನೆ ಕಾವ್ಯದಲ್ಲಿ ಮೂಡಿ ಬರಬೇಕೆಂದು ಕಣವಿ ಹೊಸ ಕವಿಗಳಿಗೆ ಕರೆಕೊಟ್ಟಿದ್ದಾರೆ. 'ನನ್ನ ನಂಬಿಕೆಯೊಂದು ಆಕಾಶ ನಿಜ ಅದಕೆ ತಲೆ ಬುಡವಿಲ್ಲ. ನಾನೆಷ್ಟು ಬೆಳೆದರೂ ನನಗೆ ನಿಲುಕುವದಿಲ್ಲ' ಎಂದು ಕಾವ್ಯಲೋಕದ ಅನಂತ ವಿಸ್ತಾರ, ಮಾನವ ಸಂಬಂಧಗಳ ವಿಶ್ಲೇಷಣೆಯಲ್ಲಿ ತೊಡಗಿದ ಅವರು ಕನ್ನಡ ಕಾವ್ಯ ಪರಂಪರೆಗೆ ಕೊಟ್ಟ ಕೊಡುಗೆ ಅಗಾಧವಾದದ್ದು. ಸ್ನೇಹ, ಪ್ರೀತಿ, ಅಂತಃಕರಣಗಳೇ ಹೂವಾಗಿ ಅರಳಿ ಪರಿಮಳಿಸುವ ಕಣವಿ ಕಾವ್ಯ ಸಹೃದಯರಿಗೆ ಸತತ ಚೇತೋಹಾರಿಯಾದದ್ದು. ಅವರ ಅಭಿನಂದನ ಗ್ರಂಥ 'ಚೆಂಬೆಳಕು' ಕಣವಿ ವ್ಯಕ್ತಿತ್ವ ಸಾಹಿತ್ಯ ಪ್ರತಿಭೆಯ ಶ್ರೀಮಂತಿಕೆ ಸಾರುತ್ತದೆ. ಕಣವಿ ಕನ್ನಡದ ಶ್ರೇಷ್ಠ ಕವಿಯಾಗಿ ವಿಜೃಂಭಿಸುವಂತೆ ವಿಮರ್ಶಕರಾಗಿಯೂ ಖ್ಯಾತರಾಗಿದ್ದಾರೆ. ಸಾಹಿತ್ಯ ಚಿಂತನ ಕಾವ್ಯಾನುಸಂಧಾನ, ಸಮಾಹಿತ, ಮಧುರ ಚೆನ್ನ, ಸಮತೋಲನ, ವಚನಾಂತರಂಗ ಮೊದಲಾದ ವಿಮರ್ಶಾ ಸಂಕಲನಗಳಲ್ಲಿ ಕಣವಿಯವರ ಸಹೃದಯತೆ, ಸಾಹಿತ್ಯಪ್ರೀತಿ ರಸಜ್ಞತೆ, ವಿಶ್ಲೇಷಣಾತ್ಮಕ ಪ್ರತಿಭೆಯನ್ನು ನಾವು ಸ್ಪರ್ಶಿಸುತ್ತೇವೆ. ಕಾವ್ಯ ಹಾಗೂ ವಿಮರ್ಶೆಯ ವ್ಯವಸಾಯವನ್ನು ಅರ್ಧಶತಮಾನದಷ್ಟು ಕಾಲ ನಡೆಸಿದ ಕಣವಿ ಅವರು ೬೮ ವಸಂತಗಳನ್ನು ಕಂಡವರು, ಕನ್ನಡದ ಹಿರಿಯ ಕವಿ ಕಣವಿ ಅವರು ತಮ್ಮ 'ಜೀವಧ್ವನಿ' ಕವಿತಾ

ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಬಹುಮಾನ ಪಡೆದಿದ್ದಾರೆ. ಬಾಳಸಂಗಾತಿ ಲೇಖಕಿ ಶಾಂತಾದೇವಿ ಕಣವಿ ಅವರೊಡನೆ ಆದರ್ಶ ದಾಂಪತ್ಯ ಜೀವನ ನಡೆಸಿದ ಕಣವಿ ಸಜ್ಜನಿಕೆ, ಸುಸಂಸ್ಕೃತ ನಡವಳಿಕೆಯ ಸಾಕಾರಮೂರ್ತಿಯಾಗಿದ್ದಾರೆ. ಕಣವಿಯವರೊಂದಿಗೆ ನಡೆಸಿದ ಸಂದರ್ಶನದ ಪೂರ್ತಿ ಪಾಠ ಹೀಗಿದೆ :

**ನೀವು ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿ ಆಯ್ಕೆಯಾದಾಗ ನಿಮ್ಮ ಹಾಗೂ ಜನರ ಪ್ರತಿಕ್ರಿಯೆ ಯಾವುದು ?**

ನನಗಿಂತ ಹಿರಿಯರಾದ ಸಾಹಿತಿಗಳಿದ್ದರೂ ನನ್ನ ಸಾಹಿತ್ಯಸೇವೆಯನ್ನು ಮನಗಂಡು ಕ. ಸಾ. ಪ. ಕಾರ್ಯಕಾರಿ ಸಮಿತಿ ನನ್ನನ್ನು ಸಮ್ಮೇಳನದ ಅಧ್ಯಕ್ಷನನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಿದಾಗ ಸಂತೋಷವಾಯಿತು. ನಿರ್ಲಿಪ್ತನಾಗಿದ್ದ ನನಗೆ ಕನ್ನಡದ ಜನ ತೋರಿಸಿದ ಪ್ರೀತಿ, ಗೌರವಗಳಿಗಾಗಿ ಸಹಜವಾಗಿಯೇ ಹರ್ಷವಾಯಿತು. ಕನ್ನಡನಾಡಿನ ಮೂಲೆ ಮೂಲೆಗಳಿಂದ ಸಾಹಿತಿಗಳು, ಅಭಿಮಾನಿಗಳು ಅಭಿನಂದನೆಯ ಪತ್ರಗಳನ್ನು ಬರೆದಿದ್ದಾರೆ. ಎಲ್ಲೆಡೆ ಸಂತಸವಾಗಿದೆ. ನಾನು ಸ್ವಭಾವತಃ ಸ್ನೇಹಜೀವಿ, ಯಾರಿಗೂ ಕೇಡನ್ನು ಬಯಸದವನು. ನಾನು ಒಳ್ಳೆಯದನ್ನು ಗುರುತಿಸಿ, ಮೆಚ್ಚಿಕೊಳ್ಳುತ್ತ ಬಂದಿದ್ದೇನೆ. ಜೊತೆಯ ಲೇಖಕರ ಸಾಹಿತ್ಯವನ್ನು ಓದಿ ಸಂತೋಷಿಸುತ್ತ ಬಂದವನು. ನನ್ನ ತಂದೆ-ತಾಯಿ ಹಾಗೂ ನಾನು ಬೆಳೆದ ವಾತಾವರಣ, ನನ್ನ ಗುರು ಹಿರಿಯರ ಪ್ರಭಾವದಿಂದ ಪ್ರೀತಿ, ಅಂತಃಕರಣ ನನ್ನಲ್ಲಿ ಈ ಸಂಸ್ಕಾರವನ್ನುಂಟು ಮಾಡಿದೆ.

**ನಿಮ್ಮಲ್ಲಿ ಕಾವ್ಯಾಸಕ್ತಿ ಉಂಟಾದದ್ದು ಹೇಗೆ ?**

ಪ್ರಾಥಮಿಕ ಶಾಲಾ ಶಿಕ್ಷಕರಾಗಿದ್ದ ನನ್ನ ತಂದೆಯವರು ಹಾಡಿಕೊಳ್ಳುತ್ತಿದ್ದ ತತ್ವಪದದ ನಾದಲಯ, ಹಳ್ಳಿಗಳಲ್ಲಿ ಹಾಡುತ್ತಿದ್ದ ಜನಪದ ಗೀತೆಗಳು ಈ ಆಸಕ್ತಿಗೆ ಮೂಲ ಪ್ರೇರಣೆ. ಹಾಗೆಯೇ ಧಾರವಾಡಕ್ಕೆ ಬಂದಾಗ ಬೇಂದ್ರೆ, ಕುವೆಂಪು, ಬೆಟಗೇರಿ ಮುಂತಾದವರ ಭಾವಗೀತೆಗಳ ಹಾಡುಗಾರಿಕೆ ನನ್ನ ಮೇಲೆ ಪ್ರಭಾವ ಬೀರಿದವು. ಧಾರವಾಡದ ಸಾಹಿತ್ಯಿಕ, ಸಾಂಸ್ಕೃತಿಕ ವಾತಾವರಣದಲ್ಲಿ ನನ್ನ ಕವಿಮನಸ್ಸು ಅರಳತೊಡಗಿತು. ಹೈಸ್ಕೂಲಿನ ಮಿಸಲನಿಯಲ್ಲಿ ನನ್ನ ಮೊದಲ ಕವಿತೆಗಳು ಅಚ್ಚಾಗಿ ಬಂದಾಗ ನನಗೆ ಆನಂದವಾಯಿತು. ಕಾವ್ಯದ ಬಗೆಗೆ ಎಲ್ಲೆಲ್ಲೂ ಪ್ರೀತಿ ತುಂಬಿದ

ನವೋದಯದ ಸಂಭ್ರಮದಲ್ಲಿ ನಾನು ಕಾವ್ಯದ ಅಭ್ಯಾಸ ಮಾಡಿ ಕವಿತೆಗಳನ್ನು ಬರೆಯತೊಡಗಿದೆ. ಆಗಿನ ಪ್ರಸಿದ್ಧ ಪತ್ರಿಕೆಗಳಾದ ಜೀವನ, ಜಯಂತಿ, ಜಯಕರ್ನಾಟಕಗಳಲ್ಲಿ ಪ್ರಕಟಗೊಂಡಿದ್ದ ನನ್ನ ಕವಿತೆಗಳನ್ನು ನೋಡಿ ಮೆಚ್ಚಿಕೊಂಡಿದ್ದ ಹಿರೇಮಲ್ಲೂರ್ ಈಶ್ವರನ್ ತಮ್ಮ 'ಕಲ್ಪನಾ ಗ್ರಂಥಮಾಲೆ'ಯಲ್ಲಿ ಮೊದಲ ಕವಿತಾ ಸಂಗ್ರಹ 'ಕಾವ್ಯಾಕ್ಷಿ' (೧೯೪೯) ಪ್ರಕಟಿಸಿದರು. ಅದಕ್ಕೆ ವರಕವಿ ಬೇಂದ್ರೆ ಮುನ್ನುಡಿ ಬರೆದು ಹರಸಿದರು.

**ನಿಮ್ಮ ಕವಿಜೀವನದ ಬೆಳವಣಿಗೆಯ ವಿವಿಧ ಹಂತಗಳು ಯಾವವು ?**

ಬೇಂದ್ರೆಯವರು 'ಗೆಳೆಯರ ಗುಂಪು' ಕಟ್ಟಿದ ಹಾಗೆ ನಾವು ವಿದ್ಯಾರ್ಥಿಗಳಾಗಿದ್ದಾಗ 'ಕಾವ್ಯಾನುಭವ ಮಂಟಪ' ಆರಂಭಿಸಿ ಅದರಲ್ಲಿ ಕವಿತಾ ವಾಚನ ಸಾಹಿತ್ಯ ಚರ್ಚೆ ಮಾಡುತ್ತಿದ್ದೆವು. ಬೇಂದ್ರೆ ಹಾಗೂ ಗೋಕಾಕರು ಮಂಟಪದ ಉದ್ಘಾಟನೆ ಮಾಡಿ ನಮ್ಮ ಸಾಹಿತ್ಯಾಸಕ್ತಿಯನ್ನು ಪ್ರೋತ್ಸಾಹಿಸಿದರು. 'ಭಾವಜೀವಿ'ಗೆ ಮುನ್ನುಡಿ ಬರೆದ ಗೋಕಾಕರ ಮೆಚ್ಚುಗೆ ಪಡೆದ 'ಭಾವಜೀವಿ' ನನ್ನ ಕವಿಮನಸ್ಸಿನ ಬೆಳವಣಿಗೆಯ ದಿಕ್ಕನ್ನು ಪ್ರತಿಬಿಂಬಿಸಿದೆ. ವಿದ್ಯಾರ್ಥಿ ಜೀವನದಲ್ಲಿ ಕವಿಯಾಗಿ ಬೆಳೆದ ನಾನು ಕನ್ನಡ ಎಂ. ಎ. ಪದವಿ ಪಡೆದು ವಿಶ್ವವಿದ್ಯಾಲಯದಲ್ಲಿ ಆಗತಾನೆ ಆರಂಭವಾದ ವ್ಯಾಸಂಗ ವಿಸ್ತರಣ ಪ್ರಕಟನ ವಿಭಾಗದ ಮುಖ್ಯಸ್ಥನಾಗಿ ನೇಮಕವಾಗಿ ನಿವೃತ್ತಿಯಾಗುವವರೆಗೆ ಅಲ್ಲಿಯೇ ಕಾರ್ಯ ಮಾಡಿದೆ. ನವೋದಯ, ನವ್ಯ, ನವ್ಯೋತ್ತರ ಸಂದರ್ಭದಲ್ಲೂ ನಾನು ಸಮಕಾಲೀನ ಸಂದರ್ಭಕ್ಕೆ ಸ್ಪಂದಿಸುತ್ತ ಕಾವ್ಯರಚನೆ ಮಾಡುತ್ತ ಬಂದಿದ್ದೇನೆ.

**ನಿಮ್ಮ ಸಾಹಿತ್ಯಿಕ ವ್ಯಕ್ತಿತ್ವಕ್ಕೆ ಪ್ರಸಾರಾಂಗದ ಕಾರ್ಯಗಳು ಸಹಕಾರಿಯಾದವೆ ?**

ಪ್ರಸಾರಾಂಗದ ಕಾರ್ಯವ್ಯಾಪ್ತಿ ಬಹುಮುಖವಾದುದಾಗಿತ್ತು. ಪುಸ್ತಕ ಪ್ರಕಟಣೆ, ಗ್ರಾಮಾಂತರ ಪ್ರದೇಶದಲ್ಲಿ ಉಪನ್ಯಾಸಗಳ ಏರ್ಪಾಡು. ಹೀಗೆ ನಿರಂತರವಾಗಿ ಶೈಕ್ಷಣಿಕ, ಸಾಹಿತ್ಯಿಕ, ಸಾಂಸ್ಕೃತಿಕ ಚಟುವಟಿಕೆಗಳನ್ನು ಆರಂಭಿಸಲಾಯಿತು. ಸಾಮಾನ್ಯ ಜನರು, ವಿದ್ವಾಂಸರು, ಹಾಗೂ ವಿದ್ಯಾರ್ಥಿಗಳಿಗಾಗಿ ದೊಡ್ಡ ಪ್ರಮಾಣದಲ್ಲಿ ಪುಸ್ತಕಗಳನ್ನು ಪ್ರಕಟಿಸಿ ರಾಜ್ಯದ ಉಳಿದ ವಿಶ್ವವಿದ್ಯಾಲಯಗಳ ಪ್ರಸಾರಾಂಗಕ್ಕಿಂತ ಸ್ವಲ್ಪ ಹೆಚ್ಚಿನ ಕಾರ್ಯ ನಮ್ಮಲ್ಲಿ ನಡೆಯಿತು. ಇಂಗ್ಲೀಷ್ ಹಾಗೂ ಕನ್ನಡದಲ್ಲಿ ವಿದ್ವತ್ ಪತ್ರಿಕೆಗಳನ್ನು ಪ್ರಾರಂಭಿಸಲಾಯಿತು. ಈ ಸಂದರ್ಭದಲ್ಲಿ ಅನೇಕ ಹಿರಿಯ

ಸಾಹಿತಿಗಳ ಸಂಪರ್ಕ ನನಗೆ ಒದಗಿ ಬಂದಿತು. ಪ್ರಸಾರಾಂಗದ ಕಾರ್ಯ ಯೋಜನೆಗಳನ್ನು ನಡೆಸುತ್ತಲೇ ನನ್ನ ಸಾಹಿತ್ಯರಚನೆಯ ಕಾರ್ಯವೂ ಸಾಗುತ್ತ ಬಂತು. ಸಾಕಷ್ಟು ವೇಳೆ ದೊರೆಯದಿದ್ದರೂ ನನ್ನ ಸೃಜನಶೀಲತೆಗೆ ಅಂಥ ಯಾವ ಅಡೆತಡೆಗಳು ಉಂಟಾಗಲಿಲ್ಲ.

**ನವೋದಯ, ನವ್ಯ ಕಾವ್ಯದಲ್ಲಿ ತೊಡಗಿಸಿಕೊಂಡ ನೀವು ಬಂಡಾಯ ಕಾವ್ಯಮಾರ್ಗದಲ್ಲಿ ತೀವ್ರವಾಗಿ ಸ್ಪಂದಿಸಲಿಲ್ಲವೆಂಬ ಅಭಿಪ್ರಾಯವಿದೆ. ಇದಕ್ಕೆ ನಿಮ್ಮ ಪ್ರತಿಕ್ರಿಯೆ ಏನು ?**

ಬಂಡಾಯ ಸಾಹಿತಿಗಳು ಹೇಳುವಂತೆ ಅಲ್ಲದಿದ್ದರೂ ನನ್ನ ರೀತಿಯಲ್ಲಿ ನಾನು ಸ್ಪಂದಿಸುತ್ತ ಬಂದಿದ್ದೇನೆ. ಬಂಡಾಯ ಒಂದು ಮನೋಧರ್ಮ. ಬಂಡಾಯ ಸಾಹಿತಿಗಳಷ್ಟು ತೀವ್ರವಾಗಿ ಘೋಷಣೆಯ ರೂಪದಲ್ಲಿ ಅದನ್ನು ನಾನು ಪ್ರಕಟಿಸಿರಲಿಕ್ಕಿಲ್ಲ. ಆದರೆ ಸಾಮಾಜಿಕ ಶೋಷಣೆಯ ಬಗೆಗೆ ನನ್ನ ಕಾವ್ಯದಲ್ಲಿ ಆಕ್ರೋಶಕ್ಕಿಂತ ಸಹಾನುಭೂತಿಪರವಾದ ನೋವಿನ ಲಯವನ್ನು ಕಾಣಬಹುದು. ನವೋದಯ ಸಾಹಿತ್ಯದ ಬಗ್ಗೆ ಆದರವಿಟ್ಟುಕೊಂಡ ನಮ್ಮನ್ನು ನವ್ಯದವರು ಕೆಲಕಾಲ ಪರಿಗಣಿಸಿರಲಿಲ್ಲ. ಸಾಮಾಜಿಕ ಪ್ರಜ್ಞೆಯಿದ್ದ ಕವಿಗೆ ಬಂಡಾಯದ್ದು ಹೊಸದೆನಿಸುವದಿಲ್ಲ. ಅಲ್ಲದೆ ಈ ಮನೋಧರ್ಮ ವಚನಕಾರರಲ್ಲಿ, ಸರ್ವಜ್ಞನಲ್ಲಿ, ಬೇರೆ ಕವಿಗಳಲ್ಲಿ ಇತ್ತು. ನನ್ನ ಆರಂಭದ ಕವಿತೆಗಳಲ್ಲೂ ಈ ಧ್ವನಿಯನ್ನು ಗುರುತಿಸಬಹುದು.

**ಕನ್ನಡ ಕಾವ್ಯ ಈಗ ಸ್ಥಗಿತರೂಪದಲ್ಲಿದೆಯೋ ? ಹೊಸ ಅಲೆಯ ಹುಟ್ಟು ಆಗಲಿದೆಯೆ ?**

ಯಾವ ಕಾವ್ಯಮಾರ್ಗವೂ ಬಹಳ ಕಾಲ ಸ್ಥಿರವಾಗಿ ಇರುವದಿಲ್ಲ. ಈಗ ಅನೇಕ ಹೊಸ ಪ್ರತಿಭೆಗಳನ್ನು ನಾವು ಕಾಣುತ್ತೇವೆ. ದಲಿತ ಲೇಖಕರು ತಮ್ಮ ನೋವು ತೋಡಿಕೊಂಡು ಬರೆದರು. ಅದು ಹೊಸದಾಯಿತಲ್ಲದೆ ಹೊಸ ಪ್ರಜ್ಞೆಯನ್ನು ಜಾಗೃತಗೊಳಿಸಿತು. ಹಾಗೆಯೇ ಜೀವನದ ಬೇರೆ ಬೇರೆ ಕ್ಷೇತ್ರಗಳಿಂದ ಸಮಾಜದ ಕೆಳಸ್ತರಗಳಿಂದ ಲೇಖಕರು ಬರೆಯುತ್ತಿದ್ದಾರೆ. ಮುಸ್ಲಿಂ ಸಂವೇದನೆ, ಸ್ತ್ರೀ ಸಂವೇದನೆ, ಹೀಗೆ ಬೇರೆ ಬೇರೆ ಅನುಭವ ಪ್ರಪಂಚ ಸಾಹಿತ್ಯದಲ್ಲಿ ಪ್ರಕಟವಾಗುತ್ತಲಿದೆ. ಆದರೆ ಕನ್ನಡ ಸಾಹಿತ್ಯದ ಪರಂಪರೆಯ ಪ್ರಜ್ಞೆ ಎಲ್ಲ ಲೇಖಕರಿಗೂ ಅತ್ಯವಶ್ಯಕ.

**ಕನ್ನಡ ಕಾವ್ಯಮಾರ್ಗದ ಪರಿವರ್ತನೆಗೆ ಸಮ್ಮೇಳನಾಧ್ಯಕ್ಷರಾದ ನೀವು ಕರೆ ನೀಡುವಿರಾ ?**

ಸಮಕಾಲೀನ ರಾಜಕೀಯ. ಸಾಮಾಜಿಕ ಸಂದರ್ಭದಲ್ಲಿ ನಮ್ಮ ಜೀವನ ಮೌಲ್ಯಗಳ ಕುಸಿತದಿಂದ ಹೊಸ ಕವಿಗಳು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಜೀವನವನ್ನು ವ್ಯಾಪಿಸಿರುವ ಭ್ರಷ್ಟಾಚಾರ, ಭಯೋತ್ಪಾದನೆ, ಹಿಂಸೆ, ವಂಚನೆಯ ವಿಷಮ ಪರಿಸ್ಥಿತಿಯಲ್ಲಿ ಲೇಖಕರು ತೀವ್ರ ತಳಮಳಕ್ಕೆ ಸಿಲುಕಿದ್ದಾರೆ. ಇಂಥ ವಾತಾವರಣದಲ್ಲಿ ಕವಿಯಾದವನು ಬದಲಾದ ಪರಿಸ್ಥಿತಿಯಲ್ಲಿ ತಾತ್ಕಾಲಿಕ ಪ್ರತಿಕ್ರಿಯೆಯನ್ನು ಸೂಚಿಸುವದು ಸರಿಯಲ್ಲ. ಸಂವೇದನೆ ಅನುಭವದ ಆಳಕ್ಕೆ ಇಳಿಯಬೇಕು. ಗಂಭೀರವಾದ ಚಿಂತನೆಯಲ್ಲಿ ಮನಸ್ಸು ತೊಡಗಬೇಕು. ವಿಜ್ಞಾನಯುಗದಲ್ಲಿ ಮನುಷ್ಯತ್ವದ ಅಸ್ತಿತ್ವಕ್ಕೆ ಧಕ್ಕೆಯಾಗುವ ಭೀತಿ ಇದೆ. ಆದ್ದರಿಂದ ಮಾನವಸಂಬಂಧಗಳನ್ನು ಗಾಢವಾಗಿ ಬೆಸೆಯುವ ನಾಡಿನ ಭವಿಷ್ಯ, ನಮ್ಮ ಭವಿಷ್ಯ ಬೆಳೆಯುವ ರೀತಿಯಲ್ಲಿ ಹೊಸ ಆಶಯಗಳನ್ನು ಕಾವ್ಯದಲ್ಲಿ ಪ್ರತಿಬಿಂಬಿಸಬೇಕಾಗಿದೆ. ವಾಣಿಜ್ಯೀಕರಣ ಹಾಗೂ ವಿದೇಶೀ ಬಂಡವಾಳಶಾಹಿಗಳ ಆಕ್ರಮಣದಿಂದ ನಮ್ಮ ಸಂಸ್ಕೃತಿ ಪರಂಪರೆಗೆ ಧಕ್ಕೆ ಬರಬಹುದಾಗಿದೆ. ವಸಾಹತುಶಾಹಿ ಇದ್ದಾಗ ನಮ್ಮ ನವೋದಯ ಕವಿಗಳು ಒತ್ತಡಕ್ಕೆ ಒಳಗಾಗದೆ ದೇಶೀಯ ಸಂಸ್ಕೃತಿಯ ನೆಲೆಗಳನ್ನು ಭದ್ರಗೊಳಿಸುವ ಸಾಹಿತ್ಯ ಮಾರ್ಗ ಹಿಡಿದರು. ಅದು ಅನುಕರಣೀಯವಾಗಿದೆ.

**ಹೊಸ ಕವಿಗಳ ಕಾವ್ಯಪಥದ ಬಗೆಗೆ ನಿಮ್ಮ ಅಭಿಮತವೇನು ?**

ಉದಯೋನ್ಮುಖ ಲೇಖಕರು ತಮ್ಮ ಬರವಣಿಗೆಯ ಮಾಧ್ಯಮವನ್ನು ಸರಿಯಾಗಿ ಗುರುತಿಸಿಕೊಳ್ಳುವದು ಆವಶ್ಯಕ. ಸಾಹಿತ್ಯಾಭ್ಯಾಸ, ಭಾಷೆ, ಲಯ ಅಭಿವ್ಯಕ್ತಿಯ ತಿಳಿವಳಿಕೆಯಿಲ್ಲದೆ ಕವಿತೆ ಬರೆಯತೊಡಗಿದವರ ಸಂಖ್ಯೆ ಹೆಚ್ಚು. ಬದ್ಧತೆಗಿಂತ ಪ್ರಜ್ಞೆ ಹೆಚ್ಚು ಮುಖ್ಯವಾದದ್ದು. ಅದರಾಚೆಗೆ ದೃಷ್ಟಿಹರಿಸಿ ಆತ್ಮಾವಲೋಕನ ಮಾಡಿಕೊಳ್ಳುವ ಸೂಕ್ಷ್ಮ ಪ್ರಜ್ಞೆಯೇ ಇರಬೇಕು. ಸ್ವೈಜಾನುಭವ ಹಾಗೂ ಪ್ರಾಮಾಣಿಕತೆಯಿಂದ ಬರೆದ ಕಾವ್ಯದಲ್ಲಿ ಮನುಷ್ಯತ್ವದ ಉತ್ಕರ್ಷದ ಬಗೆಗೆ ಗಾಢ ಪ್ರೀತಿ ತುಂಬಿರಬೇಕು. ಸಮಕಾಲೀನತೆ ಹಾಗೂ ಸಾರ್ವಕಾಲೀನತೆಯನ್ನು ಪ್ರತಿಮಿಸುವ ಕಾವ್ಯ ಶ್ರೇಷ್ಠವಾಗಿರುತ್ತದೆ. ಜನರ ಹೃದಯದ ಧ್ವನಿಯಾಗುವ ಕಾವ್ಯ ನಮಗೆ ಪ್ರಸ್ತುತವಾಗಿದೆ.

**ಸಾಹಿತ್ಯದಿಂದ ಸಾಮಾಜಿಕ ಬದಲಾವಣೆ ಸಾಧ್ಯವೇ ?**

ಪ್ರಪಂಚದ ಇತಿಹಾಸದಲ್ಲಿ ಸಾಹಿತ್ಯ ಕೃತಿಗಳು ಜನತೆಯ ಮನಸ್ಸನ್ನು ರೂಪಿಸುತ್ತ, ಬೆಳೆಸುತ್ತ ಬಂದುದನ್ನು ನಾವು ಕಾಣುತ್ತೇವೆ. ಶಿವಶರಣರು ವಚನಗಳ ಮೂಲಕ ಕ್ರಾಂತಿ ಮಾಡಿದರು. ರಶಿಯಾದಲ್ಲಿ, ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿ ಸಾಹಿತ್ಯಕೃತಿಗಳು ಕ್ರಾಂತಿಯ ಬೀಜಗಳಾದದ್ದನ್ನು ನೋಡಬಹುದು. ಈಗ ನಮ್ಮ ದೇಶ ಭ್ರಷ್ಟತೆಯ ಹಾದಿಯಲ್ಲಿ ಸಾಗಿರುವಾಗ ಲೇಖಕರು ಸಮಕಾಲೀನ ಸನ್ನಿವೇಶದಲ್ಲಿ ಮಹತ್ವದ ಪಾತ್ರ ವಹಿಸಬೇಕಾಗಿದೆ. ಸಮಗ್ರಕ್ರಾಂತಿಗೆ ಇದು ಸಕಾಲ.

**ಸಾಹಿತ್ಯಕ್ಷೇತ್ರದಲ್ಲಿ ಗುಂಪುಗಾರಿಕೆ. ರಾಜಕೀಯ ಬೆಳೆಯುತ್ತಿರುವ ಬಗೆಗೆ ನಿಮ್ಮ ಅಭಿಮತವೇನು ?**

ಹೀಗೆ ಆಗಬಾರದು. ಆದರೆ ನಮ್ಮ ಇಡೀ ಜೀವನವನ್ನು ಆಮೂಲಾಗ್ರವಾಗಿ ರಾಜಕೀಯ ಆವರಿಸಿಬಿಟ್ಟಿದೆ. ಕವಿಗಳೂ ಲೇಖಕರೂ ಮನುಷ್ಯರೇ. ಆದರೆ ಜನ ಅವರ ಬಗೆಗೆ ಗೌರವ ಇಟ್ಟುಕೊಂಡಿರುತ್ತಾರೆ. ಅವರನ್ನು ದೇವತೆಗಳಂತೆ ಕಾಣುತ್ತಾರೆ. ಸಾಹಿತಿಗಳು ಜನರ ಭಾವನೆಗೆ ಅಪನಂಬಿಕೆ ಬರದಂತೆ ನಡೆದುಕೊಳ್ಳಬೇಕು. ಜೀವನದ ಬಗೆಗೆ ಪರಿಪಕ್ವ ದೃಷ್ಟಿಯುಳ್ಳ ಲೇಖಕರು ಬದುಕನ್ನು ಹಸನುಗೊಳಿಸಲು ಪ್ರಯತ್ನಿಸಬೇಕೇ ಹೊರತು ಕೆಡಿಸುವ ಹಾದಿಯನ್ನಲ್ಲ. ಸಾಹಿತಿಗಳಿಗೆ ಪ್ರಶಸ್ತಿ ನೀಡುವಾಗ ರಾಜಕೀಯ ಮಾಡಬಾರದು. ಚಾರಿತ್ರ್ಯವುಳ್ಳವರು ಪ್ರತಿಭೆಯನ್ನು ಗುರುತಿಸುವ ಪ್ರಾಜ್ಞರು ಸಮಿತಿಯ ಸದಸ್ಯರಾಗಿದ್ದಾಗ ಇದು ಕಡಿಮೆಯಾಗಬಹುದು.

**ಸಾಹಿತಿಗಳು ರಾಜಕೀಯದಲ್ಲಿ ಭಾಗವಹಿಸಬಾರದೆ ?**

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬುದ್ಧಿಜೀವಿಗಳ ಪಾತ್ರ ಮಹತ್ವದ್ದು. ಸಾಮಾನ್ಯ ಜನರಿಗೆ ರಾಜಕೀಯ ತಿಳಿವಳಿಕೆ ನೀಡುವ ಶಕ್ತಿ ಇದ್ದರೆ ಜೀವನವನ್ನು ನಿರ್ಮಲೀಕರಣಗೊಳಿಸುವ ಧ್ಯೇಯವಿದ್ದರೆ ರಾಜಕೀಯದಲ್ಲಿ ಪ್ರತ್ಯಕ್ಷ ಭಾಗವಹಿಸಬಾರದು. ಪರಿಸ್ಥಿತಿಯ ಒತ್ತಡಕ್ಕೆ ಸಿಲುಕಿ ಬಂದರೆ ಉದ್ದೇಶ ಸಫಲವಾಗುವದಿಲ್ಲ. ಕಾರಂತರು, ಅಡಿಗರು ಚುನಾವಣೆಯಲ್ಲಿ ಸೋತ ಉದಾಹರಣೆ ಇದೆ. ಮುಖ್ಯವಾಗಿ ತನ್ನ ಸೃಜನಶೀಲತೆಯನ್ನು ಕಾಪಾಡಿಕೊಂಡು ಬರವಣಿಗೆಯ ಮೂಲಕ ಎಚ್ಚರಿಸಿ

ಶುದ್ಧೀಕರಣಗೊಳಿಸಿದರೆ ತಪ್ಪಿಲ್ಲ. ರಾಜಕೀಯ ಒಂದು ವಿಷವರ್ತುಲ. ದೂರದಲ್ಲಿ ನಿಂತಾಗ ಒಳಗಿನ ಸುಳಿಗಳು ಗೊತ್ತಾಗುವದಿಲ್ಲ. ಲೇಖಕನ ಆದರ್ಶ ಅಂಥ ಸುಳಿಗೆ ಸಿಲುಕದಂತೆ ನೋಡಿಕೊಳ್ಳಬೇಕು.

**ಭ್ರಷ್ಟತೆಯ ಜಾಲದಲ್ಲಿ ಸಿಲುಕಿಕೊಂಡ ದೇಶವನ್ನು ಪಾರು ಮಾಡುವದು ಹೇಗೆ ?**

ನಮ್ಮ ದೇಶದಲ್ಲಿ ಭ್ರಷ್ಟಾಚಾರ ಎಲ್ಲೆಡೆ ತುಂಬಿಕೊಂಡಿದೆ. ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದವರು, ಹಿರಿಯರು ನೈರಾಶ್ಯದ ವಾತಾವರಣದಲ್ಲಿದ್ದಾರೆ. ನಾವು ಲಂಚಕೊಡದಿದ್ದರೆ ಕೆಲಸವೇ ಆಗುವದಿಲ್ಲ ಎಂಬ ಸ್ಥಿತಿಗೆ ಬಂದು ಅದರಲ್ಲಿ ಪಾಲುದಾರರಾಗುವ ಸಂದರ್ಭ ಬಂದಿರುವುದು ಶೋಚನೀಯ. ನಮ್ಮ ರಾಷ್ಟ್ರಕ್ಕೆ ಪ್ರಾಮಾಣಿಕ ನಾಯಕ ಬೇಕು. ಈ ಕಾಲಕ್ಕೆ ತಕ್ಕಂತೆ ಗಾಂಧಿ, ಜೆ. ಪಿ.ಯಂಥ ರಾಷ್ಟ್ರ ನಿರ್ಮಾಪಕರು ನಮಗೆ ಬೇಕಾಗಿದ್ದಾರೆ. ಭ್ರಷ್ಟಾಚಾರ, ಜನಶೋಷಣೆ ನಿಲ್ಲಿಸಲು ಸಮಗ್ರಕ್ರಾಂತಿ ಆಗಬೇಕು. ಚುನಾವಣೆ ಎಂದರೆ ಹಣ. ಹಣದಾಸೆಯ ಜನರನ್ನು ಶಿಕ್ಷಿಸಲು ಶೇಷನ್‌ರಂಥ ಸುಧಾರಣಾವಾದಿಯನ್ನು ಜನ ಮೆಚ್ಚಿಕೊಂಡಿದ್ದಾರೆ.

**ನೀವು ನೋಡಿದ ಮೊದಲ ಸಾಹಿತ್ಯ ಸಮ್ಮೇಳನ ಹೇಗಿತ್ತು ?**

ನಾನು ಹೈಸ್ಕೂಲ್ ವಿದ್ಯಾರ್ಥಿಯಾಗಿದ್ದಾಗ ರಬಕವಿಯಲ್ಲಿ ಬಸವನಾಳರ ಅಧ್ಯಕ್ಷತೆಯಲ್ಲಿ ಜರುಗಿದ ಸಾಹಿತ್ಯ ಸಮ್ಮೇಳನ ನಾನು ಮೊದಲಬಾರಿಗೆ ನೋಡಿದ್ದು. ಆಗ ಪ್ರಗತಿಶೀಲ ಸಾಹಿತ್ಯ ಚಳುವಳಿ ಜೋರಾಗಿತ್ತು. ಗೋಕಾಕರ ಅಧ್ಯಕ್ಷತೆಯಲ್ಲಿ ಜರುಗಿದ ಪ್ರಗತಿಶೀಲ ಸಾಹಿತ್ಯಗೋಷ್ಠಿಯಲ್ಲಿ ಅ.ನ.ಕೃ., ತರಾಸು, ಕುಮಾರ ವೆಂಕಣ್ಣ, ನಿರಂಜನ, ಮಾಸಾ. ಚೌಡಪ್ಪ ಮೊದಲಾದವರು ಬಾಗವಹಿಸಿದ್ದರು. ರಾಜರತ್ನಂ ಸಾಹಿತ್ಯಗೋಷ್ಠಿ ಅಧ್ಯಕ್ಷರಾಗಿದ್ದರು. ನವೋದಯ ಸಾಹಿತ್ಯದ ಹಿರಿಯರಿಗೂ, ಪ್ರಗತಿಶೀಲರಿಗೂ ವಾಗ್ವಾದ ನಡೆದದ್ದು ಆ ಸಮ್ಮೇಳನದ ನೆನಪು. ಸಾಹಿತ್ಯಸಮ್ಮೇಳನದಲ್ಲಿ ಸ್ವತಃ ಭಾಗವಹಿಸಿ ವಿಮರ್ಶಾಗೋಷ್ಠಿ ಹಾಗೂ ಕವಿಗೋಷ್ಠಿಯಲ್ಲಿ ನಾನು ಪಾಲ್ಗೊಂಡದ್ದು ಕಾರಂತರ ಅಧ್ಯಕ್ಷತೆಯಲ್ಲಿ ಜರುಗಿದ (೧೯೫೫) ಮೈಸೂರು ಸಾಹಿತ್ಯ ಸಮ್ಮೇಳನದಲ್ಲಿ. ಸ್ವಾಗತಾಧ್ಯಕ್ಷರಾಗಿದ್ದ ಕುವೆಂಪು ಅವರು ನಮ್ಮನ್ನೆಲ್ಲಾ ಕಂಡು ಪ್ರೀತಿಯಿಂದ ಮಾತನಾಡಿಸಿದ್ದು ಈಗ ನೆನಪಾಗಿ ಉಳಿದಿದೆ. ಸಾಹಿತ್ಯ

ಸಮ್ಮೇಳನಾಧ್ಯಕ್ಷರನ್ನು ಒತ್ತಾಯಪೂರ್ವಕವಾಗಿ ಒಪ್ಪಿಸುವ ಕಾಲವದು. ಆ ಕಾಲದಲ್ಲಿ ಸಾಹಿತ್ಯ ಸಮ್ಮೇಳನಕ್ಕೆ ಸಾಮಾನ್ಯವಾಗಿ ಕನ್ನಡದ ಎಲ್ಲ ಸಾಹಿತಿಗಳು ಸೇರುತ್ತಿದ್ದರು. ಪರಸ್ಪರ ಆದರದಿಂದ ಸಾಹಿತ್ಯಚರ್ಚೆ ಚಿಂತನೆ ನಡೆಸುತ್ತಿದ್ದರು. ಸಾಹಿತ್ಯಿಕ ನವೋದಯದ ಉತ್ಸಾಹದ ವಾತಾವರಣವದು.

**ಸಾಹಿತ್ಯ ಸಮ್ಮೇಳನ ಜಾತ್ರೆಯಾಗುತ್ತಿದೆ ಎಂಬುದಕ್ಕೆ ನಿಮ್ಮ ಪ್ರತಿಕ್ರಿಯೆ ಏನು ?**

ಕನ್ನಡನಾಡಿನ ಬೇರೆ ಬೇರೆ ಭಾಗದ ಸಾಹಿತಿಗಳು, ಅಭಿಮಾನಿಗಳು, ಸಾಹಿತ್ಯಪ್ರೇಮಿಗಳು ಒಂದೆಡೆ ಸೇರಿ ಸಾಹಿತ್ಯ, ಭಾಷೆ, ನೆಲ, ಜಲ, ಕನ್ನಡಿಗರ ಸಮಸ್ಯೆಗಳ ಬಗೆಗೆ, ಕನ್ನಡದ ಅಭಿವೃದ್ಧಿಯ ಬಗೆಗೆ ಚಿಂತನೆ ನಡೆಸಲು ಸಾಹಿತ್ಯ ಸಮ್ಮೇಳನ ಒಂದು ಮುಕ್ತ ಸಮಾವೇಶ. ಸಾಹಿತಿಗಳನ್ನು ನೋಡುವದು, ಚರ್ಚಿಸುವದು, ಪುಸ್ತಕಗಳನ್ನು ಖರೀದಿಸುವದು, ಸಾಂಸ್ಕೃತಿಕ ಕಾರ್ಯಕ್ರಮ ವೀಕ್ಷಿಸುವದು ಹೀಗೆ ಸಮ್ಮೇಳನಕ್ಕೆ ಒಂದು ಸಾಮೂಹಿಕವಾದ ವಿಶಿಷ್ಟತೆ ಇದೆ. ಸಾಹಿತ್ಯಸಮ್ಮೇಳನ ಕೇವಲ ಜಾತ್ರೆಯಾಗದಂತೆ ಸಾಹಿತ್ಯಿಕ, ಸಾಂಸ್ಕೃತಿಕ ಉತ್ಸವವಾಗುವಂತೆ ವಿವಿಧ ಗೋಷ್ಠಿಗಳ ಸ್ವರೂಪದಲ್ಲಿ ಅರ್ಥಪೂರ್ಣತೆ ಸಾಧಿಸಬಹುದು.

**ಹಾಗಿದ್ದರೆ ಸಾಹಿತ್ಯ ಸಮ್ಮೇಳನದಲ್ಲಿ ಯಾವ ಬದಲಾವಣೆಯನ್ನು ತರಲು ತಾವು ಸೂಚಿಸುತ್ತೀರಿ ?**

ಸಾಹಿತ್ಯ ಸಮ್ಮೇಳನದ ಉದ್ಘಾಟನೆಯನ್ನು ಹಿರಿಯ ಸಾಹಿತಿಗಳು ಅಥವಾ ನೆರೆಯ ನಾಡಿನ ಶ್ರೇಷ್ಠ ಲೇಖಕರೇ ಮಾಡಬೇಕು. ಮಂತ್ರಿಗಳು ರಾಜಕೀಯ ವ್ಯಕ್ತಿಗಳಿಂದ ಮಾಡಿಸಬಾರದು. ರಾಜಕೀಯ ವ್ಯಕ್ತಿಗಳು, ಮಂತ್ರಿಗಳು ಬರುವವರೆಗೆ ಜನ ಕಾಯುತ್ತ ಕುಳಿತು ಬೇಸತ್ತು ಹೋಗುವ ಪ್ರಸಂಗ ಬರಬಾರದು. ರಾಜಕೀಯ ವ್ಯಕ್ತಿಗಳನ್ನು ಕರೆದಾಗ ಸಮಯ ಪಾಲನೆ ಅನಿವಾರ್ಯ ಕಾರಣಗಳಿಂದ ಅವರಿಗೂ ಆಗದೆ ಇರುವದರಿಂದ ಮತ್ತು ಮಂತ್ರಿಗಳು ಅರ್ಧದಲ್ಲೇ ಎದ್ದು ಹೋಗಬೇಕಾಗುವದರಿಂದ ಅವರಿಗೆ ತೊಂದರೆ ಕೊಡದೆ ಸಾಹಿತಿಗಳಿಂದಲೇ ಸಮ್ಮೇಳನ ಉದ್ಘಾಟಿಸುವಂತಾಗಬೇಕು. ಇದರಿಂದ ಸೋದರ ಭಾಷೆಯ ಲೇಖಕರೂ, ಹಿರಿಯ ಚಿಂತಕರೂ ನಮ್ಮ ಸಮ್ಮೇಳನ ನೋಡಿದಂತಾಗುತ್ತದೆ. ರಾಜಕೀಯ ವ್ಯಕ್ತಿಗಳು, ಮಂತ್ರಿಗಳು ಸಮ್ಮೇಳನದಲ್ಲಿ ಭಾಗವಹಿಸಬಾರದು ಎಂದಲ್ಲ, ಆದರೆ ಅವರನ್ನು ಕರೆದಾಗ ಆಗುವ ಅಲ್ಲೋಲ ಕಲ್ಲೋಲ ತಪ್ಪಿಸಲು

ವ್ಯವಸ್ಥಿತವಾಗಿ ಸಮ್ಮೇಳನ ನಡೆಯಲು ಧೈರ್ಯಮಾಡಿ ಇದನ್ನು ಆರಂಭಿಸಬೇಕು. ಸಾಹಿತ್ಯಸಮ್ಮೇಳನದಲ್ಲಿ ಸಮ್ಮೇಳನದ ಅಧ್ಯಕ್ಷರ ಭಾಷಣಕ್ಕೆ ಮಹತ್ವವಿರುವದರಿಂದ ಅದನ್ನು ಕೊನೆಯಲ್ಲಿ ಹಾಕುವ ಬದಲು ಆದಷ್ಟು ಮೊದಲೇ ಇಡುವದು ಒಳ್ಳೆಯದು. ಈ ಸಲ ಹಾಗೆ ಮಾಡಿದ್ದಾರೆ.

**ಕನ್ನಡನಾಡಿನಲ್ಲಿ ಕನ್ನಡದ ಅಭಿಮಾನವನ್ನು ಬೆಳೆಸುವ ಅಗತ್ಯ ಈಗಲೂ ಇದೆಯೇ ?**

ಇದೇ ದೊಡ್ಡ ದುರಂತ. ಕನ್ನಡ ಆಡಳಿತ ಭಾಷೆ ಎಂದು ಘೋಷಣೆ ಆಗಿದ್ದರೂ ಹೇಳಿಕೊಳ್ಳುವಂಥ ಪ್ರಗತಿಯೂ ಆಗಿಲ್ಲ. ಕನ್ನಡವನ್ನು ಆಡಳಿತದಲ್ಲಿ ತರುವ ಬಗ್ಗೆ ಸರಕಾರ ಕಟ್ಟುನಿಟ್ಟಿನ ಕ್ರಮವನ್ನು ಕೈಕೊಳ್ಳಬೇಕು. ಕನ್ನಡ ಜಾರಿಗೆ ತರದವರ ಬಗೆಗೆ ಶಿಕ್ಷೆಯನ್ನು ನಿರ್ದಾಕ್ಷಿಣ್ಯವಾಗಿ ವಿಧಿಸಬೇಕು. ಕನ್ನಡ ಬಳಸುವವರಿಗೆ ಬಹುಮಾನ ನೀಡುವ ಮಾತು ಅರ್ಥವಿಲ್ಲದ್ದು, ಕನ್ನಡಿಗರ ಔದಾರ್ಯದ ಪರಿಣಾಮ ಅನೇಕ ಸಮಸ್ಯೆ ಸೃಷ್ಟಿಸಿದೆ. ಅನ್ಯ ಭಾಷಿಕರ ವಲಸೆಯನ್ನು ತಡೆಯಲು ತಕ್ಕ ಕ್ರಮ ಕೈಕೊಳ್ಳಬೇಕು. ಸರೋಜಿನಿ ಮಹಿಷಿ ವರದಿ ಬಂದು ಎಷ್ಟು ವರ್ಷ ಆದರೂ ಕನ್ನಡಿಗರಿಗೆ ಉದ್ಯೋಗ ಸಿಕ್ಕುತ್ತಿಲ್ಲ. ಬೆಂಗಳೂರಿನಲ್ಲಿ ಕನ್ನಡಿಗರ ಸಂಖ್ಯೆ ಕಡಿಮೆಯಾಗುತ್ತಿರುವದು ಶೋಚನೀಯ ಸಂಗತಿಯಾಗಿದೆ. ಗಡಿನಾಡಿನಲ್ಲಿ ಕನ್ನಡ ಉಳಿಸುವದಕ್ಕೆ, ಬೆಳೆಸುವದಕ್ಕೆ ಸರಕಾರ ಶಾಶ್ವತ ಕ್ರಮ ಕೈಕೊಳ್ಳಬೇಕು.

**ಸಾಹಿತ್ಯ ಪರಿಷತ್ತು ಕ್ರಿಯಾಶೀಲವಾಗಲು ತನ್ನ ಧೋರಣೆಯಲ್ಲಿ ಬದಲಾವಣೆ ತರುವದು ಅವಶ್ಯವೇ ?**

ಅಧ್ಯಕ್ಷರ ಕಾರ್ಯವಿಧಾನ, ಉತ್ಸಾಹ, ಚಟುವಟಿಕೆಯ ಮೂಲಕ ಪರಿಷತ್ತು ಕ್ರಿಯಾಶೀಲವಾಗುವದು. ಸಾಹಿತ್ಯ ಸಮ್ಮೇಳನ ನಡೆಸುವದೊಂದೇ ಪರಿಷತ್ತಿನ ಮುಖ್ಯ ಕಾರ್ಯಕ್ರಮವಾಗಿಬಿಟ್ಟಿದೆ ಎಂದು ಟೀಕೆಗಳನ್ನು ಮಾಡುವವರು ಪರಿಷತ್ತಿನ ಹೊರಗೆ ನಿಂತು ಟೀಕಿಸದೆ, ಒಳಗೆ ಬಂದು ಅದರ ಸಮಸ್ಯೆಗಳನ್ನು ಅರಿಯುವದು ಅವಶ್ಯ. ಪರಿಷತ್ತು ಪಡೆಯುವ ಸರಕಾರದ ಧನ ಸಹಾಯ ಪರಿಷತ್ತಿನ ಸಿಬ್ಬಂದಿ ಸಂಬಳಕ್ಕೆ ಹೋದರೆ ಸಾಹಿತ್ಯ ಚಟುವಟಿಕೆ ಮಾಡುವದು ಹೇಗೆ ? ಮುಧೋಳ ಸಾಹಿತ್ಯ ಸಮ್ಮೇಳನದಲ್ಲಿ ಮುಖ್ಯಮಂತ್ರಿಗಳು ಘೋಷಿಸಿದ ಆಶ್ವಾಸನ ಜಾರಿಗೆ ಬಂದರೆ ಒಳ್ಳೆಯದು. ಪರಿಷತ್ತಿನ ಚಟುವಟಿಕೆ ಜಿಲ್ಲೆ. ತಾಲೂಕು. ಗ್ರಾಮೀಣ ಪ್ರದೇಶದಲ್ಲಿ

ಅಧಿಕಗೊಳ್ಳಬೇಕು. ಸರಕಾರದ ಧನಸಹಾಯ ಪಡೆದುಕೊಂಡು ಕನ್ನಡದ ಮೌಲಿಕ ಗ್ರಂಥಗಳ ಪ್ರಕಟಣೆಯ ಕಾರ್ಯ ಪರಿಷತ್ತಿನ ಮೂಲಕ ನಡೆಯಬೇಕು. ಪುಸ್ತಕ ಪ್ರಕಟನೆ ಹಾಗೂ ಕನ್ನಡ ಸಾಹಿತ್ಯ ಪ್ರಸಾರ ಪರಿಷತ್ತಿನಿಂದ ಹೆಚ್ಚಾಗಿ ನಡೆಯಬೇಕು.

**ಸಾಹಿತ್ಯ ಸಮ್ಮೇಳನಗಳಲ್ಲಿ ಕೈಕೊಂಡ ನಿರ್ಣಯಗಳು ಯಾಕೆ ಜಾರಿಗೆ ಬರುತ್ತಿಲ್ಲ ?**

ಸಾಹಿತ್ಯ ಸಮ್ಮೇಳನದಲ್ಲಿ ಕೈಕೊಳ್ಳುವ ನಿರ್ಣಯಗಳು ಬಹಿರಂಗಾಧಿವೇಶನದಲ್ಲಿ ಮಂಡಿತವಾಗುತ್ತವೆ. ಅವು ಸಮಸ್ತ ಕನ್ನಡಿಗರ ಒತ್ತಾಸೆಯ ಅಭಿಪ್ರಾಯ. ಅದನ್ನು ಸರಕಾರ ಪ್ರಜೆಗಳ ಧ್ವನಿ ಎಂದು ತಿಳಿದು ಜಾರಿಗೆ ತರಬೇಕು. ಜಾರಿಗೆ ತರುವಂತೆ ಮಾಡುವದಕ್ಕೆ ತಜ್ಞರ ಸಮಿತಿ ನೇಮಿಸಿ ಸರಕಾರದ ಮೇಲೆ ಒತ್ತಡ ತರಬೇಕು. ಪರಿಷತ್ತಿನ ಪರಂಪರೆ ದೊಡ್ಡದು. ಅದಕ್ಕಿರುವ ಬಲ ಕನ್ನಡಿಗರ ತ್ಯಾಗದಿಂದ ಬಂದಿರುವಂಥದ್ದು. ಪರಿಷತ್ತಿಗೆ ಹೆಚ್ಚಿನ ಸಹಾಯಧನ ನೀಡಿ ಎಂದು ಕೇಳುವದು ಪ್ರಜೆಗಳ ಹಕ್ಕಾಗಿದ್ದು ಅದು ಖಂಡಿತಾ ಭಿಕ್ಷೆ ಅಲ್ಲ.

**ಸಮ್ಮೇಳನಾಧ್ಯಕ್ಷರು ಉತ್ಸವಮೂರ್ತಿಗಳೇ ?**

ಸಮ್ಮೇಳನಾಧ್ಯಕ್ಷರಿಗೆ ದೊಡ್ಡ ಜವಾಬ್ದಾರಿ ಇದೆ. ಕನ್ನಡ ಜನ ನೀಡುವ ಗೌರವದ ಹುದ್ದೆ ಅದು. ಸಾಹಿತ್ಯ ಸಮ್ಮೇಳನಾಧ್ಯಕ್ಷರು ಉತ್ಸವ ಮೂರ್ತಿಗಳಲ್ಲ. ಅವರು ಮುಂದಿನ ಸಮ್ಮೇಳನವಾಗುವವರೆಗೆ ಕನ್ನಡನಾಡಿನಾದ್ಯಂತ ಸಂಚರಿಸಿ ಕನ್ನಡ ಸಾಹಿತ್ಯ ಸಂಸ್ಕೃತಿಯ ಪ್ರಸಾರಕಾರ್ಯದಲ್ಲಿ ಪಾಲ್ಗೊಳ್ಳುವಂತೆ ಪರಿಷತ್ತು ನೋಡಿಕೊಳ್ಳಬೇಕು. ಹಾಗೆ ಕಾರ್ಯಕ್ರಮ ರೂಪಿಸಬೇಕು.

**ಕನ್ನಡ ಅನುಷ್ಠಾನದ ಬಗೆಗೆ ನಿಮ್ಮ ಅಭಿಮತವೇನು ?**

ರಾಜ್ಯದಲ್ಲಿ ಕನ್ನಡದ ಅನುಷ್ಠಾನ ಕುಂಠಿತಗೊಂಡಿರುವುದು ವಿಷಾದದ ಸಂಗತಿ. ಹಿಂದೆ ಇದ್ದ ಕನ್ನಡ ಕಾವಲು ಸಮಿತಿಯ ಅಗತ್ಯ ಈಗಲೂ ಇದೆ. ಅದು ಮುಂದುವರಿಯಬೇಕಾಗಿತ್ತು. ಆಡಳಿತದಲ್ಲಿ ಕನ್ನಡವನ್ನು ಅನುಷ್ಠಾನಗೊಳಿಸುವ ಕಾರ್ಯ ತೀವ್ರ ಸ್ವರೂಪದಲ್ಲಿ ಆಗಬೇಕಾಗಿದ್ದರಿಂದ ಕನ್ನಡ ಕಾವಲು ಸಮಿತಿ ಮತ್ತೆ ಬೇರೆ ಹಸರಿನಲ್ಲಿ ಜಾರಿಗೆ ಬರಬೇಕು. ಕನ್ನಡ

ಅಭಿವೃದ್ಧಿ ಪ್ರಾಧಿಕಾರ ಈಗ ಚುರುಕಾಗಿ ತನ್ನ ಸ್ವರೂಪದಲ್ಲಿ ಕೆಲಸ ಮಾಡುತ್ತಿದೆ. ಗಡಿನಾಡಿನಲ್ಲಿ ಕನ್ನಡ ಶಾಲೆಗಳ ದುರವಸ್ಥೆಯನ್ನು ಕೂಡಲೇ ಸರಿಪಡಿಸಬೇಕು. ಕನ್ನಡ ಅಧ್ಯಾಪಕರನ್ನು ಖಾಲಿ ಇದ್ದ ಶಾಲೆ ಕಾಲೇಜುಗಳಲ್ಲಿ ಕೂಡಲೇ ನೇಮಿಸಬೇಕು.

**ಕನ್ನಡ ಪುಸ್ತಕೋದ್ಯಮದ ಬಗೆಗೆ ನೀವು ನೀಡುವ ಸಲಹೆಗಳಾವವು ?**

ಗ್ರಂಥ ಪ್ರಕಟನೆ ಕಷ್ಟದ ಸ್ಥಿತಿಯಲ್ಲಿದೆ. ಮುದ್ರಣವೆಚ್ಚ, ಕಾಗದದ ಬೆಲೆ ಏರಿಕೆಯಿಂದಾಗಿ ಸಾಹಿತ್ಯ ಕೃತಿಗಳ ಪ್ರಕಟನೆಗೆ ಪ್ರಕಾಶಕರು ಮುಂದೆ ಬಾರದ ಸ್ಥಿತಿಯಿದೆ. ಪ್ರಕಟವಾದ ಪುಸ್ತಕಗಳು ಜನರಿಗೆ ಸರಿಯಾಗಿ ವಿತರಣೆಯಾಗುತ್ತಿಲ್ಲ. ಕನ್ನಡ ಪುಸ್ತಕಗಳನ್ನು ಜನ ಕೊಳ್ಳಲು ಸಿದ್ಧರಿದ್ದರೂ ಅವು ಅವರ ದೃಷ್ಟಿಗೆ ಬೀಳುವದಿಲ್ಲ. ಪುಸ್ತಕ ಪ್ರಾಧಿಕಾರ ರಾಜ್ಯಾದ್ಯಂತ 'ಪುಸ್ತಕಯಾತ್ರೆ' ಕಾರ್ಯಕ್ರಮ ಹಾಕಿಕೊಂಡು ಪುಸ್ತಕ ಜನರ ಕಣ್ಣಿಗೆ ಬೀಳುವಂತೆ ಮಾಡಿ ಪುಸ್ತಕ ಪ್ರೀತಿ ಬೆಳೆಸಬೇಕು. ಜಿಲ್ಲಾ ತಾಲೂಕು ಮಟ್ಟದಲ್ಲಿ ಮಾರಾಟ ಮಳಿಗೆಗಳನ್ನು ತೆರೆಯಬೇಕು. ಕೇರಳದಲ್ಲಿರುವ ಸಹಕಾರಿ ಪುಸ್ತಕ ಪ್ರಕಾಶನದಂಥ ಪ್ರಕಾಶನ ಸಂಸ್ಥೆ ನಮ್ಮ ನಾಡಿನಲ್ಲೂ ಅಸ್ತಿತ್ವಕ್ಕೆ ಬಂದಾಗ ಲೇಖಕನಿಗೆ ಅನುಕೂಲವಾಗಬಹುದು.

**ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿ ನೀವು ಕನ್ನಡಿಗರಿಗೆ ನೀಡುವ ಸಂದೇಶವೇನು ?**

'ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ' ಎಂದು ಹಿಂದೆಯೇ ನಾನು ಕವಿತೆಯಲ್ಲಿ ಹೇಳಿದ್ದೇನೆ. ಭಾಷೆ, ಸಂಸ್ಕೃತಿಯ ಅಭಿಮಾನಿಯಾದ ಕನ್ನಡಿಗ ನಿಜವಾದ ಭಾರತೀಯನೂ ಆಗಿರುತ್ತಾನೆ. ಕನ್ನಡ ಸಂಸ್ಕೃತಿಯಲ್ಲಿ ಒಳ್ಳೆಯ ಆದರ್ಶವಿದೆ. ಪ್ರತಿಯೊಬ್ಬರೂ ಅದರ ವಾರಸುದಾರರಾಗಲು ಪ್ರಯತ್ನಿಸಬೇಕು. ಇಂದು ಕನ್ನಡದ ಸಮಸ್ಯೆಗಳು ಬೃಹದಾಕಾರವಾಗಿ ಬೆಳೆದಿವೆ; ಅನ್ಯಭಾಷಿಕರ ವಲಸೆ, ಆಕ್ರಮಣದಿಂದ ಕನ್ನಡವನ್ನು ಉಳಿಸುವ. ಬೆಳೆಸುವ ಯೋಜನೆ ಮಾಡಬೇಕಾಗಿದೆ. ಗೋಕಾಕ ಚಳುವಳಿಯಂಥ ಸಾಮೂಹಿಕ ಹೋರಾಟದಲ್ಲಿ ಕವಿ ಕಲಾವಿದರು ಒಟ್ಟಾಗಿ ಹೋರಾಡಿದಂತೆ ಇಂದು ಕನ್ನಡಪರ ಸಂಘಸಂಸ್ಥೆಗಳು ಒಟ್ಟಾಗಿ ಸಾಮೂಹಿಕವಾಗಿ ಕಾರ್ಯಮಾಡಬೇಕಾಗಿದೆ. ಪರಸ್ಪರ ದೋಷಾರೋಪಣೆ, ವ್ಯಕ್ತಿ

ಪ್ರತಿಷ್ಠೆಗಳನ್ನು ಬದಿಗೊತ್ತಿ ಒಂದಾಗಬೇಕು. ಕನ್ನಡದ ಜನ ಪ್ರಾದೇಶಿಕ ಭಿನ್ನತೆಯನ್ನು ಮರೆತು ಪ್ರೀತಿ, ಶ್ರದ್ಧೆಯಿಂದ ಕನ್ನಡ ಸಂಸ್ಕೃತಿಯ ಬೆಳವಣಿಗೆಗೆ ಶ್ರಮಿಸಬೇಕು. ಮಹತ್ವಾಕಾಂಕ್ಷೆಯಿಂದ ಒಳ್ಳೆಯದನ್ನು ಸಾಧಿಸಬೇಕು.

## ಬಿಡುಗಡೆಗೆ ಕಾಯುತ್ತಿರುವ ಪಾರಿವಾಳ

ಕಣವಿಯವರು ಮಾನವೀಯ ಅಂತಃಕರಣ ಕಳಕಳಿಯುಳ್ಳ ಕವಿ. ಜಗಳ, ವಾಗ್ವಾದ, ವೈಮನಸ್ಯ, ಪರಸ್ಪರ ದೋಷಾರೋಪಣೆ, ಗದ್ದಲದಿಂದ ದೂರವಿರಲು ಬಯಸುವವರು. ಅಂತಹ ಪ್ರಸಂಗಗಳು ಬಂದಾಗ ಜಾಣ್ಮೆಯಿಂದ ವಿವೇಕದಿಂದ ತಪ್ಪಿಸಲು ಪ್ರಯತ್ನಿಸುವವರು. ಬೆಂಗಳೂರಿನಲ್ಲಿ ಜರುಗಿದ ಒಂದು ವಿಚಾರ ಸಂಕಿರಣದಲ್ಲಿ ಕನ್ನಡ ಪ್ರಜ್ಞೆ ಹಾಗೂ ಭಾರತೀಯತೆಯ ಬಗೆಗೆ ಡಿ. ಆರ್. ನಾಗರಾಜರು ಆಡಿದ ಮಾತು ಅಲ್ಲಿದ್ದ ಸಾಹಿತಿಗಳಲ್ಲಿ ವಾಗ್ವಾದ ಸೃಷ್ಟಿಸಿತು. ಎಷ್ಟು ಹೊತ್ತಾದರೂ ವಾದ ಮುಗಿಯಲಿಲ್ಲ. ಬಿರುಸಿನ ವಾಗ್ವಾದ ಮುಂದುವರಿದಾಗ ಅಲ್ಲಿ ಮೌನವಾಗಿದ್ದ ಕಣವಿ ಎದ್ದು ವೇದಿಕೆಗೆ ಹೋಗಿ ಪಾರಿವಾಳ ಹೊರಗೆ ಹೋಗಲು ಚಡಪಡಿಸುತ್ತಿದೆ ಎಂದು ಚುಟುಕು ಕವಿತೆ ಓದಿ ಮಾತಿನ ಚಕಮಕಿಯ ಸದ್ದನ್ನು ಅಡಗಿಸಿದ್ದು ಇದಕ್ಕೊಂದು ಉದಾಹರಣೆಯಾಗಿದೆ.

## ಸಮ್ಮೇಳನಾಧ್ಯಕ್ಷರ ಸ್ತ್ರೀವಾದಿ ಚಿಂತನೆ

ಕನ್ನಡದಲ್ಲಿ ಸ್ತ್ರೀವಾದಿ ಸಂವೇದನೆಯ ಕುರಿತು ಕೇಳಿದಾಗ ಕಣವಿ ಹೇಳಿದ್ದು ಹೀಗೆ: 'ಪುರುಷ ಸಾಹಿತ್ಯ, ಮಹಿಳಾ ಸಾಹಿತ್ಯ ಎಂದು ಭೇದ ಮಾಡುವದು ಸರಿಯಲ್ಲ. ಅಂತಹ ಸಂದರ್ಭ ಈಗ ಒದಗಿ ಬಂದಿಲ್ಲ. ಸ್ತ್ರೀ ಪುರುಷರಲ್ಲಿ ಪರಸ್ಪರ ಪ್ರೀತಿ ತಿಳಿವಳಿಕೆ ಹೆಚ್ಚಬೇಕು. ಸ್ತ್ರೀ ತನ್ನ ಸ್ವಾತಂತ್ರ್ಯದೊಂದಿಗೆ ಸ್ತ್ರೀಯಾಗಿರುವಲ್ಲಿಯೇ ವಿಶೇಷವಾದ ಸೌಂದರ್ಯ ಸೊಗಸು ಇದೆ.' ಈ ಮಾತುಕತೆ ನಡೆಯುತ್ತಿರುವಾಗ ಒಳಗಿದ್ದ ಕಣವಿಯವರ ಬಾಳಸಂಗಾತಿ ಲೇಖಕಿ ಶಾಂತಾದೇವಿ ಕಣವಿಯವರು ಬಂದು ನಮ್ಮೊಡನೆ ಕೂಡಿಕೊಂಡು ಹೀಗೆ ಹೇಳಿದರು. 'ಸ್ತ್ರೀವಾದಿ ಚಿಂತಕರಲ್ಲಿ ಉಗ್ರವಾದಿಗಳೂ ಸೌಮ್ಯವಾದಿಗಳೂ ಇದ್ದಾರೆ. ಸ್ತ್ರೀಯ ಅಭಿವ್ಯಕ್ತಿ ಸ್ವಾತಂತ್ರ್ಯ ಸರಿಯೆ. ಸ್ತ್ರೀ ಪುರುಷ ಭೇದ ಕುಟುಂಬ ವ್ಯವಸ್ಥೆಯನ್ನೂ, ಸಮಾಜ ವ್ಯವಸ್ಥೆಯನ್ನೂ

ಒಡೆಯಲು ದಾರಿ ಮಾಡಿಕೊಡುತ್ತದೆ. ಮಹಿಳೆ ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು. ಆದ್ರೆ ಸ್ವಾತಂತ್ರ್ಯದ ಹೆಸರಿನಲ್ಲಿ ದುರುಪಯೋಗ ಮಾಡಿಕೊಳ್ಳುವದು, ಸಲ್ಲದು. ಈ ವಿವೇಕ ಸ್ತ್ರೀವಾದಿ ಚಿಂತಕರಲ್ಲಿ ಅವಶ್ಯವಾಗಿ ಇರಬೇಕು.' ಬದುಕು ಹಾಗೂ ಸಾಹಿತ್ಯದಲ್ಲಿ ಸ್ತ್ರೀ ಪುರುಷ ಸಂಬಂಧಗಳ ಅನ್ಯೋನ್ಯತೆಯನ್ನು ಕಣವಿ ದಂಪತಿಗಳು ಪ್ರತಿಪಾದಿಸಿದ್ದು ಪರೋಕ್ಷವಾಗಿ ಅವರ ಬದುಕು ಅದಕ್ಕೆ ಒಂದು ನಿದರ್ಶನವಾಗಿ ನನಗೆ ಕಂಡು ಬಂದಿತು.

('ಸಂಯುಕ್ತ ಕರ್ನಾಟಕ' ೨೮-೪-೧೯೯೬)

# ಪಂಪ ಪ್ರಶಸ್ತಿ ವಿಜೇತ ಕವಿ ಚೆನ್ನವೀರ ಕಣವಿ ಸಾಹಿತ್ಯ ಸಂದರ್ಶನ

**ಪ್ರತಿಷ್ಠಿತ ಪಂಪ ಪ್ರಶಸ್ತಿ ಪಡೆದ ನಿಮಗೆ ಹಾರ್ದಿಕ ಅಭಿನಂದನೆಗಳು ! ಕನ್ನಡ ಕಾವ್ಯಪರಂಪರೆಗೆ ವಿಶಿಷ್ಟ ಕೊಡುಗೆ ನೀಡಿದ ನೀವು ಈ ಸಂದರ್ಭದಲ್ಲಿ ಹೇಗೆ ಪ್ರತಿಕ್ರಿಯಿಸುತ್ತೀರಿ ?**

ಕನ್ನಡ ಕಾವ್ಯ ಪರಂಪರೆಗೆ ಪ್ರಾರಂಭದಲ್ಲಿಯೇ ಪಂಪನಂಥ ಶ್ರೇಷ್ಠ ಕವಿ ದೊರೆತದ್ದು ಕನ್ನಡ ನಾಡಿನ ಭಾಗ್ಯ. 'ಪಸರಿಪ ಕನ್ನಡಕ್ಕೊಡೆಯನೊರ್ವನೆ ಸತ್ಕವಿ ಪಂಪನಾವಗಂ' ಎಂಬ ಮಾತು ಕೇವಲ ಉತ್ಪ್ರೇಕ್ಷೆಯಲ್ಲ ಎಂದು ಇಂದಿಗೂ ನಮಗೆ ತೋರುತ್ತದೆ. ಅಂಥ ದೊಡ್ಡ ಕವಿಯ ಹೆಸರಿನ ಪ್ರಶಸ್ತಿ ದೊರೆತದ್ದು ನನಗೆ ಸಹಜವಾಗಿಯೇ ಸಂತೋಷವನ್ನುಂಟುಮಾಡಿದೆ. ಹಾಗೆಯೇ ನನ್ನ ಕಾವ್ಯವನ್ನು ಸಹೃದಯರು ಪ್ರೀತಿಯಿಂದ ಸ್ವೀಕರಿಸಿದ್ದಾರೆ ಎನ್ನುವದು ಅದಕ್ಕೂ ಹೆಚ್ಚಿನ ಪ್ರಶಸ್ತಿ ಎಂದು ನಾನು ಭಾವಿಸಿದ್ದೇನೆ. ಇದು ಅವರಿಗೂ ಸಂದ ಗೌರವ.

**ಕನ್ನಡದ ಆದಿಕವಿ ಪಂಪ ಇವತ್ತಿನ ಕವಿಗಳಿಗೆ ಕಾವ್ಯ ಪರಂಪರೆಗೆ ಹೇಗೆ ಪ್ರಸ್ತುತನಾಗುತ್ತಾನೆ ?**

ಪಂಪ ಹತ್ತನೆಯ ಶತಮಾನಕ್ಕೆ ಸೀಮಿತನಾಗಿರದೆ ಅವನು ತನ್ನ ಕಾವ್ಯದ ಸತ್ವದಿಂದ, ಜೀವಂತಿಕೆಯಿಂದ ಎಲ್ಲ ಕಾಲದವನಾಗಿದ್ದಾನೆ. ಕನ್ನಡ ಸಾಹಿತ್ಯ ಪರಂಪರೆಗೆ ಇರುವ ಸಾವಿರ ವರ್ಷದ ಹಿನ್ನೆಲೆಯನ್ನು ಆಧುನಿಕ ಸಾಹಿತ್ಯ ಮರೆಯುವಂತಿಲ್ಲ. ಪಂಪನಿಂದ ಹಿಡಿದು ರನ್ನ-ಜನ್ನ, ಹರಿಹರ-ರಾಘವಾಂಕ, ಬಸವಣ್ಣ-ಪುರಂದರ, ಕುಮಾರವ್ಯಾಸ, ಲಕ್ಷ್ಮೀಶ, ರತ್ನಾಕರವರ್ಣಿ, ಸರ್ವಜ್ಞರಂಥ ಕವಿಗಳು ತಮ್ಮ ಕಾವ್ಯಗಳ ಮೂಲಕ ಕನ್ನಡ ಭಾಷೆಗೆ ಸತ್ವವನ್ನೂ ತೇಜಸ್ಸನ್ನೂ ತುಂಬಿದ್ದಾರೆ. ಈ ಪರಂಪರೆಯ ಪ್ರಜ್ಞೆಯಿಂದ ಅಭಿವ್ಯಕ್ತಿಗೊಂಡಾಗ ಮಾತ್ರ ನಮ್ಮ ಕಾವ್ಯ ಹೆಚ್ಚಿನದನ್ನು

ಸಾಧಿಸಬಲ್ಲದು ಎಂದು ನನ್ನ ಭಾವನೆ. ನಮ್ಮ ಸೃಜನಾತ್ಮಕ ಸಾಮರ್ಥ್ಯ ಇದರಿಂದ ದ್ವಿಗುಣಗೊಳ್ಳುತ್ತದೆ. ಪಶ್ಚಿಮದಿಂದ ನಾವು ಎಷ್ಟೇ ಪ್ರೇರಣೆ ಪಡೆದಿದ್ದರೂ ನಮ್ಮದೇ ಆದ ಪರಿಸರದ ಪಾರಂಪರಿಕ ಹಿನ್ನೆಲೆಯ ಅರಿವಿಲ್ಲದೆ ಹೋದರೆ ಸತ್ವಯುತವಾದ ಹಾಗೂ ಸಮತೂಕದ ಸಾಹಿತ್ಯವನ್ನು ನಾವು ನಿರ್ಮಿಸಲಾರೆವು. ಇಂಥ ಪರಂಪರೆಯ ಶ್ರೇಷ್ಠ ಪ್ರತಿನಿಧಿ ಪಂಪನಾಗಿರುವದರಿಂದ ಅವನು ನಮಗೆ ಪ್ರಸ್ತುತನಾಗುತ್ತಾನೆ.

'ಮನುಷ್ಯ ಜಾತಿ ತಾನೊಂದೆ ವಲಂ' ಎಂದು ಸಾರಿದ ಪಂಪನ ಕಾವ್ಯವಾಣಿಯ ಮಣಿದೀಪವನ್ನು ಹಿಡಿದುಕೊಂಡೇ ನಾವು ಇಂದು ಇಪ್ಪತ್ತೊಂದನೆಯ ಶತಮಾನವನ್ನು ಸ್ವಾಗತಿಸುವದು ಅಗತ್ಯವಾಗಿಲ್ಲವೆ ? ತ್ಯಾಗ, ಭೋಗ, ವಿದ್ಯೆ, ಸಂಗೀತ, ಗೋಷ್ಠಿ, ಪ್ರೇಮ ಮೊದಲಾದವುಗಳಲ್ಲಿ ಮನುಷ್ಯನ ಅರ್ಹತೆಯನ್ನು ಕಾಣುವ ಜೀವನ ದೃಷ್ಟಿಯಿಂದ ಪಂಪನ ಪ್ರಸ್ತುತತೆ ಇನ್ನೂ ಹೆಚ್ಚುತ್ತದೆ.

**ಪಂಪನ ಸ್ಮಾರಕವನ್ನು ಸರಕಾರ ನಿರ್ಮಿಸಲು ಹಿಂದೆ ಪಂಪ ಪ್ರಶಸ್ತಿ ಪಡೆದ ಡಾ. ಕಲಬುರ್ಗಿ ಒತ್ತಾಯಿಸಿದ್ದರಲ್ಲದೆ ಪಂಪ ಪ್ರಶಸ್ತಿಯ ಹಣವನ್ನೂ ಹಿಂದಿರುಗಿಸಿದ್ದರು. ಆದರೆ ಸರಕಾರ ಏನನ್ನೂ ಮಾಡದಿರುವ ಬಗ್ಗೆ ನೀವು ಹೇಗೆ ಒತ್ತಾಯಿಸುತ್ತೀರಿ ? ಪಂಪನ ಸ್ಮಾರಕ ಮಾಡಲು ಏನು ಮಾಡಬೇಕು ?**

ಇದು ಒತ್ತಾಯದಿಂದ ಆಗುವ ಕೆಲಸವಲ್ಲ. ನಿಜವಾದ ಪ್ರೀತಿಯಿಂದ, ಆಸಕ್ತಿಯಿಂದ, ಅಭಿಮಾನದಿಂದ ಆಗಬೇಕಾದದ್ದು. ಸಂಸ್ಕೃತಿ ಇಲಾಖೆ ತನ್ನ ಹೆಸರನ್ನು ಸಾರ್ಥಕಗೊಳಿಸಬೇಕಾದರೆ ಈ ಕಾರ್ಯವನ್ನು ಕೂಡಲೆ ಕೈಕೊಂಡು ಮುಗಿಸಬೇಕು. ಪಂಪನ ಸ್ಮಾರಕದ ಯೋಜನೆಯನ್ನು ರೂಪಿಸಲು ಡಾ. ಕಲಬುರ್ಗಿಯವರು ನನಗಿಂತಲೂ ಹೆಚ್ಚು ಸಮರ್ಥರು.

**ಕನ್ನಡದ ನವೋದಯ, ನವ್ಯ, ದಲಿತ ಬಂಡಾಯ ಕಾವ್ಯಮಾರ್ಗದಲ್ಲಿ ಎಲ್ಲ ಪರಂಪರೆಯಲ್ಲೂ ನೀವು ಸ್ಪಂದಿಸಿ ಕಾವ್ಯಶಿಲ್ಪ ನೀಡಲು ಹೇಗೆ ಸಾಧ್ಯವಾಗಿದೆ ?**

ಈ ಎಲ್ಲ ಕಾವ್ಯ ಪಂಥಗಳ ಒಳ್ಳೆಯ ಅಂಶಗಳನ್ನು ನನ್ನ ಕಾವ್ಯಕ್ಕೆ ಪೋಷಕವಾಗುವಂತೆ --ಆದರೆ ನನ್ನತನವನ್ನು ಬಿಡದೆ-ಸ್ವೀಕರಿಸಲು ನಾನು ಪ್ರಯತ್ನಿಸುತ್ತ ಬಂದಿದ್ದೇನೆ. ಕೇವಲ ಪಂಥಾಭಿಮಾನ ಕಾವ್ಯದ ಬೆಳವಣಿಗೆಗೆ ಮಾರಕ.

**ಕನ್ನಡದಲ್ಲಿ ಕವಿಗಳು ಇಂದು ಹಿಂದೆಂದಿಗಿಂತ ಹೆಚ್ಚಾಗಿ ಕಾವ್ಯಕೃಷಿ ಮಾಡುತ್ತಿದ್ದರೂ ಅವರ ಕಾವ್ಯ ಸಹೃದಯರನ್ನು ಮುಟ್ಟದೆ ಇರುವದಕ್ಕೆ ಕಾರಣವೇನು ?**

ಉತ್ತಮ ಕಾವ್ಯಕ್ಕೆ ಸಹೃದಯಿ ಸ್ಪಂದಿಸದೆ ಇರಲಾರ. ಇವತ್ತಿನ ಕಾವ್ಯ ಸಹೃದಯರನ್ನು ಮುಟ್ಟುವದಿಲ್ಲವೆಂದಲ್ಲ. ಆದರೆ ಮುಟ್ಟಿಯೂ ಅದು ಅವರ ಹೃದಯವನ್ನು ತಟ್ಟುವದಿಲ್ಲ. ಒಂದು ಕಾಲಕ್ಕೆ (ನವ್ಯ) ಸಂವಹನದ ಸಮಸ್ಯೆಯಿದ್ದರೆ ಇಂದು ಸತ್ವಹೀನತೆ, ಸೌಲಭ್ಯಾಕಾಂಕ್ಷೆ ಕಾವ್ಯಾಸಕ್ತರನ್ನು ದೂರ ಸರಿಯುವಂತೆ ಮಾಡಿದೆ. ಆದರೆ ಉದಯೋನ್ಮುಖರಲ್ಲಿ ಹೊಸತಿನ ಭರವಸೆ ಹುಟ್ಟಿಸುತ್ತಿರುವ ಕೆಲವರಿಗೆ ಈ ಮಾತು ಅನ್ವಯಿಸುವದಿಲ್ಲ.

**ಕನ್ನಡ ಕಾವ್ಯ ಈಗ ಹೊಸ ಪ್ರಯೋಗ ಸಾಧ್ಯತೆ ಪಡೆದುಕೊಂಡು ಬದಲಾವಣೆಗೊಳ್ಳುವ ಆಶಯವನ್ನು ನೀವು ವ್ಯಕ್ತಪಡಿಸುತ್ತೀರಾ ?**

ಅಲ್ಲಲ್ಲಿ ಹೊಸ ಪ್ರಯೋಗಗಳು ನಡೆಯುತ್ತಿವೆ. ಅಂಥ ಹೊಸ ದನಿಗಳು ಇನ್ನಷ್ಟು ಗಟ್ಟಿಯಾಗಿ ಸಮಷ್ಟಿ ರೂಪದಲ್ಲಿ ಕಾಣಿಸಿಕೊಳ್ಳಬೇಕಾಗಿದೆ. 'ತಿರುತಿರುಗಿಯು ಹೊಸದಾಗುವ' ಋತುಗಳ ಪ್ರಕ್ರಿಯೆ ಕಾವ್ಯಕ್ಷೇತ್ರದಲ್ಲಿಯೂ ಕಾಣಿಸುವ ಲಕ್ಷಣಗಳಿವೆ.

**ಕನ್ನಡದಲ್ಲಿ ಕ್ಯಾಸೆಟ್ ಸಂಸ್ಕೃತಿ ಬೆಳೆಯುತ್ತಿದೆ. ಕವಿಗಳು ತಮ್ಮ ಕಾವ್ಯ ಕ್ಯಾಸೆಟ್ ಮೂಲಕ ಜನರ ಬಳಿಗೆ ಹೋಗಬಯುಸಿದ್ದಾರೆ. ಇದಕ್ಕೆ ನಿಮ್ಮ ಪ್ರತಿಕ್ರಿಯೆ ಯಾವುದು ?**

ಕವಿಗಳು ತಮ್ಮ ಕಾವ್ಯದ ಕ್ಯಾಸೆಟ್ಟುಗಳ ಮೂಲಕ ಜನರ ಬಳಿಗೆ ಹೋಗುವದು ತಪ್ಪಲ್ಲ. ಆದರೆ ಅವರು ಸಾಹಿತ್ಯಿಕಮೌಲ್ಯ, ಹಾಗೂ ಕಾವ್ಯಗುಣಕ್ಕೆ ಪ್ರಥಮ ಪ್ರಾಶಸ್ತ್ಯ ನೀಡಬೇಕು.

**ಸಾಹಿತ್ಯ ಸಮ್ಮೇಳನಾಧ್ಯಕ್ಷರಾದಾಗ ಭಾರತೀಯತೆಯ ಪುನಃಶೋಧದ ಕರೆ ನೀಡಿದ್ದಿರಿ. ಪಂಪ ಪ್ರಶಸ್ತಿ ಪಡೆದ ಸಂದರ್ಭದಲ್ಲಿ ನೀವು ಯಾವ ಹೊಸ ಆಶಯವನ್ನು ಹೇಳಲಿದ್ದೀರಿ ?**

ಭಾರತೀಯತೆಯ ಪುನರ್‌ವ್ಯಾಖ್ಯಾನವೆಂದರೆ ಈ ಮೊದಲೇ ಇದ್ದು ಸ್ಥಾವರವಾಗಿರುವದರ ಗುಣ ವಿಶೇಷದ ವರ್ಣನೆ ಮಾಡುತ್ತ ಹೋಗುವುದಲ್ಲ. ಆದರೆ ಅದು ಹೇಗಿರತಕ್ಕದ್ದು ಎಂಬುದನ್ನು ಕ್ರಿಯಾತ್ಮಕವಾಗಿ ಸ್ಪಷ್ಟಗೊಳಿಸುವ ಪ್ರಕ್ರಿಯೆ ಕೂಡ ಆಗಿದೆ ಎಂಬ ಮಾತನ್ನೇ ಮತ್ತೊಮ್ಮೆ ಹೇಳಬಯಸುತ್ತೇನೆ.

**ನಿಮ್ಮ ಇತ್ತೀಚಿನ ಹೊಸ ಕಾವ್ಯ ಪ್ರಯೋಗ ಸಾಹಿತ್ಯ ರಚನೆಯ ಬಗೆಗೆ ತಿಳಿಸುವಿರಾ ?**

ಇತ್ತೀಚೆ ಇನ್ನಷ್ಟು ಸುನೀತಗಳನ್ನು ಬರೆದಿದ್ದೇನೆ. 'ಹೊಸ ಕಾವ್ಯಪ್ರಯೋಗ' ಎನ್ನುವುದಕ್ಕಿಂತ ಒಂದಿಷ್ಟು ಹೊಸ ವಿಚಾರಗಳನ್ನು ಕಾವ್ಯದ ಮೂಲಕ ಹೇಳಲು ಪ್ರಯತ್ನಿಸಿದ್ದೇನೆ. ಹೊಸ ಕವನಸಂಗ್ರಹ ಸಿದ್ಧತೆಯಲ್ಲಿದೆ, ಉಳಿದ ಲೇಖನಗಳ ಸಂಕಲನವೂ ಬರಬೇಕಾಗಿದೆ. 'ವಾಚನಾಂತರಂಗ' ಈಚೆಗೆ ಪ್ರಕಟವಾಗಿದೆ.

**ಕನ್ನಡ ನಾಡಿನಲ್ಲಿ ಕನ್ನಡದ ಸ್ಥಿತಿಗತಿಯ ಬಗೆಗೆ ನಿಮ್ಮ ಅನಿಸಿಕೆ ಯಾವುದು ? ಕನ್ನಡದ ಪ್ರತಿಷ್ಠೆ ಹೆಚ್ಚಿಸಲು ಹೊಸ ಸರಕಾರ ಏನು ಮಾಡಬೇಕೆಂದು ನೀವು ಸಲಹೆ ನೀಡುತ್ತೀರಿ ?**

ಕನ್ನಡ ನಾಡಿನಲ್ಲಿ ಕನ್ನಡ ಸ್ಥಿತಿಗತಿ 'ದೇವರೇ ಗತಿ' ಎನ್ನುವಂತಾಗಿದೆ. ಇಂಗ್ಲೀಷಿನ ವ್ಯಾಮೋಹ ಮಿತಿಮೀರುತ್ತಿದೆ. ಹೊಸ ಪೀಳಿಗೆ ಕನ್ನಡ ಸಂಸ್ಕೃತಿಗೆ ಹೊರತಾಗುತ್ತಿದೆ. ಇದು ನಿಜಕ್ಕೂ ಅಪಾಯಕಾರಿಯಾದದ್ದು. ಒಂದು ಕಡೆಗೆ ಅಕಾಡೆಮಿಗಳ ಮೂಲಕ ಕನ್ನಡ ಸಾಹಿತ್ಯ ಸಂಸ್ಕೃತಿಗಳ ಸಂವರ್ಧನೆಯ ಕಾರ್ಯ ತಕ್ಕಮಟ್ಟಿಗೆ ನಡೆಯುತ್ತಿದ್ದರೆ ಇನ್ನೊಂದು ಕಡೆಗೆ ಅಂದರೆ ಮೂಲಭೂತವಾಗಿ ಶಿಕ್ಷಣ ಕ್ಷೇತ್ರದಲ್ಲಿ ಕನ್ನಡದ ದೃಷ್ಟಿಯಿಂದ ಯಾವ ಪ್ರಗತಿಯೂ ಕಂಡುಬರುತ್ತಿಲ್ಲ. ಆಡಳಿತದಲ್ಲಿ ಜುಕ್ಕು ಜುಲುಮೆ ಯಿಂದ ಎಂಬಂತೆ ಕನ್ನಡ 'ಪ್ರಗತಿ' ಹೊಂದುತ್ತಿದೆ.

ಹೊಸ ಸರಕಾರ ಈ ದಿಸೆಯಲ್ಲಿ ತಜ್ಞರ ಸಲಹೆ ಪಡೆದು ನಿಜವಾದ ಕಳಕಳಿಯಿಂದ ಕೂಡಲೆ ಕಾರ್ಯಪ್ರವೃತ್ತವಾಗಬೇಕು. ಪ್ರೌಢಶಾಲೆಯವರೆಗೆ ಕನ್ನಡ ಮಾಧ್ಯಮದಲ್ಲಿಯೇ ಶಿಕ್ಷಣ ಪಡೆದಿರುವೆನೆಂದು ಹೇಳಿಕೊಂಡಿರುವ ಮಾನ್ಯ ಮುಖ್ಯಮಂತ್ರಿಗಳು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸುತ್ತಾರೆಂದು ಆಶಿಸಿದ್ದೇನೆ.

**ನಿಮ್ಮ ಜೀವನದೃಷ್ಟಿ, ಕಾವ್ಯದೃಷ್ಟಿ ಯಾವುದು ?**

ಸಂಯಮ, ಸಾತ್ವಿಕತೆ, ಗುಣಸ್ವೀಕಾರ, ಪರಿಸರ ಪ್ರೇಮ, ಸಮಾನತೆಯ ಹಂಬಲ – ಇವು ನನ್ನ ಜೀವನದೃಷ್ಟಿಯನ್ನು ರೂಪಿಸಿವೆ. ಕಾವ್ಯದೃಷ್ಟಿ ಇದನ್ನೇ ಒಳಗೊಂಡಿರುವುದನ್ನು ಕಾವ್ಯಪ್ರೇಮಿಗಳು ಕಂಡುಕೊಂಡಿದ್ದಾರೆಂದು ನಾನು ಭಾವಿಸಿದ್ದೇನೆ.

('ಸಂಯುಕ್ತ ಕರ್ನಾಟಕ' ೧೪-೧೧-೧೯೯೯)

# ಚೆನ್ನವೀರ ಕಣವಿಯವರ ಜೀವನ - ಸಾಹಿತ್ಯಪಥ

ಜನನ : ೨೮–ಜೂನ್ ೧೯೨೮. ಹೊಂಬಳ (ಗದಗ ತಾಲೂಕು, ಗದಗ ಜಿಲ್ಲೆ).
ತಂದೆ – ಸಕ್ಕರೆಪ್ಪ (ಕನ್ನಡ ಶಾಲಾ ಶಿಕ್ಷಕರು)
ತಾಯಿ – ಪಾರ್ವತವ್ವ

ಪ್ರಾಥಮಿಕ ಶಿಕ್ಷಣ : ೧೯೩೪-೧೯೪೦. ಶಿರುಂದ (ಗದಗ ತಾಲೂಕು) ಹಾಗು ಗರಗ (ಧಾರವಾಡ ಹತ್ತಿರ) ಮುಲ್ಕೀ ಪರೀಕ್ಷೆಯಲ್ಲಿ ಧಾರವಾಡ ಕೇಂದ್ರಕ್ಕೆ ಪ್ರಥಮ ಸ್ಥಾನ.

ಮಾಧ್ಯಮಿಕ ಶಿಕ್ಷಣ : ೧೯೪೦-೧೯೪೬. ರಾಜಾ ಲಖಮಗೌಡ ಸರದೇಸಾಯಿ ಹಾಯ್‌ಸ್ಕೂಲ್, ಧಾರವಾಡ

ಕಾಲೇಜು ಶಿಕ್ಷಣ : ಕರ್ನಾಟಕ ಕಾಲೇಜು, ಧಾರವಾಡ. ಬಿ. ಎ. ಪ್ರಥಮ ದರ್ಜೆಯಲ್ಲಿ ಪ್ರಥಮ ಸ್ಥಾನ, ವಿಶ್ವವಿದ್ಯಾಲಯದ ಬಹುಮಾನ ೧೯೫೨. ಎಂ. ಎ. (ಉಚ್ಚವರ್ಗ) ಕರ್ನಾಟಕ ವಿಶ್ವವಿದ್ಯಾಲಯ.

## ಮಹತ್ವದ ಹೆಜ್ಜೆಗಳು

೧೯೪೭ ಸ್ವಾತಂತ್ರ್ಯೋತ್ಸವ ಸಮಾರಂಭ (ಧಾರವಾಡ) ದಲ್ಲಿ ಸಾರ್ವಜನಿಕವಾಗಿ ಪ್ರಥಮ ಬಾರಿಗೆ ಕಾವ್ಯವಾಚನ. (ಕವಿತೆ 'ಬಂಧದಿಂ ಬಿಡುಗಡೆಗೆ')

೧೯೪೯ (ಜ್ಯೂ. ಬಿ. ಎ.) ಪ್ರಥಮ ಕವನ ಸಂಗ್ರಹ 'ಕಾವ್ಯಾಕ್ಷಿ' ಪ್ರಕಟಣೆ. ವಿದ್ಯಾರ್ಥಿ ಮಿತ್ರರೊಡನೆ 'ಕಾವ್ಯಾನುಭವ ಮಂಟಪ' ಸ್ಥಾಪನೆ ಹಾಗೂ ಸಂಚಾಲಕತ್ವ. ಬೇಂದ್ರೆ–ಗೋಕಾಕರಿಂದ ಉದ್ಘಾಟನೆ.

೧೯೫೨ ಮೇ ೧೨. ಎಸ್. ವಿ. ಗಿಡ್ನವರ ಮಗಳು ಶಾಂತಾದೇವಿ ಯೊಡನೆ ಧಾರವಾಡದಲ್ಲಿ ಮದುವೆ.

೧೯೫೨ ಸೆಪ್ಟೆಂಬರ ೮. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ವಿಸ್ತರಣ ಮತ್ತು ಪ್ರಕಟನ ವಿಭಾಗದ ಕಾರ್ಯದರ್ಶಿಯಾಗಿ ನೌಕರಿ ಪ್ರಾರಂಭ.

೧೯೫೫ "ಆಕಾಶಬುಟ್ಟಿ" ಕವನ ಸಂಗ್ರಹಕ್ಕೆ ಮುಂಬಯಿ ರಾಜ್ಯದ ಪ್ರಥಮ ಬಹುಮಾನ.

೧೯೫೬ ಕ. ವಿ. ವಿ. ಪ್ರಕಟನ ವಿಭಾಗದ (ಪ್ರಸಾರಾಂಗ) ನಿರ್ದೇಶಕನಾಗಿ ಬಡತಿ.

೧೯೫೬ ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿ; ಬೇಂದ್ರೆ ಷಷ್ಟ್ಯಬ್ದಿ ಸಮಾರಂಭದ ಕಾರ್ಯದರ್ಶಿ.

೧೯೫೭ ಕುವೆಂಪು ಅಧ್ಯಕ್ಷತೆಯಲ್ಲಿ ಧಾರವಾಡದಲ್ಲಿ ನಡೆದ ೪೦ನೇ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಧಾನ ಕಾರ್ಯದರ್ಶಿ.

೧೯೫೭ "ದೀಪಧಾರಿ" ಕವನ ಸಂಗ್ರಹಕ್ಕೆ ಮೈಸೂರು ರಾಜ್ಯ ಸಂಸ್ಕೃತಿ ಪ್ರಸಾರ ಶಾಖೆಯ ಬಹುಮಾನ.

೧೯೬೧ ಗದಗನಲ್ಲಿ ನಡೆದ ೪೩ನೇ ಕನ್ನಡ ಸಾಹಿತ್ಯ ಸಮ್ಮೇಳನದ ಕವಿ ಗೋಷ್ಠಿಯ ಅಧ್ಯಕ್ಷತೆ.

೧೯೬೨ ಕೇಂದ್ರ ಸರಕಾರದ ಶಿಕ್ಷಣ ಇಲಾಖೆ ಏರ್ಪಡಿಸಿದ ಅಖಿಲ ಭಾರತ ಲೇಖಕರ ಪ್ರಥಮ ಶಿಬಿರ(ಕೃಷ್ಣರಾಜಸಾಗರ)ದಲ್ಲಿ ಕನ್ನಡ ಸಾಹಿತ್ಯದ ಪ್ರತಿನಿಧಿ (ಡಾ. ಕರ್ಕಿಯವರೊಡನೆ).

೧೯೬೫ ಜನೆವರಿ ೨೬. ದಿಲ್ಲಿಯ ರಾಷ್ಟ್ರೀಯ ಕವಿಸಮ್ಮೇಳನದಲ್ಲಿ (ಪ್ರಜಾರಾಜ್ಯೋತ್ಸವ) ಕನ್ನಡದ ಪ್ರತಿನಿಧಿ.

೧೯೬೫ ಎರ್ನಾಕುಲಂದಲ್ಲಿ ಜರುಗಿದ ಅಖಿಲ ಭಾರತ ಲೇಖಕರ ಪರಿಷತ್ತಿನಲ್ಲಿ ವಿಶ್ವವಿದ್ಯಾನಿಲಯದ ಪ್ರತಿನಿಧಿಯಾಗಿ ಭಾಗವಹಿಸಿದ್ದು.

೧೯೬೬ "ನೆಲ ಮುಗಿಲು" ಕವನ ಸಂಗ್ರಹಕ್ಕೆ ಮೈಸೂರು ರಾಜ್ಯದ ಸಂಸ್ಕೃತಿ ಪ್ರಸಾರ ಶಾಖೆಯು ಪ್ರಥಮ ಬಹುಮಾನ.

೧೯೬೭ ನಿಡುಮಾಮಿಡಿ ಜಗದ್ಗುರುಗಳಿಂದ "ಕವನ ಕಲಾರವಿ" ಪ್ರಶಸ್ತಿ ಹಾಗೂ ಚಿನ್ನದ ಪದಕ.

೧೯೬೯ ಕೇಂದ್ರ ಸಾಹಿತ್ಯ ಅಕಾಡೆಮಿ ಜನರಲ್ ಕೌನ್ಸಿಲ್ ಸದಸ್ಯ (೧೦ ವರ್ಷ). ಹಾಗೂ ಕನ್ನಡ ಸಲಹಾ ಸಮಿತಿ ಸದಸ್ಯ (೧೦ ವರ್ಷ).

೧೯೭೭ ನ್ಯಾಷನಲ್ ಬುಕ್ ಟ್ರಸ್ಟಿನ ಕನ್ನಡ ಸಲಹಾ ಸಮಿತಿ ಸದಸ್ಯ (೩ ವರ್ಷ).

೧೯೭೮ ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯ (೬ ವರ್ಷ).

೧೯೭೮ ಕರ್ನಾಟಕ ವಿದ್ಯಾವರ್ಧಕ ಸಂಘದಿಂದ ೫೦ನೇ ಹುಟ್ಟು ಹಬ್ಬದ ಸನ್ಮಾನ ಹಾಗು 'ಚೆನ್ನವೀರ ಕಣವಿಯವರ ಕಾವ್ಯದೃಷ್ಟಿ' ಗ್ರಂಥದ ಪ್ರಕಟಣೆ (ಲೇ : ಗೌರೀಶ ಕಾಯ್ಕಿಣಿ).

೧೯೭೯ ಇಳಕಲ್ ಶ್ರೀಗಳವರಿಂದ ಸನ್ಮಾನ.

೧೯೮೦ ಮೈಸೂರು ದಸರಾ ಕವಿಸಮ್ಮೇಳನದ ಅಧ್ಯಕ್ಷತೆ.

೧೯೮೦ 'ಚೆಂಬೆಳಕು' ಅಭಿನಂದನ ಗ್ರಂಥ ಸಮರ್ಪಣೆ.

೧೯೮೧ 'ಜೀವಧ್ವನಿ' ಕವನ ಸಂಗ್ರಹಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ.

೧೯೮೧ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠದಲ್ಲಿ ಗೌರವ ಸಂದರ್ಶಕ ಪ್ರಾಧ್ಯಾಪಕ (೨ ವರ್ಷ).

೧೯೮೧ ಗದಗಿನ ತೋಂಟದಾರ್ಯ ಮಠದ ಜಗದ್ಗುರುಗಳಿಂದ ಸನ್ಮಾನ.

೧೯೮೨ ಮಾರ್ಚ್, ಅಖಿಲ ಕರ್ನಾಟಕ ಕೇಂದ್ರ ಕನ್ನಡ ಕ್ರಿಯಾಸಮಿತಿಯ ಉಪಾಧ್ಯಕ್ಷ.

೧೯೮೨ ಎಪ್ರಿಲ್ ೨೨. ಗೋಕಾಕ ಚಳುವಳಿಯ ಪ್ರಾರಂಭದಲ್ಲಿ ಪ್ರತಿಬಂಧ ಕಾಜ್ಞೆಯನ್ನು ಮುರಿದು ಬಂಧನಕ್ಕೊಳಗಾದದ್ದು.

೧೯೮೩ ಅ. ಕ. ಕೇಂದ್ರ ಕನ್ನಡ ಕ್ರಿಯಾ ಸಮಿತಿಯ ಅಧ್ಯಕ್ಷ (೫ ವರ್ಷ).

೧೯೮೩ ಜೂನ್, ವಿಶ್ವವಿದ್ಯಾಲಯದ ಸೇವೆಯಿಂದ ನಿವೃತ್ತಿ.

೧೯೮೩ ನವಂಬರ, ಬಿ. ಇ. ಎಲ್. ಸಂಕೀರ್ಣ ಬೆಂಗಳೂರು, ಕನ್ನಡ ಸಾಹಿತ್ಯ ಕೂಟದ ಸನ್ಮಾನ.

೧೯೮೫ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ.

೧೯೮೫ ಕನ್ನಡ ಶಕ್ತಿ ಕೇಂದ್ರ, ಬೆಂಗಳೂರು ಗೌರವಾಧ್ಯಕ್ಷ (೫ ವರ್ಷ).

೧೯೮೮ ಶಿವಮೊಗ್ಗ ಕರ್ನಾಟಕ ಸಂಘದ ಸನ್ಮಾನ.

೧೯೮೯ 'ಹೊಂಬೆಳಕು' ಸಮಗ್ರ ಕಾವ್ಯ ಸಂಪುಟದ ಪ್ರಕಟಣೆ.

೧೯೮೯ ಕರ್ನಾಟಕ ರಾಜ್ಯ ಪ್ರಶಸ್ತಿ.

೧೯೮೯ ಬಿ. ಇ. ಎಂ. ಎಲ್. ಬೆಂಗಳೂರು ಸಂಕೀರ್ಣ ಕನ್ನಡ ಸಂಘದಿಂದ ರಾಜ್ಯೋತ್ಸವ ಸನ್ಮಾನ.

೧೯೯೧ ಮುಂಬೈಯ ಮೈಸೂರು ಸಂಗೀತ ವಿದ್ಯಾಲಯದ ಕಾವ್ಯೋತ್ಸವದ ಉದ್ಘಾಟನೆ.

೧೯೯೧ ಪುಣೆ ಕರ್ನಾಟಕ ಸಂಘ ಏರ್ಪಡಿಸಿದ ನಾಡಹಬ್ಬ ಸಮಾರಂಭದ ಉದ್ಘಾಟನೆ.

೧೯೯೧ ಕನ್ನಡ ಸಾಹಿತ್ಯ ಪರಿಷತ್ತಿನ ಅಮೃತ ಮಹೋತ್ಸವ ಸಂದರ್ಭದ ಕವಿ ಸಮ್ಮೇಳನದ ಅಧ್ಯಕ್ಷತೆ.

೧೯೯೧ ಚಿತ್ರದುರ್ಗ ಬೃಹನ್ಮಠದ ಜಗದ್ಗುರುಗಳಿಂದ 'ಕವಿರತ್ನ' ಪ್ರಶಸ್ತಿ.

೧೯೯೧ ಬಸವರಾಜ ಕಟ್ಟೀಮನಿ ವಿಚಾರ ವೇದಿಕೆ ಸ್ಥಾಪನೆ : ಅಧ್ಯಕ್ಷ.

೧೯೯೨ ಧರ್ಮಸ್ಥಳದ ಸಾಹಿತ್ಯ ಸಮ್ಮೇಳನದ ವಜ್ರಮಹೋತ್ಸವ ಅಧಿವೇಶನದ ಉದ್ಘಾಟನೆ.

೧೯೯೨ ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆ ಕನ್ನಡ ಕ್ರಿಯಾ ಸಮಿತಿಯಿಂದ ಸನ್ಮಾನ.

೧೯೯೨ 'ಮಲ್ಲಿಗೆ ದಂಡೆ' ಕ್ಯಾಸೆಟ್ ಬಿಡುಗಡೆ (ಕಣವಿ ಭಾವಗೀತೆಗಳು).

೧೯೯೩ ಜನವರಿ ೩೦. ಸೌಥ ಸೆಂಟ್ರಲ್ ಜೋನ್ ಕಲ್ಚರ್ ಸೆಂಟರ್ (ನಾಗಪುರ) ಏರ್ಪಡಿಸಿದ ವರಕವಿ ಅಂಬಿಕಾತನಯದತ್ತ ರಾಷ್ಟ್ರೀಯ ಕವಿಸಮ್ಮೇಳನದ (ಧಾರವಾಡ) ಅಧ್ಯಕ್ಷತೆ.

೧೯೯೩ ಹಂಪಿ ಕನ್ನಡ ವಿಶ್ವವಿದ್ಯಾಲಯದ ಕಾರ್ಯಕಾರಿ ಸಮಿತಿಯ ಸದಸ್ಯ (೩ ವರ್ಷ).

೧೯೯೩ ಸಂಕೇಶ್ವರದ ನಾಗರಿಕರಿಂದ ಪೌರ ಸನ್ಮಾನ.

೧೯೯೩ ಪಂಪ ಪ್ರಶಸ್ತಿ ಆಯ್ಕೆ ಸಮಿತಿ ಸದಸ್ಯ.

೧೯೯೪ ಕನ್ನಡ ಪುಸ್ತಕ ಪ್ರಾಧಿಕಾರದ ಸದಸ್ಯ ( ೨ ವರ್ಷ).

೧೯೯೪ 'ಕಣವಿ ಸಾಹಿತ್ಯ ಸಂಪದ' ಪ್ರಕಟಣೆ (ಶ್ರೀ ನಿಜಲಿಂಗೇಶ್ವರ ಪ್ರಕಾಶನ, ನಿಡಸೋಶಿ).

೧೯೯೪ 'ಧ್ವನಿ' ಸುಗಮ ಸಂಗೀತ ಕೇಂದ್ರ (ಬೆಂಗಳೂರು) ದವರಿಂದ ಸನ್ಮಾನ.

೧೯೯೫ ಬೆಂಗಳೂರು ವಿ. ವಿ. ಕನ್ನಡ ಅಧ್ಯಯನ ಕೇಂದ್ರ ಏರ್ಪಡಿಸಿದ ಬೇಂದ್ರೆ 'ಕಾವ್ಯೋತ್ಸವ' ವಿಶೇಷೋಪನ್ಯಾಸ ಗೋಷ್ಠಿಯ ಅಧ್ಯಕ್ಷತೆ.

೧೯೯೫ ಮುಂಬಯಿಯ ಕನ್ನಡ ರಾತ್ರಿಶಾಲೆಯ ಸುವರ್ಣ ಮಹೋತ್ಸವ ಕವಿಸಮ್ಮೇಳನದ ಅಧ್ಯಕ್ಷತೆ.

೧೯೯೫ ಹಂಪಿ ಉತ್ಸವ : ಕವಿ ಸಮ್ಮೇಳನದ ಅಧ್ಯಕ್ಷತೆ.

೧೯೯೫ ಬೆಂಗಳೂರಿನ ಸಾಧನಾ ಮ್ಯಾಜಿಕ್ ಸ್ಕೂಲ್‌ನವರಿಂದ ಸನ್ಮಾನ.

೧೯೯೬ ಜನೆವರಿ, ಧಾರವಾಡ ಆಕಾಶವಾಣಿ ಏರ್ಪಡಿಸಿದ 'ಬೇಂದ್ರೆ ಶತಮಾನೋತ್ಸವ' ವಿಚಾರಸಂಕಿರಣದ ಅಧ್ಯಕ್ಷತೆ.

೧೯೯೬ ಕರ್ನಾಟಕ ಸರಕಾರದ 'ಸಂತ ಶಿಶುನಾಳ ಷರೀಫ್ ಪ್ರಶಸ್ತಿ' ಆಯ್ಕೆ ಸಮಿತಿ ಅಧ್ಯಕ್ಷ.

೨೮-೦೬-೧೯೯೬ ಧಾರವಾಡ 'ಸಿದ್ಧರಾಮ ಮಾರ್ಗದರ್ಶಿ'ಯಿಂದ ಹುಟ್ಟುಹಬ್ಬದ ಸನ್ಮಾನ ಹಾಗೂ 'ಕಣವಿ ಸಮಗ್ರ ಕಾವ್ಯ' ಸಂಪುಟದ ಬಿಡುಗಡೆ.

೦೮-೦೮-೧೯೯೬ ಗಣಿತಲೋಕ, ಧಾರವಾಡ : ಗೌರವ ಪ್ರಶಸ್ತಿ.

೨೭-೦೮-೧೯೯೬ ಸಂಗೀತಗಂಗಾ, ಬೆಂಗಳೂರು : ಗೌರವ ಪ್ರಶಸ್ತಿ.

೧೩-೧೦-೧೯೯೬ ಧಾರವಾಡ-ಹುಬ್ಬಳ್ಳಿ ಮಹಾನಗರ ಪಾಲಿಕೆಯಿಂದ ಪೌರ ಸನ್ಮಾನ.

೧೭-೧೦-೧೯೯೬ ಚಿತ್ರದುರ್ಗದ ಬೃಹನ್ಮಠದ ಶ್ರೀ ಶಿವಮೂರ್ತಿ ಮುರುಘ ರಾಜೇಂದ್ರ ಮಹಾಸ್ವಾಮಿಗಳಿಂದ 'ಸಾಹಿತ್ಯ ಭಾಸ್ಕರ' ಪ್ರಶಸ್ತಿ ಪ್ರದಾನ.

೨೭-೧೧-೧೯೯೬ ಹುಬ್ಬಳ್ಳಿ ವಲಯದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಕನ್ನಡ ಬಳಗದಿಂದ ರಾಜ್ಯೋತ್ಸವ ಸನ್ಮಾನ.

೨೧-೧೨-೧೯೯೬ ಅಖಿಲ ಭಾರತ ೬೫ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ.

೧೯೯೬-೧೯೯೮ ಕೇಂದ್ರ ಸರಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಂಸ್ಕೃತಿ ಇಲಾಖೆಯ ಎಮೆರಿಟಸ್ ಫೆಲೊಶಿಪ್.

೧೯೯೭ ಎಸ್. ಆರ್. ಪಾಟೀಲ (ಗುಲ್ಬರ್ಗಾ) ಪ್ರತಿಷ್ಠಾನ ಪ್ರಶಸ್ತಿ.

೨೮-೦೮-೧೯೯೯ ಆದರ್ಶ ಸುಗಮ ಸಂಗೀತ ಅಕಾಡೆಮಿ ಟ್ರಸ್ಟ್, ಬೆಂಗಳೂರು ಅವರಿಂದ ಸನ್ಮಾನ : 'ಸಾಹಿತ್ಯ ಚಿಂತಾಮಣಿ' ಬಿರುದಿನ ಗೌರವ.

೧೮-೧೨-೧೯೯೯ 'ಕರ್ನಾಟಕ ಸರಕಾರದ 'ಪಂಪ ಪ್ರಶಸ್ತಿ' ಪ್ರದಾನ– ಬನವಾಸಿಯ ಕದಂಬೋತ್ಸವ ಸಂದರ್ಭದಲ್ಲಿ.

# ಕಣವಿ ಕೃತಿಗಳು

**ಕಾವ್ಯ**

**ವಿಮರ್ಶೆ-ಪ್ರಬಂಧ**



**ಸಂಪಾದಿತ ಕೃತಿಗಳು**



**ಇತರರೊಡನೆ**

೧೦. ಸುವರ್ಣ ಸಂಪುಟ ೧೯೮೦
೧೧. ರತ್ನ ಸಂಪುಟ ೧೯೮೫
೧೨. ದಶವಾರ್ಷಿಕ ಕವಿತೆಗಳು ೧೯೮೫

ಭಾಷಾಂತರ : ಇಂಗ್ಲೀಷಿನಿಂದ
ಬಾಬಾ ಫರೀದ್ ೧೯೯೩

## ಚೆನ್ನವೀರ ಕಣವಿ ಕುರಿತು ಗ್ರಂಥಗಳು

೧. ಚೆನ್ನವೀರ ಕಣವಿ ಕಾವ್ಯದೃಷ್ಟಿ – ಗೌರೀಶ ಕಾಯ್ಕಿಣಿ(೧೯೭೮)
೨. ಚೆಂಬೆಳಕು – ಕಣವಿ ಅಭಿನಂದನ ಗ್ರಂಥ
ಸಂ. ಡಾ. ಗುರುಲಿಂಗ ಕಾಪಸೆ (೧೯೮೦)
೩. ಚೆನ್ನವೀರ ಕಣವಿ ಹಾಗೂ ಜಿ. ಎಸ್. ಶಿವರುದ್ರಪ್ಪ ಅವರ ಕಾವ್ಯ
ಸಂ. ಪ್ರಾ. ಎ. ಬಿ. ಹಿರೇಮಠ (೧೯೯೧)
೪. ಕಣವಿ ಸಾಹಿತ್ಯ ಸಂಪದ – ಸಂ. ಡಾ. ಗುರುಪಾದ ಮರಿಗುದ್ದಿ (೧೯೯೪)
೫. 'ಮುಗಿಯದ ಹಾಡು' (ಕಣವಿ ಕಾವ್ಯಾಭಿನಂದನ ಗ್ರಂಥ) ೧೯೯೮
೬. ಕಣವಿ ಮತ್ತು ಕನ್ನಡ ಕಾವ್ಯ ಪರಂಪರೆ (ಪಿಎಚ್. ಡಿ. ಪ್ರಬಂಧ)
ಡಾ. ಗುಂಡಣ್ಣ ಕಲಬುರ್ಗಿ (ಅಚ್ಚಿನಲ್ಲಿ)

# ಕಣವಿಯವರ ಮುನ್ನುಡಿಯುಳ್ಳ ಕೃತಿಗಳು

## ಕಾವ್ಯ

೧. ತೋಳಬಂದಿ : ಶಿಸು ಸಂಗಮೇಶ ೧೯೫೩
೨. ಸುಗ್ಗಿಯ ಕಣ : ಕೆ. ವಿರೂಪಾಕ್ಷಗೌಡ ೧೯೫೮
೩. ಅಂತರಂಗದ ಹಾಡು : ಡಿ. ಲಿಂಗಯ್ಯ ೧೯೬೦
೪. ರಸವಂತಿ : ಗಿರಡ್ಡಿ ಗೋವಿಂದರಾಜ ೧೯೬೧
೫. ಸಂಕ್ರಾಂತಿ : ಆರ್. ವ್ಹಿ. ಹೊರಡಿ ೧೯೬೫
೬. ಶಬ್ದ-ರಕ್ತ, ಮಾಂಸ : ಬುದ್ದಣ್ಣ ಹಿಂಗಮಿರೆ ೧೯೬೮
೭. ಪ್ರವಾಸ : ಎಚ್. ಎಂ. ಮರುಳಸಿದ್ಧಯ್ಯ ೧೯೬೮
೮. ನಾಲ್ಕು ಹಿಡಿ ಬೆಂಕಿ : ದೇಶಪಾಂಡೆ ಸುಬ್ಬರಾಯ ೧೯೬೯
೯. ಮುಂಜಾವಿನ ಕೊರಳು : ಜಂಬಣ್ಣ ಅಮರಚಿಂತ ೧೯೭೦
೧೦. ಒಂದು ಗಳಿಗೆ : ಶೈಲಜಾ ೧೯೭೨
೧೧. ಮೊದಲು ತೊದಲು : ವಾಮನ ಬೇಂದ್ರೆ ೧೯೭೩
೧೨. ಹೊಳಿಸಾಲ ಬಳ್ಳಿ : ಶ್ರೀರಾಮ ಇಟ್ಟಣ್ಣವರ ೧೯೭೩
೧೩. ಚಿಗಳಿ : ಸಿದ್ಧಲಿಂಗ ದೇಸಾಯಿ ೧೯೭೪
೧೪. ಬಾ. ಪರೀಕ್ಷೆಗೆ : ಮಾಲತಿ ಪಟ್ಟಣಶೆಟ್ಟಿ ೧೯೭೬
೧೫. ನಾಕ ಹೆಜ್ಜಿ : ಲೀಲಾವತಿ ತೋರಣಗಟ್ಟಿ ೧೯೭೬
೧೬. ಮೂವತ್ತೈದು ಕವನಗಳು : ಕಾಶೀನಾಥ ಅಂಬಲಗೆ ೧೯೭೭
೧೭. ತಾಪದ ಕಿಡಿ : ವಿವಿಧ ಕವಿಗಳು ೧೯೭೮
೧೮. ಜಿರಕಿ ಜೋಡು : ಮೃತ್ಯುಂಜಯ ಹೊರಕೇರಿ ೧೯೭೮
೧೯. ಬಾಳ ಹಂದರ : ಎಮ್. ಜಿ. ಗಂಗನಪಳ್ಳಿ ೧೯೭೮
೨೦. ಬೆನ್ನಿಗೆ ಬಿದ್ದವನು : (ಬೆನ್ನುಡಿ) ಶ್ರೀಪಾದ ಹೆಗಡೆ ಕಣ್ಣಿ ೧೯೭೯
೨೧. ಮನೆಮನೆಗೆ ಬೇಲಿ : ಬಿ. ಎ. ಸನದಿ ೧೯೮೧

೨೨. ವಿಜಯಲಕ್ಷ್ಮಿಯ ಕತೆಗಳು ೧೯೮೧
೨೩. ಕಟ್ಟಾಣಿ ಸತಿಯೆಂದು ಕರದೇನ : ಬಾಸುಗೌಡ ಪಾಟೀಲ. ೧೯೮೨
೨೪. ದಾಸಾಳ : ದಿನಕರ ದೇಸಾಯಿ ೧೯೮೩
೨೫. ಅಸ್ತಿತ್ವ : ಎಸ್. ಎಸ್. ಕೋತಿನ ೧೯೮೪
೨೬. ಚಿತ್ರ-ಚಿತ್ತಾರ : ಆನಂದ ಹಣಮಂತಗಡ ೧೯೮೪
೨೭. ಬಯಲು ಸೀಮೆಯ ಬಿಸಿಲು : ಶಾಂತರಸ ೧೯೮೫
೨೮. ಅರ್ಥ : ರಾಜಿ ೧೯೮೫
೨೯. ಸಾಗಿ ಬರುತಿದೆ ಬೆಳಗು : ಕೆ. ಎಫ್. ಪಾಟೀಲ ೧೯೮೬
೩೦. ಮುಂಜಾನೆ ಬಂದವಳು : ಕಮಲಾ ಹೆಮ್ಮಿಗೆ ೧೯೮೬
೩೧. ಮಂದಾರ ಕಾವ್ಯ : ವಿವಿಧ ಕವಿಗಳು ೧೯೮೬
೩೨. ನನ್ನ ಸುತ್ತ : ದೇವೇಂದ್ರಕುಮಾರ ಹಕಾರಿ ೧೯೮೭
೩೩. ಸೃಷ್ಟಿಯ ಸುಳಿ : ಎಂ. ಕೆ. ನಾಗರಾಜ ೧೯೮೮
೩೪. ಜೋಳ-ಮುತ್ತು : ಮಹಾಂತೇಶ ಕಣಗಲಿ ೧೯೮೮
೩೫. ಪ್ರತಿಬಿಂಬ : ಮಿತ್ರವಿಂದಾ ಪಾಟೀಲ ೧೯೮೮
೩೬. ವೈಜಯಂತಿ : ಎಸ್. ಎಸ್. ಬಸುಪಟ್ಟದ ೧೯೮೯
೩೭. ಗೀತ ಸುಮನ : ಶ್ರೀನಿವಾಸ ತೋಪಖಾನೆ ೧೯೮೯
೩೮. ಬೇವು-ಬೆಲ್ಲ : ಸಿ. ವಾಯ್. ಕೋಡಮುಗ್ಗಿ ೧೯೮೯
೩೯. ಕಣ್ಣು ಹೊಡೆ : ಡಿ. ಬಿ. ಢಂಗ ೧೯೮೯
೪೦. ಜೇನ್ಗೂಡು : ಸಂ. ಧರಣೇನಾಥ ಕೋಟೆ ೧೯೮೯
೪೧. ಮೊಲಾಯಿಸ್ ಮತ್ತು ಇತರ ಕವನಗಳು : ಸುಮಿತ್ರಾ ಹಲವಾಯಿ ೧೯೯೦
೪೨. ನೆನಪು ಕಹಿಯಲ್ಲ : ಸಿ. ಪಿ. ಹೇಮಗಿರಿಮಠ ೧೯೯೦
೪೩. ವಿದ್ಯಾರ್ಥಿ ಕಾವ್ಯ : ವಿವಿಧ ಕವಿಗಳು ೧೯೯೦
೪೪. ಪುಟ್ಟನ ಹಾಡು : ಅಶೋಕ ಚೊಳಚಗುಡ್ಡ ೧೯೯೦
೪೫. ದಾರಿ ಮತ್ತು ಆಕಾಶ : ಸ. ರಘುನಾಥ (ಬೆನ್ನುಡಿ) ೧೯೯೧
೪೬. ಗಗನದಿ ಗಾಳಿಪಟ : ಪ್ರಕಾಶ ಮನ್ನಂಗಿ ೧೯೯೧
೪೭. ಕಾವ್ಯಮಂಜರಿ ಸಮಗ್ರಕಾವ್ಯ : ಗಂಗಪ್ಪ ವಾಲಿ ೧೯೯೨
೪೮. ಮೊದಲ ಹೆಜ್ಜೆಗಳು : ಸಂಜೀವ ಕುಲಕರ್ಣಿ ೧೯೯೨
೪೯. ಕವಿತೆ ಸಾಲುಗಳಿಂದ ಎದ್ದು ನಿಲ್ಲು : ಇಂದಿರಾ ಹೆಗಡೆ ೧೯೯೩

೫೦. ಗಲ್ಲುಗಳಲ್ಲಿ ಗುಲಾಬಿ : ಪ್ರಹ್ಲಾದ ಅಗಸನಕಟ್ಟೆ (ಬೆನ್ನುಡಿ) ೧೯೯೩
೫೧. ಗೋಧೂಳಿ : ಬಿ. ಚಿನ್ನಸ್ವಾಮಿ ೧೯೯೩
೫೨. ಭಾವ ಶ್ರೀ : ಎಸ್. ಡಿ. ಇಂಚಲ ೧೯೯೩
೫೩. ಆನ್ನ ಜೇನು : ಗುರುರಾಜ ಬೆಣಕಲ್ ೧೯೯೩
೫೪. ಪ್ರೇಮದ ಕನಸುಗಳು : ರೋಹಿದಾಸ ನಾಯಕ ೧೯೯೪
೫೫. ನನ್ನ ಮಾದರಿ : ಯಲ್ಲಪ್ಪ ಕೆಕೆಪುರ ೧೯೯೫
೫೬. ನನ್ನೊಳಗಿನ ಕವಿತೆ : ವಿದ್ಯಾ ಕುಂದರಗಿ ೧೯೯೬
೫೭. ಮಧುರ ಯಾನ : ಕ. ಮ. ಶಿ. ಚಂದ್ರಶೇಖರಯ್ಯ ೧೯೯೬
೫೮. ಚಂದಿರನೇಕೆ ಓಡುವನಮ್ಮ : ನೀ. ರೇ. ಹಿರೇಮಠ ೧೯೯೭
೫೯. ಹೊಸಿಲಾಚೆ ಹೊಸ ಹೆಜ್ಜೆ : ಗೀತಾ ವಸಂತ ೧೯೯೯
೬೦. ನೆನಪುಗಳು ಸಾಯುವದಿಲ್ಲ : ಚನ್ನಪ್ಪ ಕಟ್ಟಿ ೧೯೯೯

## ಗದ್ಯ

೧. ಕಾಲವಾಹಿನಿ : ಸ. ಸ. ಮಾಳವಾಡ
೨. ಸಾಮಾಜಿಕನ ಸಂವಚನಗಳು : ಆನಂದ ಕಂದ ೧೯೮೧
೩. ನುಡಿ-ಮಿಡಿ : ಸಂಗಮೇಶ ಹಂಡಗಿ ೧೯೮೫
೪. ಮೌನದ ಮಾತುಗಳು : ಚಂದ್ರಶೇಖರ ವಸ್ತ್ರದ ೧೯೮೫
೫. ದಿನಕ್ಕೊಂದು ನುಡಿಮುತ್ತು : ಬಸವರಾಜ ಸಾದರ ೧೯೮೭
೬. ಸೂಳ್ನುಡಿ ಸುಯ್ದಾನ : ಶಿವಲೀಲಾ ಹಂಡಗಿ ೧೯೮೮
೭. ವರಕವಿ ಅಂಬಿಕಾತನಯದತ್ತ : ವಿ. ಬಿ. ಕುಲಕರ್ಣಿ ೧೯೯೪
೮. ಹಣತೆಗಳು : ಡಾ. ಎಚ್. ಚಂದ್ರಶೇಖರ ೧೯೯೭
೯. ನಾಕಂಡ ಬೇಂದ್ರೆ : ಜೀವನ ಮತ್ತು ಸಾಹಿತ್ಯ : ಜಿ. ವಿ. ಕುಲಕರ್ಣಿ ೧೯೯೭

# 'ನೆಲೆ' ಪ್ರಕಾಶನದ ಪ್ರಕಟಣೆಗಳು

೧. ಎರಡು ಸೆಲೆ ಒಂದು ನೆಲೆ : ನಾಗೇಶ ರಾಂಪೂರ
(ಕವನ ಸಂಕಲನ) ಚನ್ನಪ್ಪ ಕಟ್ಟಿ
೨. ಬಿರಿದ ಮೊಗ್ಗು (ಕಾದಂಬರಿ) : ಸುಶೀಲಾ ಕಮತಗಿ
೩. ಇಂಡಿಯಾದಲ್ಲಿ (ಕವನ ಸಂಕಲನ) : ಚನ್ನಪ್ಪ ಕಟ್ಟಿ
೪. ವಸಂತ (ಕವನ ಸಂಕಲನ) : ನಾಗೇಶ ರಾಂಪೂರ
೫. ಹೇಳಕೀ ಮಾಡ್ಯಾರ ಒಡೆಯರು : ಡಾ. ಎಂ. ಎಂ. ಪಡಶೆಟ್ಟಿ
(ಜಾನಪದ)
೬. ಸಾನಿಧ್ಯ (ವ್ಯಕ್ತಿ ಚಿತ್ರಣಗಳು) : ಡಾ. ಬಿ. ಆರ್. ನಾಡಗೌಡ
೭. ಅಕ್ಕ ಕೇಳವ್ವ (ಕವನ ಸಂಕಲನ) : ಭಾರತಿ ಪಾಟೀಲ
೮. ನಮನ (ಕವನ ಸಂಕಲನ) : ಮಿತ್ರವಿಂದಾ ಪಾಟೀಲ
೯. ಕನಸು (ಕವನ ಸಂಕಲನ) : ಬಸು ಬೇವಿನಗಿಡ
೧೦. ಭಾವಲಹರಿ (ಕವನ ಸಂಕಲನ) : ಮೋಹನ ಕಟ್ಟಿಮನಿ
೧೧. ಕಾಡಬೆಳದಿಂಗಳು (ಕಾದಂಬರಿ) : ಸುಶೀಲಾ ಕಮತಗಿ
೧೨. ದೇಹದಲ್ಲಿ ಏಳು ದಿನ ಪಯಣ : ಡಾ. ವಸಂತ ಕುಲಕರ್ಣಿ
(ವೈದ್ಯ ಸಾಹಿತ್ಯ)
೧೩. ಕವಿ ಕಣವಿ ವ್ಯಕ್ತಿ ಅಭಿವ್ಯಕ್ತಿ : ಡಾ. ಜಿ. ಎಂ. ಹೆಗಡೆ
೧೪. ಪ್ರಣಯಿನಿ (ರಾಜ್ಯಮಟ್ಟದ ಲೇಖಕಿಯರ ಪ್ರಾತಿನಿಧಿಕ ಕವನ
ಸಂಕಲನ) : ಸಂ. ಶಶಿಕಲಾ ವೀರಯ್ಯಸ್ವಾಮಿ, ಸುಕನ್ಯಾ ಮಾರುತಿ
೧೫. ಜಂಗಮ ಜೋಳಿಗೆ (ವ್ಯಕ್ತಿ ಚಿತ್ರಣ) : ಸುಶೀಲಾ ಕಮತಗಿ
೧೬. ಜಾನಪದ ಚಿಂತನ (ಜಾನಪದ) : ಶಂಕರ ಬೈಚವಾಳ
೧೭. ಮೌನ ಮಾತಾಡಿದಾಗ : ಸಂ. ಡಾ. ಎಂ. ಎಂ. ಪಡಶೆಟ್ಟಿ
(ಕವನ ಸಂಕಲನ)
೧೮. ಹಾದಿಯ ಹೆಜ್ಜೆಗಳು : ಸಂ. ಡಾ. ಎಫ್. ಟಿ. ಹಳ್ಳಿಕೇರಿ

೧೯. ಸೂರ್ಯಮುಳುಗುವುದಿಲ್ಲ : ಮಾಲತಿ ಪಟ್ಟಣಶೆಟ್ಟಿ
(ಕಥಾ ಸಂಕಲನ)
೨೦. ಮುಳುಗಡೆ ಮತ್ತು ಇತರ ಕತೆಗಳು : ಚನ್ನಪ್ಪ ಕಟ್ಟಿ
(ಕಥಾ ಸಂಕಲನ)
೨೧. ತ್ಯಾಗ (ಕಾದಂಬರಿ) : ಸುಶೀಲಾ ಕಮತಗಿ
೨೨. ನೆನಪುಗಳು ಸಾಯುವುದಿಲ್ಲ : ಚನ್ನಪ್ಪ ಕಟ್ಟಿ
(ಕವನ ಸಂಕಲನ)
೨೩. ಮೌನ ಕರಗುವ ಹೊತ್ತು : ಮಾಲತಿ ಪಟ್ಟಣಶೆಟ್ಟಿ
(ಕವನ ಸಂಕಲನ)
೨೪. ತೀರದ ದನಿ : ಸಂಗು ಕೋಟಿ
೨೫. ಕಂಕಿ ಬಂದಾವ ಕಡಿಯಾಕ : ಸಂ. ಡಾ. ಎಂ. ಎಂ. ಪಡಶೆಟ್ಟಿ

ಅಖಿಲ ಭಾರತ ೬೫ನೆಯ ಕನ್ನಡ ಸಾಹಿತ್ಯ ಸಮ್ಮೇಲನದ ಅಧ್ಯಕ್ಷತೆಯ ಗೌರವ ಪಡೆದಿರುವ ಚೆನ್ನವೀರ ಕಣವಿಯವರು ಕನ್ನಡ ನಾಡಿನ ಉದ್ದಗಲಕ್ಕೂ ಪರಿಚಿತರಾಗಿರುವ ಕವಿಗಳು. 'ವಿಶ್ವಭಾರತಿಗೆ ಕನ್ನಡದಾರತಿ', 'ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ', 'ಹೂವು ಹೊರಳುವವು ಸೂರ್ಯನ ಕಡೆಗೆ' ಮುಂತಾದ ಕವಿತೆಗಳು ಗೊತ್ತಿಲ್ಲದ ಕನ್ನಡಿಗನೇ ಇಲ್ಲವೆಂದು ಹೇಳುವಷ್ಟು ಪ್ರಸಿದ್ಧವಾದವುಗಳು. 'ಕಾವ್ಯಾಕ್ಷಿ' ಯಿಂದ 'ಶಿಶಿರದಲ್ಲಿ ಬಂದ ಸ್ನೇಹಿತ' ದವರೆಗಿನ ಅವರ ಹದಿಮೂರು ಸಂಗ್ರಹಗಳಲ್ಲಿಯ ಹಲವಾರು ಕವಿತೆಗಳನ್ನು ಬಲ್ಲ ಸಹೃದಯರೂ ನಮ್ಮಲ್ಲಿದ್ದಾರೆ. ..... ಕಲಾಪೂರ್ಣವಾಗಿರುವ ಅವರ ಕಾವ್ಯ ಮೊದಲ ಓದಿಗೇ ಮನ ಸೆಳೆಯುವಂತಹದು, ಮನ ಸೂರೆಗೊಳ್ಳುವಂತಹದು.

ಕಣವಿಯವರ ವ್ಯಕ್ತಿತ್ವ ಕೂಡ ಸ್ನೇಹಪೂರ್ಣತೆಯಿಂದ ಆಕರ್ಷಕವಾದದ್ದು. ಅವರ ಸರಳ ಸಜ್ಜನಿಕೆ ಎಲ್ಲ ಬಗೆಯ ಮನೋಧರ್ಮದವರನ್ನು ತನ್ನವರನ್ನಾಗಿ ಮಾಡಿಕೊಳ್ಳುತ್ತದೆ. ...... ಅವರ ವ್ಯಕ್ತಿತ್ವಕ್ಕೂ, ಕವಿತ್ವಕ್ಕೂ ಅಂತರವಿಲ್ಲದಿರುವುದು ನಡೆ-ನುಡಿಗಳ ಸಾಂಗತ್ಯವನ್ನು ಸೂಚಿಸುತ್ತದೆ.

ಚೆನ್ನವೀರ ಕಣವಿಯವರ ಎಪ್ಪತ್ತು ವರ್ಷಗಳ ಸಾರ್ಥಕ ಬದುಕಿನ ಬಗ್ಗೆ ಐವತ್ತು ವರ್ಷಗಳ ಸಾಹಿತ್ಯಕ, ವಿಶೇಷವಾಗಿ ಕಾವ್ಯದ ಸಾಧನೆಯ ಬಗ್ಗೆ ಕನ್ನಡಿಗರು ತಿಳಿಯಬೇಕಾದ ಅಗತ್ಯವಿದೆ. ಈ ಅಗತ್ಯವನ್ನು ಪೂರೈಸುವಂತೆ ಡಾ. ಜಿ. ಎಂ. ಹೆಗಡೆ ಯವರು 'ಕವಿ ಕಣವಿ' ಗ್ರಂಥವನ್ನು ರಚಿಸಿರುವುದು ತುಂಬಾ ಸಂತೋಷದ ಸಂಗತಿಯಾಗಿದೆ. ...... ಇದೊಂದು ಸಂಗ್ರಾಹ್ಯ ಯೋಗ್ಯವಾದ ಕೃತಿಯಾಗಿದೆ. ..... ಕಣವಿಯವರ ಜೀವನದ ಮಹತ್ವದ ದಾಖಲೆಗಳು, ಎಲ್ಲ ಕೃತಿಗಳ ಉಲ್ಲೇಖಗಳು, ಅವುಗಳ ಸಾರಸಂಗ್ರಹಗಳು ನಿಶ್ಚಿತವಾಗಿ ಹೆಚ್ಚಿನ ಅಧ್ಯಯನಕ್ಕೆ ದಾರಿ ಮಾಡಿಕೊಡುತ್ತವೆ. ಶ್ರದ್ಧೆಯಿಂದ ಈ ಕೃತಿ ರಚನೆ ಮಾಡಿದ ಡಾ. ಜಿ. ಎಂ. ಹೆಗಡೆಯವರು ಕನ್ನಡಿಗರ ಅಭಿನಂದನೆಗೆ ಪಾತ್ರರು.

**ಗುರುಲಿಂಗ ಕಾಪಸೆ**

('ಮುನ್ನುಡಿ' ಯಿಂದ)